ಸೋಮವಾರ, ಸೆಪ್ಟೆಂಬರ್ 20, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 262 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಶಾಲೆಗಳು ಪುನಃ ಪ್ರಾರಂಭವಾಗಿದ್ದು ಸುರಕ್ಷತೆಯ ಜೊತೆಗೆ ಮಗುವಿನ ಕಲಿಕಾ ಮಟ್ಟದ ಬಗ್ಗೆಯೂ ಹೆಚ್ಚು ಲಕ್ಷ್ಯ ಕೊಡುವುದು ಪೋಷಕರು ಹಾಗೂ ಶಿಕ್ಷಕರ ಜವಾಬ್ದಾರಿಯಾಗಿದೆ.

ವಿದೇಶಿ ಪ್ರವಾಸಿಗರಿಗೆ ಶೀಘ್ರವೇ ಮುಕ್ತ ಅವಕಾಶ 6
ಕಾಬೂಲ್: ಮಹಿಳೆಯರ ಉದ್ಯೋಗಕ್ಕೆ ಕುತ್ತು 6
ಆಳ-ಅಗಲ
ನಾಯಕತ್ವ ಬದಲು: ಕಾಂಗ್ರೆಸ್‌ನ ಸವಾಲು
ಹುದ್ದೆ ಕೊಟ್ಟರೂ 'ಸೌಲಭ್ಯ' ಇಲ್ಲ! 4

ಸಿಇಟಿ ಫಲಿತಾಂಶ ಇಂದು

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಆಗಸ್ಟ್ 28 ಮತ್ತು 29 ರಂದು ನಡೆದಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಫಲಿತಾಂಶ ಸೋಮವಾರ (ಸೆ. 20) ಸಂಜೆ 4 ಗಂಟೆಗೆ ಪ್ರಕಟವಾಗಲಿದೆ.

'ದಾಖಲೆಯ ಅತ್ಯಲ್ಪ ಕಾಲಾವಧಿಯಲ್ಲಿ ಫಲಿತಾಂಶ ಪ್ರಕಟವಾಗುತ್ತಿದೆ. ಇದಕ್ಕಾಗಿ ಪರೀಕ್ಷಾ ಪ್ರಾಧಿಕಾರದ ಅಧಿಕಾರಿಗಳು, ಸಿಬ್ಬಂದಿ ಅವಿರತ ಶ್ರಮಿಸಿದ್ದಾರೆ' ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಸಿಇಟಿ ಫಲಿತಾಂಶ ಸಂಜೆ 4 ಗಂಟೆಯ ಬಳಿಕ ಈ ಲಿಂಕ್ (https://cetonline.karnataka.gov.in/kea/) ಲಭ್ಯವಾಗಲಿದೆ.

ದ್ವಿತೀಯ ಪಿಯು ಫಲಿತಾಂಶ

ದ್ವಿತೀಯ ಪಿಯುಸಿ ಖಾಸಗಿ (17,470) ಮತ್ತು ಫಲಿತಾಂಶ ತಿರಸ್ಕರಿಸಿದ್ದ ಹೊಸ ವಿದ್ಯಾರ್ಥಿಗಳು (592) ಹಾಗೂ ಪುನರಾವರ್ತಿತ (351) ಸೇರಿ ಒಟ್ಟು 18,413 ವಿದ್ಯಾರ್ಥಿಗಳ ಫಲಿತಾಂಶ ಬೆಳಿಗ್ಗೆ 10.30 ಕ್ಕೆ ಪ್ರಕಟವಾಗಲಿದೆ. ಆಗಸ್ಟ್- ಸೆಪ್ಟೆಂಬರ್‌ನಲ್ಲಿ ವಾರ್ಷಿಕ ಪರೀಕ್ಷೆ ನಡೆದಿತ್ತು.

ವಿಧಾನಸೌಧದ ತಮ್ಮ ಕಚೇರಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಫಲಿತಾಂಶ ಪ್ರಕಟಿಸುವರು. ಈ ಲಿಂಕ್‌ನಲ್ಲಿ www.karresults.nic.in ಫಲಿತಾಂಶ ಸಿಗಲಿದೆ.

ಲೋಕಸಭೆ ಗೆಲ್ಲಬಹುದು, ವಿಧಾನಸಭೆ ಚುನಾವಣೆ ಕಷ್ಟ: ಬಿಎಸ್‌ವೈ ಎಚ್ಚರಿಕೆ

ಗೆಲ್ಲಲು ಮೋದಿ ಅಲೆ ಸಾಲದು

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಲೋಕಸಭೆ ಚುನಾವಣೆಯಲ್ಲಿ ಮೋದಿ ಅಲೆಯಲ್ಲಿ ಗೆಲ್ಲಬಹುದು. ಆದರೆ ವಿಧಾನಸಭೆ ಚುನಾವಣೆಯಲ್ಲಿ ಗೆಲ್ಲುವುದು ಕಷ್ಟ. ವಿರೋಧಪಕ್ಷಗಳನ್ನು ಹಗುರವಾಗಿ ಪರಿಗಣಿಸಬೇಡಿ' ಎಂದು ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಎಚ್ಚರಿಸಿದರು.

ದಾವಣಗೆರೆಯಲ್ಲಿ ಭಾನುವಾರ ನಡೆದ ಬಿಜೆಪಿ ರಾಜ್ಯ ಕಾರ್ಯಕಾರಿಣಿಯಲ್ಲಿ ಅವರು ಮಾತನಾಡಿದರು.

'ವಿರೋಧಪಕ್ಷಗಳಿಗೂ ಅವರದ್ದೇ ಆದ ಶಕ್ತಿ ಇದೆ. ನಾವು ಎಲ್ಲರೂ ಒಗ್ಗಟ್ಟಾಗಿ ರಾಜ್ಯದಾದ್ಯಂತ ಪಕ್ಷವನ್ನು ಸಂಘಟಿಸಿ ಆತ್ಮಾಭಿಮಾನದಿಂದ ಕೆಲಸ ಮಾಡಿದರಷ್ಟೇ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯ' ಎಂದು ಅವರು ಕಿವಿಮಾತು ಹೇಳಿದರು.

'ಈಗಾಗಲೇ ಕಾಂಗ್ರೆಸ್ ನಾಯಕರು ನಮ್ಮ ಶಾಸಕರನ್ನು ಸಂಪರ್ಕಿಸಿರುವುದು ನಿಮಗೆಲ್ಲ ಗೊತ್ತಿದೆ. ಯಾರೂ ಮೈಮರೆಯುವಂತಿಲ್ಲ. ಎಸ್‌ಸಿ, ಎಸ್‌ಟಿ, ಒಬಿಸಿ ಮುಖಂಡರನ್ನು ಪಕ್ಷಕ್ಕೆ ಕರೆತರುವ ಮೂಲಕ ಪಕ್ಷವನ್ನು ಬಲಪಡಿಸಬೇಕು. ಪ್ರತಿ ಬೂತ್‌ನಲ್ಲಿ 25 ಮಹಿಳೆಯರು, 25 ಯುವಕರು ಕೆಲಸ ಮಾಡಿದರೆ ಕಾಂಗ್ರೆಸ್‌ಗೆ ಪಾಠ ಕಲಿಸಲು ಸಾಧ್ಯ' ಎಂದು ತಿಳಿಸಿದರು.

ಬಿಜೆಪಿ ಕಾರ್ಯಕಾರಿಣಿಯಲ್ಲಿ ಪಾಲ್ಗೊಂಡಿದ್ದ ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಹಾಗೂ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪರಸ್ಪರ ಸಮಾಲೋಚನೆ ನಡೆಸಿದರು –ಪ್ರಜಾವಾಣಿ ಚಿತ್ರ

'ಡಿ.ಕೆ. ಶಿವಕುಮಾರ್ ಗಾಳ'

'ಒಂದಿಬ್ಬರು ಬಿಜೆಪಿ ಶಾಸಕರನ್ನು ಡಿ.ಕೆ. ಶಿವಕುಮಾರ್ ಸಂಪರ್ಕಿಸಿದ್ದಾರೆ. ಆದರೆ ನಮ್ಮ ಶಾಸಕರು ಎಲ್ಲೂ ಹೋಗಿಲ್ಲ' ಎಂದು ಬಿ.ಎಸ್. ಯಡಿಯೂರಪ್ಪ ಸಭೆಯ ಬಳಿಕ ಸುದ್ದಿಗಾರರಿಗೆ ಸ್ಪಷ್ಟಪಡಿಸಿದರು.

'ಸಿಂದಗಿ ಮತ್ತು ಹಾನಗಲ್ ಕ್ಷೇತ್ರಗಳ ಉಪಚುನಾವಣೆ ನಮ್ಮ ಮುಂದಿರುವ ಅಗ್ನಿಪರೀಕ್ಷೆ. ಅದರಲ್ಲಿ ಕಾಂಗ್ರೆಸ್ ಗೆದ್ದರೆ ಯಾವ ಸಂದೇಶ ಹೋಗುತ್ತದೆ ಎಂಬುದನ್ನು ಕಲ್ಪಿಸಿಕೊಳ್ಳಿ. ಯಾರೂ ಭ್ರಮೆಯಲ್ಲಿ ಇರುವುದು ಬೇಡ. ಉತ್ತಮ ಕೆಲಸ ಮಾಡಿ ಈ ಕ್ಷೇತ್ರಗಳ ಉಪ ಚುನಾವಣೆಯನ್ನು ಗೆಲ್ಲಲೇಬೇಕು' ಎಂದರು.

'ಯಡಿಯೂರಪ್ಪ ಪ್ರವಾಸದ ಬಗ್ಗೆ ಈಗ ಚರ್ಚೆಯಾಗುತ್ತಿದೆ. ನಾನೊಬ್ಬನೇ ಪ್ರವಾಸ ಹೋಗಲು ಸಾಧ್ಯವೇ? ಶಾಸಕರು, ಸಂಸದರು, ಪಕ್ಷದ ನಾಯಕರು ಇರುತ್ತಾರೆ. ಎಲ್ಲರೂ ಒಗ್ಗಟ್ಟಾಗಿ ಮಾಡುವ ಪ್ರವಾಸ ಇದು' ಎಂದರು.

4ನೇ ಪುಟ ನೋಡಿ

ಮೀಸಲಾತಿ ಬೇಡಿಕೆ ಕುರಿತು ಚರ್ಚೆ

ವಿವಿಧ ಸಮುದಾಯಗಳು ಮೀಸಲಾತಿ ಬೇಡಿಕೆಗಳನ್ನು ಮುಂದಿಟ್ಟಿವೆ. ಚುನಾವಣೆ ಹತ್ತಿರ ಬಂದಾಗ ಇನ್ನಷ್ಟು ಸಮುದಾಯಗಳು ಇದೇ ರೀತಿ ಧ್ವನಿ ಎತ್ತಲಿವೆ. ಈ ಬಗ್ಗೆ ರಾಜ್ಯ ಸರ್ಕಾರ ಸರಿಯಾದ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಬಿಜೆಪಿ ರಾಜ್ಯ ಕಾರ್ಯಕಾರಿಣಿಯಲ್ಲಿ ಭಾನುವಾರ ಚರ್ಚೆ ನಡೆಯಿತು.

ಎಸ್‌ಸಿ, ಎಸ್‌ಟಿ ವರ್ಗೀಕರಣ, ಹಿಂದುಳಿದ ವರ್ಗದಿಂದ ಎಸ್‌ಟಿಗೆ ಸೇರ್ಪಡೆ ಮಾಡುವ ಬೇಡಿಕೆ, ಹಿಂದುಳಿದ ವರ್ಗದ 2ಎಗೆ ಸೇರಿಸುವ ಬೇಡಿಕೆ ಹೀಗೆ ವಿವಿಧ ಸಮುದಾಯಗಳು ಬೇಡಿಕೆ ಇಡುತ್ತಾ ಬಂದಿವೆ. ಇದು ಚುನಾವಣೆಯ ಸಂದರ್ಭದಲ್ಲಿ ಕಗ್ಗಂಟಾಗಬಾರದು ಎಂದು ಕೆಲವು ಮುಖಂಡರು ಪ್ರಸ್ತಾಪಿಸಿದರು ಎಂದು ತಿಳಿದುಬಂದಿದೆ.

4ನೇ ಪುಟ ನೋಡಿ

'ನಂಜನಗೂಡಿನ ಪ್ರಕರಣ ಮರುಕಳಿಸಲು ಬಿಡೊಲ್ಲ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಅಧಿಕಾರಿಗಳು ಪರಿಣಾಮದ ಬಗ್ಗೆ ಯೋಚಿಸದೇ ಆತುರದಿಂದ ಕೈಗೊಂಡ ಕ್ರಮದಿಂದ ಜನರ ಭಾವನೆಗಳಿಗೆ ಧಕ್ಕೆಯಾಗಿದೆ. ನಂಜನಗೂಡಿನ ದೇವಸ್ಥಾನದ ಪ್ರಕರಣವನ್ನು ಸುಖಾಂತ್ಯಗೊಳಿಸುತ್ತೇವೆ. ಜತೆಗೆ ಅಂಥ ಪ್ರಕರಣ ರಾಜ್ಯದಲ್ಲಿ ಮತ್ತೆಲ್ಲೂ ಮರುಕಳಿಸಲು ಬಿಡುವುದಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಾರಿದ್ದಾರೆ.



ಬಿಜೆಪಿ ರಾಜ್ಯ ಕಾರ್ಯಕಾರಿಣಿಯನ್ನು ಭಾನುವಾರ ನಗರದ ತ್ರಿಶೂಲ್ ಕಲಾಭವನದಲ್ಲಿ ಉದ್ಘಾಟಿಸಿ ಮಾತನಾಡಿದ ಅವರು, 'ನಂಜನಗೂಡಿನ ಪ್ರಕರಣದ ನಂತರ ಶಾಂತಿ, ಸುವ್ಯವಸ್ಥೆಗೆ ತೊಂದರೆಯಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರಕ್ಕೆ ಎಡೆಮಾಡಿಕೊಟ್ಟಿದೆ' ಎಂದು ಹೇಳಿದರು.

'ಶಾಂತಿ ಕದಡುವ ಪ್ರಸಂಗಗಳು ಆಗಾಗ ನಡೆಯುತ್ತಿರುತ್ತವೆ. ಅಂಥ ಸಂದರ್ಭದಲ್ಲಿ ನಮ್ಮೆಲ್ಲ ವರಿಷ್ಠರು, ಹಿರಿಯರು ಕುಳಿತು ಮಾತನಾಡಿ ಸರಿಪಡಿಸಿದ್ದಾರೆ. ತಮ್ಮ ಅನುಭವ ಮುತ್ಸದ್ದಿತನ ತೋರಿದ್ದಾರೆ. ನಂಜನಗೂಡಿನ ದೇವಸ್ಥಾನ ತೆರವು ಪ್ರಕರಣಕ್ಕೆ ಸಂಬಂಧಿಸಿದಂತೆಯೂ ಹಿರಿಯರ ಜತೆ, ಪಕ್ಷದ ಮುಖಂಡರ ಜತೆ, ಸ್ಥಳೀಯರ ಜತೆ ಕುಳಿತು ಮಾತನಾಡಿ ಸರಿಪಡಿಸುತ್ತೇವೆ. ಸರಿಯಾದ ಕ್ರಮ ಕೈಗೊಳ್ಳುತ್ತೇವೆ' ಎಂದು ಅವರು ತಿಳಿಸಿದರು.

5ನೇ ಪುಟ ನೋಡಿ

ಪಂಜಾಬ್ ಮುಖ್ಯಮಂತ್ರಿ ಹುದ್ದೆಗೆ ಚನ್ನಿ ಆಯ್ಕೆ

ಚಂಡಿಗಡ (ಪಿಟಿಐ): ಕಾಂಗ್ರೆಸ್ ನಾಯಕ ಚರಣ್‌ಜಿತ್ ಸಿಂಗ್ ಚನ್ನಿ ಅವರು ಪಂಜಾಬ್ ಮುಖ್ಯಮಂತ್ರಿಯಾಗಿ ಸೋಮವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಚರಣ್‌ಜಿತ್ ಸಿಂಗ್ ಚನ್ನಿ

ಕಾಂಗ್ರೆಸ್ ಶಾಸಕಾಂಗ ಪಕ್ಷವು ಭಾನುವಾರ ನಡೆಸಿದ ಸಭೆಯಲ್ಲಿ ಚನ್ನಿ ಅವರನ್ನು ನಾಯಕನನ್ನಾಗಿ ಆಯ್ಕೆ ಮಾಡಲಾಯಿತು. ಪ್ರಮಾಣ ವಚನ ಸಮಾರಂಭವು ಸೋಮವಾರ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ. 49 ವರ್ಷದ ಚನ್ನಿ ಅವರು ರಾಜ್ಯದ ಮುಖ್ಯಮಂತ್ರಿ ಹುದ್ದೆಗೇರಿದ ಮೊದಲ ದಲಿತ ವ್ಯಕ್ತಿ ಎನಿಸಿಕೊಳ್ಳಲಿದ್ದಾರೆ.

ಚನ್ನಿ ಅವರು ಚಮಕೌರ್ ಸಾಹಿಬ್ ವಿಧಾನಸಭಾ ಕ್ಷೇತ್ರದಿಂದ ಮೂರನೇ ಅವಧಿಗೆ ಶಾಸಕರಾಗಿದ್ದರೆ. ಅಮರಿಂದರ್ ಸಿಂಗ್ ಅವರ ರಾಜೀನಾಮೆಯಿಂದ ಮುಖ್ಯಮಂತ್ರಿ ಹುದ್ದೆ ತೆರವಾಗಿತ್ತು. ರಾಜ್ಯ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಮತ್ತು ಅಮರಿಂದರ್ ನಡುವಣ ತೀವ್ರವಾದ ಭಿನ್ನಮತ ರಾಜೀನಾಮೆಗೆ ಕಾರಣವಾಗಿತ್ತು.

ಪಂಜಾಬ್ ವಿಧಾನಸಭೆಗೆ ಕೆಲವೇ ತಿಂಗಳಲ್ಲಿ ಚುನಾವಣೆ ನಡೆಯಲಿದೆ. ಭಿನ್ನ ಮತದಿಂದ ಕಂಗೆಟ್ಟಿರುವ ಪಕ್ಷದ ಎಲ್ಲರನ್ನೂ ಜತೆಗೆ ಕರೆದೊಯ್ಯುವ ಭಾರಿ ಹೊಣೆಗಾರಿಕೆಯು ಚನ್ನಿ ಅವರ ಮೇಲಿದೆ.

ಶಾಸಕಾಂಗ ಪಕ್ಷದ ಸಭೆಯ ಬಳಿಕ ನಡೆದ ಮಾಧ್ಯಮಗೋಷ್ಠಿಯಲ್ಲಿ ಚನ್ನಿ ಅವರ ಜತೆಗೆ ಸಿಧು ಮತ್ತು ಇತರ ಮುಖಂಡರು ಇದ್ದರು.

ದಲಿತರ ಓಲೈಕೆ?

ಪಂಜಾಬ್‌ನ ಜನಸಂಖ್ಯೆಯಲ್ಲಿ ಶೇ 32ರಷ್ಟು ದಲಿತರಿದ್ದಾರೆ. ಹಾಗಾಗಿ, ಚನ್ನಿ ಅವರ ಆಯ್ಕೆಯು ಚುನಾವಣೆಯ ದೃಷ್ಟಿಯಿಂದ ಮಹತ್ವದ ನಿರ್ಧಾರವಾಗಿದೆ. ಪಂಜಾಬ್‌ನಲ್ಲಿ ಅಧಿಕಾರಕ್ಕೆ ಬಂದರೆ ದಲಿತ ಸಮುದಾಯದವರನ್ನೇ ಮುಖ್ಯಮಂತ್ರಿ ಮಾಡಲಾಗುವುದು ಎಂದು ಬಿಜೆಪಿ ಈಗಾಗಲೇ ಪ್ರಕಟಿಸಿದೆ. ವಿರೋಧ ಪಕ್ಷ ಶಿರೋಮಣಿ ಅಕಾಲಿ ದಳವು ಬಿಎಸ್‌ಪಿ ಜತೆಗೆ ಮೈತ್ರಿ ಮಾಡಿಕೊಂಡಿದೆ. ಜತೆಗೆ, ದಲಿತ ಸಮುದಾಯದವರಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡುವುದಾಗಿ ಪ್ರಕಟಿಸಿದೆ.

ಇನ್ನಷ್ಟು ಸುದ್ದಿಗಳು 6

ಅನೈತಿಕ ಪೊಲೀಸ್ ಗಿರಿ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹೋದ್ಯೋಗಿ ಮಹಿಳೆಯನ್ನು ಮನೆಗೆ ಡ್ರಾಪ್ ಮಾಡುವ ವೇಳೆ ನಡುರಸ್ತೆಯಲ್ಲೇ ಬೈಕ್ ಅಡ್ಡಗಟ್ಟಿ ಅನ್ಯ ಧರ್ಮದ ಯುವಕನ ಹಲ್ಲೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹೊಸೂರು ರಸ್ತೆಯ ಡೇರಿ ವೃತ್ತದ ಬಳಿ ಶುಕ್ರವಾರ (ಸೆ.17) ರಾತ್ರಿ ನಡೆದಿದ್ದ ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಪೊಲೀಸರಿಗೆ ಸಂತ್ರಸ್ತ ಮುಸ್ಲಿಂ ಮಹಿಳೆಯೇ ದೂರು ನೀಡಿದ್ದು, ಮಹಿಳೆಯ ಹೆಸರನ್ನು ಪೊಲೀಸರು ಬಹಿರಂಗಪಡಿಸಿಲ್ಲ.

ಅಪರಾಧ ಸಂಚು (ಐಪಿಸಿ 34), ಧರ್ಮಗಳ ನಡುವೆ ದ್ವೇಷ ಬಿತ್ತುವುದು (ಐಪಿಸಿ 153–ಎ), ಮಹಿಳೆ ಮೇಲೆ ದೌರ್ಜನ್ಯ ನಡೆಸಿ ಗೌರವಕ್ಕೆ ಧಕ್ಕೆ ತಂದ (ಐಪಿಸಿ 354), ಹಲ್ಲೆ (ಐಪಿಸಿ 323) ಹಾಗೂ ಜೀವ ಬೆದರಿಕೆ (ಐಪಿಸಿ 506) ಆರೋಪದಡಿ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

'ಕಾನೂನು ಕೈಗೆತ್ತಿಕೊಂಡರೆ ಬಿಡುವುದಿಲ್ಲ'

ಬೆಂಗಳೂರು ಜಾಗತಿಕ ನಗರವಾಗಿದ್ದು, ಸರ್ವ ಜನಾಂಗದ ಶಾಂತಿ ತೋಟವಾಗಿದೆ. ಅದರ ಖ್ಯಾತಿಯನ್ನು ಉಳಿಸಲು ಸರ್ಕಾರ ಬದ್ಧವಾಗಿದೆ. ಯಾರೇ ಆದರೂ ಕಾನೂನು ಕೈಗೆತ್ತಿಕೊಳ್ಳುವುದನ್ನು, ಸಹಿಸುವುದಿಲ್ಲ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ಪೊಲೀಸರು ಆರೋಪಿಗಳನ್ನು 12 ಗಂಟೆಯೊಳಗೆ ಬಂಧಿಸಿದ್ದಾರೆ. ಅವರನ್ನು ಅಭಿನಂದಿಸುತ್ತೇನೆ ಎಂದು ತಿಳಿಸಿದ್ದಾರೆ.

4ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಜಿರಾಫೆ ದಾರುಣ ಅಂತ್ಯ

ಬೆಂಗಳೂರು/ ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಪ್ರಾಣಿಪ್ರಿಯರ ಆಕರ್ಷಣೆಯ ಕೇಂದ್ರವಾಗಿದ್ದ ಮೂರೂವರೆ ವರ್ಷದ ಜಿರಾಫೆ 'ಯದುನಂದನ' ಭಾನುವಾರ ದಾರುಣ ಅಂತ್ಯ ಕಂಡಿದೆ. 3

ಆರ್‌ಸಿಬಿ ನಾಯಕತ್ವ ಬಿಡಲಿರುವ ವಿರಾಟ್

ಬೆಂಗಳೂರು: ಈಗ ನಡೆಯುತ್ತಿರುವ ಐಪಿಎಲ್ ಕ್ರಿಕೆಟ್ ಟೂರ್ನಿಯ ನಂತರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕತ್ವವನ್ನು ಬಿಡುವುದಾಗಿ ವಿರಾಟ್ ಕೊಹ್ಲಿ ಭಾನುವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 11

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 20ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಹೊಸ ಕೆಎಚ್‌ಬಿ ಸೆಂಟ್ರಲ್ ಬ್ಲಾಕ್, ವಿನಾಯಕ ನಗರ, ಬಂಡೆಮಠ, ಕೆಂಗೇರಿ ಸ್ಯಾಟಲೈಟ್ ಟೌನ್, ಡೈಮಂಡ್ ಕೆಎಚ್‌ಬಿ ಸನ್‌ಸಿಟಿ, ಅರುಂದತಿ ನಗರ, ಎಸ್‌ಕೆಸಿ ಬಡಾವಣೆ, ಬೀಡಿ ಕಾಲೊನಿ, ಶಿರ್ಕೆ ಅಪಾರ್ಟ್‌ಮೆಂಟ್ ಸಮುಚ್ಚಯ, ಕಾಳಿಕಾಂಬ ದೇವಸ್ಥಾನ ರಸ್ತೆ, ರಾಬಿನ್ ಥಿಯೇಟರ್, ಸಚ್ಚಿದಾನಂದ ನಗರ, ಮಾನಸ ಬಡಾವಣೆ, ಹೊಯ್ಸಳ ವೃತ್ತ, ವಲಗೆರೆಹಳ್ಳಿ, ಕೃಷ್ಣಪ್ಪ ಗಾರ್ಡನ್, ಎಂಟಿಎಸ್ ಬಡಾವಣೆ, ಸರ್ ಎಂ.ವಿ. ಬಡಾವಣೆ, ಸ್ಯಾಟಲೈಟ್ ಕ್ಲಬ್, ಚಿಕ್ಕನಹಳ್ಳಿ, ಕ್ಲಾಸಿಕ್ ಕಂಟ್ರಿ ಬಡಾವಣೆ, ಸಾಯಿಕೃಪಾ ಬಡಾವಣೆ, ಅರುಣಾಚಲಂ ಬಡಾವಣೆ, ಅಪೂರ್ವ ಬಡಾವಣೆ, ಗಾಂಧಿನಗರ, ಸುಭಾಷ ನಗರ, ಪೂಜಾನ ಬಡಾವಣೆ, ವೈಷ್ಣೋದೇವಿ ಬಡಾವಣೆ, ಮೈಲಿಕಲ್ಲು, ಹೊಸಭೈರಹಳ್ಳಿ, ಹಳೆಯ ಭೈರಹಳ್ಳಿ.

ಚಳ್ಳಘಟ್ಟ, ಬಿಡಿಎ ಅಪಾರ್ಟ್‌ಮೆಂಟ್ ಸಮುಚ್ಚಯ, ಬಯಲು ಬಸವಣ್ಣ, ಹೊಸಪಾಳ್ಯ,ಬೆಟ್ಟನಪಾಳ್ಯ, ರಾಮೋಹಳ್ಳಿ, ಕೋಡಿಪಾಳ್ಯ, ಕೊಮ್ಮಘಟ್ಟ, ಸೂಳಿಕೆರೆ, ವೀರಭದ್ರ ನಗರ, ಹೊಸಕೆರೆ, ಕೃಷ್ಣ ಸಾಗರ್, ಮಾರಗೊಂಡನಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಬಡ್ತಿ ನೀಡದಂತೆ ಕೋರಿ ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದ ಪ್ರಭಾರ ಪ್ರಧಾನ ಎಂಜಿನಿಯರ್ ಪ್ರಭಾಕರ್

ಬೇಡವಾಯಿತು ಪಾಲಿಕೆ ಪ್ರಧಾನ ಎಂಜಿನಿಯರ್ ಹುದ್ದೆ

• ಪ್ರವೀಣ್ ಕುಮಾರ್ ಪಿ.ವಿ.

ಮುಖ್ಯಾಂಶಗಳು

- ಒಟ್ಟು 12 ಕಾಮಗಾರಿ ವಿಭಾಗಗಳ ಹೊಣೆಗಾರಿಕೆ
- ತಂದೆಯ ಅನಾರೋಗ್ಯ ಕಾರಣಕ್ಕೆ ಬಡ್ತಿ ನಿರಾಕರಣೆ
- ಕೋರಿಕೆ ಒಪ್ಪಿದರೆ ಮೂವರ ಬಡ್ತಿ ವಿಳಂಬ ಸಾಧ್ಯತೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಿಬಿಎಂಪಿಯ ಪ್ರಧಾನ ಎಂಜಿನಿಯರ್ ಹುದ್ದೆ ಯಾರಿಗೂ ಬೇಡವಾಗಿದೆ. ಪ್ರಭಾರ ಹೊಣೆಯ ಆಧಾರದಲ್ಲಿ ಈ ಹುದ್ದೆಯಲ್ಲಿರುವ ಪೂರ್ವ ವಲಯದ ಮುಖ್ಯ ಎಂಜಿನಿಯರ್ ಎಸ್.ಪ್ರಭಾಕರ್ ಅವರಿಗೆ ಪ್ರಧಾನ ಎಂಜಿನಿಯರ್ ಆಗಿ ಬಡ್ತಿ ಪಡೆಯುವ ಅರ್ಹತೆ ಇದೆ. ಆದರೆ, ತಮಗೆ ಪ್ರಧಾನ ಎಂಜಿನಿಯರ್ ಹುದ್ದೆಗೆ ಬಡ್ತಿ ನೀಡುವುದು ಬೇಡ ಎಂದು ಕೋರಿ ಅವರು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ ಪತ್ರ ಬರೆದಿದ್ದಾರೆ.

ಎಂ.ಆರ್.ವೆಂಕಟೇಶ್ ಅವರು 2016ರಿಂದ ಸರಿ ಸುಮಾರು ನಾಲ್ಕು ವರ್ಷ ಪ್ರಧಾನ ಎಂಜಿನಿಯರ್ ಹುದ್ದೆ ನಿಭಾಯಿಸಿದ್ದರು. ಬೊಮ್ಮನಹಳ್ಳಿ ವಲಯದ ಮುಖ್ಯ ಎಂಜಿನಿಯರ್ ಆಗಿದ್ದ ಸಿದ್ದೇಗೌಡ ಅವರು ವೆಂಕಟೇಶ್ ಅವರ ನಿವೃತ್ತಿ ಬಳಿಕ ಸುಮಾರು ಆರು ತಿಂಗಳ ಕಾಲ ಪ್ರಭಾರ ನೆಲೆಯಲ್ಲೇ ಈ ಹುದ್ದೆಯನ್ನು ನಿಭಾಯಿಸಿದ್ದರು. ಅವರು ನಿವೃತ್ತಿಯಾಗುವ ಕೊನೇಯ ದಿನ (2021ರ ಮೇ 31) ಪೂರ್ಣಕಾಲಿಕ ನೆಲೆಯಲ್ಲಿ ಈ ಹುದ್ದೆ ಅಲಂಕರಿಸಿದ್ದರು. ಸಿದ್ದೇಗೌಡ ಅವರ ನಿವೃತ್ತಿ ಬಳಿಕ, ಜೂನ್ 1ರಿಂದ ಪ್ರಭಾಕರ್ ಅವರು ಪ್ರಭಾರ ನೆಲೆಯಲ್ಲಿ ಈ ಹುದ್ದೆಯಲ್ಲಿದ್ದಾರೆ.

ಪಾಲಿಕೆಯಲ್ಲಿ ಎಂಟು ವಲಯಗಳು, ಯೋಜನೆ ಕೇಂದ್ರ, ರಸ್ತೆ ಮೂಲಸೌಕರ್ಯ, ರಾಜಕಾಲುವೆ ಹಾಗೂ ಕೆರೆ ವಿಭಾಗಗಳು ಸೇರಿ ಒಟ್ಟು 12 ಕಾಮಗಾರಿ ವಿಭಾಗಗಳಿವೆ. ಈ ಎಲ್ಲ ವಿಭಾಗಗಳ ಕಾಮಗಾರಿಗಳ ಮಾಹಿತಿಗಳನ್ನು ಪ್ರಧಾನ ಎಂಜಿನಿಯರ್ ಅವರ ಕಚೇರಿಯು ತಾಂತ್ರಿಕವಾಗಿ ಪರಿಶೀಲಿಸಿ ನಿರ್ವಹಣೆ ಮಾಡಬೇಕಿರುತ್ತದೆ.

'ತಂದೆ ವಯೋವೃದ್ಧರಾಗಿದ್ದು, ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಅವರಿಗೆ ಚಿಕಿತ್ಸೆ ಹಾಗೂ ಆರೈಕೆ ಬಗ್ಗೆ ಹೆಚ್ಚಿನ ಕ್ರಮ ವಹಿಸಬೇಕಾಗಿದೆ. ಹಾಗಾಗಿ ಪ್ರಧಾನ ಎಂಜಿನಿಯರ್‌ನಂತಹ ಜವಾಬ್ದಾರಿಯುತ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುವುದು ಕಷ್ಟಸಾಧ್ಯ. ವೈಯಕ್ತಿಕ ಕಾರಣಗಳಿಂದಾಗಿ ನಾನು ಪೂರ್ವ ವಲಯದ ಮುಖ್ಯ ಎಂಜಿನಿಯರ್ ಹುದ್ದೆಯಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತೇನೆ. ನನ್ನ ಬಡ್ತಿ ಪ್ರಸ್ತಾವನೆಯನ್ನು ಕೈಬಿಡಬೇಕು' ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಇದೇ 16ರಂದು ಬರೆದ ಪತ್ರದಲ್ಲಿ ಪ್ರಭಾಕರ್ ಅವರು ಕೋರಿದ್ದಾರೆ.

ಈ ಹಿಂದೆ ವಲಯಗಳ ಕಾಮಗಾರಿಗಳು, ಯೋಜನೆ, ನಗರಯೋಜನೆ, ಗುಣಮಟ್ಟ ನಿರ್ವಹಣೆ ಮುಂತಾದ ಪ್ರಮುಖ ಜವಾಬ್ದಾರಿಗಳೆಲ್ಲವೂ ಪ್ರಧಾನ ಎಂಜಿನಿಯರ್ ಕಚೇರಿ ವ್ಯಾಪ್ತಿಯಲ್ಲಿದ್ದವು. ಈ ಹಿಂದೆ ಟೆಂಡರ್‌ಗಳಿಗೆ ಸಂಬಧಿಸಿದ ಕಡತಗಳನ್ನೂ ಪ್ರಧಾನ ಎಂಜಿನಿಯರ್ ಗಮನಕ್ಕೆ ತರಬೇಕಾಗಿತ್ತು. ಅವರೂ ಅದಕ್ಕೆ ಸಂಬಂದಿಸಿದ ಟಿಪ್ಪಣಿಗಳನ್ನು ಬರೆಯುತ್ತಿದ್ದರು. ಕ್ರಮೇಣ ಈ ಹೊಣೆಗಳನ್ನು ಮುಕ್ತಗೊಳಿಸಲಾಗಿದೆ. ಈಗ ಕಾಮಗಾರಿಗಳ ಕುರಿತ ಪ್ರಮುಖ ತೀರ್ಮಾನಗಳೆಲ್ಲವೂ ಮುಖ್ಯ ಎಂಜಿನಿಯರ್ ಹಂತದಲ್ಲೇ ನಡೆಯುತ್ತಿವೆ. ಪ್ರಧಾನ ಎಂಜಿನಿಯರ್ ಹುದ್ದೆಗೆ ಅಂಕಿ-ಅಂಶಗಳ ನಿರ್ವಹಣೆ ಹೊರತಾಗಿ ಮಹತ್ವದ ಹೊಣೆಗಾರಿಕೆಗಳು ಇಲ್ಲ. ಮುಖ್ಯ ಎಂಜಿನಿಯರ್ ಹುದ್ದೆಗಿಂತಲೂ ಕಡಿಮೆ ಕಾರ್ಯದೊತ್ತಡವನ್ನು ಪ್ರಧಾನ ಎಂಜಿನಿಯರ್ ಹುದ್ದೆ ಹೊಂದಿರುತ್ತದೆ ಎನ್ನುತ್ತವೆ ಬಿಬಿಎಂಪಿ ಮೂಲಗಳು.

ಒಂದು ವೇಳೆ ಪ್ರಭಾಕರ್ ಅವರ ಬಡ್ತಿ ನಿರಾಕರಣೆ ಕೋರಿಕೆಯನ್ನು ನಗರಾಭಿವೃದ್ಧಿ ಇಲಾಖೆ ಒಪ್ಪಿದ್ದೇ ಆದರೆ, ಮುಖ್ಯ ಎಂಜಿನಿಯ್ ಹುದ್ದೆಗೆ ಬಡ್ತಿ ಪಡೆಯಲು ಕಾಯುತ್ತಿರುವ ಮೂವರು ಸೂಪರಿಂಟೆಂಡಿಂಗ್ ಎಂಜಿನಿಯರ್‌ಗಳಾದ ಮೋಹನಕೃಷ್ಣ, ಸುಗುಣ, ನರಸರಾಮರಾವ್ ಅವರು ತಮ್ಮ ಬಡ್ತಿಗಾಗಿ ಇನ್ನಷ್ಟು ಕಾಯಬೇಕಾಗಿ ಬರುತ್ತದೆ. ಬಿಬಿಎಂಪಿಯಲ್ಲಿ ಒಟ್ಟು 11 ಮುಖ್ಯ ಎಂಜಿನಿಯರ್ ಹುದ್ದೆಗಳಿದ್ದು, ಅವುಗಳಲ್ಲಿ ಎರಡು ಹುದ್ದೆಗಳನ್ನು ಲೋಕೋಪಯೋಗಿ ಇಲಾಖೆ ಎಂಜಿನಿಯರ್‌ಗಳ ನಿಯೋಜನೆ ಮೂಲಕ ಭರ್ತಿ ಮಾಡಲಾಗುತ್ತದೆ. ಉಳಿದ ಹುದ್ದೆಗಳನ್ನು ಬಿಬಿಎಂಪಿ ಎಂಜಿನಿಯರ್‌ಗಳಿಗೆ ಬಡ್ತಿ ನೀಡುವ ಮೂಲಕ ತುಂಬಲಾಗುತ್ತದೆ.

ಪ್ರಭಾಕರ್ ಅವರ ಕೋರಿಕೆಯನ್ನು ನಗರಾಭಿವೃದ್ಧಿ ಇಲಾಖೆ ಒಪ್ಪುತ್ತದೋ ಅಥವಾ ಅವರಿಗೆ ಪ್ರಧಾನ ಎಂಜಿನಿಯರ್ ಹುದ್ದೆಗೆ ಬಡ್ತಿ ನೀಡಲಾಗುತ್ತದೋ ಕಾದು ನೋಡಬೇಕಿದೆ.

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.

REGISTRATION & TENDER NOTIFICATION

The KSCA organises several IPL/International cricket matches annually at M.Chinnaswamy Stadium, Bangalore. The KSCA also has regular requirement of buses, cars etc. for transportation of teams, housekeeping services, security services and temporary infrastructure requirements at the stadium.

Reputed registered Manufacturers/ Vendors/ Suppliers/Agencies having statutory compliances including GST registration (regular returns filed) are invited to register and submit their tender bids for Annual Rate Contracts from 1st October 2021 till 31st March, 2022 and for the financial year 2022-23.

1) Housekeeping services (2) Temporary Infrastructure including hiring of furniture (3) Logistics services including transportation (4) DG sets and Flood light tower manning and (5) Public Address System (6) Insurance (7) Yoga classes for members.

Agency/vendor representative may visit the stadium to register their entity and to collect details and tender documents from the CFO's office at KSCA, M.Chinnaswamy stadium and submit their sealed quotations on or before 2:00 PM on Tuesday, 28th September, 2021. Those agencies/vendors who had submitted their tenders during March/April 2021 for any of the above supply/services may collect the tender documents free of charge.

Sd/-
Hon. Secretary-KSCA

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.

Tender Notification

The Karnataka State Cricket Association, M.Chinnaswamy Stadium, Cubbon Road, Bangalore, invites sealed tenders from GST Compliant, registered class I and above KPWD / CPWD / Equivalent Contractors who have completed similar work, for renovation of residential rooms and common areas at KSCA Sports Center.

The details of issue/submission of tender document are as follows:-

1. Name of work :- Renovation of residential rooms and common areas
2. Estimated Cost :- Rs. 3.50 Crores
3. Earnest Money Deposit :- Rs. 7,00,000/- should be enclosed in the technical bid cover
4. Cost of tender form :- Rs. 15,000/- plus GST (Non Refundable)
5. Date of issue of tender form :- 20/9/2021 to 08/10/2021
6. Last date of submission of filled tender form two covers bid system :- 21/10/2021 before 4.30 p.m (Technical & Commercial Separately)
7. Completion of work by :- 4(Four) months from the date of work order

Tender documents may be obtained from the Office of the KSCA, by submitting a requisition in the company's letter head between 11.00 a.m to 5.00 p.m on any working days. For any clarification please contact Mr.H.A.Venkatesprasad, AGM Civil Engineering Dept, Mobile No. 9945604515/8150900022

Hon. Secretary
KSCA

ಪದವಿ ಪೂರ್ವ ಉಪನ್ಯಾಸಕರು, ಪ್ರಾಂಶುಪಾಲರ ಪ್ರತಿಭಟನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ವರ್ಗಾವಣೆ ಕಾಯ್ದೆಗೆ ಮಸೂದೆಯನ್ನು ಪ್ರಸ್ತುತ ನಡೆಯುತ್ತಿರುವ ವಿಧಾನಮಂಡಲ ಅಧಿವೇಶನದಲ್ಲಿಯೇ ಮಂಡಿಸಿ ಒಪ್ಪಿಗೆ ಪಡೆಯಬೇಕು ಎಂದು ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಮತ್ತು ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಆಗ್ರಹಿಸಿವೆ.

ಈ ಬೇಡಿಕೆಯನ್ನು ಈಡೇರಿಸುವಂತೆ ಒತ್ತಾಯಿಸಿ ಮಲ್ಲೇಶ್ವರದಲ್ಲಿರುವ ಪದವಿಪೂರ್ವ ಶಿಕ್ಷಣ ಇಲಾಖೆಯ ಕೇಂದ್ರ ಕಚೇರಿಯ ಮುಂಭಾಗದಲ್ಲಿ ಸೋಮವಾರ (ಸೆ. 20) ಪ್ರತಿಭಟನೆ ನಡೆಸಲು ಎರಡೂ ಸಂಘಗಳು ನಿರ್ಧರಿಸಿದೆ.

'ವರ್ಗಾವಣೆ ಕಾಯ್ದೆ ರೂಪಿಸುವ ಬಗ್ಗೆ ಭರವಸೆ ನೀಡಿದ್ದ ಇಲಾಖೆ ವಿಳಂಬ ನೀತಿ ಅನುಸರಿಸುತ್ತಿದೆ. ಅಲ್ಲದೆ, ಉಪನ್ಯಾಸಕರ ಹಿತ ನಿರ್ಲಕ್ಷಿಸಿ ಕೆಲವು ಆಡಳಿತಾತ್ಮಕ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದೆ. ಇದನ್ನು ವಿರೋಧಿಸಿ ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದೇವೆ' ಎಂದು ಉಪನ್ಯಾಸಕರ ಸಂಘದ ಅಧ್ಯಕ್ಷ ನಿಂಗೇಗೌಡ ಎ.ಎಚ್. ತಿಳಿಸಿದ್ದಾರೆ.

ಯುದ್ಧ ವಿಮಾನ 'ತೇಜಸ್' ಬಗ್ಗೆ ಅಮೆರಿಕಾ, ಆಸ್ಟ್ರೇಲಿಯಾ ಆಸಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್‌ನ ಹಗುರ ಯುದ್ಧ ವಿಮಾನ 'ತೇಜಸ್' ಖರೀದಿಗೆ ಮಲೇಷ್ಯಾದ ರಾಯಲ್ ಮಲೇಷಿಯನ್ ಏರ್‌ಫೋರ್ಸ್ ಆಸಕ್ತಿ ತಳೆದಿರುವ ಬೆನ್ನಲ್ಲೇ, ಅಮೆರಿಕಾದ ನೌಕಾಪಡೆ ತರಬೇತಿ ಯುದ್ಧ ವಿಮಾನದ (ಎಲ್‌ಸಿಎ) ಬಗ್ಗೆ ಆಸಕ್ತಿ ತೋರಿದೆ.

ಭಾರತೀಯ ವಾಯು ಪಡೆಗಾಗಿ ತೇಜಸ್ ಮಾರ್ಕ್ 1 ಎ ಶ್ರೇಣಿಯ 73 ಮತ್ತು 10 ತರಬೇತಿ ಯುದ್ಧ ವಿಮಾನಗಳನ್ನು ಖರೀದಿಸಲು ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಇದರ ಮೊತ್ತ ₹45,696 ಕೋಟಿ, ಇದರ ಬೆನ್ನಲ್ಲೇ ಜಾಗತಿಕ ಮಾರುಕಟ್ಟೆ ಕಂಡುಕೊಳ್ಳಲು ಎಚ್‌ಎಎಲ್ ಮೈ ಚಳಿ ಬಿಟ್ಟು ಮುಂದಾಗಿದೆ.

ಭಾರತೀಯ ವಾಯು ಪಡೆ ದೊಡ್ಡ ಪ್ರಮಾಣದಲ್ಲಿ ತೇಜಸ್ ಖರೀದಿಸುತ್ತಿರುವುದರಿಂದ ಹಲವು ದೇಶಗಳು ಈ ಯುದ್ಧ ವಿಮಾನದ ಬಗ್ಗೆ ಆಸಕ್ತಿ ತೋರಿದ್ದು, ಆ ಪೈಕಿ ಮಲೇಷಿಯಾ ಪ್ರಮುಖವಾದುದು. 18 ತರಬೇತಿ ಹಗುರ ಯುದ್ಧ ವಿಮಾನಗಳ ಪೂರೈಕೆಗಾಗಿ ಮಲೇಷ್ಯಾದ ವಾಯುಪಡೆ ಈಗಾಗಲೇ ಟೆಂಡರ್ ಕರೆದಿದ್ದು, ಎಚ್‌ಎಎಲ್ ಅದರಲ್ಲಿ ಪಾಲ್ಗೊಳ್ಳುತ್ತಿದೆ.

ಈ ಮಧ್ಯೆ ಅಮೆರಿಕಾದ ನೌಕಾ ಪಡೆಯು ಎಚ್‌ಎಎಲ್‌ನ ಹಗುರ ಯುದ್ಧ ವಿಮಾನದ ನೌಕಾ ರೂಪಾಂತರಕ್ಕೆ ಆಸಕ್ತಿ ತೋರಿದೆ. ಆಸ್ಟ್ರೇಲಿಯಾ ಕೂಡಾ ಈ ಬಗ್ಗೆ ಮಾಹಿತಿ ಪಡೆದಿದೆ. ವಿಶೇಷವಾಗಿ ಅಲ್ಲಿನ ನೌಕಾ ಪಡೆಗೆ ತರಬೇತಿ ಯುದ್ಧ ವಿಮಾನದ ಅಗತ್ಯವಿದ್ದು, ಎಲ್‌ಸಿ ಡೆಕ್ ಅನ್ನು ಸಮೀಪಿಸುವ ಸಾಮರ್ಥ್ಯವನ್ನು ಹೊಂದಿದೆ. ಕಳೆದ ವರ್ಷದ ಜನವರಿಯಲ್ಲಿ ಎಲ್‌ಸಿಎ ವಿಮಾನ ವಾಹಕ ನೌಕೆ ಐಎನ್‌ಎಸ್ ವಿಕ್ರಮಾದಿತ್ಯದಲ್ಲಿ ಡೆಕ್ ಸಮೀಪ ಯಶಸ್ವಿಯಾಗಿ ಇಳಿಸಿ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿದೆ.

ಈ ಮಧ್ಯೆ ಎಚ್‌ಎಎಲ್ ಭಾರತೀಯ ನೌಕಾಪಡೆಯ ವಿಮಾನ ವಾಹಕ ನೌಕೆಯಿಂದ ಕಾರ್ಯ ನಿರ್ವಹಣೆ ಮಾಡಲು ಅವಳಿ ಎಂಜಿನ್‌ನ ಡೆಕ್ ಬೇಸ್ಡ್ ಫೈಟರ್‌ನ (ಟಿಇಡಿಬಿಎಫ್) ಹೊಸ ವಿನ್ಯಾಸವನ್ನೂ ಬಿಡುಗಡೆ ಮಾಡಿದೆ. ಇದು ಮಧ್ಯಮ ತೂಕದ 4.5 ನೇ ತಲೆಮಾರಿನ ಬಹು ಉಪಯೋಗಿ ವಿಮಾನವಾಗಿದೆ. ಮಲ್ಟಿ ರೋಲ್ ಕ್ಯಾರಿಯರ್ ಬೋರ್ನ್ ಫೈಟರ್ (ಎಂಆರ್‌ಸಿಬಿಎಫ್) ಕಾರ್ಯಕ್ರಮದಡಿ ಅಭಿವೃದ್ಧಿಪಡಿಸಲಾಗುತ್ತಿದೆ. ಇದು ನೌಕಾ ಪಡೆಯ ಮಿಗ್–29 ಕೆ ಫೈಟರ್‌ಗಳ ಈಗಿನ ತಂಡಕ್ಕೆ ಪೂರಕವಾಗಿದೆ, ಭವಿಷ್ಯದಲ್ಲಿ ಮಿಗ್–29 ಬದಲಿಗೆ ಇವುಗಳನ್ನೇ ಬಳಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ದೇಶೀ ಉದ್ಯಮಗಳಿಗೂ ಅನುಕೂಲ

'ಎಚ್‌ಎಎಲ್ ನಿರ್ಮಿತ ಯುದ್ಧ ವಿಮಾನಗಳ ವಿವಿಧ ದೇಶಗಳು ಆಸಕ್ತಿ ವಹಿಸಿರುವುದು ಉತ್ತಮ ಬೆಳವಣಿಗೆ. ವಿದೇಶಗಳಿಗೆ ರಫ್ತು ಮಾಡುವುದರಿಂದ ದೇಶದ ರಕ್ಷಣಾ ಉತ್ಪನ್ನಗಳ ತಯಾರಿಕೆಯಲ್ಲಿ ತೊಡಗಿರುವ ಉದ್ಯಮಗಳಿಗೆ ಸಾಕಷ್ಟು ಅನುಕೂಲ ಆಗುತ್ತದೆ' ಎಂದು ಎಡಿಡಿ ಎಂಜಿನಿಯರಿಂಗ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಗಿರೀಶ್ ಲಿಂಗಣ್ಣ ಹೇಳಿದರು.

ಪ್ರಧಾನಿ ನರೇಂದ್ರ ಮೋದಿಯವರ ಜನ್ಮದಿನದ ಅಂಗವಾಗಿ ನಗರದ ಚಿಕ್ಕಲಸಂದ್ರ ವಾರ್ಡ್‌ನಲ್ಲಿ ಅವೇಕ್ ಸಂಸ್ಥೆಯ ಅಂಧ ಮಕ್ಕಳಿಗೆ ಬಿಜೆಪಿ ಮುಖಂಡ ಬಿ.ಎಸ್. ವೆಂಕಟಸ್ವಾಮಿ ನಾಯ್ಡು ಅವರ ನೇತೃತ್ವದಲ್ಲಿ ಕೋವಿಡ್ ಲಸಿಕೆ ನೀಡಲಾಯಿತು. ಬಿಬಿಎಂಪಿ ವೈದ್ಯರು, ಚಿಕ್ಕಲಸಂದ್ರ ವಾರ್ಡ್‌ನ ಬಿಜೆಪಿ ಘಟಕದ ಅಧ್ಯಕ್ಷ ಶ್ರೀನಿವಾಸ್ ರೆಡ್ಡಿ, ಇತರರು ಇದ್ದರು

ಕಾಂಗ್ರೆಸ್‌ನಿಂದ ಸೈಕಲ್ ಜಾಥಾ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಧನ ಬೆಲೆ ಹಾಗೂ ತತ್ಪರಿಣಾಮ ದಿನ ಬಳಕೆ ವಸ್ತುಗಳ ದರ ಏರಿಕೆ ಖಂಡಿಸಿ ರಾಜ್ಯ ಕಾಂಗ್ರೆಸ್ ನಾಯಕರು ಕೆಪಿಸಿಸಿ ಕಚೇರಿಯಿಂದ ವಿಧಾನಸೌಧಕ್ಕೆ ಸೋಮವಾರ (ಸೆ.20) ಸೈಕಲ್ ಜಾಥಾ ಹಮ್ಮಿಕೊಂಡಿದ್ದಾರೆ.

ಕಳೆದ ವಾರ ಎತ್ತಿನಗಾಡಿಯಲ್ಲಿ ವಿಧಾನಸೌಧಕ್ಕೆ ಬಂದಿದ್ದ ಕಾಂಗ್ರೆಸ್ ನಾಯಕರು, ಈ ಬಾರಿ ಸೈಕಲ್ ಮೂಲಕ ಬಂದು, ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿಯನ್ನು ಖಂಡಿಸಲಿದ್ದಾರೆ.

ಕೆಪಿಸಿಸಿ ಕಚೇರಿಯಿಂದ ಬೆಳಿಗ್ಗೆ 10 ಗಂಟೆಗೆ ಸೈಕಲ್ ಜಾಥಾ ಆರಂಭವಾಗಲಿದ್ದು, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್. ಆರ್. ಪಾಟೀಲ ನೇತೃತ್ವದ ವಹಿಸಲಿದ್ದಾರೆ.

ಕಾಂಗ್ರೆಸ್ ಪಕ್ಷದ ಮಾಜಿ ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಜಾಥಾದಲ್ಲಿ ಭಾಗವಹಿಸಲಿದ್ದಾರೆ.

ಕ್ಲಾಸಿಫೈಡ್ಸ್

ADMISSION CORNER

GHOUSIA POLYTECHNIC FOR WOMEN
Hosur Road, Near Christ University, BANGALORE – 560 029.

GPWB

ADMISSIONS OPEN 2021 - 2022

ELIGIBILITY: Pass in S.S.L.C
LATERAL ENTRY FOR 2 YEARS DIPLOMA: PASS IN PUC / ITI

FEW SEATS ARE AVAILABLE
1. COMPUTER SCIENCE – 3 Years
2. APPAREL DESIGN & FABRICATION TECHNOLOGY (ADFT) – 3 Years

For Admission Contact: 9986068075 / 9845954481 / 9035604068

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

REAL ESTATE SELLING

Flat

Vishweshwariah Layout

2BHK (2UNITS) SPACIOUS FLATS Sale,Less Price Under Construction on BDA 'A'Katha Site,Pre-Launch Offers (Investors Welcome): 8792896326/ 9606037596

JOB OPPORTUNITIES

Marketing & Sales

WANTED MARKETING Executives For Private Limited Company Bangalore, Age Below 40 Years with Good Communication Skill Fluent In English, Kannada, Hindi Contact: 9108458798/ 23384085

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/ 7676760399

PERSONAL

Change of Name

I FIRST Name: Gokulvanan Surname: Valarmathy Velan S/O, Velan R/o E101, Mantri Espana, Kariyammana Agrahara, Bellandur, Bangalore 560103 have changed my name to First Name: Gokulvanan Middle Name: Valarmathy Surname: Velan

MATRIMONIAL

Grooms Wanted

Bengali

BENGALI, BE/31/5'4'/EB/DEBARI/MNC Bangalore/20 LPA. contact biodata with photos.7044716088

DH DECCAN HERALD
SELL, RENT, BUY PROPERTY THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
BOOK YOUR CLASSIFIEDS ADS ONLINE
WWW.DHCLASSIFIEDS.COM
ಪ್ರಜಾವಾಣಿ ಕ್ಲಾಸಿಫೈಡ್ಸ್
FOR MORE INFORMATION CONTACT 9880856233 | 9886213331
Email: santhoshkumar@deccanherald.co.in

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,
ನಂ.14, ರಜತ ಭವನ, 1 ನೇ ಮುಖ್ಯರಸ್ತೆ, ಹಕ್ಕ ರಸ್ತೆ,
ಹಂಪಿನಗರ 2ನೇ ಹಂತ, ವಿಜಯನಗರ, ಬೆಂಗಳೂರು–560104
ದೂರವಾಣಿ: 23300497–41159606 ಫ್ಯಾಕ್ಸ್: 23359600, Email: jscbinfo@jscbl.com

ಟೆಂಡರ್/ಸ್ಥಿರಾಸ್ತಿಯ ಬಹಿರಂಗ ಹರಾಜು

ಸೆಕ್ಯೂರಿಟೈಸೇಶನ್ ಮತ್ತು ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002 ರಡಿಯಲ್ಲಿ ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಪ್ರಧಾನ ಕಛೇರಿ: ನಂ 14, ರಜತ ಭವನ, 1ನೇ ಮುಖ್ಯ ರಸ್ತೆ, ಹಕ್ಕ ರಸ್ತೆ, ಹಂಪಿನಗರ 2ನೇ ಹಂತ, ವಿಜಯನಗರ, ಬೆಂಗಳೂರು–560104 ರ ಇವರಿಗೆ ಈ ಸಾಲಗಾರರಿಂದ ಬರಬೇಕಾದ ಸಾಲ ವಸೂಲಿಗಾಗಿ ಬ್ಯಾಂಕಿಗೆ ಅಡಮಾನ ಮಾಡಿರುವ ಕೆಳಕಂಡ ಸ್ಥಿರಾಸ್ತಿಯನ್ನು "ಎಲ್ಲಿ ಹೇಗಿದೆಯೋ ಹಾಗೆಯೇ ಮತ್ತು ಏನಿದೆಯೋ ಹಾಗಿನ ಆಧಾರದ" ಮೇಲೆ ಹರಾಜು ನಡೆಸಿ ಮಾರಾಟ ಮಾಡಲಾಗುವುದು.

ಶ್ರೀ ಬಸವರಾಜು.ಬಿ

ಶ್ರೀಮತಿ ಅನ್ನಪೂರ್ಣ.ಬಿ

ಸಾಲಗಾರರ ಹೆಸರು ಮತ್ತು ವಿಳಾಸ

ಅದಾಗಿ, 1. **ಶ್ರೀ ಬಸವರಾಜು ಬಿ.** ಬಿನ್ ಭದ್ರಯ್ಯ ಮತ್ತು 2. **ಶ್ರೀಮತಿ ಅನ್ನಪೂರ್ಣ ಬಿ.** ಬಸವರಾಜು ಬಿ. ರವರ ಧರ್ಮಪತ್ನಿ ಇವರಿಬ್ಬರೂ ನಂ. 1102, 4ನೇ ಮುಖ್ಯರಸ್ತೆ, 5ನೇ ಹಂತ, ಬಿ.ಇ.ಎಂ.ಎಲ್. ಲೇಔಟ್, ರಾಜರಾಜೇಶ್ವರಿನಗರ, ಬೆಂಗಳೂರು – 560 098, ಇಲ್ಲಿನ ನಿವಾಸಿಗಳು, **ಜಾಮೀನುದಾರರು:** ಶ್ರೀಮತಿ ಅನ್ನಪೂರ್ಣ ಬಿ. ಬಸವರಾಜು ಬಿ. ರವರ ಧರ್ಮಪತ್ನಿ ನಂ. 1102, 4ನೇ ಮುಖ್ಯರಸ್ತೆ, 5ನೇ ಹಂತ, ಬಿ.ಇ.ಎಂ.ಎಲ್. ಲೇಔಟ್, ರಾಜರಾಜೇಶ್ವರಿನಗರ, ಬೆಂಗಳೂರು – 560 098 ಇವರು ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ರಾಜರಾಜೇಶ್ವರಿನಗರ, ಬೆಂಗಳೂರು, ಇದರಿಂದ ಪಡೆದಿರುವ ಸಾಲವನ್ನು ಮರುಪಾವತಿ ಮಾಡಲು ವಿಫಲರಾಗಿದ್ದಾರೆ. ಇವರು ಒಪ್ಪಿರುವ ನಿಯಮಗಳು ಮತ್ತು ನಿಬಂಧನೆಗಳ ಅನ್ವಯ ಸ್ವತಃ ಪಾವತಿ ಮಾಡಬೇಕಾಗಿರುವ ಒಟ್ಟು ಬಾಕಿ ಮೊತ್ತ ದಿನಾಂಕ 08–09–2021 ರಂದು ಇದ್ದಂತೆ ರೂ.1,70,26,550/– (ಒಂದು ಕೋಟಿ ಎಪ್ಪತ್ತು ಲಕ್ಷದ ಇಪ್ಪತ್ತಾರು ಸಾವಿರದ ಐದುನೂರ ಐವತ್ತು ರೂಪಾಯಿಗಳು ಮಾತ್ರ) ಜೊತೆಗೆ ಇದರ ಮೇಲಿನ ಅನ್ವಯವಾಗುವ ದರದಲ್ಲಿನ ಬಡ್ಡಿ ಮತ್ತು ಖರ್ಚು ವೆಚ್ಚಗಳು.

ಹರಾಜಿಗಿರುವ ಸ್ಥಿರಾಸ್ತಿಯ ವಿವರ	ಬಹಿರಂಗ ಹರಾಜು ನಡೆಯುವ ದಿನಾಂಕ ಹಾಗೂ ಸಮಯ ಸ್ಥಳ	ಕನಿಷ್ಠ ಮೀಸಲು ಬೆಲೆ ಮತ್ತು ಮುಂಗಡ ಠೇವಣಿ (ಇ.ಎಂ.ಡಿ)
1. ಶ್ರೀಮತಿ ಅನ್ನಪೂರ್ಣ ಬಿ. ಬಸವರಾಜು ಬಿ. ರವರ ಧರ್ಮಪತ್ನಿ ಇವರಿಗೆ ಸೇರಿದ ಸ್ವತ್ತು ಬೆಂಗಳೂರು ದಕ್ಷಿಣ ತಾಲ್ಲೂಕು, ರಾಜರಾಜೇಶ್ವರಿನಗರ, ಬಿ.ಇ.ಎಂ.ಎಲ್. ಲೇಔಟ್ 7ನೇ ಹಂತ, ಕೆಂಗೇರಿ ಹೋಬಳಿ, ಮೈಲಸಂದ್ರ ಗ್ರಾಮದ ಸರ್ವೆ ನಂ. 16/1 ರಲ್ಲಿರುವ, ಖಾತಾ ನಂ. 1458/1381/1440/73 ಹೊಂದಿರುವ, ಪೂರ್ವದಿಂದ ಪಶ್ಚಿಮಕ್ಕೆ : 50–0 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 30–0 ಅಡಿ ಹೀಗೆ ಒಟ್ಟಾರೆ 1500 ಚದರ ಅಡಿ ವಿಸ್ತೀರ್ಣವುಳ್ಳ ನಂ. 73 ರ ಸ್ಥಿರಾಸ್ತಿ ಸ್ವತ್ತು. ಸದರಿ ಸ್ವತ್ತಿನ ಚಕ್ಕುಬಂದಿ ಕೆಳಕಂಡಂತಿರುವುದು. ಪೂರ್ವಕ್ಕೆ :ರಸ್ತೆ, ಪಶ್ಚಿಮಕ್ಕೆ : ನಿವೇಶನ ಸಂ. 88, ಉತ್ತರಕ್ಕೆ : ನಿವೇಶನ ಸಂ. 74, ದಕ್ಷಿಣಕ್ಕೆ : ನಿವೇಶನ ಸಂ. 72.	ದಿನಾಂಕ: 26/10/2021, ಮಂಗಳವಾರ, ಬೆಳಗ್ಗೆ 12.30 ಘಂಟೆಗೆ ನಂ.73, ಮೈಲಸಂದ್ರ ಗ್ರಾಮದ ಸರ್ವೆ ನಂ.16/1 ರಲ್ಲಿರುವ, ಖಾತಾ ನಂ.1458/1381/1440 /73 ಬಿ.ಇ.ಎಂ.ಎಲ್.ಲೇಔಟ್ 7ನೇ ಹಂತ, ರಾಜರಾಜೇಶ್ವರಿ ನಗರ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು	ರೂ.1,99,43,000/– (ರೂ ಒಂದು ಕೋಟಿ ತೊಂಬತ್ ಒಂಬತ್ತು ಲಕ್ಷದ ನಲವತ್ತು ಮೂರು ಸಾವಿರ ರೂಪಾಯಿಗಳು ಮಾತ್ರ) ರೂ.19,94,300/– (ಮೀಸಲು ಬೆಲೆಯ ಶೇ.10) (ರೂ ಹತ್ತೊಂಬತ್ತು ಲಕ್ಷದ ತೊಂಬತ್ತು ನಾಲ್ಕು ಸಾವಿರದ ಮೂನ್ನೂರು ಮಾತ್ರ)

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು:

1. ಹರಾಜಿನಲ್ಲಿ ಭಾಗವಹಿಸುವ ಆಸಕ್ತರು ಹಿಂತಿರುಗಿಸಲಾಗುವ ಇ.ಎಂ.ಡಿ.ಗಾಗಿ ಕಾಯ್ದಿಟ್ಟ ಬೆಲೆಯ ಶೇಕಡ 10% ರಷ್ಟನ್ನು ಡಿ.ಡಿ/ಪೇ ಆರ್ಡರ್ ಮುಖಾಂತರ **ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ, ವಿಜಯನಗರ ಶಾಖೆ, ಬೆಂಗಳೂರು.** ಇವರ ಹೆಸರಿಗೆ ಮೇಲೆ ತಿಳಿಸಿರುವ ಸ್ಥಿರಾಸ್ತಿಯ ಹರಾಜಿನ ದಿನ ಅಥವಾ 25/10/2021, ಸಂಜೆ 5:30ರ ಒಳಗೆ ಪಾವತಿಸಿ ರಸೀದಿ ಮತ್ತು ಟೆಂಡರ್ ಫಾರಂನ್ನು ಪಡೆಯುವುದು ಜೊತೆಗೆ ಕೆವೈಸಿ ದಾಖಲೆಗಳು ಮತ್ತು ಇತ್ತೀಚಿನ ಭಾವಚಿತ್ರ ಸಲ್ಲಿಸುವುದು, ವಿಜಯಿ ಬಿಡ್ಡುದಾರರು ಹರಾಜಿನ ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂಗಡವಾಗಿ ಕೊಟ್ಟ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
2. ಮುಂಗಡ ಠೇವಣಿಯನ್ನು ಪಾವತಿಸಿದ ಬಿಡ್ಡ್‌ದಾರರರು ಬ್ಯಾಂಕಿನಿಂದ ನೀಡಲಾಗುವ ಫಾರಂನಲ್ಲಿ ಮುಚ್ಚಿದ ಲಕೋಟೆಯಲ್ಲಿ ಬಿಡ್ಡನ್ನು ಸಲ್ಲಿಸುವುದು. ಎಲ್ಲಾ ಲಕೋಟೆಗಳು ಬಂದ ನಂತರ ಬಿಡ್ಡುದಾರರ ಸಮ್ಮುಖದಲ್ಲಿ ದಿನಾಂಕ:26/10/2021, ಮಂಗಳವಾರ, 12.30 ಘಂಟೆಗೆ ಅಧಿಕೃತ ಅಧಿಕಾರಿಯು ಲಕೋಟೆಯನ್ನು ತೆರೆದು ಅಂತಿಮಗೊಳಿಸುವರು.
3. ಬಿಡ್ಡಿನಲ್ಲಿ ಯಶಸ್ವಿಯಾಗದ ಬಿಡ್‌ದಾರರಿಗೆ ಇ.ಎಂ.ಡಿ. ಹಣವನ್ನು ತಕ್ಷಣವೇ ಮರುಪಾವತಿಸಲಾಗುವುದು. ಸ್ಥಿರ ಸ್ವತ್ತನ್ನು ಯಾವುದೇ ಕಾರಣಕ್ಕೂ ಮೀಸಲು ಬೆಲೆಗಿಂತ ಕಡಿಮೆ ಮೌಲ್ಯಕ್ಕೆ ಮಾರಾಟ ಮಾಡಲಾಗುವುದಿಲ್ಲ.
4. ವಿಜಯಿ ಬಿಡ್ಡುದಾರರು ಹರಾಜಿನ ಮೊಬಲಿಗಿನ ಶೇ.25 ರಷ್ಟು (ಮುಂಗಡವಾಗಿ ಪಾವತಿಸಿದ ಹಣವನ್ನು ಸೇರಿ) ಮೊತ್ತವನ್ನು ಹರಾಜಿನ ದಿನವೇ ಪಾವತಿಸತಕ್ಕದ್ದು, ಆ ಹಣವನ್ನು ಸ್ವೀಕರಿಸಿದ ಮತ್ತು ಕೆವೈಸಿ ದಾಖಲೆಗಳ ಮೂಲ ಪ್ರತಿಗಳನ್ನು (ಫೋಟೋ ಐಡಿ ಮತ್ತು ವಿಳಾಸದ ದಾಖಲೆ) ಪರಿಶೀಲಿಸಿದ ನಂತರ ಅಧಿಕೃತ ಅಧಿಕಾರಿಯು ಮಾರಾಟ ಧೃಡೀಕರಣ ಪತ್ರವನ್ನು ನೀಡುತ್ತಾರೆ. ಉಳಿದ ಹಣವನ್ನು 15 ದಿನಗಳ ಒಳಗಾಗಿ ಪಾವತಿಸಬೇಕು.
5. ವಿಜಯಿಯಾದ ಬಿಡ್ಡುದಾರರು ಈ ಪ್ರಕಟಣೆಯ ನಿಯಮಗಳನ್ನು ಪಾಲಿಸದಿದ್ದರೆ ಮತ್ತು ಯಾವುದೇ ರೀತಿಯಲ್ಲಾದರು ತಪ್ಪುಗಳನ್ನು ಮಾಡಿದರೆ ಅವರು ಪಾವತಿಸಿದ ಹಣವನ್ನು ಬ್ಯಾಂಕ್ ಯಾವುದೇ ಸೂಚನೆ ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಹಾಗೂ ಮತ್ತೆ ಹರಾಜು ಮಾಡಲಾಗುತ್ತದೆ.
6. ವಿಜಯಿಯಾದ ಬಿಡ್ಡುದಾರರು ತನ್ನ ಪರವಾಗಿ ನೊಂದಣಿ ಮಾರಾಟ ಪತ್ರವನ್ನು ಪಡೆದುಕೊಳ್ಳಲು ತೆರಿಗೆಗಳು, ನೋಂದಣಿ ಶುಲ್ಕ ಮತ್ತು ಸಾಮಾನ್ಯ ಮುದ್ರಾಂಕ ಟಿ.ಡಿ.ಎಸ್. ಮತ್ತಿತರ ಖರ್ಚುಗಳನ್ನು ಭರಿಸತಕ್ಕದ್ದು.
7. ಬ್ಯಾಂಕಿನ ಅಧಿಕೃತ ಅಧಿಕಾರಿಗಳು ಹರಾಜನ್ನು ಯಾವುದೇ ಕಾರಣ ಕೊಡದೆ ಅಂಗೀಕರಿಸುವ, ಮುಂದೂಡುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತಾರೆ.
8. ಸದರಿ ಸ್ಥಿರಾಸ್ತಿಯ ಬಗ್ಗೆ ಬಾಕಿ ಇರುವ ಸ್ಥಿರಾಸ್ತಿ ತೆರಿಗೆ ಮತ್ತು ಇತರೆ ಖರ್ಚುಗಳಿಗೆ ಹಾಗೂ ಇತರೆ ಯಾವುದೇ ಸಾಲಗಳಿಗೆ ಬ್ಯಾಂಕು ಜವಾಬ್ದಾರಿಯಾಗಿರುವುದಿಲ್ಲ. ಬಿಡ್ಡುದಾರರು ಇಚ್ಛಿಸಿದ ಆಧಾರದ ಮೇಲೆ ಮತ್ತು ಸೆಕ್ಯೂರಿಟೈಸೇಷನ್ ಅಧಿನಿಯಮ–2002 ರಲ್ಲಿ ನಿಗಧಿಪಡಿಸಿರುವ ಷರತ್ತುಗಳಿಗೆ ಒಳಪಟ್ಟು ಮಾರಾಟ ಮಾಡಲಾಗುತ್ತದೆ.
9. ಹರಾಜು ಮಾಡಲಿರುವ ಸ್ಥಿರಾಸ್ತಿಯನ್ನು ಬಿಡ್ಡುದಾರರು ಆಡಳಿತ ಕಛೇರಿಯಲ್ಲಿ ಅಧಿಕೃತ ಅಧಿಕಾರಿಯನ್ನು ದೂ.ಸಂ. 080–23300497, 41159606, ಶಾಖಾ ವ್ಯವಸ್ಥಾಪಕರನ್ನು ಸಂಪರ್ಕಿಸಿ, ಬಿಡ್ಡುದಾರರು ಆಸ್ತಿಯ ಬಗ್ಗೆ ವಿಚಾರಿಸುವ ಮತ್ತು ಆಸ್ತಿಯ ಮೇಲಿನ ಸಾಲದ ವಿವರಗಳನ್ನು ಪಡೆಯಲು ಸ್ವತಂತ್ರರಿರುತ್ತಾರೆ.
10. ಅಧಿಕೃತ ಬಿಡ್ಡುದಾರರು ಹೊರತು ಜಿ.ಪಿ.ಎ. ಹೋಲ್ಡರ್, ಏಜೆಂಟರು ಅಥವಾ ಇತರೆ ಯಾವುದೇ ವ್ಯಕ್ತಿಗಳು ಹರಾಜಿನಲ್ಲಿ ಭಾಗವಹಿಸಲು ಅರ್ಹರಲ್ಲ .
11. ಸ್ಥಿರ ಸತ್ತು "ಎಲ್ಲಿ ಹೇಗಿದೆಯೋ ಹಾಗೆಯೇ ಮತ್ತು ಏನಿದೆಯೋ ಹಾಗಿನ ಆಧಾರದ" ಮೇಲೆ ಮಾರಾಟ ಮಾಡಲಾಗುವುದು.
12. ಡಿ.ಆರ್.ಟಿ/ಡಿ.ಆರ್.ಎ.ಟಿ/ಹೈಕೋರ್ಟ್ ಅಥವಾ ಯಾವುದೇ ನ್ಯಾಯಾಲಯದ ಪ್ರಕ್ರಿಯೆಗಳ ಅನ್ವಯ ಈ ಹರಾಜಿಗೆ ತಡೆಯಾಜ್ಞೆ ನೀಡಿದರೆ ಈ ಹರಾಜನ್ನು ಮುಂದೂಡಲಾಗುವುದು ಅಥವಾ ರದ್ದು ಮಾಡಲಾಗುವುದು, ಹರಾಜಿನ ಮುಂದೂಡಿಕೆ ಅಥವಾ ರದ್ದು ಆದಾಗ ಹರಾಜಿನಲ್ಲಿ ಭಾಗವಹಿಸುವವರು ಯಾವುದೇ ರೀತಿಯ ನಷ್ಟ ಪರಿಹಾರ ಅಥವಾ ಮೊತ್ತವನ್ನು ಪಡೆಯುವ ಹಕ್ಕು ಹೊಂದಿರುವುದಿಲ್ಲ.
13. ಪೂರ್ಣವಾಗಿ ಬಾಕಿ ಹಣವನ್ನು ಪಾವತಿ ಮಾಡದಿದ್ದಲ್ಲಿ ಮೇಲೆ ತಿಳಿಸಿರುವ ದಿನಾಂಕದಂದು ಹರಾಜು ನಡೆಸುವ ಬಗ್ಗೆ ಸದರಿಯವರು (ಸಾಲಗಾರರು, ಜಾಮೀನುದಾರರು ಅಥವಾ ಈಡುದಾರರು) ಇದನ್ನು ನೋಟೀಸೆಂದು ಪರಿಗಣಿಸಬೇಕು.

ಬಿಡ್ಡ್‌ದಾರರು ಟೆಂಡರ್‌ನ ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಅಧಿಕಾರಿ, **ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ, ನಂ 14, 'ರಜತ ಭವನ', 1 ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104. ದೂರವಾಣಿ: 080–23300497, 9945276719, Email: jscbinfo@jscbl.com**

ಸ್ಥಳ : ಬೆಂಗಳೂರು
ದಿನಾಂಕ : 20–09–2021

ಸಹಿ/– ಅಧಿಕೃತ ಅಧಿಕಾರಿ,
ಜನತಾ ಸೇವಾ ಕೋ ಆಪರೇಟವ್ ಬ್ಯಾಂಕ್ ಲಿ,

ಸಂಕ್ಷಿಪ್ತ ಸುದ್ದಿ

ವರ್ಲಿ ಚಿತ್ರಕಲೆ ತರಬೇತಿ ಕಾರ್ಯಾಗಾರ

ಬೆಂಗಳೂರು: ಕೇಂದ್ರ ಸಂಸ್ಕೃತಿ ಇಲಾಖೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಐದು ದಿನಗಳ ವರ್ಲಿ ಚಿತ್ರಕಲೆ ತರಬೇತಿ ಕಾರ್ಯಾಗಾರ ಹಮ್ಮಿಕೊಂಡಿದೆ.

ಸಂಸ್ಕೃತಿ ಇಲಾಖೆಯ ಸೌತ್ ಸೆಂಟ್ರಲ್ ಝೋನ್ ಕಲ್ಚರಲ್ ಸೆಂಟರ್ (ನಾಗಪುರ) ಹಾಗೂ ಬೆಂಗಳೂರಿನ ಬಿರ್ಸಾ ಮುಂಡಾ ಬುಡಕಟ್ಟು ಜನಾಂಗ ಅಭಿವೃದ್ಧಿ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಇದೇ 27ರಿಂದ ಅಕ್ಟೋಬರ್ 1ರವರೆಗೆ ಪ್ರತಿದಿನ ಬೆಳಿಗ್ಗೆ 11ರಿಂದ ಮಧ್ಯಾಹ್ನ 2ರ ವರೆಗೆ ಕಾರ್ಯಾಗಾರ ನಡೆಯಲಿದೆ.

ಅರಮನೆ ರಸ್ತೆಯ ಆರ್.ಸಿ.ಕಾಲೇಜಿನಲ್ಲಿ ನಡೆಯುವ ಈ ಕಾರ್ಯಾಗಾರದಲ್ಲಿ, ರಾಷ್ಟ್ರಪ್ರಶಸ್ತಿ ಪುರಸ್ಕೃತ ಕಲಾವಿದರು ತರಬೇತಿ ನೀಡಲಿದ್ದಾರೆ. ₹500 ಪ್ರವೇಶ ಶುಲ್ಕ ನಿಗದಿಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಆಸಕ್ತರು ಹನಿಯೂರು ಚಂದ್ರೇಗೌಡ (ಮೊ:9901609723 ಅಥವಾ kaadumedu23@gmail.com) ಅವರನ್ನು ಸಂಪರ್ಕಿಸಬಹುದು.

'ಕ್ರಿಯಾಶೀಲ ಮಾಧ್ಯಮ' ಡಿಪ್ಲೊಮಾ: ಉಚಿತ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ಬೆಂಗಳೂರು: ಬದುಕು ಸೆಂಟರ್ ಫಾರ್ ಲೈವ್ಲಿಹುಡ್ ಲರ್ನಿಂಗ್ 'ಕ್ರಿಯಾಶೀಲ ಮಾಧ್ಯಮ' ವಿಷಯದಲ್ಲಿ ಒಂದು ವರ್ಷದ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್ ಆರಂಭಿಸಿದ್ದು, ಇದರ ಉಚಿತ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ದಿನಪತ್ರಿಕೆ, ಸುದ್ದಿ ವಾಹಿನಿ, ಮನರಂಜನಾ ವಾಹಿನಿ, ಸಿನಿಮಾ, ಡಿಜಿಟಲ್ ಮೀಡಿಯಾಗಳಲ್ಲಿ ತೊಡಗಿಸಿ ಕೊಳ್ಳಲು ಆಸಕ್ತಿ ಇರುವವರು ಅರ್ಜಿ ಸಲ್ಲಿಸಬಹುದು. ವರದಿಗಾರಿಕೆ, ಸುದ್ದಿ ಸಂಪಾದನೆ, ಭಾಷಾಂತರದ ಜೊತೆಗೆ ಕಿರುತೆರೆ, ಹಿರಿತೆರೆಗಳಿಗೆ ಸೃಜನಶೀಲ ಸ್ಕ್ರಿಪ್ಟ್ ಬರವಣಿಗೆ, ಕ್ಯಾಮೆರಾ ನಿರ್ವಹಣೆ, ವಿಡಿಯೊ ಎಡಿಟಿಂಗ್, ಪುಟ ವಿನ್ಯಾಸದ ಬಗ್ಗೆ ಅನುಭವಿ ತಂತ್ರಜ್ಞರು ಮಾರ್ಗದರ್ಶನ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಆಸಕ್ತರು https://forms.gle/nbeoSYdSkvVniuzK8 ಕೊಂಡಿಯ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ9916376954 ಅಥವಾ cccm@samvadabaduku.org ಸಂಪರ್ಕಿಸಬಹುದು.

ಸಿಗಂದೂರಿನಿಂದ ಬೆಂಗಳೂರಿಗೆ ಖಾಸಗಿ ಬಸ್ ಸಂಚಾರ

ಶಿವಮೊಗ್ಗ: ಸಾಗರ ತಾಲ್ಲೂಕಿನ ಸಿಗಂದೂರು ಚೌಡೇಶ್ವರಿ ದೇವಸ್ಥಾನದಿಂದ ಬೆಂಗಳೂರಿಗೆ ತೆರಳಲು ಖಾಸಗಿ ಬಸ್ ಸಂಚಾರ ಅ. 3ರಿಂದ ಆರಂಭವಾಗಲಿದೆ.

ರಾಜ್ಯದ ಪ್ರಸಿದ್ಧ ಶಕ್ತಿ ಕೇಂದ್ರವಾದ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಸಿಗಂದೂರು ಚೌಡಮ್ಮ ದೇವಸ್ಥಾನದಿಂದ ನಿಟ್ಟೂರು, ಸಂಪೆಕಟ್ಟೆ, ಹೊಸನಗರ, ಶಿವಮೊಗ್ಗ ಮಾರ್ಗವಾಗಿ ಬೆಂಗಳೂರಿಗೆ ಸಂಚಾರ ಆರಂಭವಾಗಲಿದೆ. ಮಾಹಿತಿಗೆ ಮೊ.ಸಂ: 7892454001, 8310438714 ಸಂಪರ್ಕಿಸಬಹುದು.

ಮತಕ್ಕಾಗಿ ಬಿಜೆಪಿಯಿಂದ ತಾಲಿಬಾನ್, ಅಫ್ಗನ್, ಪಾಕ್‌ನ ಬಳಕೆ: ಮುಫ್ತಿ

ಜಮ್ಮು: ಮತ ಗಳಿಸುವ ಸಲುವಾಗಿ ಬಿಜೆಪಿಯು ತಾಲಿಬಾನ್, ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನದ ವಿಚಾರಗಳಲ್ಲಿ ರಾಜಕಾರಣ ಮಾಡುತ್ತಿದೆ ಎಂದು ಜಮ್ಮು ಮತ್ತು ಕಾಶ್ಮೀರದ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ಅಧ್ಯಕ್ಷೆ ಮೆಹಬೂಬಾ ಮುಫ್ತಿ ಭಾನುವಾರ ಹೇಳಿದ್ದಾರೆ.

ಪಿಡಿಪಿಯ ಯುವ ಕಾರ್ಯಕರ್ತರ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, 'ಕೇಸರಿ ಪಕ್ಷದ ಏಳು ವರ್ಷಗಳ ಆಡಳಿತದಿಂದ ದೇಶದ ಜನರಿಗೆ ದುಃಖವುಂಟಾಗಿದ್ದು, ಜಮ್ಮು ಮತ್ತು ಕಾಶ್ಮೀರದ ಜನರ ಜೀವನವೇ ನಾಶವಾಗಿದೆ' ಎಂದು ದೂಷಿಸಿದ್ದಾರೆ.

‘ಪೀಠಕ್ಕೆ ದೇಗುಲ ಕೊಟ್ಟರೆ ಮೆಡಿಕಲ್ ಕಾಲೇಜು ಪ್ರಾರಂಭ’

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ‘ಮೇಡ್ಲೇರಿ, ಹುಲಿಕಟ್ಟಿ ಮತ್ತು ರಾಣೇಬೆನ್ನೂರಿನ ಬೀರಲಿಂಗೇಶ್ವರ ದೇವಸ್ಥಾನಗಳನ್ನು ಕಾಗಿನೆಲೆ ಪೀಠಕ್ಕೆ ಹಸ್ತಾಂತರಿಸಿದರೆ, ಅದರಿಂದ ಬರುವ ಆದಾಯದಿಂದ ಮೆಡಿಕಲ್ ಕಾಲೇಜು ಪ್ರಾರಂಭಿಸಲಾಗುವುದು’ ಎಂದು ಕಾಗಿನೆಲೆ ಕನಕಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಹ್ಯಾರಡ ಗ್ರಾಮದಲ್ಲಿ ಭಾನುವಾರ ಬೀರಲಿಂಗೇಶ್ವರ ದೇವಸ್ಥಾನ ನಿರ್ಮಾಣ ಭೂಮಿಪೂಜೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ‘ದೈವದ ನಂಬಿಕೆಯಿಂದ ಭಕ್ತರು ಮೂರೂ ಬೀರಲಿಂಗೇಶ್ವರ ದೇವಸ್ಥಾನಗಳಿಗೆ ಕಾಣಿಕೆ ರೂಪದಲ್ಲಿ ಕೋಟ್ಯಂತರ ರೂಪಾಯಿ ಅರ್ಪಿಸುತ್ತಾರೆ. ಆದರೆ, ಕೆಲವರ ಸ್ವಾರ್ಥದಿಂದ ಹಣ ದುರುಪಯೋಗವಾಗುತ್ತಿದೆ. ಮೂರು ದೇವಸ್ಥಾನಗಳನ್ನು ಕಾಗಿನೆಲೆ ಪೀಠಕ್ಕೆ ಬಿಟ್ಟುಕೊಟ್ಟಲ್ಲಿ ಮೆಡಿಕಲ್ ಕಾಲೇಜು ತೆಗೆಯುತ್ತೇವೆ. ಎಲ್ಲರಿಗೂ ಪ್ರಯೋಜನವಾಗುತ್ತದೆ’ ಎಂದು ತಿಳಿಸಿದರು.

‘ಹಳ್ಳಿಗಳಲ್ಲಿ ದೇವಸ್ಥಾನಗಳಿಗಿಂತ ಉತ್ತಮ ಶಾಲೆಗಳು ನಿರ್ಮಾಣವಾಗಬೇಕಿದೆ. ದೇವಸ್ಥಾನ ಗಂಟೆಗಿಂತ ಶಾಲೆ ಗಂಟೆ ಬಾರಿಸಿದರೆ ಜ್ಞಾನ ಬೆಳೆಯುತ್ತದೆ. ನಮ್ಮ ಧಾರ್ಮಿಕ ಆಚರಣೆಗಳು ಮೌಢ್ಯಕ್ಕೆ ಒಳಗಾಗಬಾರದು. ಮಾಂಸಾಹಾರವನ್ನು ಆಹಾರ ಪದ್ಧತಿಯಾಗಿ ಮಾಡಿಕೊಂಡಿರುವ ಕೆಳಸ್ತರದ ಕುಟುಂಬಗಳು ಆರ್ಥಿಕ ಸಂಕಷ್ಟ ಅನುಭವಿಸುತ್ತಿವೆ. ಪ್ರಾಣಿಬಲಿ, ಕಂದಾಚಾರಗಳನ್ನು ಸಂಪ್ರದಾಯಗಳಾಗಿ ಮುಂದುವರಿಸಬಾರದು’ ಎಂದು ಸಲಹೆ ನೀಡಿದರು.

ಸಿಎಸ್‌ಸಿ ಮೂಲಕ ಪಡಿತರ ಸೇವೆ

ನವದೆಹಲಿ: ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವುದಕ್ಕಾಗಿ ಗ್ರಾಹಕ ವ್ಯವಹಾರ ಸಚಿವಾಲಯವು ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಸಚಿವಾಲಯದೊಂದಿಗೆ ಸಾಮಾನ್ಯ ಸೇವಾ ಕೇಂದ್ರಗಳನ್ನು (ಸಿಎಸ್‌ಸಿ) ತೆರೆಯುವ ವ್ಯವಸ್ಥೆ ಮಾಡಿದೆ.

ದೇಶದಾದ್ಯಂತ 3.70 ಲಕ್ಷ ಸಿಎಸ್‌ಸಿಗಳ ಮೂಲಕ ಪಡಿತರ ಸೇವೆ ಸಲ್ಲಿಸುವ ನಿಟ್ಟಿನಲ್ಲಿ ಗ್ರಾಹಕ ವ್ಯವಹಾರ ಸಚಿವಾಲಯ ಮತ್ತು ಸಿಎಸ್‌ಸಿ ನಡುವೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದರಿಂದಾಗಿ 23.64 ಕೋಟಿ ಪಡಿತರ ಚೀಟಿದಾರರಿಗೆ ಉಪಯೋಗವಾಗಲಿದ್ದು, ಚೀಟಿದಾರರು ತಮ್ಮ ಸಮೀಪದ ಸಿಎಸ್‌ಸಿ ಕೇಂದ್ರಕ್ಕೆ ತೆರಳಿ ತಮ್ಮ ಚೀಟಿಗಳ ಪರಿಷ್ಕರಣೆ, ಹೊಸದಾಗಿ ಅರ್ಜಿ ಸಲ್ಲಿಕೆ, ಆಧಾರ್ ಜೋಡಣೆ, ಪಡಿತರ ಆಹಾರ ಲಭ್ಯತೆ ಮಾಹಿತಿ ಸಹಿತ ಹಲವು ಸೇವೆಗಳನ್ನು ಪಡೆಯಬಹುದಾಗಿದೆ.

ತಂತಿ ಬೇಲಿಗೆ ಸಿಲುಕಿ ಉಸಿರುಗಟ್ಟಿ ಸಾವು

ದಾರುಣ ಅಂತ್ಯ ಕಂಡ ಜಿರಾಫೆ ‘ಯದುನಂದನ’

ಪ್ರಜಾವಾಣಿ ವಾರ್ತೆ

ಬೆಂಗಳೂರು/ ಆನೇಕಲ್: ಬನ್ನೇರು ಘಟ್ಟ ಜೈವಿಕ ಉದ್ಯಾನದಲ್ಲಿ ಪ್ರಾಣಿ ಪ್ರಿಯರ ಆಕರ್ಷಣೆಯ ಕೇಂದ್ರವಾಗಿದ್ದ ಮೂರೂವರೆ ವರ್ಷದ ಜಿರಾಫೆ ‘ಯದುನಂದನ’ ಭಾನುವಾರ ದಾರುಣ ಅಂತ್ಯ ಕಂಡಿದೆ.

11 ಅಡಿ ಎತ್ತರದ ಯದುನಂದನ ಆಹಾರ ತಿನ್ನಲು ಕುತ್ತಿಗೆ ಹೊರಚಾಚಿದಾಗ ಉದ್ಯಾನ ಆವರಣದ ತಂತಿಗೆ ಸಿಲುಕಿ ಬಿಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಸೂಕ್ಷ್ಮ ಪ್ರಾಣಿಯಾಗಿರುವುದರಿಂದ ಬೇಗನೇ ಉಸಿರುಗಟ್ಟಿ ಕೊನೆಯುಸಿರೆಳೆಯಿತು ಎಂದು ಉದ್ಯಾನದ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಾಣಿ ವಿನಿಮಯ ಯೋಜನೆಯಡಿ ಮೈಸೂರು ಮೃಗಾಲಯದಿಂದ ಹೆಣ್ಣು ಜಿರಾಫೆ ಗೌರಿಯನ್ನು 2018ರಲ್ಲಿ ತರಲಾಗಿತ್ತು. ಅದು ಏಕಾಂಗಿ ಆಗುತ್ತದೆ ಎಂಬ ಕಾರಣಕ್ಕೆ 2020ರ ಏಪ್ರಿಲ್ 25ರಂದು ಯದುನಂದನನ್ನು ಮೈಸೂರಿನ ಜಯಚಾಮರಾಜೇಂದ್ರ ಮೃಗಾಲಯದಿಂದಲೇ ತರಲಾಗಿತ್ತು. ಇದೀಗ ಮತ್ತೆ ಗೌರಿ ಏಕಾಂಗಿಯಾಗಿದೆ. ಭಾನುವಾರವಾಗಿದ್ದರಿಂದ ಉದ್ಯಾನದಲ್ಲಿ ಜನಸಂದಣಿ ಇತ್ತು. ಪ್ರಾಣಿಗಳನ್ನು ನೋಡಿಕೊಳ್ಳುವವರು ಸಾರ್ವಜನಿಕರನ್ನು ನಿರ್ವಹಿಸುವಲ್ಲಿ ನಿರತರಾಗಿದ್ದರು. ಈ ಸಂದರ್ಭದಲ್ಲಿ ಜಿರಾಫೆ ಚಿಕಿತ್ಸಾ ವಲಯದ ತಂತಿ ಬೇಲಿಯೊಳಗೆ ಕುತೂಹಲದಿಂದ ತಲೆ ತೂರಿಸಿದಾಗ ಕೋಡುಗಳು ಸಿಕ್ಕಿ ಹಾಕಿಕೊಂಡವು. ಇದರಿಂದ ಗಾಬರಿಗೊಂಡ ಯದುನಂದನ ಬಿಡಿಸಿಕೊಳ್ಳಲು ಎಳೆದಾಟ ನಡೆಸಿತು. ಎಳೆದಾಟದಿಂದ ಕುತ್ತಿಗೆಗೆ ಗಾಯಗಳಾಗಿದ್ದವು ಎಂದು ಅಧಿಕಾರಿಗಳು ತಿಳಿಸಿದರು.

‘ಜಿರಾಫೆ ಯದುನಂದನ ಸಾವು ಒಂದು ದುರಂತವಾಗಿದೆ. ಉದ್ಯಾನದ ಆವರಣದಲ್ಲಿ ಓಡಾಡುವ ಸಂದರ್ಭದಲ್ಲಿ ರಕ್ಷಣೆಗಾಗಿ ಇಡಲಾಗಿದ್ದ ದಪ್ಪ ತಂತಿಗೆ ಜಿರಾಫೆಯ ಕೊಡು



ಜಿರಾಫೆ ಯದುನಂದನ (ಸಂಗ್ರಹ ಚಿತ್ರ)

ಸಿಲುಕಿಕೊಂಡಿದ್ದರಿಂದ ಹೊರಬರಲು ಸಾಧ್ಯವಾಗಲಿಲ್ಲ. ಈ ಸಂದರ್ಭದಲ್ಲಿ ಒತ್ತಡಕ್ಕೆ ಸಿಲುಕಿಕೊಂಡಿತು’ ಎಂದು ಬನ್ನೇರುಘಟ್ಟ ಜೈವಿಕ ಉದ್ಯಾನದ ವೈದ್ಯ ಡಾ.ಉಮಾಶಂಕರ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಕುತ್ತಿಗೆ ಸಿಕ್ಕಿಕೊಂಡ ವಿಷಯ ತಿಳಿಸಿದ ತಕ್ಷಣವೇ ಪಶು ವೈದ್ಯರು ಮತ್ತು ಪ್ರಾಣಿಗಳ ಪಾಲಕರು ಧಾವಿಸಿ, ಯದುನಂದನನನ್ನು ಉಳಿಸುವ ಪ್ರಯತ್ನ ನಡೆಸಲಾಯಿತು. ದುರಾದೃಷ್ಟ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ’ ಎಂದು ಬನ್ನೇರುಘಟ್ಟ ಜೈವಿಕ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕಿ ವನಶ್ರೀ ವಿಪಿನ್ ಸಿಂಗ್ ತಿಳಿಸಿದರು.



‘ಜೇಡಿ ಮರ’ ಜಂಕ್ಷನ್‌ಗೆ ಮತ್ತೆ ಜೀವಂತಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನ್ನೇರುಘಟ್ಟ ರಸ್ತೆಯಲ್ಲಿ ಜೇಡಿ ಮರ ಜಂಕ್ಷನ್ ಹೆಸರುವಾಸಿ. ಇಲ್ಲಿ ಗೇರುಹಣ್ಣಿನ ಮರಗಳಿದ್ದ ಕಾರಣಕ್ಕೆ (ಈ ಮರಗಳಿಗೆ ಜೇಡಿ ಮರ ಎಂದು ಕರೆಯುತ್ತಾರೆ) ಈ ಹೆಸರು ಬಂದಿದೆ. ಕಾಲಕ್ರಮೇಣ ಇಲ್ಲಿದ್ದ ಜೇಡಿ ಮರಗಳು ನಾಶವಾಗಿದ್ದು, ಒಂದು ಮರ ಮಾತ್ರ ಉಳಿದುಕೊಂಡಿದೆ. ಇಲ್ಲಿ ಮತ್ತೆ ಗೇರು ಹಣ್ಣಿನ ಗಿಡಗಳನ್ನು ಬೆಳೆಸಿ ಈ ಹೆಸರನ್ನು ಅಜರಾಮರಗೊಳಿಸುವ ಪ್ರಯತ್ನಕ್ಕೆ ಭಾನುವಾರ ನಾಂದಿ ಹಾಡಲಾಯಿತು.

ಪ್ರಾಜೆಕ್ಟ್ ವೃಕ್ಷಾ ಫೌಂಡೇಷನ್ ಬಿಬಿಎಂಪಿಯ ಅರಣ್ಯ ಘಟಕದ ಜೊತೆ ಸೇರಿ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಹಾಗೂ ಬಿಬಿಎಂಪಿ ವಿಶೇಷ ಆಯುಕ್ತ ರೆಡ್ಡಿ ಶಂಕರ ಬಾಬು ಅವರು ಗಿಡಗಳನ್ನು ನೆಡುವ ಮೂಲಕ ನಗರದ ಮರಗಳ ಪರಂಪರೆಯನ್ನು ಮುಂದುವರಿಸುವ ಕಾರ್ಯದಲ್ಲಿ ಕೈಜೋಡಿಸಿದರು.

‘ಮಲ್ಲೇಶ್ವರದಲ್ಲಿ ಸಂಪಿಗೆ ರಸ್ತೆ ಇದೆ, ಮಾರ್ಗೋಸಾ (ಬೇವಿನ ಮರ) ರಸ್ತೆ ಇದೆ. ವಿದ್ಯಾರಣ್ಯಪುರದಲ್ಲಿ ಈಚಲಮರ ನಿಲ್ದಾಣ ಇದೆ. ಬನಶಂಕರಿಯಲ್ಲಿ ಹುಣಸೇಮರ ನಿಲ್ದಾಣವಿದೆ. ಅಂದರೆ ಮರಗಳ ಹೆಸರಿನಲ್ಲಿ ನಿರ್ದಿಷ್ಟ ಜಾಗವನ್ನು ಗುರುತಿಸುವ ಪರಂಪರೆ ಈ ನಗರದಲ್ಲಿ ಹಿಂದಿನಿಂದಲೂ ಬೆಳೆದುಬಂದಿದೆ. ಅನೇಕ ಕಡೆ ಮರಗಳನ್ನು ಕಳೆದುಕೊಂಡಿದ್ದರಿಂದ ಅವುಗಳ ಜೊತೆಗೆ ಬೆಸೆದುಕೊಂಡಿದ್ದ ಹೆಸರುಗಳ ಬಳಕೆಯೂ ನಿಂತಿದೆ. ಮರಗಳ ಹೆಸರಿನಲ್ಲಿ ಸ್ಥಳಗಳನ್ನು ಗುರುತಿಸುವ ಪರಂಪರೆಯ ಪುನರುಜ್ಜೀವನಕ್ಕಾಗಿ ನಾವು ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಇಲ್ಲೀ ಸದ್ಯಕ್ಕೆ ಸಾಂಕೇತಿಕವಾಗಿ 10 ಗೇರುಹಣ್ಣಿನ ಗಿಡಗಳನ್ನು ನೆಟ್ಟಿದ್ದೇವೆ’

ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಜೆ. ಮಂಜುನಾಥ್, ಪ್ರಾಜೆಕ್ಟ್ ವೃಕ್ಷ ಫೌಂಡೇಷನ್ ಸಂಸ್ಥಾಪಕ ವಿಜಯ್ ನಿಶಾಂತ್, ಬಿಬಿಎಂಪಿ ವಲಯ ಆಯುಕ್ತ ರೆಡ್ಡಿ ಶಂಕರಬಾಬು ಮತ್ತು ಸ್ವಯಂಸೇವಕರು ಸೇರಿ ಜೇಡಿ ಮರದ ವೃತ್ತದ ಬಳಿ ಗೇರು ಹಣ್ಣಿನ ಗಿಡವನ್ನು ನೆಟ್ಟರು ಪ್ರಜಾವಾಣಿ ಚಿತ್ರ

ಎಂದು ಪ್ರಾಜೆಕ್ಟ್ ವೃಕ್ಷಾ ಫೌಂಡೇಷನ್‌ನ ವಿಜಯ್ ನಿಶಾಂತ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಇನ್ನು ಮುಂದೆ ರಸ್ತೆಗಳನ್ನು, ವೃತ್ತಗಳನ್ನು ಅಭಿವೃದ್ಧಿಪಡಿಸುವಾಗ, ಅಲ್ಲಿ ನಿರ್ದಿಷ್ಟ ಜಾತಿಯ ಸಸಿಗಳನ್ನು ನೆಟ್ಟು ಬೆಳೆಸಬೇಕು. ಅವುಗಳ ಹೆಸರನ್ನೇ ರಸ್ತೆಗೆ ಅಥವಾ ವೃತ್ತಗಳಿಗೆ ಇಡಬೇಕು ಎಂದು ಬಿಬಿಎಂಪಿ ಹಾಗೂ ಜಿಲ್ಲಾಡಳಿತ ಅಧಿಕಾರಿಗಳನ್ನು ಕೋರಿದ್ದೇವೆ. ಉದಾಹರಣೆಗೆ ಹೊಂಗೆ ಮರಗಳನ್ನು ರಸ್ತೆ ಪಕ್ಕ ನೆಟ್ಟರೆ, ಆ ರಸ್ತೆಯನ್ನು ಹೊಂಗೆ ಮರ ರಸ್ತೆ ಎಂದೇ ಕರೆಯಬೇಕೆಂಬುದು ನಮ್ಮ ಕೋರಿಕೆ. ಇದಕ್ಕೆ ಸಕಾರಾತ್ಮಕ ಪ್ರತಿಕ್ರಿಯೆ ಸಿಕ್ಕಿದೆ’ ಎಂದರು.

ಕಾರ್ಯಕ್ರಮದಲ್ಲಿ ಭಾಗ ವಹಿಸಿದ ಹಿರಿಯರೊಬ್ಬರು ಈ ಜಂಕ್ಷನ್‌ನಲ್ಲಿ ಒಂದು ಭಾರಿ ಗಾತ್ರದ ಜೇಡಿಮರವೂ ಸೇರಿ ಅನೇಕ ಜೇಡಿ ಮರಗಳು ಇದ್ದುದನ್ನು ಮೆಲುಕು ಹಾಕಿದರು. ಸಸಿಗಳನ್ನು ನೆಟ್ಟ ಬಳಿಕ ಅಲ್ಲಿ ಸೇರಿದ್ದವರಿಗೆಲ್ಲ ‘ಗೋಡಂಬಿ’ ಯನ್ನು ಹಂಚಿ ಸಂಭ್ರಮ ಆಚರಿಸಲಾಯಿತು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	22.91 ಕೋಟಿ ▲	3.34 ಕೋಟಿ
ಸಕ್ರಿಯ ಪ್ರಕರಣ	1.86 ಕೋಟಿ	3.12 ಲಕ್ಷ ▼
ಗುಣಮುಖ	20.57 ಕೋಟಿ ▲	3.27 ಕೋಟಿ ▲
ಸಾವು	47.03 ಲಕ್ಷ ▲	4.45 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.19 ಲಕ್ಷ ▼	30,772 ▼
ಗುಣಮುಖ	4.43 ಲಕ್ಷ ▼	43,193 ▲
ಸಾವು	6,820 ▼	295 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರಿಟನ್	ಟರ್ಕಿ
64,599 ▲	29,942 ▲	26,161

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರಿಟನ್	ಇರಾನ್
96.92 ▲	13.06 ▲	5.55

(*ರಾತ್ರಿ 12 ಗಂಟೆಯವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	1.38 ಲಕ್ಷ
ತಮಿಳುನಾಡು	35,337 ▲
ಕೇರಳ	23,591 ▼

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	65.21 ▲
ಕೇರಳ	45.08 ▲
ತಮಿಳುನಾಡು	26.45 ▲

ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,43,480 ▲ ಒಟ್ಟು ಸೋಂಕಿತರು

12,43,213 ನಿನ್ನೆಯ ವಿವರ

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,474 ▲	12,19,916 ▲	16,089 ▲

ದಿನದ ಏರಿಕೆ

ಹೊಸ ಪ್ರಕರಣ	267 ▲
ಗುಣಮುಖ	277 ▲
ಸಾವು	07 ▲

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ವಿಚಾರಣೆ ಮುಂದೂಡಿಕೆ: ‘ಸುಪ್ರೀಂ’ ಅಸಮಾಧಾನ

ನವದೆಹಲಿ(ಪಿಟಿಐ): ನ್ಯಾಯಾಲಯಗಳು ಪ್ರಕರಣಗಳ ವಿಚಾರಣೆಯನ್ನು ಮುಂದೂಡುತ್ತಿರುವುದರಿಂದ ಅನಗತ್ಯವಾಗಿ ತನಗೆ ಹೊರೆಯಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ಕೋರಿ ಆರೋಪಿಯೊಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್ ಮತ್ತು ಎಂ.ಎಂ. ಸುಂದರೇಶ್ ಅವರನ್ನೊಳಗೊಂಡ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಆರೋಪಿಯು ಅಲಹಾಬಾದ್ ಹೈಕೋರ್ಟ್‌ನಲ್ಲಿ ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿರುವ ಅರ್ಜಿ ವಿಚಾರಣೆ ಕಳೆದ ಏಳು ತಿಂಗಳಿಂದ ಬಾಕಿ ಉಳಿದಿರುವ ಬಗ್ಗೆ ಪ್ರತಿಕ್ರಿಯಿಸಿರುವ ಪೀಠವು, ‘ಹೈಕೋರ್ಟ್ ಈ ಬಗ್ಗೆ ಯಾವುದೇ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ನಿರ್ಧಾರ ಕೈಗೊಳ್ಳದೆ ಕೇವಲ ಮುಂದೂಡುವುದರಿಂದ ಈ ನ್ಯಾಯಾಲಯದ ಮೇಲೆ ಹೊರೆ ಹೆಚ್ಚಾಗುತ್ತಿದೆ’ ಎಂದು ಹೇಳಿದೆ.

ಬಂಧನದಿಂದ ಮಧ್ಯಂತರ ರಕ್ಷಣೆ ನೀಡಿದ ಪೀಠವು, ‘ತನಿಖೆಯ ಸಂದರ್ಭದಲ್ಲಿ ಅರ್ಜಿದಾರರನ್ನು ಬಂಧಿಸಿಲ್ಲ. ತನಿಖೆಗೆ ಆರೋಪಿ ಸಹಕಾರ ನೀಡಿದ್ದಾರೆ. ಇಂತಹ ಸನ್ನಿವೇಶದಲ್ಲಿ ಆರೋಪಪಟ್ಟಿ ದಾಖಲಿಸಿದಾಗ ಅರ್ಜಿದಾರರನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸುವ ಅಗತ್ಯವಿಲ್ಲ’ ಎಂದು ಹೇಳಿದೆ.

‘ರಿಯಲ್ ಎಸ್ಟೇಟ್ ಸಂಸ್ಥೆಯಂಥ ವರ್ತನೆ ಬೇಡ’

ಪ್ರಜಾವಾಣಿ ವಾರ್ತೆ

ಮೈಸೂರು: ‘ರಾಮಕೃಷ್ಣ ಆಶ್ರಮವು ನಿರಂಜನಮಠದ ವಿಷಯದಲ್ಲಿ ರಿಯಲ್ ಎಸ್ಟೇಟ್ ಸಂಸ್ಥೆಯಂತೆ ವರ್ತಿಸುವುದನ್ನು ಬಿಡಬೇಕು’ ಎಂದು ಹೈಕೋರ್ಟ್ ವಕೀಲ ಗಂಗಾಧರ ಆರ್. ಗುರುಮಠ ಭಾನುವಾರ ಮನವಿ ಮಾಡಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಘ, ಬಸವ ಬಳಗಗಳ ಒಕ್ಕೂಟ ಇಲ್ಲಿನ ನಿರಂಜನಮಠದಲ್ಲಿ ಏರ್ಪಡಿಸಿದ್ದ ‘ಶ್ರೀ ನಿರಂಜನ ಮಠ–ಒಂದು ಅವಲೋಕನ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ನಿರಂಜನಮಠ, ಮಹಾರಾಣಿ ಮಾದರಿ (ಎನ್‌ಟಿಎಂ) ಕನ್ನಡ ಶಾಲೆಗಳು ಉಳಿಯಬೇಕು ಹಾಗೂ ವಿವೇಕ ಸ್ಮಾರಕವೂ ನಿರ್ಮಾಣವಾಗಬೇಕು’ ಎಂದು ಪ್ರತಿಪಾದಿಸಿದರು.

ನಗರದಲ್ಲಿ ಇಂದು

ನೃತ್ಯ ನಮನ 2021: ಮುಖ್ಯ ಅತಿಥಿ: ಆನೂರು ಅನಂತ ಕೃಷ್ಣ ಶರ್ಮ, ಅಧ್ಯಕ್ಷತೆ: ಕೆ.ಆರ್. ವೇಣುಗೋಪಾಲ್, ಉಪಸ್ಥಿತಿ: ಪ್ರೊ. ಹಂಸಿಣಿ ನಾಗೇಂದ್ರ, ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ವೆಂಕಟಗಿರಿ ಗೌಡ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 11

ನಾಲ್ವಡಿ ಕೃಷ್ಣರಾಜ ಒಡೆಯರ್ ಪುತ್ಥಳಿ ಅನಾವರಣ: ಬಸವರಾಜ ಬೊಮ್ಮಾಯಿ, ಮುಖ್ಯ ಅತಿಥಿ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ), ಬೆಳಿಗ್ಗೆ 10.30

ಮಕ್ಕಳ ಆರೋಗ್ಯ ಕೇಂದ್ರ ಉದ್ಘಾಟನೆ: ಕುನಾಲ್ ಕಪೂರ್, ಆಯೋಜನೆ ಮತ್ತು ಸ್ಥಳ: ರೈನ್ ಬೋ ಮಕ್ಕಳ ಆಸ್ಪತ್ರೆ, ಮಾರತ್ತಹಳ್ಳಿ, ಬೆಳಿಗ್ಗೆ 11.30

भारतीय प्रबंध संस्थान बेंगलूर
INDIAN INSTITUTE OF MANAGEMENT BANGALORE

NOTICE INVITING TENDER

Applications from reputed companies / individuals are invited, in the prescribed format for Appointment of Licensee for Lease of Shop for General Store at Indian Institute of Management, Bangalore on or before 04th October 2021. For further details, please log on to: www.iimb.ac.in/tender_notices.

Chief Administrative Officer

ಐದು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ • ಪೊಲೀಸರ ವಿರುದ್ಧ ಸ್ಥಳೀಯರ ಆಕ್ರೋಶ

ಸಂಜಯನಗರ ಪೊಲೀಸ್ ಠಾಣೆಗೆ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಜಯನಗರ ಠಾಣೆ ವ್ಯಾಪ್ತಿಯಲ್ಲಿ ಐದು ವರ್ಷದ ಬಾಲಕಿಯೊಬ್ಬಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದ್ದು, ಈ ಕೃತ್ಯವನ್ನು ಖಂಡಿಸಿ ಸ್ಥಳೀಯರು ಠಾಣೆಗೆ ಮುತ್ತಿಗೆ ಹಾಕಿ ಭಾನುವಾರ ರಾತ್ರಿ ಪ್ರತಿಭಟನೆ ನಡೆಸಿದರು.

ಸ್ಥಳೀಯ ನಿವಾಸಿಯೊಬ್ಬರ ಮಗಳ ಮೇಲೆ ಪಶ್ಚಿಮ ಬಂಗಾಳದ 23 ವರ್ಷದ ಯುವಕ ಲೈಂಗಿಕ ದೌರ್ಜನ್ಯ ಎಸಗಿದ್ದ ಎನ್ನಲಾಗಿದೆ. ಈ ಬಗ್ಗೆ ಪೋಷಕರು, ಠಾಣೆಗೆ ದೂರು ನೀಡಿದ್ದರು. ಆರೋಪಿಯನ್ನು ಬಂಧಿಸಿದ್ದ ಪೊಲೀಸರು, ಠಾಣೆಗೆ ಕರೆತಂದು ವಿಚಾರಣೆ ನಡೆಸುತ್ತಿದ್ದರು.

ಸುದ್ದಿ ತಿಳಿದ ಸ್ಥಳೀಯರು ಸಂಜಯ ನಗರ ಠಾಣೆ ಎದುರು ಸೇರಿ ಪ್ರತಿಭಟನೆ ಆರಂಭಿಸಿದ್ದರು. 'ಆರೋಪಿಯನ್ನು ನನ್ನ ವಶಕ್ಕೆ ನೀಡಿ, ನಾವೇ ಪಾಠ ಕಲಿಸುತ್ತೇವೆ' ಎಂದು ಕೂಗಾಡಿದರು. ಸಮಯ ಕಳೆದಂತೆ ಮತ್ತಷ್ಟು ಮಂದಿ ಠಾಣೆ ಬಳಿ ಬಂದು ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಮಹಿಳೆಯರೂ ಹೆಚ್ಚಿನ ಸಂಖ್ಯೆಯಲ್ಲಿದ್ದರು. 200ಕ್ಕೂ ಹೆಚ್ಚು ಮಂದಿ ಏಕಕಾಲದಲ್ಲಿ ಠಾಣೆಗೆ ಮುತ್ತಿಗೆ ಹಾಕಲು ಯತ್ನಿಸಿದರು. ಠಾಣೆ ಪ್ರವೇಶ ದ್ವಾರದಲ್ಲೇ ಅವರನ್ನು ಪೊಲೀಸರು ತಡೆದು ನಿಲ್ಲಿಸಿದರು.

ಇದೇ ಸಂದರ್ಭದಲ್ಲೇ ಸ್ಥಳೀಯರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತ್ತು. ಹೆಬ್ಬಾಳ ಶಾಸಕ ಭೈರತಿ ಸುರೇಶ್ ಹಾಗೂ ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ ಸ್ಥಳಕ್ಕೆ ಬಂದು ಪ್ರತಿಭಟನಕಾರರ ಜೊತೆ ಮಾತುಕತೆ ನಡೆಸಿ ಸಮಾಧಾನಪಡಿಸಿದರು. 'ಬಾಲಕಿ ಪೋಷಕರು ನೀಡಿರುವ ದೂರು ಆಧರಿಸಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಯನ್ನು ಬಂಧಿಸಿ ಮುಂದಿನ ಕಾನೂನು ಕ್ರಮ ಜರುಗಿಸಲಾಗಿದೆ. ಬಾಲಕಿಯ ವೈದ್ಯಕೀಯ ಪರೀಕ್ಷೆ ವರದಿಗಾಗಿ ಕಾಯುತ್ತಿದ್ದೇವೆ' ಎಂದು ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ ತಿಳಿಸಿದರು.

'ಜನರ ರಕ್ಷಣೆಗಾಗಿ ನಾವು ಸದಾ ಸಿದ್ಧ. ಯಾವುದೇ ತೊಂದರೆ ಇದ್ದರೂ 112ಕ್ಕೆ ಕರೆ ಮಾಡಬಹುದು. ಪೊಲೀಸರೇ ಆರೋಪಿಗಳ ಜೊತೆ ಶಾಮೀಲಾಗಿದ್ದರೆ, ಅವರ ಬಗ್ಗೆ ದೂರು ನೀಡಬಹುದು. ಅಂಥ ಪೊಲೀಸರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ಈಗ ಪ್ರತಿಭಟನೆ ಕೈಬಿಟ್ಟು ಸಹಕರಿಸಿ' ಎಂದೂ ಕೋರಿದರು.

ಇದಕ್ಕೆ ಸ್ಪಂದಿಸಿದ ಸ್ಥಳೀಯರು, ಠಾಣೆಯಿಂದ ಹೊರಟು ಹೋದರು. ನಂತರವೇ ಪರಿಸ್ಥಿತಿ ತಿಳಿಯಾಯಿತು.

ಪೊಲೀಸರ ವಿರುದ್ಧ ಆಕ್ರೋಶ: 'ಸಂಜಯನಗರ ಠಾಣೆ ವ್ಯಾಪ್ತಿಯಲ್ಲಿ ನಿತ್ಯವೂ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆ. ಆರೋಪಿಗಳನ್ನು ಬಂಧಿಸಬೇಕಾದ ಪೊಲೀಸರು, ಮೌನವಾಗಿದ್ದಾರೆ. ಕೆಲವರು ಆರೋಪಿಗಳ ಜೊತೆ ಶಾಮೀಲಾಗಿದ್ದು, ಇಂಥವರಿಂದ ಜನರು ತೊಂದರೆ ಅನುಭವಿಸುತ್ತಿದ್ದಾರೆ' ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

'ಹೊರರಾಜ್ಯದಿಂದ ಬಂದಿರುವ ಬಹುತೇಕರು ಸಂಜಯನಗರದಲ್ಲಿ ವಾಸವಿದ್ದಾರೆ. ಆ ಪೈಕಿ ಹಲವರು ಅಪರಾಧ ಕೃತ್ಯ ಎಸಗುತ್ತಿದ್ದಾರೆ. ಇದು ಗೊತ್ತಿದ್ದರೂ ಪೊಲೀಸರು ಕ್ರಮ ಕೈಗೊಳ್ಳುತ್ತಿಲ್ಲ. ಇವರ ವಿರುದ್ಧ ಹಲವು ಬಾರಿ ದೂರು ನೀಡಿದರೂ ಕ್ರಮ ಜರುಗಿಸಿಲ್ಲ' ಎಂದೂ ದೂರಿದರು.

'ಬಹುತೇಕ ರಸ್ತೆಗಳಲ್ಲಿ ಮಹಿಳೆಯರು ಒಂಟಿಯಾಗಿ ಓಡಾಡದ ಸ್ಥಿತಿ ಇದೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಮಾದಕ ವ್ಯಸನಿಗಳು, ಕಳ್ಳರು ರಾಜಾರೋಷವಾಗಿ ಕೃತ್ಯ ಎಸಗುವಂತಾಗಿದೆ. ಇದಕ್ಕೆಲ್ಲ ಪೊಲೀಸರ ವೈಫಲ್ಯವೇ ಕಾರಣ. ತುರ್ತು ಸಂಖ್ಯೆಗೆ ಕರೆ ಮಾಡಿದರೂ ಪೊಲೀಸರು ತಡವಾಗಿ ಬರುತ್ತಾರೆ. ಬಂದರೂ ದೂರದಿಂದಲೇ ಸೈರನ್ ಮೊಳಗಿಸುತ್ತಾರೆ. ಇದರಿಂದ ಆರೋಪಿಗಳು ತಪ್ಪಿಸಿಕೊಂಡು ಓಡಿಹೋಗುತ್ತಾರೆ' ಎಂದೂ ಆರೋಪಿಸಿದರು.

'ಐದು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಪ್ರಕರಣವನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿಲ್ಲ. ಈ ಹಿಂದೆಯೂ ಇಂಥ ಹಲವು ಘಟನೆಗಳು ನಡೆದಿವೆ. ದೂರು ಕೊಟ್ಟರೂ ಪೊಲೀಸರು ಕ್ರಮ ಕೈಗೊಳ್ಳಲಿಲ್ಲ' ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಡಿಸಿದರು.

'ಪ್ರತಿಭಟನೆ ವಾಪಸು'

'ಆರೋಪಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಪೊಲೀಸರು ಭರವಸೆ ನೀಡಿದ್ದಾರೆ. ಹೀಗಾಗಿ, ಸ್ಥಳೀಯರು ಪ್ರತಿಭಟನೆ ವಾಪಸು ಪಡೆದಿದ್ದಾರೆ' ಎಂದು ಶಾಸಕ ಭೈರತಿ ಸುರೇಶ್ ಸುದ್ದಿಗಾರರಿಗೆ ತಿಳಿಸಿದರು.

ಬಾಲಕಿ ಮೇಲಿನ ಲೈಂಗಿಕ ದೌರ್ಜನ್ಯ ಕೃತ್ಯ ಖಂಡಿಸಿ ಸಂಜಯನಗರ ಠಾಣೆಗೆ ಸ್ಥಳೀಯರು ಭಾನುವಾರ ರಾತ್ರಿ ಮುತ್ತಿಗೆ ಹಾಕಿದರು – ಪ್ರಜಾವಾಣಿ ಚಿತ್ರ

ಕಾಮಗಾರಿ ಬಳಿಕವೂ ಕೆರೆ, ರಾಜಕಾಲುವೆಗೆ ಸೇರುತ್ತಲೇ ಇದೆ ಕೊಳಚೆ ನೀರು: ಮಹಾಲೇಖಪಾಲರ ವರದಿಯಲ್ಲಿ ಉಲ್ಲೇಖ

ರಾಜಕಾಲುವೆ ಕಾಮಗಾರಿ: ₹62 ಕೋಟಿ ನೀರಿನಲ್ಲಿ ಹೋಮ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ರಾಜಕಾಲುವೆ ವಿಭಾಗದ ವ್ಯವಸ್ಥೆಯ ಗಂಭೀರ ನ್ಯೂನತೆಗಳನ್ನು ಬೆಂಗಳೂರು ಮಹಾನಗರ ನೀರು ನಿರ್ವಹಣೆ ಕುರಿತ ಮಹಾಲೇಖಪಾಲರ ವರದಿ ಬೊಟ್ಟು ಮಾಡಿ ತೋರಿಸಿದೆ.

ಬಿಬಿಎಂಪಿಯ ರಾಜಕಾಲುವೆ ವಿಭಾಗವು ರಾಜಕಾಲುವೆಗಳಿಗೆ ಕೊಳಚೆ ನೀರು ಸೇರುವುದನ್ನು ತಡೆಯಲು ₹ 62.86 ಕೋಟಿ ವೆಚ್ಚದಲ್ಲಿ ನಿರ್ವಹಿಸಿದ ಕಾಮಗಾರಿಯು ಹೇಗೆ 'ನೀರಿನಲ್ಲಿ ಹೋಮ' ಮಾಡಿದಂತಾಗಿದೆ ಎಂಬುದನ್ನೂ ವರದಿಯಲ್ಲಿ ಎಳೆ ಎಳೆಯಾಗಿ ವಿವರಿಸಲಾಗಿದೆ.

14 ರಾಜಕಾಲುವೆಗಳನ್ನು ₹ 61.21 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ಕಾಮಗಾರಿಗಳ ಅನುಷ್ಠಾನಕ್ಕೆ 2014–16ರ ನಡುವೆ ಗುತ್ತಿಗೆ ನೀಡಲಾಗಿತ್ತು. ರಾಜಕಾಲುವೆಗೆ ಕೊಳಚೆ ನೀರು ಸೇರದಂತೆ ತಡೆಯುವುದು ಹಾಗೂ ಕೆರೆಗಳ ಸುತ್ತಲಿನ ಪರಿಸರಗಳ ಅಭಿವೃದ್ಧಿ ಈ ಕಾಮಗಾರಿಯಗಳ ಉದ್ದೇಶವಾಗಿತ್ತು. ಈ ಕಾಮಗಾರಿಗೆ ಒಟ್ಟು ₹ 62.86 ಕೋಟಿ ವೆಚ್ಚ ಮಾಡಲಾಗಿದೆ. ಆದರೆ, ಲೆಕ್ಕಪರಿಶೋಧನಾ ಸಮಿತಿಯು ಹುಳಿಮಾವು ಹಾಗೂ ಮಡಿವಾಳ ಕೆರೆಗಳಿಗೆ ಭೇಟಿ ನೀಡಿ ಪರಿಶೀಲಿಸಿದಾಗ ಇವುಗಳಿಗೆ ಕೊಳಚೆ ನೀರನ್ನು ನೇರವಾಗಿ ಹರಿಯಬಿಡುತ್ತಿರುವುದು ಕಂಡುಬಂದಿದೆ. ಕೆರೆ ಮತ್ತು ರಾಜಕಾಲುವೆಗಳಿಗೆ ಕೊಳಚೆ ಹರಿವನ್ನು ತಡೆಯುವ ನಿರ್ದಿಷ್ಟ ಕಾರಣಗಳಿಗಾಗಿ ಕಾಮಗಾರಿ ಕೈಗೊಂಡಿದ್ದರೂ, ಆ ಉದ್ದೇಶವೇ ಈಡೇರಿಲ್ಲ. ಬಿಬಿಎಂಪಿಯ ಈ ವೈಫಲ್ಯದಿಂದ ಅಷ್ಟೂ ಹಣ ವ್ಯರ್ಥವಾಗಿದೆ ಎಂದು ಮಹಾಲೇಖಪಾಲರ ವರದಿ ಹೇಳಿದೆ.

ರಾಜಕಾಲುವೆ ಅಭಿವೃದ್ಧಿಯ ಸಮಗ್ರ ಯೋಜನಾ ವರದಿಗಳೇ (ಡಿಪಿಆರ್) ದೋಷಪೂರಿತವಾಗಿದ್ದವು ಎಂದು ಅಭಿಪ್ರಾಯಪಟ್ಟಿರುವ ಮಹಾಲೇಖಪಾಲರು, 'ಬಿಬಿಎಂಪಿ ಸಿದ್ಧಪಡಿಸುವ ಡಿಪಿಆರ್‌ಗಳು ಸಮಗ್ರವಾಗಿರಬೇಕು. ಕಾಮಗಾರಿಗೆ ಜಾಗದ ಲಭ್ಯತೆ, ಹಣಕಾಸಿನ ಅಗತ್ಯ ಮತ್ತು ಅವುಗಳನ್ನು ಹೊಂದಿಸುವ ಮೂಲದ ಬಗ್ಗೆ ಹಾಗೂ ಇತರ ಸಂಸ್ಥೆಗಳ ಸಮನ್ವಯ.. ಮುಂತಾದ ವಿವರಗಳನ್ನೂ ಅದು ಒಳಗೊಂಡಿರಬೇಕು' ಎಂದು ಶಿಫಾರಸು ಮಾಡಿದ್ದಾರೆ.

ರಾಜಕಾಲುವೆಗಳ ಪರಿಣಾಮಕಾರಿ ಯೋಜನೆ ಮತ್ತು ನಿರ್ವಹಣೆಗೆ ಒಂದೇ ದತ್ತಾಂಶವನ್ನು ಆಧಾರವಾಗಿಟ್ಟು ಕಾರ್ಯನಿರ್ವಹಿಸಬೇಕು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಜಲಮಂಡಳಿಯಂತಹ ಅಂಗ ಸಂಸ್ಥೆಗಳ ಜೊತೆ ಸಮನ್ವಯ ಸಾಧಿಸಿ ರಾಜಕಾಲುವೆಗಳ ಸಮಗ್ರ ವಿವರಗಳನ್ನು ಕಲೆ ಹಾಕಬೇಕು ಎಂದೂ ಸಲಹೆ ನೀಡಿದ್ದಾರೆ.

'ಏಜೆನ್ಸಿಗೆ ಅನುಚಿತ ಪಾವತಿ'

ಡಿಪಿಆರ್ ಪ್ರತಿಗಳು ಹಾಗೂ ಅದಕ್ಕನುಗುಣವಾಗಿ ಕಾಮಗಾರಿ ಪೂರ್ಣಗೊಳಿಸಿದ ಸಾಕ್ಷ್ಯಗಳು ಬಿಬಿಎಂಪಿ ರಾಜಕಾಲುವೆ ಮುಖ್ಯ ಎಂಜಿನಿಯರ್ ಬಳಿ ಲಭ್ಯವಿರಲಿಲ್ಲ. ಮಾಸ್ಟರ್ ಪ್ಲ್ಯಾನ್ ಮತ್ತು ಆರ್.ಆರ್.ನಗರ ವಲಯದ ಕಾಮಗಾರಿಗಳ ಡಿಪಿಆರ್ ತಯಾರಿಕೆಗೆ ಸಂಬಂಧಿಸಿದ ಟೆಂಡರ್‌ಗಳು, ಏಜೆನ್ಸಿ ಆಯ್ಕೆ, ಪಾವತಿಸಿದ ಬಿಲ್‌ಗಳಿಗೆ ಸಂಬಂಧಿಸಿದ ಸಂಪೂರ್ಣ ದಾಖಲೆಗಳೇ 'ಕಳೆದುಹೋಗಿವೆ' ಎಂದು ಮುಖ್ಯ ಎಂಜಿನಿಯರ್ ದಾಖಲಿಸಿದ್ದಾರೆ. ಆದರೆ, ಏಜೆನ್ಸಿ ಸಲ್ಲಿಸಿದ ನಕಲಿ ದಾಖಲೆ ಆಧಾರದಲ್ಲಿ ಮೆ.ಸ್ಟುಪ್ ಕನ್ಸಲ್ಟೆಂಟ್ಸ್‌ಗೆ ₹ 94.93 ಲಕ್ಷ ಬಾಕಿ ಪಾವತಿಗೆ ಅವರು ಅನುಮೋದನೆ ನೀಡಿದ್ದಾರೆ. ಏಜೆನ್ಸಿ ಒದಗಿಸಿದ ದಾಖಲೆಗಳ ಆಧಾರದಲ್ಲಿ ಕಡತಗಳ ಮರುಸೃಷ್ಟಿ ಮಾಡಿರುವುದು ರಾಜಕಾಲುವೆ ವಿಭಾಗದ ಗಂಭೀರ ನ್ಯೂನತೆಗಳನ್ನು ಸೂಚಿಸುತ್ತದೆ ಎಂದೂ ಮಹಾಲೇಖಪಾಲರು ಅಭಿಪ್ರಾಯಪಟ್ಟಿದ್ದಾರೆ.

ಕಳೆದುಹೋದ ದಾಖಲೆಗಳನ್ನು ಪತ್ತೆಹಚ್ಚಲು ಹಾಗೂ ಪದೇ ಪದೇ ಕರ್ತವ್ಯ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ರಾಜಕಾಲುವೆ ವಿಭಾಗವಾಗಲೀ, ಬಿಬಿಎಂಪಿಯಾಗಲಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಮಹಾಲೇಖಪಾಲರು ತಮ್ಮ ವರದಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಾಸ್ಟರ್ ಪ್ಲ್ಯಾನ್ ಮತ್ತು ಡಿಪಿಆರ್‌ಗಳಿಗೆ ಅನುಮೋದನೆಯನ್ನೇ ಪಡೆದಿಲ್ಲ. ಹಾಗಾಗಿ ಏಜೆನ್ಸಿಯು ಕಾಮಗಾರಿಯನ್ನು ಪೂರ್ಣಗೊಳಿಸಿರುವ ಮತ್ತು ಅಂತಿಮಗೊಂಡ ಕಾಮಗಾರಿಗಳ ಕುರಿತ ದಾಖಲೆಗಳೂ ಅನುಮಾನ ಮೂಡಿಸುವಂತಿವೆ. ಏಜೆನ್ಸಿಗೆ ಮಾಡಿರುವ ಪಾವತಿಗಳೂ ಅನುಚಿತವಾಗಿದ್ದು, ಇದರಲ್ಲೂ ಅಕ್ರಮವಾಗಿದೆ. ಎರಡು ವಿಭಿನ್ನ ಕಾಮಗಾರಿಗಳನ್ನು ಬೆಸೆದಿರುವುದು ಕೂಡ ದುರುದ್ದೇಶಪೂರಿತವಾಗಿದ್ದು, ಕೆಲ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಈ ಕುರಿತು ಬಿಬಿಎಂಪಿಯಾಗಲೀ, ರಾಜ್ಯ ಸರ್ಕಾರವಾಗಲೀ ಉತ್ತರ ನೀಡಿಲ್ಲ ಎಂದೂ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ವಿವರವಾದ ತನಿಖೆಗೆ ಶಿಫಾರಸು

ಅಪೂರ್ಣ ಹಾಗೂ ನ್ಯೂನತೆಗಳಿರುವ ಡಿಪಿಆರ್‌ಗಳನ್ನು ಸಿದ್ಧಪಡಿಸಿದ್ದು, ಬಿಬಿಎಂಪಿ ರಾಜಕಾಲುವೆ ವಿಭಾಗದಿಂದ ದಾಖಲೆಗಳು ಕಾಣೆಯಾಗಿರುವುದು ಹಾಗೂ ಪ್ರಶ್ನಾರ್ಹ ಪಾವತಿಗಳನ್ನು ಮಾಡಿರುವುದರ ಬಗ್ಗೆ ವಿವರವಾದ ತನಿಖೆ ನಡೆಸಬೇಕು. ತನಿಖೆಯ ಫಲಿತಾಂಶಗಳ ಆಧಾರದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದೂ ಮಹಾಲೇಖಪಾಲರು ತಮ್ಮ ವರದಿಯಲ್ಲಿ ಶಿಫಾರಸು ಮಾಡಿದ್ದಾರೆ.

ಬಿಬಿಎಂಪಿಯು ಎಲ್ಲ ಮೂಲದಾಖಲೆಗಳ ನಿರ್ವಹಣೆಗೆ ಕ್ರಮಕೈಗೊಳ್ಳಬೇಕು. ಕಾಮಗಾರಿಗಳ ಅನುಷ್ಠಾನದಲ್ಲಿ ಪಾರದರ್ಶಕತೆ ಹೊಂದಲು ಶಾಸನಬದ್ಧ ನಿಬಂಧನೆಗಳನ್ನು ಅನುಸರಿಸಬೇಕು ಎಂದೂ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಇನ್‌ಸ್ಪೆಕ್ಟರ್ ರಾಘವೇಂದ್ರ ನ್ಯಾಯಾಂಗ ಬಂಧನಕ್ಕೆ

ಬೆಂಗಳೂರು: ಜಮೀನಿನಲ್ಲಿ ಅಳವಡಿಸಿದ್ದ ಫಲಕ ಕಿತ್ತು ಹಾಕಿದವರ ವಿರುದ್ಧ ಪ್ರಕರಣ ದಾಖಲಿಸಲು ₹ 2 ಲಕ್ಷ ಲಂಚ ಪಡೆಯುತ್ತಿದ್ದಾಗ ಭ್ರಷ್ಟಾಚಾರ ನಿಗ್ರಹ ದಳದಿಂದ (ಎಸಿಬಿ) ಶನಿವಾರ ಬಂಧಿತರಾಗಿದ್ದ ಚಿಕ್ಕಜಾಲ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ರಾಘವೇಂದ್ರ ಮತ್ತು ಅವರ ಪರವಾಗಿ ಲಂಚದ ಹಣ ಸ್ವೀಕರಿಸಿದ್ದ ಖಾಸಗಿ ಮಧ್ಯವರ್ತಿ ರಾಘವೇಂದ್ರ ಇಬ್ಬರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಇಬ್ಬರನ್ನೂ ಎಸಿಬಿ ಅಧಿಕಾರಿಗಳು ಚಿಕ್ಕಜಾಲ ಪೊಲೀಸ್ ಠಾಣೆಯಲ್ಲೇ ಶನಿವಾರ ಬಂಧಿಸಿದ್ದರು. ವಿಚಾರಣೆ ಪೂರ್ಣಗೊಳಿಸಿದ ಬಳಿಕ ಆರೋಪಿಗಳನ್ನು ನ್ಯಾಯಾಧೀಶರ ಎದುರು ಹಾಜರುಪಡಿಸಲಾಗಿತ್ತು. ಇಬ್ಬರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಧೀಶರು ಆದೇಶ ಹೊರಡಿಸಿದರು. ಎಂದು ಎಸಿಬಿ ಮೂಲಗಳು ತಿಳಿಸಿವೆ.

ಎರಡನೇ ಇನ್‌ಸ್ಪೆಕ್ಟರ್: ರಾಜ್ಯ ಸರ್ಕಾರದ ಇಲಾಖೆಯೊಂದರ ಅಧೀನ ಕಾರ್ಯದರ್ಶಿಯಾಗಿ ನಿವೃತ್ತರಾಗಿರುವ ವ್ಯಕ್ತಿಯೊಬ್ಬರು ಚಿಕ್ಕಜಾಲ ಹೋಬಳಿಯಲ್ಲಿ ಖರೀದಿಸಿರುವ 5 ಎಕರೆ ಜಮೀನಿಗೆ ಸಂಬಂಧಿಸಿದಂತೆ ಚಿಕ್ಕಜಾಲ ಠಾಣೆಯ ಹಿಂದಿನ ಇನ್‌ಸ್ಪೆಕ್ಟರ್ ಯಶವಂತ ಮತ್ತು ಹೆಡ್ ಕಾನ್‌ಸ್ಟೆಬಲ್ ರಾಜು ವಿರುದ್ಧ ಜನವರಿಯಲ್ಲಿ ಎಸಿಬಿ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದರು.

ಇನ್‌ಸ್ಪೆಕ್ಟರ್ ಪರವಾಗಿ ₹ 6 ಲಕ್ಷ ಲಂಚ ಪಡೆದಿದ್ದ ರಾಜು ಅವರನ್ನು ಎಸಿಬಿ ಅಧಿಕಾರಿಗಳು ಬಂಧಿಸಿದ್ದರು. ಯಶವಂತ ತಪ್ಪಿಸಿಕೊಂಡು ಪರಾರಿ ಯಾಗಿ, ಸುದೀರ್ಘ ಕಾಲ ತಲೆಮರೆಸಿಕೊಂಡಿದ್ದರು. ಇದೇ ಪ್ರಕರಣದಲ್ಲಿ ₹ 5 ಲಕ್ಷ ಲಂಚ ಪಡೆದಿದ್ದ ಚಿಕ್ಕಜಾಲ ಹೋಬಳಿಯ ಕಂದಾಯ ನಿರೀಕ್ಷಕ ಪುಟ್ಟ ಹನುಮಯ್ಯ ಅಲಿಯಾಸ್ ಪ್ರವೀಣ್ ಅವರನ್ನು ಅದೇ ದಿನ ಎಸಿಬಿ ಅಧಿಕಾರಿಗಳು ಬಂಧಿಸಿದ್ದರು.

ಯಶವಂತ ಅವರನ್ನು ಸೇವೆಯಿಂದ ಅಮಾನತ್ತುಗೊಳಿಸಿದ ಬಳಿಕ ಆ ಹುದ್ದೆಗೆ ರಾಘವೇಂದ್ರ ಬಂದಿದ್ದರು. ಹಿಂದಿನ ಇನ್‌ಸ್ಪೆಕ್ಟರ್ ವಿರುದ್ಧ ಎಸಿಬಿಗೆ ತಮ್ಮ ವಿರುದ್ಧ ದೂರು ನೀಡಬಾರದು ಎಂಬ ಷರತ್ತಿನೊಂದಿಗೆ ಅವರು ಲಂಚದ ಬೇಡಿಕೆ ಇಟ್ಟಿದ್ದರು ಎಂಬ ಮಾಹಿತಿ ಲಭಿಸಿದೆ.

ಕಾನ್‌ಸ್ಟೆಬಲ್‌ಗೆ ಬೈಕ್ ಗುದ್ದಿಸಿ ಪರಾರಿ

ಬೆಂಗಳೂರು: ಕರ್ತವ್ಯ ನಿರತ ಕಾನ್‌ಸ್ಟೆಬಲ್‌ಗೆ ಬೈಕ್ ಗುದ್ದಿಸಿ ಸವಾರನೊಬ್ಬ ಪರಾರಿಯಾಗಿರುವ ಘಟನೆ ಬಸವೇಶ್ವರನಗರ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದಿದೆ.

ಘಟನೆ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಪ್ರಕರಣದಲ್ಲಿ ಇದುವರೆಗೂ ಆರೋಪಿ ಪತ್ತೆಯಾಗಿಲ್ಲ.

'ಕದ್ದ ವಾಹನಗಳನ್ನು ಪತ್ತೆ ಮಾಡಲು ಮುಂದಾಗಿದ್ದ ಪೊಲೀಸ್ ಸಿಬ್ಬಂದಿ, ಠಾಣೆ ವ್ಯಾಪ್ತಿಯಲ್ಲಿ ರಾತ್ರಿ ವಾಹನಗಳ ತಪಾಸಣೆ ನಡೆಸುತ್ತಿದ್ದರು. ರಸ್ತೆಯಲ್ಲಿ ಹೋಗುತ್ತಿದ್ದ ವಾಹನಗಳನ್ನು ನಿಲ್ಲಿಸಿ ದಾಖಲೆಗಳನ್ನು ಪರಿಶೀಲಿಸುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಾತ್ರಿ 12.30ರ ಸುಮಾರಿಗೆ ಯುವಕನೊಬ್ಬ ವೇಗವಾಗಿ ಬೈಕ್ ಚಲಾಯಿಸಿಕೊಂಡು ಬಂದಿದ್ದ. ಆತನನ್ನು ನಿಲ್ಲಿಸಲು ಕಾನ್‌ಸ್ಟೆಬಲ್ ಯತ್ನಿಸಿದ್ದರು. ಅದೇ ಸಂದರ್ಭದಲ್ಲೇ ಕಾನ್‌ಸ್ಟೆಬಲ್‌ಗೆ ಬೈಕ್ ಗುದ್ದಿಸಿ, ಯುವಕ ಪರಾರಿಯಾಗಿದ್ದಾನೆ. ಗಾಯಗೊಂಡು ಸ್ಥಳದಲ್ಲೇ ಕುಸಿದುಬಿದ್ದ ಕಾನ್‌ಸ್ಟೆಬಲ್ ಅವರನ್ನು ಸಹೋದ್ಯೋಗಿಗಳೇ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

'ಘಟನೆ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಪತ್ತೆ ಮಾಡಲಾಗುತ್ತಿದೆ' ಎಂದೂ ಹೇಳಿವೆ.

ಕ್ಯಾಬ್ ಚಾಲಕನ ಮೇಲೆ ಹಲ್ಲೆ; ಉಗಾಂಡಾ ಪ್ರಜೆ ವಶಕ್ಕೆ

ಬೆಂಗಳೂರು: ರಾಜಾಜಿನಗರದ ಹೋಟೆಲೊಂದರಲ್ಲಿ ಕ್ಯಾಬ್ ಚಾಲಕರೊಬ್ಬರ ಮೇಲೆ ಉಗಾಂಡಾ ಪ್ರಜೆಗಳು ಹಲ್ಲೆ ಮಾಡಿದ್ದು, ಈ ಸಂಬಂಧ ಲುಬೆಗಾ ರೇಮಂಡ್ ಎಂಬಾತನನ್ನು ಸುಬ್ರಹ್ಮಣ್ಯನಗರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಕಾಲೇಜೊಂದರ ಕಾರ್ಯಕ್ರಮಕ್ಕೆ ಉಗಾಂಡಾ ಪ್ರಜೆಗಳು ಬಂದಿದ್ದರು. ವಾಪಸು ತಮ್ಮ ವಾಸಸ್ಥಳಕ್ಕೆ ಹೋಗುವುದಕ್ಕಾಗಿ ಕ್ಯಾಬ್ ಕಾಯ್ದಿರಿಸಿದ್ದರು. ಸ್ಥಳಕ್ಕೆ ಕ್ಯಾಬ್ ಸಮೇತ ಬಂದಿದ್ದ ಸಾಗರ್, ನಾಲ್ವರನ್ನು ಹತ್ತಿಸಿಕೊಂಡು ಹೊರಡಲು ಸಿದ್ಧವಾಗಿದ್ದರು. ಮತ್ತೊಬ್ಬ ಕಾರಿನೊಳಗೆ ಹತ್ತಲು ಯತ್ನಿಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಐವರನ್ನು ಕರೆದುಕೊಂಡು ಹೋಗಲು ನಿರಾಕರಿಸಿದ್ದ ಸಾಗರ್, 'ಸಂಚಾರ ನಿಯಮ ಉಲ್ಲಂಘನೆಯಾಗುತ್ತದೆ. ಪೊಲೀಸರು ಪ್ರಕರಣ ದಾಖಲಿಸುತ್ತಾರೆ' ಎಂದಿದ್ದ. ಅಷ್ಟಕ್ಕೆ ಜಗಳ ತೆಗೆದ ಪ್ರಜೆಗಳು, ಚಾಲಕನ ಮೇಲೆ ಹಲ್ಲೆ ಮಾಡಿದ್ದರು. ಸ್ಥಳದಲ್ಲಿ ಮತ್ತಷ್ಟು ಪ್ರಜೆಗಳು ಸೇರಿ ಗಲಾಟೆ ಮಾಡಿದರು.'

'ಸಾಗರ್ ರಕ್ಷಣೆಗೆ ಹೋದ ಸ್ಥಳೀಯ ಕ್ಯಾಬ್ ಚಾಲಕರ ಜೊತೆಯೂ ಪ್ರಜೆಗಳು ಗಲಾಟೆ ಮಾಡಿದರು. ಸ್ಥಳಕ್ಕೆ ಹೋದ ಗಸ್ತು ಸಿಬ್ಬಂದಿ, ಪರಿಸ್ಥಿತಿ ತಿಳಿಗೊಳಿಸಿದರು. ಚಾಲಕನ ಮೇಲೆ ಹಲ್ಲೆ ಮಾಡಿದ್ದ ಎನ್ನಲಾದ ಲುಬೆಗಾ ರೇಮಂಡ್‌ನನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಯುವತಿಯರಿಂದ ಮುಚ್ಚಳಿಕೆ: 'ಗಲಾಟೆ ವೇಳೆ ಅಂಗಾಂಗಗಳನ್ನು ತೋರಿಸಿ ಕೆಟ್ಟದಾಗಿ ನಡೆದುಕೊಂಡಿದ್ದ ಉಗಾಂಡಾದ ಯುವತಿಯರನ್ನೂ ಠಾಣೆಗೆ ಕರೆಸಲಾಗಿತ್ತು. ಎಚ್ಚರಿಕೆ ನೀಡಿ ಮುಚ್ಚಳಿಕೆ ಬರೆಸಿಕೊಂಡು ಕಳುಹಿಸಲಾಗಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಕುಟುಂಬದವರ ಆತ್ಮಹತ್ಯೆಗೆ ತಂದೆಯೇ ಕಾರಣ?

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಒಂದೇ ಕುಟುಂಬದ ಕೂಸು ಸೇರಿ ಐವರು ಮೃತಪಟ್ಟ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಪಶ್ಚಿಮ ವಿಭಾಗದ ಪೊಲೀಸರು, ಮೃತದೇಹಗಳು ಸಿಕ್ಕಿದ್ದ ಮನೆಯಲ್ಲಿ ಭಾನುವಾರ ಶೋಧ ನಡೆಸಿದರು.

ತಿಗಳರಪಾಳ್ಯದ ಐಷಾರಾಮಿ ಮನೆಯೊಂದರಲ್ಲಿ ಭಾರತಿ (51), ಅವರ ಮಕ್ಕಳಾದ ಸಿಂಚನಾ (34), ಸಿಂಧುರಾಣಿ (33) ಹಾಗೂ ಮಧುಸಾಗರ್ (25) ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಿಂಧೂರಾಣಿ ಅವರ ಒಂಬತ್ತು ತಿಂಗಳ ಮಗು ಮೃತಪಟ್ಟ ಸ್ಥಿತಿಯಲ್ಲಿ ಮನೆಯಲ್ಲಿ ಪತ್ತೆಯಾಗಿತ್ತು.

ಮೃತದೇಹಗಳ ಮರಣೋತ್ತರ ಪರೀಕ್ಷೆ ಮುಗಿಸಿ ಸಂಬಂಧಿಕರಿಗೆ ಹಸ್ತಾಂತರಿಸಲಾಗಿತ್ತು. ಅಂತ್ಯಕ್ರಿಯೆ ಸಹ ಮುಗಿದಿದೆ. ಈಗ ತನಿಖೆ ಚುರುಕುಗೊಳಿಸಿರುವ ಪೊಲೀಸರ ವಿಶೇಷ ತಂಡ, ಆತ್ಮಹತ್ಯೆಗೆ ಕಾರಣವೇನು ಎಂಬುದನ್ನು ಪತ್ತೆ ಮಾಡುತ್ತಿದೆ.

'ಮನೆಯ ಪ್ರತಿಯೊಂದು ಸ್ಥಳದಲ್ಲೂ ತಪಾಸಣೆ ನಡೆಸಲಾಯಿತು. 810 ಗ್ರಾಂ ಚಿನ್ನಾಭರಣ, 3880 ಗ್ರಾಂ ಬೆಳ್ಳಿ ಸಾಮಗ್ರಿ ಹಾಗೂ ₹ 15.96 ಲಕ್ಷ ನಗದು ಸಿಕ್ಕಿದೆ. ಇದನ್ನೆಲ್ಲ ಮನೆ ಮಾಲೀಕ ಹಲ್ಲೇಗೆರೆ ಶಂಕರ್ ಅವರಿಗೆ ಹಸ್ತಾಂತರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

3 ಮರಣಪತ್ರ ಪತ್ತೆ: 'ಮೃತದೇಹಗಳು ಸಿಕ್ಕಿದ್ದ ಸ್ಥಳದ ಸಮೀಪವೇ ಮೂರು ಮರಣಪತ್ರಗಳು ಸಿಕ್ಕಿವೆ. ಸಿಂಧುರಾಣಿ, ಸಿಂಚನಾ ಕುಮಾರಿ ಹಾಗೂ ಮಧುಸಾಗರ್ ಈ ಮರಣ ಪತ್ರ ಬರೆದಿರುವ ಅನುಮಾನವಿದೆ. ಇದನ್ನು ಖಚಿತಪಡಿಸಿಕೊಳ್ಳಲು ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರ ನೆರವು ಕೋರಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ತಂದೆಯೇ ತಮ್ಮ ಆತ್ಮಹತ್ಯೆ ಕಾರಣ' ಎಂದು ಮರಣಪತ್ರದಲ್ಲಿ ಬರೆದಿರುವ ಮಕ್ಕಳು, ಅದಕ್ಕೆ ಸಂಬಂಧಪಟ್ಟಂತೆ ನಡೆದ ಹಲವು ಘಟನೆಗಳನ್ನು ಉಲ್ಲೇಖಿಸಿದ್ದಾರೆ. 'ಪತಿ ಮನೆ ಹಾಗೂ ತವರು ಮನೆ ಎರಡೂ ಕಡೆ ನೆಮ್ಮದಿ ಇರಲಿಲ್ಲ. ತಂದೆಯೇ ಪತಿಯ ತಲೆಕೆಡಿಸಿ, ಜೀವನ ಹಾಳು ಮಾಡಿದರು. ಇದರಿಂದ ನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇವೆ. ಇದಕ್ಕೆ ತಂದೆಯೇ ಕಾರಣ' ಎಂಬುದಾಗಿ ಹೆಣ್ಣು ಮಕ್ಕಳು ಮರಣಪತ್ರದಲ್ಲಿ ಬರೆದಿದ್ದಾರೆ. ಕೈ ಬರಹ ಅವರದ್ದಾ? ಎಂಬುದನ್ನು ತಿಳಿದುಕೊಳ್ಳಬೇಕಿದೆ' ಎಂದೂ ಮೂಲಗಳು ಹೇಳಿವೆ.

ರೇವ್ ಪಾರ್ಟಿ: 37 ಮಂದಿ ಆರೋಪಿಗಳ ಬಂಧನ

ಆನೇಕಲ್: ಹೊರವಲಯ ತಮ್ಮನಾಯಕನಹಳ್ಳಿ ಬಳಿಯ ಖಾಸಗಿ ರೆಸಾರ್ಟ್‌ವೊಂದರಲ್ಲಿ ರೇವ್ ಪಾರ್ಟಿ ಮಾಡುತ್ತಿದ್ದವರ ಮೇಲೆ ಪೊಲೀಸರು ದಾಳಿ ನಡೆಸಿ 37ಮಂದಿಯನ್ನು ಭಾನುವಾರ ಮುಂಜಾನೆ ಬಂಧಿಸಿದ್ದಾರೆ.

ಪೊಲೀಸರು ದಾಳಿ ನಡೆಸಿದಾಗ ಸುಮಾರು 40ಕ್ಕೂ ಹೆಚ್ಚು ಯುವಕ–ಯುವತಿಯರು ಮೋಜು ಮಸ್ತಿಯಲ್ಲಿ ತೊಡಗಿದ್ದು ಕಂಡು ಬಂದಿದೆ. ದಾಳಿ ಮಾಡುತ್ತಿದ್ದಂತೆ ಯುವಕ ಯುವತಿಯರು ರೆಸಾರ್ಟ್‌ನಿಂದ ಕಾಡಿನತ್ತ ಓಡಿಹೋಗಿದ್ದಾರೆ. ಆದರೆ, ಪೊಲೀಸರು ಹಿಂಬಾಲಿಸಿ 11 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ. 16 ದ್ವಿಚಕ್ರ ವಾಹನ, 6 ಕಾರು ವಶಪಡಿಸಿಕೊಳ್ಳಲಾಗಿದೆ. ಪೊಲೀಸರು ಬೆಂಬಿಡದೆ ಬೆಳಿಗ್ಗೆವರೆಗೂ ಕಾದು ಕುಳಿತು ಓಡಿ ಹೋಗಿದ್ದ ಆರೋಪಿಗಳು ರೆಸಾರ್ಟ್‌ನತ್ತ ಬೆಳಿಗ್ಗೆ ವಾಪಸ್ ಬಂದಾಗ ಇನ್ನುಳಿದ 26 ಮಂದಿಯನ್ನು ಬಂಧಿಸಿದ್ದಾರೆ.

ಮ್ಯೂಸಿಕ್ ಸಂಸ್ಥೆಯೊಂದು ರೇವ್ ಪಾರ್ಟಿ ಆಯೋಜಿಸಿದ್ದು ₹1000-1200 ಆನ್‌ಲೈನ್ ಮೂಲಕ ಟಿಕೆಟ್ ಮಾರಾಟ ಮಾಡಿದೆ. ಕೇರಳ ಸೇರಿದಂತೆ ವಿವಿಧ ರಾಜ್ಯಗಳ ಯುವಕರು, ಟೆಕ್ಕಿಗಳು ವಾರಾಂತ್ಯದ ಪಾರ್ಟಿಯಲ್ಲಿ ಪಾಲ್ಗೊಂಡಿದ್ದರು. ಕೈ ಮೇಲೆ ಸಂಸ್ಥೆ ಸೀಲ್ ಹಾಕಿ ಪ್ರವೇಶ ನೀಡಲಾಗಿತ್ತು.

ಆನೇಕಲ್ ಪೊಲೀಸ್ ಉಪವಿಭಾಗದ ಡಿವೈಎಸ್ಪಿ ಎಂ.ಮಲ್ಲೇಶ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರೇವ್ ಪಾರ್ಟಿ ಅನಧಿಕೃತವಾಗಿ ನಡೆದಿದೆ. ಅಶಿಕ್ ಗೌಡ ಮತ್ತು ಪ್ರವಣ್ ಎಂಬುವವರು ಪಾರ್ಟಿ ಆಯೋಜನೆ ಮಾಡಿದ್ದರು ಎಂಬ ಮಾಹಿತಿ ಇದೆ. ಗ್ರೀನ್ ರೆಸಾರ್ಟ್‌ನ ಮ್ಯಾನೇಜರ್ ಕಿರಣ್, ಸುನೀಲ್ ಅವರೊಂದಿಗೆ ವ್ಯವಹರಿಸಿ ರೇವ್ ಪಾರ್ಟಿ ಆಯೋಜನೆ ಮಾಡಿದ್ದರು. ಈ ಬಗ್ಗೆ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದ್ದಾರೆ ಎಂದು ಮಾಹಿತಿ ನೀಡಿದರು. ಸರ್ಕಲ್ ಇನ್‌ಸ್ಪೆಕ್ಟರ್ ಎಚ್.ಆರ್.ಮಹಾನಂದ್, ಸಬ್‌ಇನ್‌ಸ್ಪೆಕ್ಟರ್ ಮಧುಸೂದನ್ ಇದ್ದರು.

ಎರಡು ಕಡೆ ಬೆಂಕಿ ಅವಘಡ

ಬೆಂಗಳೂರು: ನಗರದ ಎರಡು ಕಡೆ ಬೆಂಕಿ ಅವಘಢ ಸಂಭವಿಸಿದ್ದು, ಭಾರಿ ಪ್ರಮಾಣದ ಹಾನಿ ಉಂಟಾಗಿದೆ.

'ಕಾವೇರಿಪುರದಲ್ಲಿರುವ ಸೊಳ್ಳೆ ಪರದೆ ತಯಾರಿಸುವ ಕಾರ್ಖಾನೆಯಲ್ಲಿ ಶನಿವಾರ ತಡರಾತ್ರಿ ಬೆಂಕಿ ಕಾಣಿಸಿಕೊಂಡಿತ್ತು. ಕೆಲ ನಿಮಿಷಗಳಲ್ಲೇ ಬೆಂಕಿ ಕೆನ್ನಾಲಗೆ ಹೆಚ್ಚಾಗಿ ಹೊತ್ತಿ ಉರಿಯಲಾರಂಭಿಸಿತ್ತು. ಸ್ಥಳಕ್ಕೆ ಬಂದ ಅಗ್ನಿಶಾಮಕದ ದಳದ ಸಿಬ್ಬಂದಿ ಬೆಂಕಿ ನಂದಿಸಿದರು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

'ಹೇಮಾದ್ರಿ ನಾಯ್ಡು ಎಂಬುವರು ಕಾರ್ಖಾನೆ ನಡೆಸುತ್ತಿದ್ದರು. 15 ಮಗ್ಗದ ಯಂತ್ರಗಳು, ಸೊಳ್ಳೆ ಪರದೆಗಳು, ಪೀಠೋಪಕರಣಗಳು ಸುಟ್ಟಿವೆ. ಅಂದಾಜು ₹ 14 ಲಕ್ಷ ಹಾನಿಯಾಗಿದೆ' ಎಂದು ಅಗ್ನಿಶಾಮಕ ಸಿಬ್ಬಂದಿಯೊಬ್ಬರು ತಿಳಿಸಿದರು.

ಪತ್ರಿಕೆ ಕಚೇರಿಯಲ್ಲಿ ಬೆಂಕಿ: ರಾಜಾಜಿನಗರದ ರಾಜ್‌ಕುಮಾರ್ ರಸ್ತೆಯಲ್ಲಿರುವ ಅಭಿಮಾನಿ ಪ್ರಕಾಶನದ ಪತ್ರಿಕೆ ಕಚೇರಿಯಲ್ಲಿ ಭಾನುವಾರ ಸಂಜೆ ಬೆಂಕಿ ಅವಘಡ ಸಂಭವಿಸಿದೆ.

ಕಚೇರಿಯ ಮೊದಲ ಮಹಡಿಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಕ್ರಮೇಣ ಬೆಂಕಿ ಕೆನ್ನಾಲಗೆ ಹೆಚ್ಚಾಗಿತ್ತು. ಕಿಟಕಿಯಿಂದಲೂ ಬೆಂಕಿ ಹೊರ ಬಂದು ಉರಿಯುತ್ತಿತ್ತು. ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ, ಎರಡು ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು.

'ಕಂಪ್ಯೂಟರ್‌ಗಳು, ಪೀಠೋಪಕರಣ ಹಾಗೂ ಇತರೆ ವಸ್ತುಗಳು ಸುಟ್ಟಿವೆ. ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ. ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ಹೊತ್ತಿಕೊಂಡಿರುವ ಅನುಮಾನವಿದೆ' ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಹೇಳಿದರು.

ಜಲಪಾತದಲ್ಲಿ ಯುವಕರ ಸಾವು

ಹಲಗೂರು (ಮಂಡ್ಯ): ಈಜಾಡಲು ಹೋಗಿ ಇಬ್ಬರು ವಿದ್ಯಾರ್ಥಿಗಳು ಜಲಪಾತದ ಸುಳಿಗೆ ಸಿಲುಕಿ ಮೃತಪಟ್ಟಿರುವ ಘಟನೆ ಗಾಣಾಳು ಸಮೀಪದ ಬೆಂಕಿ ಜಲಪಾತದಲ್ಲಿ ನಡೆದಿದೆ.

ಬೆಂಗಳೂರಿನ ಎಂ.ಎಸ್. ಪಾಳ್ಯ ಮೂಲದ ಸಿಬಲ್ ಥಾಮಸ್ (21), ಸ್ಯಾಮ್ಯುಯಲ್ (21) ಮೃತಪಟ್ಟವರು. ಇಬ್ಬರೂ ತಮ್ಮ ದ್ವಿಚಕ್ರ ವಾಹನದಲ್ಲಿ ಶನಿವಾರ ಪ್ರವಾಸಕ್ಕೆ ಬಂದಿದ್ದರು.

ಚಿತ್ರಾವಳಿ



ಚಿಕ್ಕಬೆಟ್ಟಹಳ್ಳಿ ವ್ಯಾಪ್ತಿಯ ಬೃಂದಾವನ ಲೇ ಔಟ್ ಕ್ಷೇಮಾಭಿವೃದ್ಧಿ ಸಂಘ ಹಮ್ಮಿಕೊಂಡಿದ್ದ ಗಣೇಶೋತ್ಸವ ಕಾರ್ಯಕ್ರಮದಲ್ಲಿ ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕ ಎಸ್‌ಆರ್‌ವಿಶ್ವನಾಥ್ ಅವರಿಗೆ ಮೈಸೂರು ಪೇಟ ತೊಡಿಸಿ ಸನ್ಮಾನಿಸಲಾಯಿತು. ಬಿಜೆಪಿ ಮುಖಂಡ ಎ.ಸಿ.ಮುನಿಕೃಷ್ಣಪ್ಪ, 3ನೇ ವಾರ್ಡ್ ಅಧ್ಯಕ್ಷ ನಾರಾಯಣಸ್ವಾಮಿ ಹಾಗೂ ಶೇಷಾದ್ರಿ ಇದ್ದರು.

ಹೆಸರಘಟ್ಟ ಮುಖ್ಯರಸ್ತೆಯಲ್ಲಿ ಜಲಮಂಡಳಿಯ ಕಾಮಗಾರಿಗಾಗಿ ತೋಡಿದ್ದ ಗುಂಡಿಯಲ್ಲಿ ಬಿದ್ದು ಮೃತಪಟ್ಟಿದ್ದ ಬೈಕ್ ಸವಾರ ಆನಂದಪ್ಪ ಮನೆಗೆ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಆರ್‌ಮಂಜುನಾಥ್ ಭಾನುವಾರ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ₹1.5 ಲಕ್ಷದ ಪರಿಹಾರ ಚೆಕ್ ವಿತರಿಸಿದ ಅವರು ರಾಜೀವ್ ಗಾಂಧಿ ವಸತಿ ಯೋಜನೆಯ ಅಡಿಯಲ್ಲಿ ಮನೆ ಕಲ್ಪಿಸುವ ಜೊತೆಗೆ ಇಬ್ಬರು ಹೆಣ್ಣು ಮಕ್ಕಳಿಗೆ ಉಚಿತ ವಿಧ್ಯಾಭ್ಯಾಸ ಹಾಗೂ ಹೊಲಿಗೆ ಯಂತ್ರ ಒದಗಿಸುವ ಭರವಸೆಯನ್ನೂ ನೀಡಿದರು.

'ರತಿಯ ಕಂಬನಿ' ಕವನ ಸಂಕಲನ ಬಿಡುಗಡೆ

'ಕವಿತೆಯು ಮಾಯಾಜಿಂಕೆ ಇದ್ದ ಹಾಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕವಿತೆಯು ಮಾಯಾಜಿಂಕೆ ಇದ್ದಂತೆ. ಇದು ಬರಹಗಾರರನ್ನು ಬಹುವಾಗಿ ಕಾಡುವ ಪ್ರಕಾರ. ಆಕರ್ಷಕ ಮಾಧ್ಯಮ ಕೂಡ' ಎಂದು ಕವಯತ್ರಿ ಎಚ್.ಎಲ್.ಪುಷ್ಪಾ ಅಭಿಪ್ರಾಯಪಟ್ಟರು.

ನಂದಿನಿ ಹೆದ್ದುರ್ಗ ಅವರ 'ರತಿಯ ಕಂಬನಿ' ಕವನ ಸಂಕಲನ ಬಿಡುಗಡೆ ಮಾಡಿ ಭಾನುವಾರ ಅವರು ಮಾತನಾಡಿದರು.

'ಕನ್ನಡ ಕಾವ್ಯದಲ್ಲಿ ಮೊದಲ ತಲೆಮಾರಿನ ಕವಯತ್ರಿಯರು ಕಾಮದ ಕುರಿತು ಮುಕ್ತವಾಗಿ ಬರೆದರು. ಅದೇ ಸಮಯದಲ್ಲಿ ಪಿ.ಲಂಕೇಶ್, ಚನ್ನಯ್ಯ ಸೇರಿದಂತೆ ಅನೇಕರು ಕಾಮದ ರೂಪಕಗಳನ್ನು ಬಳಸಿದಾಗ ಅದು ಹೊಸ ಪ್ರಕಾರ ಎಂದು ಕರೆಸಿಕೊಂಡಿತ್ತು. ಅದನ್ನೇ ಮಹಿಳೆಯರು ಬರೆದಾಗ ಅವರಿಗೇ ಹೋಲಿಸುವ ಸ್ವೇಚ್ಛೆ ಎಂಬ ರೀತಿಯಲ್ಲಿ ನೋಡಲಾಗುತ್ತಿತ್ತು. ಅದೆಲ್ಲವನ್ನೂ ಮೀರಿ ಮಹಿಳಾ ಕಾವ್ಯ ಮುಂದುವರಿದಿದೆ. ಮೊದಲ ತಲೆಮಾರಿನಲ್ಲಿ ಬಂದ ತೀವ್ರವಾದ ಪ್ರಯೋಗಗಳು, ಎರಡನೇ ತಲೆಮಾರಿನಲ್ಲಿ ಕಡಿಮೆಯಾದವು. ಈಗ ಮತ್ತೆ ಕೆಲವರು ಇಂತಹ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಆ ಸಾಲಿನಲ್ಲಿ ನಂದಿನಿ ಅವರ ಕಾವ್ಯ ನಿಲ್ಲುತ್ತದೆ' ಎಂದರು.

'ನೆಲದಲ್ಲಿ ನಿಂತು ಮುಗಿಲನ್ನು ಹಿಡಿಯುವುದರಲ್ಲಿ ಮಹಿಳೆ ಎಷ್ಟರ ಮಟ್ಟಿಗೆ ಸಾಫಲ್ಯ ಕಾಣುತ್ತಾಳೆ. ಬಿಡುವ ಮತ್ತು ಕಟ್ಟಿಕೊಳ್ಳುವ ನಡುವೆ ಆಕೆ ಬದುಕುವ ಅನಿವಾರ್ಯವನ್ನು ಈ ಕೃತಿಯ ಕವಿತೆಗಳು ಕಟ್ಟಿಕೊಡುತ್ತವೆ. ಇದು ನಾಯಕಿ ಪ್ರಧಾನ ಕವಿತೆಗಳ ಗುಚ್ಛ' ಎಂದು ತಿಳಿಸಿದರು.

'ಪ್ರಜಾವಾಣಿ' ಸಹ ಸಂಪಾದಕ ಬಿ.ಎಂ.ಹನೀಫ್, 'ನಂದಿನಿ ಅವರ ಕವನ ಸಂಕಲನದ ಉದ್ದಕ್ಕೂ ಅಗೋಚರ ಪ್ರೇಮಿಯೊಬ್ಬ ಇದ್ದಾನೆ. ಇಲ್ಲಿ ಶಿವ, ಬುದ್ಧ, ರಾಮ ಹಾಗೂ ಇತರ ಪುರಾಣ ಪುಣ್ಯ ಪುರುಷರ ಜೊತೆ ಕವಯತ್ರಿ ಜಗಳವಾಡುತ್ತಾ ಹೋಗುತ್ತಾರೆ. ಸ್ತ್ರೀಲೋಕಕ್ಕೆ ಮಾತ್ರ ದಕ್ಕಬಹುದಾದ ಪ್ರತಿಮೆಗಳನ್ನು ಬಳಸಲಾಗಿದೆ. ಈ ಪ್ರತಿಮೆಗಳ ಸೊಬಗು ವಿಶಿಷ್ಟವಾದುದು' ಎಂದು ಹೇಳಿದರು.

'ಕವಯತ್ರಿ ಉಪಮೆ ಹಾಗೂ ರೂಪಕಗಳನ್ನು ಪುಂಖಾನುಪುಂಖವಾಗಿ ಬಳಸಿ ಓದುಗರನ್ನು ಅನೂಹ್ಯವಾದ ಕಾವ್ಯ ಕೋಟೆಯೊಳಗೆ ಹುದುಗಿಸಿಬಿಡುತ್ತಾರೆ. ಪುಸ್ತಕದಲ್ಲಿರುವ ಹಲವು ಕವನಗಳಲ್ಲಿ ಚಿತ್ರಕ ಶಕ್ತಿಯೂ ಅಡಕವಾಗಿದೆ' ಎಂದರು.

ಕವಯತ್ರಿ ನಂದಿನಿ ಹೆದ್ದುರ್ಗ, 'ಕವಿತೆ ಹೊಮ್ಮಿಸುವ ರಸಕ್ಕಾಗಿ, ಕವಿತೆಯ ಪದಗಳ ನಡುವೆ ಹೊಮ್ಮುವ ಮೌನಕ್ಕಾಗಿ ಕವಿತೆಗಳನ್ನು ಪ್ರೀತಿಸುವವಳು ನಾನು. ಕವಿತೆಯೊಳಗೆ ದೈವಿಕ ಸ್ವರೂಪವಿದೆ ಎಂದೂ ನಂಬಿದ್ದೇನೆ' ಎಂದು ಹೇಳಿದರು.

ನಂದಿನಿ ಹೆದ್ದುರ್ಗ (ಎಡದಿಂದ ಮೂರನೆಯವರು) ಅವರ 'ರತಿಯ ಕಂಬನಿ' ಕವನ ಸಂಕಲನವನ್ನು ಕವಯತ್ರಿ ಎಚ್‌ಎಲ್‌ಪುಷ್ಪಾ (ಎಡದಿಂದ ನಾಲ್ಕನೆಯವರು) ಬಿಡುಗಡೆ ಮಾಡಿದರು. ಬಿ.ಎಂ.ಹನೀಫ್, ಕವಿ ಬಿ.ಆರ್‌ಲಕ್ಷ್ಮಣರಾವ್, ವಿಕಾಸ ಪ್ರಕಾಶನದ ಪೂರ್ಣಿಮಾ ಇದ್ದರು ಪ್ರಜಾವಾಣಿ ಚಿತ್ರ

ಮೊಮ್ಮಗಳು ಸಾವು; ಅಜ್ಜನಿಗೆ ಗಾಯ

ಬೆಂಗಳೂರು: ಪೀಣ್ಯ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಭಾನುವಾರ ಬೆಳಿಗ್ಗೆ ಅಪಘಾತ ಸಂಭವಿಸಿದ್ದು, ಪ್ರಣೀತಾ (12) ಎಂಬಾಕೆ ಮೃತಪಟ್ಟಿದ್ದಾಳೆ. ಆಕೆಯ ಅಜ್ಜ ಧರ್ಮರಾವ್ (62) ತೀವ್ರ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ನಂದಿನಿ ಬಡಾವಣೆ ನಿವಾಸಿ ಧರ್ಮರಾವ್, ಮೊಮ್ಮಗಳು ಪ್ರಣೀತಾ ಜೊತೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಲಾರಿ ಡಿಕ್ಕಿ ಹೊಡೆದು ಈ ಅವಘಡ ಸಂಭವಿಸಿದೆ. ಅಪಘಾತಕ್ಕೆ ಕಾರಣವಾದ ಲಾರಿ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ಹೇಳಿದರು.

'ದಾಸರಹಳ್ಳಿಯಲ್ಲಿರುವ ಸಂಬಂಧಿಕರ ಮನೆಗೆ ಹೋಗಿದ್ದ ಧರ್ಮರಾವ್, ಮೊಮ್ಮಗಳ ಜೊತೆ ವಾಪಸು ನಂದಿನಿ ಬಡಾವಣೆಗೆ ಬರುತ್ತಿದ್ದರು. ಪೀಣ್ಯದ ಎಸ್‌ಆರ್‌ಎಸ್ ಜಂಕ್ಷನ್ ಬಳಿ ವೇಗವಾಗಿ ಬಂದ ಲಾರಿ, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿತ್ತು. ವಾಹನದ ಹಿಂಬದಿಯಲ್ಲಿದ್ದ ಪ್ರಣೀತಾ ರಸ್ತೆಗೆ ಬಿದ್ದಿದ್ದಳು. ತಲೆಗೆ ತೀವ್ರ ಪೆಟ್ಟು ಬಿದ್ದು ಆಕೆ ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ಈ ಬಗ್ಗೆ ಪ್ರತ್ಯಕ್ಷದರ್ಶಿಗಳು ಹೇಳಿಕೆ ಪಡೆಯಲಾಗಿದೆ' ಎಂದೂ ತಿಳಿಸಿದರು.

ಮನೆಯಲ್ಲಿ ಕದ್ದಿದ್ದ 5 ಕೆ.ಜಿ ಬೆಳ್ಳಿ ಜಪ್ತಿ

ಬೆಂಗಳೂರು: ಚಂದ್ರಲೇಔಟ್ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳವು ಮಾಡಿದ್ದ ಆರೋಪದಡಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

'ಸಲೀಂ ರಫೀಕ್ ಶೇಕ್ ಹಾಗೂ ಬಿಲಾಲ್ ಮಂಡಲ್ ಬಂಧಿತರು. ಅವರಿಂದ 5 ಕೆ.ಜಿ ಬೆಳ್ಳಿ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ನಿವಾಸಿಯೊಬ್ಬರು ಮೇ 30ರಂದು ಮನೆಗೆ ಬೀಗ ಹಾಕಿಕೊಂಡು ಬೇರೆ ಊರಿಗೆ ಹೋಗಿದ್ದರು. ಜೂನ್ 3ರಂದು ಮನೆಗೆ ಮರಳಿದಾಗ ಕಳ್ಳತನವಾಗಿದ್ದು ಗೊತ್ತಾಗಿತ್ತು. ಠಾಣೆಗೆ ದೂರು ನೀಡಿದ್ದರು' ಎಂದೂ ತಿಳಿಸಿದರು.

'ಬೇರೊಂದು ಪ್ರಕರಣದಲ್ಲಿ ಆರೋಪಿಗಳಾದ ಸಲೀಂ ಹಾಗೂ ಬಿಲಾಲ್‌ನನ್ನು ಬಸವನಗುಡಿ ಪೊಲೀಸರು ಬಂಧಿಸಿದ್ದರು. ಅವರಿಬ್ಬರನ್ನು ಬಾಡಿ ವಾರೆಂಟ್ ಮೇಲೆ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಯಿತು. ಮನೆ ಕಿಟಕಿಯ ಕಬ್ಬಿಣದ ಸರಳುಗಳನ್ನು ಕತ್ತರಿಸಿ ಒಳನುಗ್ಗಿ ಕೃತ್ಯ ಎಸಗಿರುವುದಾಗಿ ಅವರಿಬ್ಬರು ತಪ್ಪೊಪ್ಪಿಕೊಂಡರು' ಎಂದೂ ಪೊಲೀಸರು ಹೇಳಿದರು.

ಸಿಲ್ಕ್‌ಬೋರ್ಡ್– ಕೆ.ಆರ್.ಪುರ–ವಿಮಾನ ನಿಲ್ದಾಣ ಮೆಟ್ರೊ ಮಾರ್ಗ: ಅಭಿವೃದ್ಧಿ–ಅವಕಾಶಗಳ ಅಂಗಳ!

ಸವಾಲು–ನಿರೀಕ್ಷೆಗಳ ಹಾದಿಯಲ್ಲಿ ನೀಲಿ ಮಾರ್ಗ

• ಗುರು ಪಿ.ಎಸ್.

ಬೆಂಗಳೂರು: ನಗರದ ಸ್ವರೂಪ ಮತ್ತು ಅಭಿವೃದ್ಧಿಯ ದಿಕ್ಕನ್ನೇ ಬದಲಿಸುವ ಮಾರ್ಗವಾಗಿ ಗುರುತಿಸಿಕೊಂಡಿರುವ ಸೆಂಟ್ರಲ್ ಸಿಲ್ಕ್‌ಬೋರ್ಡ್– ಕೆ.ಆರ್. ಪುರ– ವಿಮಾನ ನಿಲ್ದಾಣ (2ಎ ಮತ್ತು 2ಬಿ– ನೀಲಿ ಮಾರ್ಗ) ಮೆಟ್ರೊ ಮಾರ್ಗದಲ್ಲಿ ಕಾಮಗಾರಿ ಪೂರ್ವದ ಪ್ರಕ್ರಿಯೆಗಳು ಚುರುಕುಗೊಂಡಿವೆ.

2024ರ ವೇಳೆಗೆ ಈ ಮಾರ್ಗದಲ್ಲಿ ಮೆಟ್ರೊ ರೈಲು ಓಡಾಟದ ಸದ್ದು ಕೇಳಿಸಬೇಕು ಎಂಬ ಗುರಿಯೊಂದಿಗೆ ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ಈಗ ಸ್ವಲ್ಪ ಚುರುಕಿನಿಂದ ಕೆಲಸ ಮಾಡುತ್ತಿದೆ. ಅನೇಕ ಸವಾಲುಗಳಿಗೆ ಎದುರುಗೊಳ್ಳುವ ಮನಸ್ಥಿತಿಯಲ್ಲಿ ನಿಗಮ ಇದ್ದರೆ, ಹಲವು ಅವಕಾಶಗಳ ನಿರೀಕ್ಷೆಯಲ್ಲಿ ಈ ಭಾಗದ ಜನರಿದ್ದಾರೆ.

ಶೀಘ್ರ ಕಾರ್ಯಾದೇಶ: ಕೆ.ಆರ್. ಪುರ–ವಿಮಾನ ನಿಲ್ದಾಣ ಮಾರ್ಗಕ್ಕೆ (2ಬಿ) ಸಂಬಂಧಿಸಿದಂತೆ 'ಕಾಗದದ' ಮೇಲೆ ಕಾಣುವ ಅಬ್ಬರ ರಸ್ತೆಯ ಮೇಲೆ ಇನ್ನಷ್ಟೇ ಕಾಣಬೇಕಾಗಿದೆ. ಈ ಮಾರ್ಗದ ಮೂರು ಪ್ಯಾಕೇಜ್‌ಗಳ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಹೈದರಾಬಾದ್‌ನ ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿ (ಎನ್‌ಸಿಸಿ) ಕಡಿಮೆ ಬಿಡ್ ಮಾಡುವ ಮೂಲಕ ಗೆದ್ದುಕೊಂಡಿದೆ.

ಮಾರ್ಗ ನಿರ್ಮಾಣಕ್ಕೆ ಸಾಲ ನೀಡುತ್ತಿರುವ ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಜೊತೆಗಿನ ಮಾತುಕತೆ ನಂತರ, ಎನ್‌ಸಿಸಿಗೆ ಕಾರ್ಯಾದೇಶ ನೀಡುವ ಚಿಂತನೆಯಲ್ಲಿ ಬಿಎಂಆರ್‌ಸಿಎಲ್ ಇದೆ. ಕಾರ್ಯಾದೇಶ ದೊರೆತ ನಂತರವೇ ಈ ಮಾರ್ಗದಲ್ಲಿ 'ಕಾಮಗಾರಿಯ ಸದ್ದು' ಶುರುವಾಗಲಿದೆ. ಸದ್ಯ ಭೂಸ್ವಾಧೀನ ಮತ್ತು ಪರಿಹಾರದಂತಹ ಕಾರ್ಯಗಳಿಗೆ ಮಾತ್ರ ವಿಮಾನ ನಿಲ್ದಾಣ ಮಾರ್ಗ ಸೀಮಿತವಾಗಿದೆ.

ಆದರೆ, ಕೇಂದ್ರ ರೇಷ್ಮೆ ಮಂಡಳಿಯಿಂದ ಕೆ.ಆರ್. ಪುರದವರೆಗಿನ (2ಎ) ಮಾರ್ಗ ನಿರ್ಮಾಣ ಕಾರ್ಯ ಚುರುಕುಗೊಂಡಿದೆ. ಸಿಲ್ಕ್ ಬೋರ್ಡ್‌ನಿಂದ ಕಾಡುಬೀಸನಹಳ್ಳಿಯವರೆಗಿನ (10 ಕಿ.ಮೀ) ಮೊದಲ ಪ್ಯಾಕೇಜ್‌ನ ನಿರ್ಮಾಣ ಗುತ್ತಿಗೆಯನ್ನು ಆಫ್ಕಾನ್ಸ್ ಸಂಸ್ಥೆ ಪಡೆದಿದ್ದರೆ, ಕಾಡುಬೀಸನಹಳ್ಳಿಯಿಂದ ಬೈಯಪ್ಪನಹಳ್ಳಿಯವರೆಗಿನ (9.75 ಕಿ.ಮೀ) ಎರಡನೇ ಪ್ಯಾಕೇಜ್‌ನ ಗುತ್ತಿಗೆಯನ್ನು ಶಂಕರನಾರಾಯಣ ಕನ್‌ಸ್ಟ್ರಕ್ಷನ್ ಪಡೆದಿದೆ.

ಇಬ್ಬಲೂರು, ಮಾರತ್ತಹಳ್ಳಿ, ಬ್ಯಾಡರಹಳ್ಳಿಯ ಬಳಿ ಮಣ್ಣು ಪರೀಕ್ಷೆ ಕಾರ್ಯ ಪೂರ್ಣಗೊಂಡಿದೆ. ಇಬ್ಬಲೂರು ಬಳಿ ಮೆಟ್ರೊ ಪಿಲ್ಲರ್‌ಗಳಿಗೆ ಅಡಿಪಾಯ ಹಾಕುವ ಕಾರ್ಯವೂ ಶೀಘ್ರದಲ್ಲಿಯೇ ಪ್ರಾರಂಭವಾಗಲಿದೆ.

ಕೋವಿಡ್ ಸಂದರ್ಭದಲ್ಲಿ ಕಂಪನಿಗಳು ಉದ್ಯೋಗಿಗಳಿಗೆ ಮನೆಯಿಂದಲೇ ಕೆಲಸ ಮಾಡುವ ಅವಕಾಶ ನೀಡಿದ್ದರಿಂದ ಈ ಮಾರ್ಗದಲ್ಲಿ ಸಂಚಾರ ದಟ್ಟಣೆ ಕಡಿಮೆಯಾಗಿತ್ತು. ಈ ಅವಕಾಶವನ್ನು ಕಾಮಗಾರಿ ಚುರುಕುಗೊಳಿಸಲು ನಿಗಮ ಬಳಸಿಕೊಂಡಿತ್ತು. ಸದ್ಯ, ಬೆಂಗೇನಹಳ್ಳಿ ಅಥವಾ ಇಬ್ಬಲೂರು ಜಂಕ್ಷನ್‌ನಲ್ಲಿ ಕೆಲಸ ತ್ವರಿತಗತಿಯಲ್ಲಿ ನಡೆಯುತ್ತಿದೆ.

ಈ ಮಾರ್ಗದಲ್ಲಿರುವ ಮರಗಳನ್ನು ಕಡಿಯಲು ಅಥವಾ ಸ್ಥಳಾಂತರಗೊಳಿಸಲು ನಿಗಮವು ಅನುಮತಿಗಾಗಿ ಕಾಯುತ್ತಿದೆ. ಪರಿಸರ ಕಾರ್ಯಕರ್ತರ ವಿರೋಧ ಮತ್ತಿತರ ತಾಂತ್ರಿಕ ಕಾರಣಗಳಿಂದ ಕೆಲವು ಕಡೆಗಳಲ್ಲಿ ನಿಗಮಕ್ಕೆ ಅನುಮತಿ ದೊರೆತಿಲ್ಲ. ಕೆಲವು ಕಡೆ ಮರಗಳನ್ನು ಸ್ಥಳಾಂತರಗೊಳಿಸುವ ಕಾರ್ಯವನ್ನು ನಿಗಮ ಸಮರ್ಪಕವಾಗಿ ಮಾಡುತ್ತಿಲ್ಲ ಎಂದೂ ಸ್ಥಳೀಯರು ದೂರುತ್ತಾರೆ.

ಭೂಸ್ವಾಧೀನ ಕಾರ್ಯ ಬಹುತೇಕ ಪೂರ್ಣ: 19 ಕಿ.ಮೀ. ಉದ್ದದ 2ಎ ಮಾರ್ಗ ನಿರ್ಮಾಣಕ್ಕೆ 60,553 ಚದರ ಮೀಟರ್ ಜಾಗದ ಅವಶ್ಯಕತೆ ಇತ್ತು. ಈಗಾಗಲೇ 60,241 ಚದರ ಮೀಟರ್ ಜಾಗವನ್ನು ಸ್ವಾಧೀನ ಪಡಿಸಿಕೊಂಡು ಎಂಜಿನಿಯರಿಂಗ್ ವಿಭಾಗಕ್ಕೆ ವರ್ಗಾಯಿಸಲಾಗಿದೆ. ಉಳಿದ 312 ಚದರ ಮೀಟರ್ ಜಾಗವನ್ನು ನೀಡುವಂತೆ ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಕೋರಲಾಗಿದೆ. ಅಗರ ನಿಲ್ದಾಣಕ್ಕೆ ಪ್ರವೇಶ ದ್ವಾರ ನಿರ್ಮಾಣಕ್ಕೆ ಈ ಜಾಗದ ಅವಶ್ಯಕತೆ ಇದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

38 ಕಿ.ಮೀ. ಉದ್ದದ 2ಬಿ ಮಾರ್ಗ ನಿರ್ಮಾಣಕ್ಕೆ 2,21,608 ಚದರ ಮೀಟರ್ ಜಾಗವನ್ನು ವಯಡಕ್ಟ್ ಮತ್ತು ನಿಲ್ದಾಣಗಳ ನಿರ್ಮಾಣಕ್ಕಾಗಿ ಸ್ವಾಧೀನ ಪಡಿಸಿಕೊಳ್ಳಲಾಗಿದೆ. 1,99,849 ಚದರ ಮೀಟರ್‌ನಷ್ಟು ಜಾಗವನ್ನು ಎಂಜಿನಿಯರಿಂಗ್ ವಿಭಾಗಕ್ಕೆ ವರ್ಗಾಯಿಸಲಾಗಿದೆ. ಉಳಿದ ಜಾಗದವರಿಗೆ ಪರಿಹಾರ ಕೊಡುವ ಕಾರ್ಯ ಪ್ರಗತಿಯಲ್ಲಿರುವುದರಿಂದ ಆ ಜಾಗದ ಸ್ವಾಧೀನ ಕಾರ್ಯ ಪ್ರಗತಿಯಲ್ಲಿದೆ.

ಇನ್ನು, ಶೆಟ್ಟಿಗೆರೆಯಲ್ಲಿ ಡಿಪೊ ನಿರ್ಮಾಣಕ್ಕೆ 23 ಎಕರೆ ಜಾಗ ಅಗತ್ಯವಿದ್ದು, 18 ಎಕರೆ ಜಾಗವನ್ನು ರಾಜ್ಯ ಸರ್ಕಾರ ನೀಡಿದ್ದು, ಬಿಎಂಆರ್‌ಸಿಎಲ್‌ಗೆ ಹಸ್ತಾಂತರಿಸಲಾಗಿದೆ. ಉಳಿದ ಐದು ಎಕರೆ ಜಾಗಕ್ಕೆ ಸಂಬಂಧಿಸಿದಂತೆ ಕಾನೂನು ತೊಡಕುಗಳಿದ್ದು, ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಆದೇಶಕ್ಕಾಗಿ ನಿಗಮ ಕಾಯುತ್ತಿದೆ.

ಈ ಮಾರ್ಗದಲ್ಲಿ ಎಲ್ಲರನ್ನೂ ಕಾಡುವ ಸಂಚಾರ ದಟ್ಟಣೆಯಂತಹ 'ಭೂತ'ವನ್ನು ಓಡಿಸಲು ಸಾಧ್ಯವಿರುವುದು ಮೆಟ್ರೊ ರೈಲಿಗೆ ಮಾತ್ರ. ಆ ಸೌಭಾಗ್ಯ ಬೇಗ ಒದಗಿ ಬರುವಂತಾಗಲಿ ಎಂಬುದು ಇಲ್ಲಿನ ಜನರ ನಿರೀಕ್ಷೆ ಮತ್ತು ಬೇಡಿಕೆ. ಈ ನಿರೀಕ್ಷೆ ಎಷ್ಟು ಬೇಗ ಪೂರ್ಣವಾಗುತ್ತದೆಯೋ ಅಷ್ಟು ವೇಗದಲ್ಲಿ ಬೆಂಗಳೂರಿನ ಬ್ರ್ಯಾಂಡ್ ಮೌಲ್ಯ ಮತ್ತಷ್ಟು ಹೆಚ್ಚುವುದರಲ್ಲಿ ಅನುಮಾನವಿಲ್ಲ.

₹398.48 ಕೋಟಿ	₹1,381.71 ಕೋಟಿ	₹84.08 ಕೋಟಿ	3,116	7,455	2,338
2ಎ ಮಾರ್ಗ ನಿರ್ಮಾಣಕ್ಕೆ ನೀಡಲಾದ ಪರಿಹಾರ ಮೊತ್ತ	2ಬಿ ಮಾರ್ಗ ನಿರ್ಮಾಣಕ್ಕಾಗಿ ನೀಡಲಾದ ಪರಿಹಾರ ಮೊತ್ತ	ಜನರ ಪುನರ್ವಸತಿಗಾಗಿ ನೀಡಲಾದ ಮೊತ್ತ	ಸ್ವಾಧೀನಪಡಿಸಿಕೊಳ್ಳಲಾದ ಆಸ್ತಿಗಳ ಸಂಖ್ಯೆ	ಪರಿಹಾರ ಪಡೆದ ಕಟ್ಟಡಗಳ ಮಾಲೀಕರು	ಪರಿಹಾರ ಪಡೆದ ಕಟ್ಟಡಗಳ ಬಾಡಿಗೆದಾರರು



58.19 ಕಿ.ಮೀ.
2ಎ ಮತ್ತು 2ಬಿ ಮಾರ್ಗದ ಒಟ್ಟು ಉದ್ದ

19.75 ಕಿ.ಮೀ.
ಕೇಂದ್ರ ರೇಷ್ಮೆ ಮಂಡಳಿಯಿಂದ– ಕೆ.ಆರ್.ಪುರದವರೆಗಿನ ಮಾರ್ಗದ ಉದ್ದ

38.44 ಕಿ.ಮೀ.
ಕೆ.ಆರ್.ಪುರದಿಂದ ವಿಮಾನ ನಿಲ್ದಾಣದವರೆಗಿನ ಮಾರ್ಗದ ಉದ್ದ

₹14,788 ಕೋಟಿ
ಈ ಮಾರ್ಗ ನಿರ್ಮಾಣದ ಅಂದಾಜು ವೆಚ್ಚ

30
2ಎ–2ಬಿಯಲ್ಲಿ ಬರುವ ನಿಲ್ದಾಣಗಳ ಸಂಖ್ಯೆ

ನಗರದ ಕೆ.ಆರ್ ಪುರ ಬಳಿ ನಡೆಯುತ್ತಿರುವ ಮೆಟ್ರೊ ಕಾಮಗಾರಿಯಿಂದ ಸಂಚಾರ ದಟ್ಟಣೆ ಉಂಟಾಗಿರುವುದು
ಪ್ರಜಾವಾಣಿ ಚಿತ್ರ– ರಂಜು ಪಿ.

ಹೆಚ್ಚಾಗಲಿದೆ ನಿರ್ಮಾಣ ವೆಚ್ಚ

ಕೆ.ಆರ್.ಪುರ–ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾರ್ಗದ ಕಾಮಗಾರಿ ಇನ್ನಷ್ಟೇ ಪ್ರಾರಂಭವಾಗಬೇಕಾಗಿದೆ. ಗುತ್ತಿಗೆ ಪಡೆದಿರುವ ಕಂಪನಿಗೆ ಇನ್ನೂ ಕಾರ್ಯಾದೇಶ ನೀಡಿಲ್ಲ. ಜನನಿಬಿಡ ಪ್ರದೇಶವಾಗಿರುವ ಇಲ್ಲಿ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಮುಗಿಸುವುದು ನಿಜಕ್ಕೂ ಸವಾಲಿನ ವಿಷಯ.

ಕಾಮಗಾರಿ ಮುಗಿಯುವುದು ನಿಧಾನವಾದಷ್ಟೂ ನಿರ್ಮಾಣ ವೆಚ್ಚವೂ ಖಂಡಿತ ಹೆಚ್ಚಾಗಲಿದೆ. ಈಗ ಸುಮಾರು ₹15 ಸಾವಿರ ಕೋಟಿ ಎಂದು ಹೇಳಿದ್ದರೂ, ಕಾಮಗಾರಿ ಮುಗಿಯುವ ವೇಳೆಗೆ ನಿರ್ಮಾಣ ವೆಚ್ಚವು ₹25 ಸಾವಿರ ಕೋಟಿಗೆ ತಲುಪಬಹುದು. ಹೆಚ್ಚುವರಿ ಹಣವನ್ನು ಹೊಂದಿಸುವ ಸವಾಲನ್ನೂ ಬಿಎಂಆರ್‌ಸಿಎಲ್ ಎದುರಿಸಲಿದೆ.

ಸಂಜೀವ್ ದ್ಯಾಮಣ್ಣವರ, ರೈಲ್ವೆ ಕಾರ್ಯಕರ್ತ

'ಮರಗಳ ಸ್ಥಳಾಂತರ ಅಸಮರ್ಪಕ'

2ಎ ಮಾರ್ಗದಲ್ಲಿ ಮರಗಳ ತೆರವು ಕಾರ್ಯ ತಡವಾಗಿರುವುದರಿಂದ ಕಾಮಗಾರಿಯೂ ವಿಳಂಬವಾಗುತ್ತಿದೆ ಎಂದು ನಿಗಮದ ಅಧಿಕಾರಿಗಳು ಹೇಳುತ್ತಾರೆ. ಆದರೆ, ನಿಗಮವು ಸರಿಯಾಗಿ ಯೋಜನೆ ರೂಪಿಸಿಕೊಳ್ಳುವುದೇ ಇಲ್ಲ. ಸ್ಥಳಾಂತರಿಸಬೇಕಾದ ಮರಗಳನ್ನು ಕಡಿದು ಬಹಳ ದಿನಗಳವರೆಗೆ ಅಲ್ಲಿಯೇ ಬಿಟ್ಟಿರುತ್ತಾರೆ. ಮತ್ತೆ ಅವುಗಳನ್ನು ಸ್ಥಳಾಂತರಿಸುವ ವೇಳೆಗೆ ಬಹಳಷ್ಟು ಮರಗಳು ಹಾಳಾಗಿರುತ್ತವೆ. ಮಾರ್ಗ ನಿರ್ಮಾಣಕ್ಕೆ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸುವಾಗಲೇ, ಕಡಿಯಬೇಕಾಗಿರುವ ಅಥವಾ ಸ್ಥಳಾಂತರ ಮಾಡಬೇಕಾಗಿರುವ ಮರಗಳ ಕುರಿತು ಪ್ರತ್ಯೇಕ ಯೋಜನೆ ಸಿದ್ಧಮಾಡಿಟ್ಟುಕೊಳ್ಳಬೇಕು.ಕೊನೆಯ ಗಳಿಗೆಯಲ್ಲಿ ಮರ ಕಡಿಯಲು ಮುಂದಾದರೆ, ಸರಿಯಾಗಿ ಮಾಹಿತಿ ನೀಡದಿದ್ದರೆ ಪರಿಸರ ಕಾರ್ಯಕರ್ತರು ನ್ಯಾಯಾಲಯದ ಮೊರೆ ಹೋಗುವುದು ಸಹಜ. ಇನ್ನು, ಮರಗಳನ್ನು ಸ್ಥಳಾಂತರಿಸುವ ಕಾರ್ಯವನ್ನು ಮಳೆಗಾಲದಲ್ಲಿ ಇಟ್ಟುಕೊಳ್ಳಬೇಕು.ಬೇಸಿಗೆಯಲ್ಲಾದರೆ ಮರಗಳು ಬೇಗ ಒಣಗುತ್ತವೆ ಅಲ್ಲದೆ, ಮರುನೆಡುವ ಕಾರ್ಯವೂ ಕಠಿಣವಾಗುತ್ತದೆ.

ಬಾಲಾಜಿ ರಘೋತ್ತಮ್, ಇಬ್ಬಲೂರು ನಿವಾಸಿ

ಎದುರಾಗುವ ಸವಾಲುಗಳಾವುವು ?

ಅತಿ ನಿರೀಕ್ಷೆಯ ಈ ಮಾರ್ಗ ನಿರ್ಮಾಣಕ್ಕೆ ಹಲವು ಸವಾಲುಗಳೂ ಎದುರಾಗಲಿವೆ. ನಿಗಮ ಅದನ್ನು ಹೇಗೆ ನಿಭಾಯಿಸಲಿದೆ ಎಂಬುದು ಮುಖ್ಯವಾಗಲಿದ್ದು, ಗಡುವಿನೊಳಗೆ ಕಾಮಗಾರಿ ಪೂರ್ಣಗೊಳ್ಳಲಿದೆಯೇ, ಇಲ್ಲವೇ ಎಂಬುದೂ ನಿರ್ಧಾರವಾಗಲಿದೆ.

1 ನೀಲಿ ಮಾರ್ಗ ಮತ್ತು ನೇರಳೆ ವಿಸ್ತರಿತ ಮಾರ್ಗದ ಸಂಧಿಸುವುದು ಕೆ.ಆರ್. ಪುರದ ಬಳಿ. ಮಹದೇವಪುರ, ವೈಟ್‌ಫೀಲ್ಡ್ ಕಡೆಗೂ ಇಲ್ಲಿಂದಲೇ ಸಾಗಬೇಕು. ಟಿನ್ ಫ್ಯಾಕ್ಟರಿ ಬಳಿ ನೇರಳೆ ವಿಸ್ತರಿತ ಮಾರ್ಗದ ಕಾಮಗಾರಿ ಈಗಾಗಲೇ ನಡೆಯುತ್ತಿದೆ. ಈಗಲೇ ಸಂಚಾರ ದಟ್ಟಣೆಯ ಬಿಸಿಯನ್ನು ಜನ ತಡೆದುಕೊಳ್ಳಲು ಆಗುತ್ತಿಲ್ಲ. ಚೆನ್ನೈಗೂ ಇಲ್ಲಿಂದಲೇ ಹೆಚ್ಚು ಜನ ಓಡಾಡುವುದರಿಂದಲೂ ಹೆಚ್ಚು ದಟ್ಟಣೆ ಇರುತ್ತದೆ. ಮುಂದೆ, ವಿಮಾನ ನಿಲ್ದಾಣ ಮಾರ್ಗದ ಕಾಮಗಾರಿ ಆರಂಭವಾಗಿ, ಮುಗಿಯುವವರೆಗೆ ದಟ್ಟಣೆ ನಿಯಂತ್ರಿಸುವ ಸವಾಲು ನಿಗಮದ ಮುಂದೆ ಇದೆ.

2 ಮಾನ್ಯತಾ ಟೆಕ್ ಪಾರ್ಕ್ ಬಳಿ ಈಗಾಗಲೇ ಮೇಲ್ಸೇತುವೆ ಕಟ್ಟಿದ್ದಾರೆ. ಇಲ್ಲಿಯೂ ವಾಹನ ಸಂಚಾರ ದಟ್ಟಣೆ ಕಡಿಮೆಯೇನೂ ಇರುವುದಿಲ್ಲ. ಮುಂದೆ, ಮೆಟ್ರೊ ಮಾರ್ಗವನ್ನು ನಿರ್ಮಿಸುವುದಕ್ಕೆ ಮುಂದೆ ಏನು ಮಾಡಲಿದೆ ಎಂಬುದು ಯಕ್ಷಪ್ರಶ್ನೆಯಂತೆ ಕಾಡುತ್ತಿದೆ.

ಮೆಟ್ರೊ ಕಾಮಗಾರಿ

3 ಗುಲಾಬಿ ಮಾರ್ಗ ಅಂದರೆ ಗೊಟ್ಟಿಗೆರೆ ಮತ್ತು ನಾಗವಾರ ಹಾಗೂ ನೀಲಿ ಮಾರ್ಗವು ಇಲ್ಲಿನ ನಾಗವಾರದಲ್ಲಿ ಸಂಧಿಸುತ್ತವೆ. ನಾಗವಾರ ಮಾರ್ಗದ ಪ್ರಾರಂಭದ ನಿಲ್ದಾಣ ಇಲ್ಲಿಯೇ ನಿರ್ಮಾಣವಾಗುವುದರಿಂದ ಜನರ ಓಡಾಟವೂ ಹೆಚ್ಚಾಗಲಿದೆ. ವಿಮಾನ ನಿಲ್ದಾಣದ ಕಡೆಗೆ ಮಾತ್ರವಲ್ಲದೆ, ಸಿಲ್ಕ್ ಬೋರ್ಡ್ ಕಡೆಗೂ ಹೆಚ್ಚು ಜನ ಇಲ್ಲಿಂದ ಓಡಾಡುತ್ತಾರೆ. ಮುಂದೆ, 2ಬಿ ಮಾರ್ಗದ ಕಾಮಗಾರಿ ಪ್ರಾರಂಭವಾದ ನಂತರ, 'ಸಂಚಾರ ದಟ್ಟಣೆ ಯಾತನೆ' ಹೆಚ್ಚಲಿದೆ. ಇದನ್ನು ನಿರ್ವಹಿಸಬೇಕಾದ ಸವಾಲು ನಿಗಮದ ಮುಂದಿದೆ.

4 ಯಲಹಂಕ ಹಾಗೂ ಜಕ್ಕೂರು ವಾಯುನೆಲೆಗಳು ಈ ಮಾರ್ಗದಲ್ಲಿ ಇವೆ. ಇಲ್ಲಿ ನೆಲದಡಿಯ ನಿಲ್ದಾಣವನ್ನು ನಿಗಮ ನಿರ್ಮಿಸಬೇಕಾಗಿದೆ. ಅಲ್ಲದೆ, ವಿಮಾನ ನಿಲ್ದಾಣ ಪ್ರಯಾಣಿಕರ ಲಗೇಜ್ ಹೆಚ್ಚು ಇರುತ್ತವೆ. ಮೆಟ್ರೊ ರೈಲುಗಳಲ್ಲಿ ಹೆಚ್ಚು ಲಗೇಜ್‌ಗಳನ್ನು ಇಡುವ ವ್ಯವಸ್ಥೆಯನ್ನೂ ಮಾಡುವ ಅಗತ್ಯವಿರುತ್ತದೆ. ಈ ಸವಾಲನ್ನು ನಿಗಮ ಯಾವ ರೀತಿ ಎದುರಿಸಲಿದೆ ಎಂಬ ಕುತೂಹಲದಲ್ಲಿ ಜನರಿದ್ದಾರೆ.

ಚಿತ್ರಾವಳಿ

ಲೇಖಕಿ ಡಾ.ಬಿ.ಟಿ. ಲಲಿತಾ ನಾಯಕ್ ಅವರ 75ನೇ ಜನ್ಮ ದಿನದ ಪ್ರಯುಕ್ತ ರಾಜ್ಯ ಸಾಹಿತಿ ಮತ್ತು ಕಲಾವಿದರ ವೇದಿಕೆ ನೇತೃತ್ವದಲ್ಲಿ ಅವರ ಅಭಿಮಾನಿಗಳು, ಸ್ನೇಹಿತರು ಮತ್ತು ಹಿತೈಷಿಗಳ ಬಳಗ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕವಿಗೋಷ್ಠಿಯಲ್ಲಿ ಸಾಹಿತಿ ಪ್ರೊ.ಎಸ್‌ಜಿ. ಸಿದ್ಧರಾಮಯ್ಯ ಮಾತನಾಡಿದರು. ರಂಗತಜ್ಞ ಡಾ.ಎ.ಆರ್. ಗೋವಿಂದಸ್ವಾಮಿ, ಮೌಢ್ಯ ನಿರ್ಮೂಲನೆ ವೇದಿಕೆಯ ಹುಲಿಕಲ್ ನಟರಾಜ್, ಬಿ.ಟಿ. ಲಲಿತಾ ನಾಯಕ್, ಲೇಖಕಿಯರಾದ ಕೆ. ಶರೀಫಾ, ಡಾ. ವಸುಂಧರಾ ಭೂಪತಿ ಹಾಗೂ ಚಲನಚಿತ್ರ ನಿರ್ದೇಶಕ ಓಂ ಪ್ರಕಾಶ್ ಇದ್ದರು.

ದಾಸರಹಳ್ಳಿ ಕ್ಷೇತ್ರದ ಶಾಸಕ ಆರ್. ಮಂಜುನಾಥ್ ಅವರು ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿ ನೂತನ ಕೊಳವೆ ಬಾವಿಗಳಿಗೆ ಪೂಜೆ ಸಲ್ಲಿಸುವ ಮೂಲಕ ಸಾರ್ವಜನಿಕ ಉಪಯೋಗಕ್ಕೆ ಅನುವು ಮಾಡಿಕೊಟ್ಟರು. ಪುರಸಭೆ ಮುಖ್ಯಾಧಿಕಾರಿ ಕುಮಾರ್, ವರದರಾಜು, ಗೋವಿಂದರಾಜು, ಚೋಟಿ ಬಾಬು, ಚನ್ನಕೇಶವ, ಫಸಿವುಲ್ಲಾ, ಅಜೀಜ್, ಚಾಂದ್ ಪಾಷಾ ಹಾಗೂ ಬಡಾವಣೆ ನಿವಾಸಿಗಳು ಇದ್ದರು

ರೈತಗೀತ ಮತ್ತು ವಿವಿಎಸ್‌ಪಿ ಸಂಸ್ಥೆಯು ನಗರದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಕೋವಿಡ್ ಸೇವೆಯನ್ನು ಪರಿಗಣಿಸಿ ವೈದ್ಯ ಡಾ.ಎಂ.ಎಸ್. ಗಿರೀಶ್ ಹಾಗೂ ಉದ್ಯಮಿ ಮಾನಸಿ ಪ್ರಧಾನ್ ಅವರಿಗೆ 'ಹ್ಯುಮಾನಿಟಿ ಇಂಡಿಯನ್–2021' ಪ್ರಶಸ್ತಿ ಪ್ರದಾನ ಮಾಡಲಾಯಿತು. ರಾಜಕೀಯ ಮುಖಂಡ ದಾಸೇಗೌಡ, ಉದ್ಯಮಿ ಕಮಲೇಶ್ ಕಲ್ಲೂರು, ವೈದ್ಯ ಡಾ.ಆಂಜನಪ್ಪ, ಆವಾಹನ್ ಪ್ರತಿಷ್ಠಾನದ ಉಪಾಧ್ಯಕ್ಷ ಬ್ರಜಾ ಕಿಶೋರ್ ಪ್ರಧಾನ್ ಹಾಗೂ ನಟಿ ಪಾವನಾ ಗೌಡ ಇದ್ದರು

– ಪ್ರಜಾವಾಣಿ ಚಿತ್ರ

ಕಂಬಳ ಅಕಾಡೆಮಿಗೆ ಅದಾನಿ ಗ್ರೂಪ್‌ನಿಂದ ₹50 ಲಕ್ಷ ಅನುದಾನ

ಮೂಡುಬಿದಿರೆ: 'ಕಂಬಳ ಅಕಾಡೆಮಿ ಅಭಿವೃದ್ಧಿಗೆ ಅದಾನಿ ಗ್ರೂಪ್‌ನಿಂದ ₹50 ಲಕ್ಷ ಅನುದಾನ ನೀಡಲಾಗುವುದು' ಎಂದು ಸಂಸ್ಥೆಯ ಪಡುಬಿದ್ರಿ ಘಟಕದ ಆಡಳಿತ ನಿರ್ದೇಶಕ ಕಿಶೋರ್ ಆಳ್ವ ಹೇಳಿದರು.

ಇಲ್ಲಿನ ಒಂಟಿಕಟ್ಟೆಯಲ್ಲಿ 'ಕಂಬಳ ಸಂರಕ್ಷಣೆ, ನಿರ್ವಹಣೆ ಮತ್ತು ತರಬೇತಿ ಅಕಾಡೆಮಿ' ವತಿಯಿಂದ ಭಾನುವಾರದಿಂದ ಆರಂಭವಾದ ಕಂಬಳ ಓಟಗಾರರ ತರಬೇತಿ ಶಿಬಿರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ಕಂಬಳದ ಸಮಗ್ರ ಅಭಿವೃದ್ಧಿ ಕಡೆ ಅಕಾಡೆಮಿ ಗಮನಹರಿಸಬೇಕು. ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಅಥ್ಲೀಟ್‌ಗಳು ಕರಾವಳಿಯಲ್ಲಿದ್ದು ಅವರ ಸಹಕಾರವನ್ನು ಪಡೆದುಕೊಳ್ಳಬಹುದು' ಎಂದು ಕಿಶೋರ್ ಆಳ್ವ ಸಲಹೆ ನೀಡಿದರು.

'ಒಳ್ಳೆಯ ಕಂಬಳ ಓಟಗಾರರನ್ನು ಅಕಾಡೆಮಿ ತಯಾರು ಮಾಡುತ್ತಿದೆ' ಎಂದು ಮಾಜಿ ಸಚಿವ ಅಭಯಚಂದ್ರ ಜೈನ್ ಹೇಳಿದರು.

ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಜೆ. ಲೋಕೇಶ್ ಬೇಸರ • 'ಆರ್.ನಾಗೇಶ್ ರಂಗವಿಹಂಗಮ' ಪುಸ್ತಕ ಬಿಡುಗಡೆ

'ಸಾಂಸ್ಕೃತಿಕ ವಲಯದಲ್ಲಿ ಸಂಕುಚಿತ ಮನೋಭಾವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಂಸ್ಕೃತಿಕ ವಲಯದಲ್ಲಿ ಸಂಕುಚಿತ ಮನೋಭಾವ ಬೆಳೆಯುತ್ತಿದೆ. ಇದು ಕಲೆಯ ಬೆಳವಣಿಗೆಗೆ ತೊಡಕಾಗಿದೆ' ಎಂದು ಕರ್ನಾಟಕ ನಾಟಕ ಅಕಾಡೆಮಿಯ ನಿಕಟಪೂರ್ವ ಅಧ್ಯಕ್ಷ ಜೆ. ಲೋಕೇಶ್ ಬೇಸರ ವ್ಯಕ್ತಪಡಿಸಿದರು.

ರಂಗಸಂಪದ, ಕಲಾಗಂಗೋತ್ರಿ, ರಂಗಚಂದಿರ ಹಾಗೂ ಭಾಗವತರು ಸಹಯೋಗದಲ್ಲಿ ಚಾರುಮತಿ ಪ್ರಕಾಶನ ನಗರದಲ್ಲಿ ಭಾನುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ 'ಆರ್.ನಾಗೇಶ್ ರಂಗವಿಹಂಗಮ' ಪುಸ್ತಕ ಬಿಡುಗಡೆ ಮಾಡಿ, ಎಚ್.ವಿ. ವೆಂಕಟಸುಬ್ಬಯ್ಯ ಅವರಿಗೆ 'ರಂಗ ಗೌರವ' ಸಲ್ಲಿಸಲಾಯಿತು.

'ರಂಗಭೂಮಿಯವರು ಎಲ್ಲರೂ ಒಂದೇ ಎಂದು ಅಕಾಡೆಮಿ ಹಾಗೂ ಸರ್ಕಾರ ಪರಿಗಣಿಸಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ದೃಷ್ಟಿಕೋನಗಳು ಬದಲಾಗಿವೆ. ಈ ಹಿಂದೆ ಅಕಾಡೆಮಿ ಅಧ್ಯಕ್ಷನಾಗಿದ್ದಾಗ ರಂಗಭೂಮಿಯ ಇತಿಹಾಸದ ದಾಖಲೆಗಳನ್ನು ಡಿಜಿಟಲೀಕರಣಗೊಳಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದ್ದೆ. ಅಂತಿಮ ಹಂತದಲ್ಲಿದ್ದ ಈ ಯೋಜನೆಯನ್ನು ಹಾಲಿ ಕಾರ್ಯಕಾರಿ ಸಮಿತಿಯು ಪೂರ್ಣಗೊಳಿಸುತ್ತದೆಯೋ ಇಲ್ಲವೋ ಎನ್ನುವುದು ತಿಳಿಯದಾಗಿದೆ' ಎಂದರು.

ಚಾರುಮತಿ ಪ್ರಕಾಶನ ನಗರದಲ್ಲಿ ಭಾನುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ 'ಆರ್. ನಾಗೇಶ್ ರಂಗವಿಹಂಗಮ' ಪುಸ್ತಕವನ್ನು ಟಿ.ಎಸ್. ನಾಗಾಭರಣ ಲೋಕಾರ್ಪಣೆ ಮಾಡಿದರು. ರಂಗಕರ್ಮಿಗಳಾದ ಕೆ.ವಿ. ನಾಗರಾಜ ಮೂರ್ತಿ, ಬಿ.ವಿ. ರಾಜಾರಾಮ್, ಶ್ರೀನಿವಾಸ್ ಜಿ. ಕಪ್ಪಣ್ಣ, ಎಚ್.ವಿ. ವೆಂಕಟಸುಬ್ಬಯ್ಯ, ಜೆ. ಲೋಕೇಶ್ ಹಾಗೂ ಶಶಿಧರ್ ಭಾರಿಘಾಟ್ ಇದ್ದರು

– ಪ್ರಜಾವಾಣಿ ಚಿತ್ರ

'ಕನ್ನಡ ರಂಗಭೂಮಿಯಲ್ಲಿ 'ಸುಬ್ಬಣ್ಣ' ಎಂದೇ ಜನಪ್ರಿಯರಾಗಿರುವ ಎಚ್.ವಿ. ವೆಂಕಟಸುಬ್ಬಯ್ಯ ಅವರು ಶ್ರದ್ಧೆ, ಗುರಿ ಮತ್ತು ಅಧ್ಯಯನಶೀಲತೆಯಿಂದ ಈ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿದರು. ಅವರು ಕನ್ನಡ ರಂಗಭೂಮಿಯ ಸಾಕ್ಷಿಪ್ರಜ್ಞೆ' ಎಂದು ಜೆ. ಲೋಕೇಶ್ ಮೆಚ್ಚುಗೆ ವ್ಯಕ್ತಪಡಿಸಿದರು.

ಮರು ಪ್ರದರ್ಶನ ನಡೆಯಲಿ: ಪುಸ್ತಕ ಲೋಕಾರ್ಪಣೆ ಮಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, '70ರ ದಶಕದಲ್ಲಿ ರಂಗಭೂಮಿಯ ಬಗ್ಗೆ ಕನಸುಗಳನ್ನು ಕಾಣುತ್ತಿರುವ ವೇಳೆ ಅದಕ್ಕೆ ಪೂರಕವಾಗಿ ವೇದಿಕೆ ಸಿದ್ಧಮಾಡಿದವರು ಆರ್. ನಾಗೇಶ್. ರಂಗಭೂಮಿ ಸಾಹಿತ್ಯ ಬರೆಯುವ ಯಾವುದೇ ವ್ಯಕ್ತಿ ಅವರನ್ನು ಸೇರಿಸದೇ ಇರಲು ಸಾಧ್ಯವಿಲ್ಲ. ಅವರ ನಾಟಕಗಳ ಮರು ವ್ಯಾಖ್ಯಾನ ಆಗಬೇಕು. ಯಾವುದೇ ಒಂದು ರಂಗ ಪ್ರದರ್ಶನ ಮರು ಪ್ರದರ್ಶನಗೊಳ್ಳುತ್ತಾ ಹೋದರೆ ಮಾತ್ರ ಜೀವಂತ ಆಗಿ ಇರುತ್ತದೆ' ಎಂದು ಹೇಳಿದರು.

ರಂಗಕರ್ಮಿ ಶ್ರೀನಿವಾಸ್ ಜಿ. ಕಪ್ಪಣ್ಣ, 'ನಾಗೇಶ್ ಅವರು ಮಾಡಿಸಿದ 'ತುಘಲಕ್' ನಾಟಕ ಹಲವರಿಗೆ ಹೆಸರು ತಂದುಕೊಟ್ಟಿತ್ತು. ರಂಗಭೂಮಿ ಇತಿಹಾಸದಲ್ಲಿ ಮಹತ್ತರವಾದ ಪ್ರಯೋಗಗಳನ್ನು ಅವರು ಮಾಡಿಸಿದರು. ವ್ಯವಸ್ಥೆಯ ವಿರುದ್ಧ ನಾಟಕಗಳನ್ನು ಮಾಡುತ್ತಾ ಹೋದರು. ರಂಗಭೂಮಿ ಇತಿಹಾಸದಲ್ಲಿ ಅವರ ಹೆಸರು ಚಿರಸ್ಥಾಯಿ' ಎಂದರು.

ರಂಗ ನಟ, ನಿರ್ದೇಶಕ ಬಿ.ವಿ. ರಾಜಾರಾಮ್ ಮಾತನಾಡಿ, 'ನಾಗೇಶ್ ಅವರು ರಂಗಭೂಮಿ ಕಟ್ಟುವ ಕೆಲಸ ಮಾಡಿದರು. ಅವರು ಇದ್ದಲ್ಲಿ ವಿಚಿತ್ರವಾದ ಶಕ್ತಿ ಇರುತ್ತಿತ್ತು. ರಂಗಭೂಮಿಗೆ ಸಂಬಂಧಿಸಿದ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿ, ಉಳಿಸಬೇಕು. ಈ ಪ್ರಕ್ರಿಯೆಯು ರಂಗ ಸಂಶೋಧಕರಿಗೆ ಸಹಕಾರಿಯಾಗಲಿದೆ. ದಾಖಲಾತಿಗಳನ್ನು ಸರ್ಕಾರಿ ಸಂಸ್ಥೆಗಳಿಗೆ ನೀಡಿದಲ್ಲಿ ಅದು ಅಲ್ಲಿ ಸುರಕ್ಷಿತವಾಗಿ ಇರುವ ಬಗ್ಗೆ ವಿಶ್ವಾಸವಿಲ್ಲ' ಎಂದು ಹೇಳಿದರು.

ಪುಸ್ತಕ ಪರಿಚಯ

- ಪುಸ್ತಕದ ಹೆಸರು: 'ಆರ್.ನಾಗೇಶ್ ರಂಗ ವಿಹಂಗಮ'
- ಸಂಪಾದಕ: ಬಿ.ಎಸ್. ವಿದ್ಯಾರಣ್ಯ
- ಪುಟಗಳು: 196
- ಬೆಲೆ: ₹ 300
- ಪ್ರಕಾಶನ: ಚಾರುಮತಿ ಪ್ರಕಾಶನ

'ಸದನದಲ್ಲಿ ಮಕ್ಕಳ ಹಕ್ಕುಗಳ ಚರ್ಚೆಯಾಗಲಿ'

ಬೆಂಗಳೂರು: ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳಿಗಾಗಿ ಶಾಸಕರ ವೇದಿಕೆಯು ರಾಜಕಾರಣಿಗಳನ್ನು ಮಕ್ಕಳ ಹಕ್ಕುಗಳ ತಜ್ಞರನ್ನಾಗಿಮಾಡುವಗುರಿಹೊಂದಿದೆ.

'ಮಕ್ಕಳ ಹಕ್ಕುಗಳ ನಿಗಾ ಕೇಂದ್ರ (ಕೆಸಿಆರ್‌ಒ) ಮತ್ತು ಯುನಿಸೆಫ್ ಸಹಯೋಗ ಹೊಂದಿರುವ ಈ ವೇದಿಕೆಯು ಶಾಸಕರಿಗಾಗಿ ಮಾಹಿತಿ ಹಂಚಿಕೆ ಸಭೆಗಳನ್ನು ಹಮ್ಮಿಕೊಳ್ಳಲಿದ್ದು, ಮಕ್ಕಳ ಪರಿಸ್ಥಿತಿ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಕ್ಷೇತ್ರ ಭೇಟಿಯನ್ನೂ ಆಯೋಜಿಸಲಿದೆ. ಆಯ್ದ ವಿಚಾರಗಳ ಕುರಿತು ಸರ್ಕಾರದ ನಿಲುವು ಅರಿತುಕೊಂಡು ಪರಿಹಾರ ಕ್ರಮಗಳ ಕುರಿತು ಸಲಹೆ ನೀಡಲಿದೆ' ಎಂದು ಪ್ರಕಟಣೆ ತಿಳಿಸಿದೆ.

'ಮಕ್ಕಳ ಹಕ್ಕುಗಳ ಕುರಿತಾದ ನೀತಿಗಳು ಅಥವಾ ಕಾರ್ಯಕ್ರಮಗಳ ಬಗ್ಗೆ ಸದನದಲ್ಲಿ ಚರ್ಚಿಸುವುದು. ಪ್ರತಿವರ್ಷ ಮಕ್ಕಳು ಮುಖ್ಯಮಂತ್ರಿಗಳೊಡನೆ ಸಮಾಲೋಚಿಸಲು ಅನುವಾಗುವಂತೆ 'ಮಕ್ಕಳ ಹಕ್ಕುಗಳ ಸಂಸತ್' ಆಯೋಜಿಸುವ ಗುರಿಯನ್ನೂ ಹೊಂದಿದೆ. ಮಕ್ಕಳ ಮತ್ತು ಮಹಿಳೆಯರ ವಿಚಾರಗಳ ಕುರಿತು ಆಸಕ್ತಿಯಿರುವ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಎಲ್ಲಾ ಸದಸ್ಯರಿಗೆ ಮುಕ್ತ ಪ್ರವೇಶವಿದೆ. ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಮಾಜಿ ಸದಸ್ಯರೂ ಪಾಲ್ಗೊಳ್ಳಬಹುದು' ಎಂದು ಪ್ರಕಟಣೆ ಹೇಳಿದೆ.

ಆಹಾರ ವ್ಯರ್ಥಗೊಳಿಸದಿರಿ: ಸಿಂಧ್ಯಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಹಾರ ಪದಾರ್ಥಗಳು ವ್ಯರ್ಥವಾಗುವುದನ್ನು ಮನೆಯ ಮಟ್ಟದಿಂದಲೇ ತಡೆಯಬೇಕು. 1978ರಲ್ಲಿ ಎಸ್. ನಿಜಲಿಂಗಪ್ಪ ಅವರಿಂದ ಆಹಾರದ ಮಹತ್ವ ತಿಳಿದ ನಾನು, ಊಟಕ್ಕೆ ಉಪ್ಪಿನಕಾಯಿಯನ್ನೂ ಹಾಕಿಸಿಕೊಳ್ಳುತ್ತಿಲ್ಲ' ಎಂದು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕರ್ನಾಟಕದ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ ತಿಳಿಸಿದರು.

ಅವರ 73ನೇ ಜನ್ಮದಿನದ ಪ್ರಯುಕ್ತ ಅಭಿಮಾನಿಗಳು ಭಾನುವಾರ ಆಯೋಜಿಸಿದ್ದ ವೆಬಿನಾರ್‌ನಲ್ಲಿ 'ಭವಿಷ್ಯಕ್ಕಾಗಿ ಆಹಾರದ ಕಾರ್ಯಕ್ರಮ' ಎಂಬ ವಿಷಯದ ಮೇಲೆ ಮಾತನಾಡಿದರು.

'ದೇಶದಲ್ಲಿ ವರ್ಷಕ್ಕೆ ಒಂದು ಲಕ್ಷ ಕೋಟಿ ರೂಪಾಯಿ ಮೌಲ್ಯದ ಆಹಾರ ಪದಾರ್ಥವನ್ನು ವ್ಯರ್ಥ ಮಾಡಲಾಗುತ್ತಿದೆ. ಇದರಲ್ಲಿ ಶೇ 61 ರಷ್ಟು ಆಹಾರ ಪದಾರ್ಥಗಳು ಮನೆಯ ಮಟ್ಟದಲ್ಲಿಯೇ ನಿರುಪಯುಕ್ತವಾಗುತ್ತಿವೆ' ಎಂದು ಬೇಸರ ವ್ಯಕ್ತಪಡಿಸಿದರು.

'ನಿಜಲಿಂಗಪ್ಪ ಅವರ ಜೊತೆಗೆ ಹಿಂದೊಮ್ಮೆ ಊಟ ಮಾಡುತ್ತಿರುವಾಗ ಆಹಾರವನ್ನು ವ್ಯರ್ಥ ಮಾಡಿದೆ. ಅದನ್ನು ಗಮನಿಸಿದ ಅವರು, ಅನ್ನದ ಮಹತ್ವದ ಬಗ್ಗೆ ತಿಳಿಸಿದರು. ಅಂದಿನಿಂದ ನಾನು ಒಂದು ಅಗಳು ಅನ್ನವನ್ನೂ ವ್ಯರ್ಥ ಮಾಡುತ್ತಿಲ್ಲ. ವಿವಿಧ ದೇಶಗಳಲ್ಲಿ ಆಹಾರ ವ್ಯರ್ಥ ತಡೆಗೆ ಏನೆಲ್ಲ ಕ್ರಮಕೈಗೊಂಡಿದ್ದಾರೆ ಎನ್ನುವುದರ ಬಗ್ಗೆಯೂ ಅಧ್ಯಯನವನ್ನು ಮಾಡಿದ್ದು, ಆಹಾರವನ್ನು ವ್ಯರ್ಥ ಮಾಡದಂತೆ ಸ್ಕೌಟ್ಸ್ ಗೈಡ್ಸ್ ಅವರ ಸಹಕಾರದಿಂದ ಜಾಗೃತಿ ಮೂಡಿಸಲಾಗುವುದು' ಎಂದು ಅವರು ಹೇಳಿದರು.

2025ರಲ್ಲಿ ಜಾಂಬೂರಿ: 'ಇಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ನ ಅಂತರರಾಷ್ಟ್ರೀಯ ಜಾಂಬೂರಿ ಮಾಡಬೇಕು ಎಂಬ ಕೂಗು ಇದೆ. ಇದಕ್ಕೆ ಕನಿಷ್ಠ ₹ 100 ಕೋಟಿ ಬೇಕಾಗುತ್ತದೆ. ಕೇಂದ್ರ ಸರ್ಕಾರದ ಪ್ರಮುಖರ ಜೊತೆಗೆ ಈ ಬಗ್ಗೆ ಮಾತನಾಡುತ್ತೇನೆ. 2025ರಲ್ಲಿ ಜಾಂಬೂರಿ ಮಾಡುವ ವಿಶ್ವಾಸವಿದೆ. ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು' ಎಂದು ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಹೃದಯಾಘಾತದಿಂದ ಯೋಧ ಸಾವು

ಚನ್ನಬಸಪ್ಪ

ಡಂಬಳ (ಗದಗ ಜಿಲ್ಲೆ): 2 ತಿಂಗಳ ಕಾಲ ರಜೆಗೆ ಬಂದಿದ್ದ ಡಂಬಳ ಹೋಬಳಿ ಹಳ್ಳಿಗುಡಿ ಗ್ರಾಮದ ಯೋಧ ಚನ್ನಪ್ಪಬಸಪ್ಪ ನಿಂಗಜ್ಜ ಚೆನ್ನಳ್ಳಿ (37) ಭಾನುವಾರ ಹೃದಯಾಘಾತದಿಂದ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು, ತಂದೆ, ತಾಯಿ ಇದ್ದಾರೆ. ಭೂಸೇನೆಯ ಯೋಧರಾಗಿ 242ನೇ ಆರ್ಟಿಲರಿ ರೆಜಿಮೆಂಟಿನ ಟೆಲಿಫೋನ್ ಆಪರೇಟರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ನವೆಂಬರ್‌ನಲ್ಲಿ ಅವರು ನಿವೃತ್ತಿ ಹೊಂದುವವರಿದ್ದರು. ಆದರೆ ಪದೋನ್ನತಿ ನೀಡಿದ್ದರಿಂದ ಮತ್ತೆ ಐದು ವರ್ಷ ಸೇವೆ ಸಲ್ಲಿಸಲು ಅವಕಾಶ ನೀಡಲಾಗಿತ್ತು.

'ವಿಶೇಷ ನಿಯಮ' ರೂಪಿಸಿದ ರಾಜ್ಯ ಸರ್ಕಾರ; 18 ಅಧಿಕಾರಿಗಳಿಗೆ ಸಂಕಷ್ಟ

ಹುದ್ದೆ ಕೊಟ್ಟರೂ 'ಸೌಲಭ್ಯ' ಇಲ್ಲ!

• ರಾಜೇಶ್ ರೈ ಚಟ್ಲ

ಮುಖ್ಯಾಂಶಗಳು

- 15ರಿಂದ 26 ವರ್ಷದ ಸೇವೆಗೆ ಸಿಗದ ಮನ್ನಣೆ
- ಎರಡು ಬಾರಿ 'ಪ್ರೊಬೇಷನರಿ ಅವಧಿ'!
- ಸರ್ಕಾರದಿಂದ ತಾರತಮ್ಯ ಆರೋಪ

ಪ್ರಜಾವಾಣಿ ವಿಶೇಷ

ಬೆಂಗಳೂರು: 1998ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿಯ ಮೂಲ ಆಯ್ಕೆ ಪಟ್ಟಿಯಿಂದ ವಂಚಿತರಾಗಿದ್ದ 18 ಅಭ್ಯರ್ಥಿಗಳಿಗೆ 13 ವರ್ಷಗಳ ಬಳಿಕ ರಾಜ್ಯ ಸರ್ಕಾರ ಹುದ್ದೆ ನೀಡಿದ್ದರೂ 'ಸೇವಾ ಸೌಲಭ್ಯ' ಕೊಟ್ಟಿಲ್ಲ!

ಹೈಕೋರ್ಟ್‌ನಲ್ಲಿದ್ದ ಈ ಸಾಲಿನ ನೇಮಕಾತಿ ಪ್ರಕರಣದಲ್ಲಿ ನ್ಯಾಯಾಂಗ ನಿಂದನೆಯ ಅಡಕತ್ತರಿಯಿಂದ ತಪ್ಪಿಸಿಕೊಳ್ಳಲು ಸರ್ಕಾರ ಹುದ್ದೆ ನೀಡಿತ್ತು. ಹೀಗೆ ನೇಮಕಗೊಂಡವರ ಪೈಕಿ, ವಿವಿಧ ಇಲಾಖೆಗಳಲ್ಲಿ ಎ, ಬಿ, ಸಿ ವೃಂದಗಳಲ್ಲಿ ಈಗಾಗಲೇ 15 ರಿಂದ 26 ವರ್ಷ ಕರ್ತವ್ಯ ಸಲ್ಲಿಸಿದ 10 ಅಧಿಕಾರಿಗಳೂ ಇದ್ದಾರೆ.

'ಪತ್ರಾಂಕಿತ' ಹುದ್ದೆ ಎಂಬ ಕಾರಣಕ್ಕೆ ಹಳೆ ಹುದ್ದೆ ತ್ಯಜಿಸಿ 2019ರ ಏಪ್ರಿಲ್‌ನಲ್ಲಿ ಹೊಸ ಹುದ್ದೆಗೆ ಸೇರಿಕೊಂಡ ಈ ಅಧಿಕಾರಿಗಳನ್ನೂ 'ಹೊಸ ಅಭ್ಯರ್ಥಿಗಳು' ಎಂದು ಸರ್ಕಾರ ಪರಿಗಣಿಸಿದೆ.

ಹೀಗಾಗಿ, ಈ ಹಿಂದಿನ ಹುದ್ದೆಯಲ್ಲಿಯೇ ಅವರೆಲ್ಲರೂ ಪ್ರೊಬೇಷನರಿ ಅವಧಿ (2 ವರ್ಷದ ಪರೀಕ್ಷಾರ್ಥ ಸೇವಾ ಅವಧಿ) ಮುಗಿಸಿದ್ದರೂ, ಮತ್ತೊಮ್ಮೆ ಪ್ರೊಬೇಷನರಿ ಅವಧಿ ಪೂರೈಸಿದ್ದಾರೆ. ಅಷ್ಟೇ ಅಲ್ಲ, ಈ ಅಧಿಕಾರಿಗಳು ಈಗಾಗಲೇ ಸಲ್ಲಿಸಿದ್ದ ಸೇವೆಯನ್ನು ಸರ್ಕಾರ ಲೆಕ್ಕಕ್ಕೇ ತೆಗೆದುಕೊಂಡಿಲ್ಲ. ಪರಿಣಾಮ, ಸೇವಾ ಜ್ಯೇಷ್ಠತೆ, ಬಡ್ತಿ ಭಾಗ್ಯ, ವೇತನ ಸೌಲಭ್ಯದಿಂದ ಅವರೆಲ್ಲರೂ ವಂಚಿತರಾಗಿದ್ದಾರೆ.

ಆದರೆ, ಕೆಪಿಎಸ್‌ಸಿ ಪ್ರಕಟಿಸಿದ್ದ ಮೂಲ ಪಟ್ಟಿಯಲ್ಲಿ ಆಯ್ಕೆಯಾಗಿ, ಅಂತಿಮ ಪರಿಷ್ಕೃತ ಪಟ್ಟಿಯಲ್ಲಿರುವಂತೆ ಹಳೆ ಇಲಾಖೆಯಿಂದ ಹೊಸ ಇಲಾಖೆಗೆ ಹುದ್ದೆ ಬದಲಾಗಿ ವರದಿ ಮಾಡಿಕೊಂಡ ಅಧಿಕಾರಿಗಳಿಗೆ ಸರ್ಕಾರ 'ವಿಶೇಷ ನಿಯಮ'ಗಳನ್ನು ರೂಪಿಸಿ ಸೌಲಭ್ಯಗಳನ್ನು ಕಲ್ಪಿಸಿದೆ. ಸ್ಥಾನಪಲ್ಲಟಗೊಂಡ ಈ ಅಧಿಕಾರಿಗಳಿಗೆ ಸಂಬಂಧಿಸಿದಂತೆ, ಇದೇ ಮಾರ್ಚ್ 23ರಂದು ಅಧಿಸೂಚನೆ ಹೊರಡಿಸಿದ್ದ ಸರ್ಕಾರ, ಪರೀಕ್ಷಾರ್ಥ ಸೇವಾ ಅವಧಿಯಿಂದ ವಿನಾಯಿತಿ ನೀಡಿತ್ತು. ಅಲ್ಲದೆ, ಸೇವಾ ಜ್ಯೇಷ್ಠತೆ, ವೇತನ ನಿಗದಿಪಡಿಸಲು ಕೂಡಾ ಆಡಳಿತ ಇಲಾಖೆಗಳಿಗೆ ನಿರ್ದೇಶನ ನೀಡಿದೆ.

ಆ ಮೂಲಕ, ಕೆಪಿಎಸ್‌ಸಿಯ ಒಂದೇ ಪಟ್ಟಿಯಲ್ಲಿ (ಅಂತಿಮ ಪರಿಷ್ಕೃತ) ವಿವಿಧ ಹುದ್ದೆಗಳಿಗೆ ನೇಮಕಗೊಂಡಿರುವ ಅಭ್ಯರ್ಥಿಗಳಿಗೆ ಸೇವಾ ಸೌಲಭ್ಯಗಳನ್ನು ನೀಡುವ ವಿಚಾರದಲ್ಲಿ ತಾರತಮ್ಯ ಮಾಡಿದೆ ಎಂಬ ಆರೋಪ ಅಧಿಕಾರಿಗಳ ವಲಯದಲ್ಲಿ ವ್ಯಕ್ತವಾಗಿದೆ.

'1998ರ ಸಾಲಿನ ಕೆಎಎಸ್ ಅಧಿಕಾರಿಗಳ ಆಯ್ಕೆ ಪಟ್ಟಿಯನ್ನು 2006ರಲ್ಲಿ ಕೆಪಿಎಸ್‌ಸಿ ಮೊದಲು ಪ್ರಕಟಿಸಿತ್ತು. ಬಳಿಕ ಮೂರು ಬಾರಿ ಪರಿಷ್ಕರಿಸಿದೆ. ಪ್ರತಿ ಬಾರಿ ಪರಿಷ್ಕರಿಸಿದಾಗಲೂ ಅಧಿಕಾರಿಗಳ ಹುದ್ದೆಗಳಲ್ಲಿ ಸ್ಥಾನಪಲ್ಲಟ ಆಗಿದೆ. ಕೆಪಿಎಸ್‌ಸಿ ತಪ್ಪಿನಿಂದಾಗಿ ಮೂಲಪಟ್ಟಿಯಿಂದ ನಾವು ವಂಚಿತರಾಗಿದ್ದೆವು. ಸುದೀರ್ಘ ಕಾನೂನು ಹೋರಾಟದ ಬಳಿಕ ಹುದ್ದೆ ಗಿಟ್ಟಿಸಿಕೊಂಡಿದ್ದೆವು. ಜ. 30ರಂದು ಕೆಪಿಎಸ್‌ಸಿ ಪ್ರಕಟಿಸಿದ್ದ ಅಂತಿಮ ಪರಿಷ್ಕೃತ ಆಯ್ಕೆ ಪಟ್ಟಿಯಂತೆ ನೇಮಕಾತಿ ಆದೇಶ ಪಡೆದ, ಸರ್ಕಾರಿ ಸೇವೆಯಲ್ಲಿದ್ದ 10 ಅಧಿಕಾರಿಗಳನ್ನೂ ಸೇರಿಸಿ ಎಲ್ಲರನ್ನೂ ಹೊಸಬರಂತೆ ನೇಮಿಸಿಕೊಳ್ಳಲಾಗಿದೆ. ಆದರೆ, ಪಿಂಚಣಿ, ಸೇವಾ ಜ್ಯೇಷ್ಠತೆ, ವೇತನ ನಿಗದಿಗೆ ಸಂಬಂಧಿಸಿದಂತೆ ಯಾವುದೇ ನಿಯಮವನ್ನು ಸರ್ಕಾರ ರೂಪಿಸಿಲ್ಲ' ಎಂದು ಅಧಿಕಾರಿಗಳು ಬೇಸರ ತೋಡಿಕೊಂಡಿದ್ದಾರೆ.

ಮುಗಿಯದ ನೇಮಕಾತಿ ಗೊಂದಲ

1998ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗೆ ಆಯ್ಕೆಯಾದ ಕೆಲವರು ನಿವೃತ್ತರಾದರೂ, ನೇಮಕಾತಿ ಗೊಂದಲ ಮಾತ್ರ ಮುಗಿದಿಲ್ಲ. ಪರಿಷ್ಕೃತ ಪಟ್ಟಿಯಲ್ಲಿ ಹುದ್ದೆ ಬದಲಾದ ಹಲವರು ಕೆಎಟಿಯಿಂದ ತಡೆಯಾಜ್ಞೆ ಪಡೆದು ಹಳೆ ಹುದ್ದೆಯಲ್ಲೇ ಮುಂದುವರಿದಿದ್ದಾರೆ. ಹಳೆ ಹುದ್ದೆ ತ್ಯಜಿಸಿ ಹೊಸ ಹುದ್ದೆಗೆ ಬಂದವರು, ಹಳೆ ಹುದ್ದೆಯ ಸೇವಾ ಅವಧಿಯನ್ನು ಸರ್ಕಾರ ಪರಿಗಣಿಸದಿರುವ ಬಗ್ಗೆ ನಿರಾಶೆ ಹೊಂದಿದ್ದಾರೆ.

ಸೇವಾ ಜ್ಯೇಷ್ಠತೆ, ವೇತನ ಸೌಲಭ್ಯ ನೀಡುವಂತೆ ಮುಖ್ಯ ಕಾರ್ಯದರ್ಶಿ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನ ಆಗಿಲ್ಲ. ಹೀಗಾಗಿ, ಹಳೆ ಹುದ್ದೆಗೇ ಮರಳುವುದೇ, ಹೊಸ ಹುದ್ದೆಯಲ್ಲೇ ಇರಬೇಕೇ ಎಂಬ ಗೊಂದಲದಲ್ಲಿದ್ದಾರೆ ಹಲವು ಅಧಿಕಾರಿಗಳು.

ಸುದ್ದಿ 2 ನಿಮಿಷ

ಹಿಂದೂ ಮಹಾಸಭಾದ ಧರ್ಮೇಂದ್ರ ಬಂಧನ

ಮಂಗಳೂರು: 'ಹಿಂದೂ ವಿರೋಧಿ ವಿಚಾರ ಬಂದಾಗ ನಾವು ಗಾಂಧೀಜಿಯನ್ನೇ ಬಿಟ್ಟಿಲ್ಲ, ನೀವು ಯಾವ ಲೆಕ್ಕ?' ಎಂದು ಮುಖ್ಯಮಂತ್ರಿ ವಿರುದ್ಧ ಶನಿವಾರ ವಿವಾದಾತ್ಮಕ ಹೇಳಿಕೆ ನೀಡಿದ್ದ ಅಖಿಲ ಭಾರತ ಹಿಂದೂ ಮಹಾಸಭಾದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಧರ್ಮೇಂದ್ರ ಅವರನ್ನು ಮಂಗಳೂರು ನಗರ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜೇಶ್, ಪ್ರೇಮಾ ಹಾಗೂ ಸಂದೀಪ್ ಎಂಬುವರನ್ನು ವಶಕ್ಕೆ ಪಡೆಯಲಾಗಿದ್ದು, ಇನ್ನಷ್ಟು ಆರೋಪಿಗಳಿಗಾಗಿ ಹುಡುಕಾಟ ನಡೆದಿದೆ ಎಂದು ಬರ್ಕೆ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮೈಸೂರಿನಲ್ಲಿ ದೇಗುಲ ತೆರವು ವಿಷಯಕ್ಕೆ ಸಂಬಂಧಿಸಿ ಶನಿವಾರ ಮಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ್ದ ಧರ್ಮೇಂದ್ರ, 'ಹಿಂದೂಗಳ ಮೇಲೆ ನಡೆದ ದಾಳಿಯನ್ನು ಖಂಡಿಸಿ, ಗಾಂಧಿ ಹತ್ಯೆ ಮಾಡಲಿಕ್ಕಾಗುತ್ತದೆ ಎಂದಾದರೆ, ನಿಮ್ಮ ವಿಚಾರದಲ್ಲಿ ನಾವು ಆಲೋಚನೆ ಮಾಡಲು ಸಾಧ್ಯವಿಲ್ಲ ಎನ್ನುತ್ತೀರಾ' ಎಂದು ಪ್ರಶ್ನಿಸಿದ್ದರು.

ಆದರೆ, ಆ ಬಳಿಕ ಧರ್ಮೇಂದ್ರ ವಿಡಿಯೊ ಮೂಲಕ 'ಗಾಂಧಿ ಹತ್ಯೆ' ಎಂಬ ಪದ ಬಳಕೆ ಮಾಡಿದ್ದಕ್ಕೆ ಕ್ಷಮೆಯಾಚಿಸಿದ್ದರು.

ಧರ್ಮೇಂದ್ರ ವಿರುದ್ಧ ಮಂಗಳೂರಿನ ಬರ್ಕೆ ಪೊಲೀಸರಿಗೆ ದೂರು ನೀಡಿದ್ದ ಬೆಂಗಳೂರಿನ ಲೋಹಿತ್ ಕುಮಾರ್ ಸುವರ್ಣ ಎಂಬುವರು, 'ಮಹಾಸಭಾದ ಹೆಸರನ್ನು ದುರ್ಬಳಕೆ ಪಡಿಸಿಕೊಳ್ಳಲಾಗಿದೆ' ಎಂದೂ ಆರೋಪಿಸಿದ್ದರು. ಧರ್ಮೇಂದ್ರ ಸೇರಿದಂತೆ ಆರು ಮಂದಿಯ ವಿರುದ್ಧ ದೂರು ದಾಖಲಾಗಿದ್ದು, ಮೂವರನ್ನು ವಶಕ್ಕೆ ಪಡೆದ ಪೊಲೀಸರು, ಒಬ್ಬನನ್ನು ಬಂಧಿಸಿದ್ದಾರೆ.

ಸಮರ್ಥನೆ: 'ಧರ್ಮೇಂದ್ರ ನೀಡಿದ ಹೇಳಿಕೆ ಸರಿಯಾಗಿದೆ' ಎಂದು ಸಮರ್ಥಿಸಿಕೊಂಡಿರುವ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ರಾಜೇಶ್ ಪವಿತ್ರನ್, 'ಮಹಾಸಭಾದಿಂದ ಉಚ್ಚಾಟಿತ ವ್ಯಕ್ತಿಯ ಪ್ರಚೋದನೆಯಿಂದ ಬಿಜೆಪಿ ಈ ಷಡ್ಯಂತ್ರ ಮಾಡುತ್ತಿದೆ. ಪತ್ರಿಕಾಗೋಷ್ಠಿಯಲ್ಲಿ ಇಲ್ಲದವರ ವಿರುದ್ಧವೂ ಎಫ್‌ಐಆರ್ ಮಾಡಲಾಗುತ್ತಿದೆ' ಎಂದು ದೂರಿದ್ದಾರೆ.

'ಪೂರ್ಣಪ್ರಮಾಣದಲ್ಲಿ ಶಾಲೆ: ಅಧಿವೇಶನದ ಬಳಿಕ ನಿರ್ಧಾರ'

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ಅಧಿವೇಶನ ಮುಗಿದ ಬಳಿಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಕೋವಿಡ್ ತಾಂತ್ರಿಕ ತಜ್ಞರ ಜತೆ ಸಭೆ ನಡೆಸಿ 1 ರಿಂದ 5ನೇ ತರಗತಿ ಶಾಲೆ ಪೂರ್ಣ ಪ್ರಮಾಣದಲ್ಲಿ ಆರಂಭಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ ಸಚಿವ ಬಿ.ಸಿ.ನಾಗೇಶ ತಿಳಿಸಿದರು.

ಭಾನುವಾರ ತಾಲ್ಲೂಕಿನ ಸುಕ್ಷೇತ್ರ ದೇವರಗುಡ್ಡ ಮಾಲತೇಶ ದೇವರ ದರ್ಶನದ ಬಳಿಕ ಸರ್ಕಾರಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕಗಳ ಕಿಟ್ ವಿತರಿಸಿ ಅವರು ಮಾತನಾಡಿದರು.

'ಶಾಲೆ ಆರಂಭಿಸಲು ಶಿಕ್ಷಣ ಇಲಾಖೆ ಹಾಗೂ ಶಿಕ್ಷಕರು ಎಲ್ಲ ತಯಾರಿ ಮಾಡಿಕೊಂಡಿದ್ದಾರೆ. ಪಾಲಕರು ಮಕ್ಕಳನ್ನು ಶಾಲೆಗೆ ಕಳುಹಿಸಲು ಉತ್ಸುಕರಾಗಿದ್ದಾರೆ' ಎಂದರು.

2019ನೇ ಸಾಲಿನ ಚಿತ್ರಗಳಿಗೆ ಪುರಸ್ಕಾರ

ರಕ್ಷಿತ್, ರಚಿತಾ, ರಶ್ಮಿಕಾ ಸಹಿತ 14 ಮಂದಿಗೆ ಪ್ರತಿಷ್ಠಿತ 'ಸೈಮಾ' ಪ್ರಶಸ್ತಿ

ಬೆಂಗಳೂರು: ಪ್ರತಿಷ್ಠಿತ ದಕ್ಷಿಣ ಭಾರತ ಅಂತರರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ (ಸೈಮಾ ಪ್ರಶಸ್ತಿ) ಪ್ರದಾನ ಶನಿವಾರ ಹೈದರಾಬಾದ್‌ನಲ್ಲಿ ನಡೆದಿದ್ದು, ಕನ್ನಡದ 14 ಪ್ರತಿಭೆಗಳು ವಿವಿಧ ವಿಭಾಗಗಳಲ್ಲಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. 2019ನೇ ಸಾಲಿನಲ್ಲಿ ಬಿಡುಗಡೆಯಾದ ಚಿತ್ರಗಳಿಗೆ ಪ್ರಶಸ್ತಿ ನೀಡಲಾಗಿದೆ. 2020ರಲ್ಲಿ ಕೋವಿಡ್ ಕಾರಣದಿಂದ ಸಮಾರಂಭ ನಡೆದಿರಲಿಲ್ಲ.

ರಶ್ಮಿಕಾ ಮಂದಣ್ಣ, ಮಹೇಶ್ ಬಾಬು, ರಕ್ಷಿತ್ ಶೆಟ್ಟಿ, ನಾನಿ, ರಚಿತಾ ರಾಮ್, ಶ್ರುತಿ ಹಾಸನ್, ಶಾನ್ವಿ ಶ್ರೀವತ್ಸ ಮುಂತಾದ ತಾರೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಮಾರಂಭ ಕಳೆಗಟ್ಟಿಸಿದ್ದರು. ಮಲಯಾಳಂ, ತಮಿಳು ಚಿತ್ರರಂಗದ ಅನೇಕರು ಇದೇ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ದರ್ಶನ್

ವಿ. ಹರಿಕೃಷ್ಣ


ಸಾಯಿ ಕುಮಾರ್

ರಕ್ಷಿತ್ ಶೆಟ್ಟಿ

ಅಭಿಷೇಕ್ ಅಂಬರೀಷ್

ರಶ್ಮಿಕಾ ಮಂದಣ್ಣ

ರಚಿತಾ ರಾಮ್

ಸಾಧು ಕೋಕಿಲ

ಪ್ರಶಸ್ತಿ ಪುರಸ್ಕೃತರ ವಿವರ

ಭಾಷೆ	ಕಲಾವಿದ	ಚಿತ್ರ	ವಿಭಾಗ
ಕನ್ನಡ	ರಕ್ಷಿತ್ ಶೆಟ್ಟಿ	ಅವನೇ ಶ್ರೀಮನ್ನಾರಾಯಣ	ಅತ್ಯುತ್ತಮ ನಟ
	ರಚಿತಾ ರಾಮ್	ಆಯುಷ್ಮಾನ್ ಭವ	ಅತ್ಯುತ್ತಮ ನಟಿ
	ರಶ್ಮಿಕಾ ಮಂದಣ್ಣ	ಯಜಮಾನ	ಅತ್ಯುತ್ತಮ ನಟಿ ವಿಮರ್ಶಕರ ಪ್ರಶಸ್ತಿ
	ಅಭಿಷೇಕ್ ಅಂಬರೀಷ್	ಅಮರ್	ಅತ್ಯುತ್ತಮ ನವ ನಟ
	ಕಾರುಣ್ಯಾ ರಾಮ್	ಮನೆ ಮಾರಾಟಕ್ಕಿದೆ	ಅತ್ಯುತ್ತಮ ಪೋಷಕ ನಟಿ
	ಮಯೂರ ರಾಘವೇಂದ್ರ	ಕನ್ನಡ್ ಗೊತ್ತಿಲ್ಲ	ಅತ್ಯುತ್ತಮ ಚೊಚ್ಚಲ ನಿರ್ದೇಶನ
	ಸಾಧು ಕೋಕಿಲ	ಯಜಮಾನ	ಅತ್ಯುತ್ತಮ ಹಾಸ್ಯ ನಟ
	ವಿ. ಹರಿಕೃಷ್ಣ, ಪೋನ್ ಕುಮಾರನ್	ಯಜಮಾನ	ಅತ್ಯುತ್ತಮ ನಿರ್ದೇಶನ
	ವಿ. ಹರಿಕೃಷ್ಣ	ಯಜಮಾನ	ಅತ್ಯುತ್ತಮ ಸಂಗೀತ ನಿರ್ದೇಶನ
	ಸಾಯಿ ಕುಮಾರ್	ಭರಾಟೆ	ಅತ್ಯುತ್ತಮ ಖಳನಟ
	ಇಮ್ರಾನ್ ಸರ್ದಾರಿಯಾ	ಅವನೇ ಶ್ರೀಮನ್ನಾರಾಯಣ	ಅತ್ಯುತ್ತಮ ನೃತ್ಯ ನಿರ್ದೇಶನ
	ಅನನ್ಯಾ ಭಟ್	ಗೀತಾ– ಹಾಡು: ಕೇಳದೇ ಕೇಳದೇ	ಅತ್ಯುತ್ತಮ ಹಿನ್ನೆಲೆ ಗಾಯಕಿ
	ಪವನ್ ಒಡೆಯರ್	ನಟಸಾರ್ವಭೌಮ	ಅತ್ಯುತ್ತಮ ಗೀತ ಸಾಹಿತ್ಯ
	ದರ್ಶನ್	ಯಜಮಾನ	ಅತ್ಯುತ್ತಮ ನಟ

ಕಾರಂತರ ಪುತ್ಥಳಿ ಅನಾವರಣ

ಮೈಸೂರಿನ ರಂಗಾಯಣ ಆವರಣದಲ್ಲಿ ಭಾನುವಾರ ಬಿ.ವಿ.ಕಾರಂತರ ಪುತ್ಥಳಿ ಅನಾವರಣಗೊಳಿಸಲಾಯಿತು. ರಾಷ್ಟ್ರೀಯ ನಾಟಕ ಶಾಲೆ ನಿರ್ದೇಶಕಿ ವೀಣಾ ಶರ್ಮಾ ಭೂಸನೂರುಮಠ, ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ, ಸಾಹಿತಿ ಹನೂರು ಕೃಷ್ಣಮೂರ್ತಿ, ಬಿ.ವಿ.ಕಾರಂತ ರಂಗ ಪ್ರತಿಷ್ಠಾನದ ವ್ಯವಸ್ಥಾಪಕ ಸದಸ್ಯ ಜಯರಾಂ ಪಾಟೀಲ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ವೀರಣ್ಣ ಮ. ಅರ್ಕಸಾಲಿ, ರಂಗಾಯಣ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಇದ್ದಾರೆ

ಪ್ರಜಾವಾಣಿ ಚಿತ್ರ

'ಸರ್ಕಾರದ ಅನುದಾನ ಇಲ್ಲದೇ ರಂಗಚಾವಡಿ ನಿರ್ಮಾಣ'

ಮೈಸೂರು: 'ಸರ್ಕಾರದ ಅನುದಾನ ಬಳಸದೆ ದಾನಿಗಳ ನೆರವಿನಿಂದ ₹ 9 ಲಕ್ಷ ವೆಚ್ಚದಲ್ಲಿ ರಂಗಚಾವಡಿ ನಿರ್ಮಿಸಲಾಗಿದೆ' ಎಂದು ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಹೇಳಿದರು.

ಇಲ್ಲಿನ ರಂಗಾಯಣ ಆವರಣದಲ್ಲಿ ಭಾನುವಾರ ನಡೆದ ಬಿ.ವಿ.ಕಾರಂತ ರಂಗನಮನ ಕಾರ್ಯಕ್ರಮದಲ್ಲಿ ಮಾತನಾಡಿ, 'ರಾಜ್ಯದಾದ್ಯಂತ ಎಷ್ಟೋ ರಂಗಮಂದಿರಗಳು ಸರ್ಕಾರದ ಅನುದಾನ ಕೊರತೆಯಿಂದ ಪೂರ್ಣಗೊಳ್ಳದೆ ಉಳಿದಿವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪತ್ರ ಬರೆದು ಕಾರಂತರ ಪುತ್ಥಳಿ ಸ್ಥಾಪಿಸುವಂತೆ ಕೇಳಿಕೊಂಡಿದ್ದರೆ ಶತಮಾನ ಕಳೆದರೂ ಆಗುತ್ತಿರಲಿಲ್ಲ. ಸರ್ಕಾರ ಪುತ್ಥಳಿ ಮಾಡಲು ಅವಕಾಶ ಮಾಡಿಕೊಡುತ್ತದೆಯೇ' ಎಂದು ಪ್ರಶ್ನಿಸಿದರು.

ಲಿಂಗಾಧಾರಿತ ಬಜೆಟ್ ಘೋಷಣೆಗೆ ಸೀಮಿತ

ಮಹಾಲೇಖಪಾಲರ (ಸಿಎಜಿ) ಲೆಕ್ಕಪರಿಶೋಧನಾ ವರದಿಯಲ್ಲಿ ಬಹಿರಂಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗ ತಾರತಮ್ಯ ನಿವಾರಣೆಗಾಗಿ ಲಿಂಗಾಧಾರಿತ ಬಜೆಟ್ ಪರಿಕಲ್ಪನೆಯ ಅಡಿಯಲ್ಲಿ ಕೆಲವು ವರ್ಷಗಳಿಂದ ಈಚೆಗೆ ಮಹಿಳಾ ಉದ್ದೇಶಿತ ಕಾರ್ಯಕ್ರಮಗಳಿಗೆ ಹೆಚ್ಚಿನ ಅನುದಾನ ಘೋಷಿಸಿದ್ದರೂ, ವಾಸ್ತವಿಕ ವೆಚ್ಚದಲ್ಲಿ ಕುಸಿತವಾಗಿದೆ. ಲಿಂಗಾಧಾರಿತ ಬಜೆಟ್ ಘೋಷಣೆಗೆ ಸೀಮಿತವಾಗಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ.

'ಲಿಂಗಾಧಾರಿತ ಬಜೆಟ್ ಎಂಬುದು ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅನುದಾನ ಮೀಸಲಿಡುವುದಕ್ಕೆ ಸೀಮಿತವಾಗಿದೆ. ಅವುಗಳನ್ನು ಸರಿಯಾಗಿ ಅನುಷ್ಠಾನಕ್ಕೆ ತರುವ ಉದ್ದೇಶದಿಂದ ಮೌಲ್ಯಮಾಪನ ಮತ್ತು ಸಮಗ್ರ ಮಾಹಿತಿ ಸಂಗ್ರಹಿಸುವ ಅಗತ್ಯವಿದೆ' ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಅನುದಾನದ ಹಂಚಿಕೆ 2016-17 ರಿಂದಲೂ ಜಾಸ್ತಿಯಾಗಿತ್ತು. ಆದರೆ, 2019-20 ರಲ್ಲಿ ತುಸು ಇಳಿಕೆ ಕಂಡುಬಂದಿದೆ. ವಾಸ್ತವಿಕ ವೆಚ್ಚದಲ್ಲಿ 2015-16 ಹೊರತುಪಡಿಸಿದರೆ ಎಲ್ಲ ವರ್ಷಗಳಲ್ಲೂ ಕಡಿಮೆಯೇ ಇತ್ತು ಎಂಬುದು ಲೆಕ್ಕಪರಿಶೋಧನೆಯಲ್ಲಿ ಪತ್ತೆಯಾಗಿದೆ.

ಅಪ್ರಾಪ್ತ ಬಾಲಕಿಯರ ಸಬಲೀಕರಣಕ್ಕಾಗಿ ಜಾರಿಯಲ್ಲಿರುವ 'ಸಬಲ' ಯೋಜನೆಗೆ 2018-19ರಲ್ಲಿ ₹ 4.23 ಕೋಟಿ ಹಂಚಿಕೆ ಮಾಡಲಾಗಿತ್ತು. 2019-20 ರಲ್ಲಿ ಈ ಯೋಜನೆಯ ಅನುದಾನವನ್ನು ₹ 9 ಕೋಟಿಗೆ ಹೆಚ್ಚಿಸಿದ್ದರೂ, ವಾಸ್ತವವಾಗಿ ಮಾಡಿರುವ ವೆಚ್ಚ ₹ 76 ಲಕ್ಷ (ಶೇಕಡ 8.44) ಮಾತ್ರ. ಹಾಲುಣಿಸುವ ತಾಯಂದಿರು ಮತ್ತು ಗರ್ಭಿಣಿಯರ ಆರೋಗ್ಯ ಸುಧಾರಣೆಗಾಗಿ ಜಾರಿಯಲ್ಲಿರುವ 'ಮಾತೃಶ್ರೀ' ಯೋಜನೆಗೆ 2018-19 ರಲ್ಲಿ ₹ 350 ಕೋಟಿ ಒದಗಿಸಲಾಗಿತ್ತು. 2019-20 ರಲ್ಲಿ ಅದನ್ನು ₹ 450 ಕೋಟಿಗೆ ಹೆಚ್ಚಿಸಿದ್ದರೂ, ₹ 78.24 ಕೋಟಿ (ಶೇ 16.64) ಮಾತ್ರ ವೆಚ್ಚ ಮಾಡಲಾಗಿತ್ತು ಎಂದು ಸಿಎಜಿ ತಿಳಿಸಿದೆ.

2019-20ರ ಬಜೆಟ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಹೊಸ ಪಿಂಚಣಿ ಯೋಜನೆ, ಸುರಕ್ಷಾ ಯೋಜನೆ, ಉಜ್ವಲಾ ಯೋಜನೆ, ಕರ್ನಾಟಕ ರಾಜ್ಯ ಹಣಕಾಸು ನಿಗಮದ ಮೂಲಕ ಮಹಿಳೆಯರಿಗೆ ಬಡ್ಡಿ ಸಹಾಯಧನ ವಿತರಣೆ, ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ಮತ್ತು ಪ್ರಧಾನಮಂತ್ರಿ ಮಾತೃವಂದನಾ ಕಾರ್ಯಕ್ರಮದ ಅನುದಾನದ ಹಂಚಿಕೆಯಲ್ಲಿ ಗಣನೀಯ ಕುಸಿತವಾಗಿದೆ ಎಂಬ ಉಲ್ಲೇಖ ವರದಿಯಲ್ಲಿದೆ.

ಯೋಜನೆಗಳ ಕೊರತೆ: ಕೃಷಿ, ಜವಳಿ ಮತ್ತು ಆಹಾರ ಕೈಗಾರಿಕೆಗಳು, ಪೊಲೀಸ್, ಸಾರಿಗೆ ಮುಂತಾದ ಕ್ಷೇತ್ರಗಳಲ್ಲಿ ಮಹಿಳೆಯರು ದುಡಿಯುತ್ತಿದ್ದರೂ ಅವರಿಗಾಗಿ ಯಾವುದೇ ನಿರ್ದಿಷ್ಟ ಯೋಜನೆಗಳನ್ನು ರೂಪಿಸಿಲ್ಲ ಎಂದು ಸಿಎಜಿ ಆಕ್ಷೇಪಿಸಿದೆ.

'ಕೇಂದ್ರ ಸರ್ಕಾರವು 2003ರಲ್ಲಿ ರಚಿಸಿದ್ದ ತಜ್ಞರ ತಂಡವು ರಕ್ಷಣೆ, ಆರ್ಥಿಕ ಮತ್ತು ಸಾಮಾಜಿಕ ಸೇವಾ ವಲಯಗಳಿಂದ ಕ್ರಮಬದ್ಧವಾದ ಮಾಹಿತಿ ಸಂಗ್ರಹಿಸಿ ಲಿಂಗಾಧಾರಿತ ಬಜೆಟ್ ರೂಪಿಸುವಂತೆ ಸಲಹೆ ನೀಡಿತ್ತು. ಈ ಸಲಹೆಯನ್ನು ರಾಜ್ಯ ಸರ್ಕಾರ ಅನುಷ್ಠಾನಕ್ಕೆ ತಂದಿಲ್ಲ' ಎಂದು ಹೇಳಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	116.16	5,658	10,876
ಹಾರಂಗಿ	2,859	2,858.65	1,250	1,937
ಕಬಿನಿ	2,284	2,283.33	2,700	700
ಹೇಮಾವತಿ	2,922	2,916.74	3,621	5,212
ಲಿಂಗನಮಕ್ಕಿ	1,819	1,816.35	4,933	-
ಸೂಪಾ (ಮೀ)	564	559.09	4,110	4,110
ಮಾಣಿ	594.36	587.92	892	-
ತುಂಗಭದ್ರಾ	1,633	1,632.99	15,847	15,307
ಮಲಪ್ರಭಾ	2,079.50	2,079.50	2,394	2,394
ಘಟಪ್ರಭಾ	2,175	2,175	4,503	4,503
ಭದ್ರಾ	186	185.40	3,737	3,737
ಆಲಮಟ್ಟಿ (ಮೀ)	519.60	519.56	44,703	32,597
ನಾರಾಯಣಪುರ (ಮೀ)	492.25	492.15	2,000	8,000

* ನೆಲಮಟ್ಟದಿಂದ

ಕಾಫಿ ಬೆಳೆಗಾರರ ಸಮಸ್ಯೆಗೆ ಶೀಘ್ರ ಪರಿಹಾರ

ಆನೇಕಲ್: ಕಾಫಿ ಬೆಳೆಗಾರರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಕೇಂದ್ರ ಸರ್ಕಾರ ಶೀಘ್ರ ಸೂಕ್ತ ನಿರ್ಧಾರ ಕೈಗೊಳ್ಳಲಿದೆ ಎಂದು ಕೇಂದ್ರ ಸಚಿವ ಪಿಯೂಷ್ ಗೋಯಲ್ ಭರವಸೆ ನೀಡಿದ್ದಾರೆ.

ಜಿಗಣಿ ಸಮೀಪದ ಎಸ್-ವ್ಯಾಸ ಯೋಗ ವಿಶ್ವವಿದ್ಯಾಲಯಕ್ಕೆ ಭಾನುವಾರ ಭೇಟಿ ನೀಡಿದ್ದ ಅವರು, ಮುಖ್ಯಮಂತ್ರಿ ಭೇಟಿ ವೇಳೆ ಈ ಕುರಿತು ಚರ್ಚಿಸಲಾಗಿದೆ ಎಂದು ತಿಳಿಸಿದರು.

ಕಾರ್ ಅಪಘಾತ: ವಿ.ವಿ.ಕುಲಸಚಿವ ಡಾ. ಲಿಂಗರಾಜ ಶಾಸ್ತ್ರಿ ಸಾವು

ಲಿಂಗರಾಜ ಶಾಸ್ತ್ರಿ

ಕಲಬುರ್ಗಿ/ಬಸವಕಲ್ಯಾಣ: ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಹಣಮಂತವಾಡಿ ಗ್ರಾಮದ ಬಳಿ ಭಾನುವಾರ ಮಧ್ಯಾಹ್ನ ಸಂಭವಿಸಿದ ಅಪಘಾತದಲ್ಲಿ ಕಲಬುರ್ಗಿಯ ಶರಣಬಸವ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಡಾ. ಲಿಂಗರಾಜ ಶಾಸ್ತ್ರಿ (50) ಮೃತಪಟ್ಟಿದ್ದಾರೆ.

ಕಾರಿನಲ್ಲಿದ್ದ ಅವರ ಪತ್ನಿ ಶ್ರೀದೇವಿಗೆ ಗಾಯಗಳಾಗಿದ್ದು, ಪುತ್ರರಾದ ಕೈಲಾಶ ಮತ್ತು ಆನಂದ ಅಪಾಯದಿಂದ ಪಾರಾಗಿದ್ದಾರೆ.

'ರಜೆ ಇದ್ದ ಕಾರಣ ಬಸವಕಲ್ಯಾಣ ನೋಡಲು ಕುಟುಂಬ ಸದಸ್ಯರೊಂದಿಗೆ ಲಿಂಗರಾಜ ಶಾಸ್ತ್ರಿ ಅವರು ತೆರಳಿದ್ದರು. ಊಟ ಮುಗಿಸಿ ಮರಳುವಾಗ ಶಾಸ್ತ್ರಿ ಅವರ ಪುತ್ರ ಕಾರು ಚಾಲನೆ ಮಾಡುತ್ತಿದ್ದರು. ನಿಯಂತ್ರಣ ತಪ್ಪಿ ರಸ್ತೆ ಪಕ್ಕದ ಮರಕ್ಕೆ ಕಾರು ಡಿಕ್ಕಿ ಹೊಡೆದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಜೇನು ದಾಳಿ: ಕಾರು ಡಿಕ್ಕಿ ಹೊಡೆದ ಮರದಲ್ಲಿ ಜೇನು ಹುಳುಗಳಿದ್ದವು. ಅವು ಶಾಸ್ತ್ರಿ ಅವರ ಪತ್ನಿಗೆ ಕಚ್ಚಿವೆ. ಗಾಯಗೊಂಡ ಅವರನ್ನು ಬಸವಕಲ್ಯಾಣದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮುಡಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅನೈತಿಕ ಪೊಲೀಸ್‌ಗಿರಿ: ಇಬ್ಬರ ಬಂಧನ

ಒಂದನೇ ಪುಟದಿಂದ

'ಪ್ರಕರಣದಲ್ಲಿ ಇಬ್ಬರು ಮುಸ್ಲಿಂ ಯುವಕರನ್ನು ಬಂಧಿಸಲಾಗಿದೆ. ಅವರ ಮೊಬೈಲ್ ಜಪ್ತಿ ಮಾಡಲಾಗಿದೆ. ಅವರ ಹಿನ್ನೆಲೆ ಬಗ್ಗೆ ತಿಳಿಯಲು ತನಿಖೆ ಮುಂದುವರಿಸಲಾಗಿದೆ. ತನಿಖಾ ಹಂತದಲ್ಲಿ ಮಾಹಿತಿ ಸೋರಿಕೆ ಮಾಡದಂತೆ ಹೈಕೋರ್ಟ್ ಆದೇಶವಿದೆ. ಹೀಗಾಗಿ, ಆರೋಪಿಗಳ ಹೆಸರು ಬಹಿರಂಗಪಡಿಸಲಾಗದು' ಎಂದು ಪೊಲೀಸ್ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಹಿಂಬಾಲಿಸಿ ಅಡ್ಡಗಟ್ಟಿದ್ದರು: 'ರಿಚ್ಮಂಡ್ ವೃತ್ತದಲ್ಲಿರುವ ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಯುವಕ ಹಾಗೂ ಮಹಿಳೆ, ಕೆಲಸ ಮುಗಿಸಿ ರಾತ್ರಿ ಮನೆಗೆ ಹೊರಟಿದ್ದರು. ಅವರನ್ನು ಹಿಂಬಾಲಿಸಿದ್ದ ಗುಂಪು, ಬೈಕ್ ಅಡ್ಡಗಟ್ಟಿ ಗಲಾಟೆ ಮಾಡಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬುರ್ಖಾ ಧರಿಸಿರುವ ನಮ್ಮ ಧರ್ಮದ ಮಹಿಳೆಯನ್ನು ಬೈಕ್‌ನಲ್ಲಿ ಏಕೆ ಕರೆದೊಯ್ಯುತ್ತಿದ್ದೀಯಾ? ಎಂದು ಗುಂಪು ಕೇಳಿತ್ತು. 'ನಾವಿಬ್ಬರು ಸಹೋದ್ಯೋಗಿಗಳು. ಮಹಿಳೆಯನ್ನು ಮನೆಗೆ ಬಿಡಲು ಹೊರಟಿದ್ದೇನೆ' ಎಂಬುದಾಗಿ ಯುವಕ ಹೇಳಿದ್ದ. ಧ್ವನಿಗೂಡಿಸಿದ್ದ ಮಹಿಳೆ, 'ಸಹೋದ್ಯೋಗಿ ಜೊತೆ ಹೊರಟಿದ್ದೇನೆ. ತಡೆಯಲು ನೀವ್ಯಾರು?' ಎಂದು ಕೇಳಿದ್ದರು.

'ಮಹಿಳೆಯನ್ನು ತರಾಟೆಗೆ ತೆಗೆದುಕೊಂಡ ಆರೋಪಿಗಳು, ಅವರ ಎದುರೇ ಯುವಕನ ಮೇಲೆ ಹಲ್ಲೆ ಮಾಡಿದ್ದರು. ಅವಾಚ್ಯವಾಗಿ ಬೈದಿದ್ದರು. ಕುಟುಂಬದವರ ಮೊಬೈಲ್ ನಂಬರ್ ಪಡೆದು ಅವರ ಜೊತೆಯೂ ಕೆಟ್ಟದಾಗಿ ಮಾತನಾಡಿದ್ದರು. ಮಹಿಳೆಯನ್ನು ಬೈಕ್‌ನಿಂದ ಇಳಿಸಿ ಆಟೊದಲ್ಲಿ ಮನೆಗೆ ಕಳುಹಿಸಿದ್ದ ಆರೋಪಿಗಳು, ಯುವಕನಿಗೆ ಜೀವ ಬೆದರಿಕೆ ಹಾಕಿ ಕಳುಹಿಸಿದ್ದರು' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಉತ್ತಮ ಉದ್ಯೋಗಿ' ಬಹುಮಾನ ಪಡೆದಿದ್ದ ಮಹಿಳೆ

'ಕೆಲಸದಲ್ಲಿ ಚುರುಕಿದ್ದ ಮಹಿಳೆಗೆ ಉತ್ತಮ ಉದ್ಯೋಗಿ ಬಹುಮಾನ ಲಭಿಸಿತ್ತು. ಶುಕ್ರವಾರ ಕಾರ್ಯಕ್ರಮ ಹಮ್ಮಿಕೊಂಡಿದ್ದ ಕಂಪನಿ, ಲ್ಯಾಪ್‌ಟಾಪ್ ನೀಡಿ ಗೌರವಿಸಿತ್ತು. ಕಾರ್ಯಕ್ರಮ ಮುಗಿಯುವುದು ತಡವಾಗಿತ್ತು' ಎಂದೂ ಪೊಲೀಸ್ ಮೂಲಗಳು ಹೇಳಿವೆ.

'ಪತಿಗೆ ಕರೆ ಮಾಡಿದ್ದ ಮಹಿಳೆ, ಸಹೋದ್ಯೋಗಿ ಬೈಕ್‌ನಲ್ಲಿ ಮನೆಗೆ ಬರುವುದಾಗಿ ಹೇಳಿದ್ದರು. ಅದಕ್ಕೆ ಪತಿ ಒಪ್ಪಿದ್ದರು. ಹೀಗಾಗಿ ಮಹಿಳೆ ಬೈಕ್‌ನಲ್ಲಿ ಸಹೋದ್ಯೋಗಿ ಜೊತೆ ತೆರಳುತ್ತಿದ್ದರು. ಯುವತಿ ಬುರ್ಖಾ ಧರಿಸಿದ್ದನ್ನು ಕಂಡ ಆರೋಪಿಗಳು, ಬೈಕ್‌ನಲ್ಲಿ ಹಿಂಬಾಲಿಸಿದ್ದರು' ಎಂದೂ ತಿಳಿಸಿವೆ.

'ಗೆಲ್ಲಲು ಮೋದಿ ಅಲೆ ಸಾಲದು'

ಒಂದನೇ ಪುಟದಿಂದ

'ಮುಂದಿನ ಒಂದು ತಿಂಗಳು ರಾಜ್ಯದಾದ್ಯಂತ ಎಲ್ಲರೂ ಪ್ರವಾಸ ಕೈಗೊಳ್ಳಬೇಕು' ಎಂದು ಆಮಂತ್ರಿಸುವ ಧಾಟಿಯಲ್ಲಿ ಹೇಳಿದರು.

ಬಿಜೆಪಿ ರಾಜ್ಯ ಪ್ರಭಾರಿ ಅರುಣ್ ಸಿಂಗ್, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಸದಾನಂದ ಗೌಡ, ಜಗದೀಶ ಶೆಟ್ಟರ್, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ನಾರಾಯಣ ಸ್ವಾಮಿ, ಶೋಭಾ ಕರಂದ್ಲಾಜೆ, ಭಗವಂತ ಖೂಬಾ, ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಬಸವರಾಜ, ರಾಜ್ಯ ಸಹಪ್ರಭಾರಿ ಅರುಣ್ ಕುಮಾರ್, ಡಿ.ಕೆ. ಅರುಣಾ, ಸಂಸದ ಜಿ.ಎಂ. ಸಿದ್ದೇಶ್ವರ, ಬಿಜೆಪಿ ಜಿಲ್ಲಾ ಸಮಿತಿ ಅಧ್ಯಕ್ಷ ವೀರೇಶ್ ಹನಗವಾಡಿ ಉಪಸ್ಥಿತರಿದ್ದರು.

ಮೀಸಲಾತಿ ಬೇಡಿಕೆ ಕುರಿತು ಚರ್ಚೆ

ಒಂದನೇ ಪುಟದಿಂದ

ಹಿಂದುಳಿದ ವರ್ಗಗಳ ಮೀಸಲಾತಿಗೆ ಜಾತಿಗಳನ್ನು ಸೇರಿಸುವ ಅಧಿಕಾರವನ್ನು ಆಯಾ ರಾಜ್ಯ ಸರ್ಕಾರಗಳಿಗೆ ನೀಡುವ ಕಾಯ್ದೆಗೆ ಕಳೆದ ಲೋಕಸಭೆ ಅಧಿವೇಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಆಸ್ಥೆ ವಹಿಸಿ ತಿದ್ದುಪಡಿ ತಂದರು. ಈ ಒಬಿಸಿ ತಿದ್ದುಪಡಿ ರಾಜ್ಯಸಭೆ ಮತ್ತು ಲೋಕಸಭೆಗಳೆರಡರಲ್ಲೂ ಅಂಗೀಕಾರವಾಯಿತು. ಹಾಗಾಗಿ ರಾಜ್ಯ ಸರ್ಕಾರ ಸರಿಯಾದ ಸಮಯಕ್ಕೆ ಸರಿಯಾದ ತೀರ್ಮಾನ ಕೈಗೊಳ್ಳಲಿದೆ. ಈ ಬಗ್ಗೆ ಕಾರ್ಯಕರ್ತರು ಗೊಂದಲ ಮಾಡಿಕೊಳ್ಳಬಾರದು. ರಾಜ್ಯ ನಾಯಕರು ಪ್ರವಾಸ ಬಂದಾಗ ಎಲ್ಲರೂ ಕೈಜೋಡಿಸಬೇಕು ಎಂದು ನಾಯಕರು ಉತ್ತರಿಸಿದ್ದಾರೆ ಎನ್ನಲಾಗಿದೆ.

ಜನಪ್ರತಿನಿಧಿಗಳು ಆಯ್ಕೆಯಾದ ಬಳಿಕ ಕಾರ್ಯಕರ್ತರಿಂದ ದೂರವಾಗುತ್ತಿದ್ದಾರೆ ಎಂಬ ಕೆಲವು ದೂರುಗಳಿವೆ. ಪಕ್ಷದ ಕಾರ್ಯಕರ್ತರನ್ನು ಒಟ್ಟಿಗೆ ಒಯ್ಯಬೇಕು ಎಂದು ಶಾಸಕರಿಗೆ ಸೂಚಿಸಲಾಯಿತು.

ಈಶ್ವರಪ್ಪಗೆ ಸಂಘಟನೆ ಜವಾಬ್ದಾರಿ: ಹಿಂದುಳಿದ ವರ್ಗಗಳ ಸಂಘಟನೆಯ ಪೂರ್ಣ ಜವಾಬ್ದಾರಿಯನ್ನು ಸಚಿವ ಕೆ.ಎಸ್. ಈಶ್ವರಪ್ಪ ಅವರಿಗೆ ನೀಡಲು ತೀರ್ಮಾನಿಸಲಾಯಿತು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಪ್ರಬಲ ಪ್ರತಿಸ್ಪರ್ಧೆ ನೀಡುವ ಮತ್ತು ಮುಂದಿನ ಚುನಾವಣೆಗೆ ಹಿಂದುಳಿದ ವರ್ಗಗಳನ್ನು ಸೆಳೆಯುವ ದೃಷ್ಟಿಯಿಂದ ಈ ಜವಾಬ್ದಾರಿ ಹಂಚಿಕೆ ಮಾಡಲಾಗಿದೆ.

ಒಳನೋಟ

ಪಶುಪಾಲನೆ ಪಡಿಪಾಟಲು

ಬೆಂಗಳೂರು: 'ಅರ್ಧದಷ್ಟು ಹುದ್ದೆ ಖಾಲಿ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಸೆ.19) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

'ಕೋವಿಡ್ ಒಂದು ನೆಪವಷ್ಟೇ'

'ಕೋವಿಡ್‌ನಿಂದಾಗಿ ಆರ್ಥಿಕತೆಗೆ ಬಹುದೊಡ್ಡ ಪೆಟ್ಟು ಬಿದ್ದಿದೆ. ಹೀಗಾಗಿ ಪಶು ವೈದ್ಯಕೀಯ ಹಾಗೂ ಪಶು ಸಂಗೋಪನೆ ಇಲಾಖೆಯಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆಗುತ್ತಿಲ್ಲ ಎಂದು ಸರ್ಕಾರ ಹೇಳುತ್ತಿದೆ. ಇದು ಜನರನ್ನು ದಾರಿ ತಪ್ಪಿಸುವ ತಂತ್ರವಷ್ಟೇ. ಕೋವಿಡ್‌ಗೂ ಖಾಲಿ ಹುದ್ದೆಗಳ ಭರ್ತಿಗೂ ಯಾವ ಸಂಬಂಧ? ಕೋವಿಡ್ ಪೂರ್ವದಲ್ಲೇ ಸಾಕಷ್ಟು ಹುದ್ದೆಗಳು ಖಾಲಿ ಇದ್ದವು. ಹೀಗಿದ್ದರೂ ಅವುಗಳ ಭರ್ತಿಗೆ ಸರ್ಕಾರ ಮನಸ್ಸು ಮಾಡಿರಲಿಲ್ಲ. ಹೀಗಾಗಿ ಖಾಲಿ ಹುದ್ದೆಗಳ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ'.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ.

'ಪಶುಸಂಗೋಪನೆ ಸರ್ಕಾರದ ಆದ್ಯತೆಯಾಗಲಿ'

'ಪಶು, ಪಕ್ಷಿಗಳು ಚುನಾವಣೆಯಲ್ಲಿ ಮತ ಚಲಾವಣೆ ಮಾಡುವುದಿಲ್ಲ. ಹೀಗಾಗಿ ಸರ್ಕಾರಕ್ಕೆ ಅವುಗಳ ಹಿತ ಬೇಕಿಲ್ಲ. ಒಂದೊಮ್ಮೆ ಅವುಗಳಿಗೆ ಮತ ಹಾಕುವುದಕ್ಕೆ ಅವಕಾಶವಿದ್ದಿದ್ದರೆ ಜನಪ್ರತಿನಿಧಿಗಳು ಇಷ್ಟೊಂದು ನಿರ್ಲಕ್ಷ್ಯ ತೋರುತ್ತಿರಲಿಲ್ಲ. ಪ್ರಾಣಿ, ಪಕ್ಷಿಗಳು ಮೂಕ ಜೀವಿಗಳು. ಅವು ಮನುಷ್ಯನ ಬದುಕಿನ ಅವಿಭಾಜ್ಯ ಅಂಗ. ಅವುಗಳಿಂದ ಲಾಭ ಪಡೆಯುವುದಷ್ಟೇ ನಮ್ಮ ಗುರಿಯಾಗಬಾರದು. ಕ್ಷೀರೋದ್ಯಮವನ್ನು ಕ್ರಾಂತಿಯಂತೆ ಬೆಳೆಸಲು ಕ್ರಮ ಕೈಗೊಳ್ಳುವುದಾಗಿ ಹೇಳುವ ಸರ್ಕಾರ ಆ ನಿಟ್ಟಿನಲ್ಲಿ ಇನ್ನಾದರೂ ಕಾರ್ಯಪ್ರವೃತ್ತವಾಗಬೇಕು'.

ಎಂ.ಆರ್.ಬಾಲಕೃಷ್ಣ, ಸೀತಪ್ಪ ಲೇಔಟ್, ಆರ್‌ಟಿ.ನಗರ, ಬೆಂಗಳೂರು.

'ಪ್ರತಿ ಹಳ್ಳಿಗೂ ಪಶುವೈದ್ಯರನ್ನು ನೇಮಿಸಿ'

'ಜಾನುವಾರುಗಳು ರೈತರ ಬೆನ್ನೆಲುಬು. ಅವು ಸೂಕ್ತ ಚಿಕಿತ್ಸೆ ಸಿಗದೇ ಸಾವಿಗೀಡಾಗುತ್ತಿವೆ. ಮೂಕ ಪ್ರಾಣಿಗಳ ಈ ಸಾವಿಗೆ ಸರ್ಕಾರವೇ ಹೊಣೆ. ಕೆಲ ಹಳ್ಳಿಗಳಲ್ಲಿ ನಾಮಕಾವಸ್ಥೆಗೆ ಪಶುಕೇಂದ್ರಗಳಿವೆ. ಅಲ್ಲಿ ವೈದ್ಯರೇ ಸುಳಿಯುವುದಿಲ್ಲ. ತಮ್ಮ ಬದುಕಿಗೆ ಆಧಾರವಾಗಿರುವ ಜಾನುವಾರುಗಳು ಅನಾರೋಗ್ಯಕ್ಕೀಡಾದರೆ ಅವುಗಳ ಚಿಕಿತ್ಸೆಗೆ ರೈತರು ನಗರಗಳಿಗೆ ಹೋಗಬೇಕಾದ ಪರಿಸ್ಥಿತಿ ಇದೆ. ಅಲ್ಲಿಗೆ ಕೊಂಡೊಯ್ಯಲು ಹಣವಿಲ್ಲದೆ ಕೆಲವರು ಪಶುಗಳನ್ನು ರಸ್ತೆಗೇ ಬಿಟ್ಟುಬಿಡುತ್ತಾರೆ. ಅವು ಆಹಾರ, ನೀರು ಇಲ್ಲದೆ ಪ್ರಾಣ ಬಿಡುವ ದಯನೀಯ ಸ್ಥಿತಿ ಹಲವೆಡೆ ಇದೆ'.

ಕಾವೇರಿ ಬಡಿಗೇರ್, ಬಿ.ಎಸ್ಸಿ ದ್ವಿತೀಯ ವರ್ಷದ ವಿದ್ಯಾರ್ಥಿನಿ, ಲಿಂಗಸುಗೂರು, ರಾಯಚೂರು.

'ಹೈನುಗಾರಿಕೆ ಮರೆಯಾಗದಿರಲಿ; ರೈತರ ಬವಣೆ ತೀರಲಿ'

'ಭಾರತವು ಕೃಷಿ ಪ್ರಧಾನ ದೇಶ. ಈ ರಾಷ್ಟ್ರದಲ್ಲಿ ಹೈನುಗಾರಿಕೆಯನ್ನೇ ನಂಬಿ ಕೋಟ್ಯಂತರ ಜನ ಬದುಕು ಕಟ್ಟಿಕೊಂಡಿದ್ದಾರೆ. ಇದರಿಂದ ದೇಶದ ಬೊಕ್ಕಸಕ್ಕೂ ಆದಾಯ ಹರಿದುಬರುತ್ತಿದೆ. ಇತ್ತೀಚಿನ ದಿನಗಳಲ್ಲಿ ಬಹುಪಾಲು ಮಂದಿ ಹೈನುಗಾರಿಕೆಯಿಂದ ವಿಮುಖರಾಗುತ್ತಿದ್ದಾರೆ. ಇದು ಅಪಾಯಕಾರಿ ಬೆಳವಣಿಗೆ. ಅನೇಕ ಹಳ್ಳಿಗಳಲ್ಲಿ ಇಂದಿಗೂ ಸುಸಜ್ಜಿತ ಪಶು ಆರೈಕೆ ಕೇಂದ್ರಗಳಿಲ್ಲ. ಇರುವ ಕೇಂದ್ರಗಳು ಮೂಲ ಸೌಕರ್ಯಗಳ ಕೊರತೆ ಎದುರಿಸುತ್ತಿವೆ. ವೈದ್ಯಾಧಿಕಾರಿಗಳ ಕೊರತೆಯೂ ದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಹೊಸ ಹುದ್ದೆಗಳ ಸೃಷ್ಟಿ ದೂರದ ಮಾತು'.

ಎಚ್.ಬಿ.ರಾಮು, ನಂದಿಬಂಡಿ.

'ಆಡಳಿತಗಾರರ ನಿರ್ಲಕ್ಷ್ಯ ಸಲ್ಲದು'

'ಹಣಕಾಸು ಇಲಾಖೆಯ ಕಿವಿ ಹಿಂಡಿ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಮುಂದಾಗಬೇಕಿದ್ದ ಆಡಳಿತಗಾರರು ಈ ವಿಚಾರದಲ್ಲಿ ಹಿಂದಡಿ ಇಡುತ್ತಿರುವುದು ವಿಪರ್ಯಾಸ. ಹೀಗಾದರೆ ಹೈನುಗಾರರ ಬವಣೆಗಳು ನೀಗುವುದು ಹೇಗೆ? ಇಲಾಖೆಯು ಸಿಬ್ಬಂದಿ ಕೊರತೆಯಿಂದ ಸೊರಗುತ್ತಿದೆ. ಇರುವ ಸಿಬ್ಬಂದಿಯನ್ನು ಕಂಪ್ಯೂಟರ್ ಪರದೆಗೆ ಕಟ್ಟಿಹಾಕಲಾಗುತ್ತಿದೆ. ಜಾನುವಾರುಗಳಿಗೆ ಕಿವಿಯೋಲೆ ಹಾಕಿಬಿಟ್ಟರೆ ಎಲ್ಲವೂ ಮುಗಿಯಿತೇ. ಚಿಕಿತ್ಸೆ, ಕೃತಕ ಗರ್ಭಧಾರಣೆ, ಲಸಿಕೆ ಸಂಬಂಧಿತ ವಿಚಾರಗಳನ್ನು ಆನ್‌ಲೈನ್‌ನಲ್ಲಿ ದಾಖಲಿಸುವಂತೆ ಸಿಬ್ಬಂದಿ ಮೇಲೆ ಒತ್ತಡ ಹೇರುವುದು ಎಷ್ಟು ಸರಿ?'.

ಕೆ.ಜಿ.ವಿನುತ, ಬಾಳೇಬೈಲು, ತೀರ್ಥಹಳ್ಳಿ, ಶಿವಮೊಗ್ಗ.

'ಸಚಿವರು ಪರಿಸ್ಥಿತಿ ಅವಲೋಕಿಸಲಿ'



'ಮಂಜೂರಾಗಿರುವ 18,563 ಹುದ್ದೆಗಳ ಪೈಕಿ 8,959 ಹುದ್ದೆಗಳು ಖಾಲಿ ಇರುವುದು ವಿಪರ್ಯಾಸ. ಆರ್ಥಿಕ ಇಲಾಖೆಯ ಒಪ್ಪಿಗೆ ಕೇಳುತ್ತ ಕುಳಿತಿರುವ ಸಚಿವರು ಒಮ್ಮೆ ಹಳ್ಳಿಗಳಿಗೆ ಬಂದು ಅಲ್ಲಿನ ಪಶು ಚಿಕಿತ್ಸಾಲಯಗಳ ಪರಿಸ್ಥಿತಿ ನೋಡಲಿ. ಉತ್ತರ ಕರ್ನಾಟಕದ ಬಹುತೇಕ ಹಳ್ಳಿಗಳ ಪಶು ಚಿಕಿತ್ಸಾಲಯಗಳಲ್ಲಿ ವೈದ್ಯಕೀಯ ಅಧಿಕಾರಿಗಳೇ ಇಲ್ಲ. ವೈದ್ಯರು ನಗರಗಳಿಂದ ಬಂದು ಚಿಕಿತ್ಸೆ ನೀಡುವಷ್ಟರಲ್ಲಿ ಬಹುತೇಕ ಪ್ರಾಣಿಗಳು ಜೀವ ಕಳೆದುಕೊಂಡಿರುತ್ತವೆ'.

ಸಂಜೀವ ಅಂಗಡಿ, ದಾಸನಕೊಪ್ಪ.

‘ಮದುವೆ’ ನಂಬಿ ಬದುಕುತ್ತಿದ್ದವರ ಬದುಕು ದುಸ್ತರ • ಮನೆ ಬಾಡಿಗೆ– ಶಾಲಾ ಶುಲ್ಕ ಕಟ್ಟಲೂ ಹರಸಾಹಸ

ಸಂಕಷ್ಟದ ಈ ಜೀವನ ಶತ್ರುವಿಗೂ ಬೇಡ!

• ಗುರು ಪಿ.ಎಸ್.

ಬದುಕು ಬೀದಿಗೆ ತಂದ ಕೋವಿಡ್

ಅಂಕಿ–ಅಂಶಗಳು

2,500 ರಾಜ್ಯದಲ್ಲಿರುವ ಕಲ್ಯಾಣಮಂಟಪಗಳ ಅಂದಾಜು ಸಂಖ್ಯೆ

700 ಬೆಂಗಳೂರಿನಲ್ಲಿರುವ ಕಲ್ಯಾಣಮಂಟಪಗಳ ಅಂದಾಜು ಸಂಖ್ಯೆ

ಬೆಂಗಳೂರು: ‘ಪೊಲೀಸರಿಂದ ಪರ್ಮಿಷನ್ ಸಿಕ್ಕಿದೆ. ಏನೂ ಪ್ರಾಬ್ಲಂ ಇಲ್ಲ. ನಾಡಿದ್ದು ಮದುವೆ. ನಾಳೆ ಬೆಳಿಗ್ಗೆಯೇ ತರಕಾರಿ– ಹೂವು ಎಲ್ಲ ತಂದ್ಬಿಡಿ ಎಂದು ಫೋನ್ ಬಂತು. ಎಷ್ಟೋ ದಿನಗಳ ನಂತರ ವ್ಯಾಪಾರ ಸಿಕ್ತು ಎಂಬ ಖುಷಿಯಲ್ಲಿ, ಅಕ್ಕ–ಪಕ್ಕದ ರೈತರಿಂದ 30 ಸಾವಿರ ರೂಪಾಯಿಯ ತರಕಾರಿ, 20 ಸಾವಿರ ರೂಪಾಯಿ ಹೂವು ತೆಗೆದುಕೊಂಡು, ಬಾಡಿಗೆ ಗಾಡಿಯಲ್ಲಿ ಹಾಕಿಕೊಂಡು ಸ್ಥಳಕ್ಕೆ ಹೋದೆ. ಮದುವೆ ರದ್ದಾಗಿತ್ತು. ಫೋನ್ ಮಾಡಿದವರಿಗೆ ಕರೆ ಮಾಡಿದರೆ ಅವರ ಫೋನ್ ಸ್ವಿಚ್ಡ್ ಆಫ್ ! ಯಾರೊಬ್ಬರೂ ಕರೆ ಸ್ವೀಕರಿಸಲಿಲ್ಲ. ಒಯ್ದಿದ್ದ ಟೊಮೆಟೊ, ಹೂವು ಎಲ್ಲವನ್ನೂ ಬೀದಿಗೆ ಎಸೆದು ಬಂದೆ. ಬಾಡಿಗೆ ಕೊಡಲು ಆಗದಿದ್ದ ಮೇಲೆ ಗಾಡಿ ಯಾಕ್ರಿ ಬುಕ್ ಮಾಡ್ತೀರಾ... ಇಂಥ ಬದುಕು ಬಾಳೋ ಬದಲು ಭಿಕ್ಷೆಯಾದರೂ ಬೇಡಿ ಎಂದು ಗಾಡಿಯವನು ರೇಗಿದ...’ ಹೀಗೆ ಹೇಳುತ್ತಾ ಕಣ್ಣೀರಾದರು ದೊಡ್ಡಬಳ್ಳಾಪುರದ ರೈತ ನರಸಿಂಹರಾಜು.

‘12 ವರ್ಷದವನಿದ್ದಾಗಿನಿಂದ ಅಡುಗೆ ಕೆಲಸ ಮಾಡುತ್ತಿದ್ದೇನೆ. 25 ವರ್ಷ ದುಡಿದರೂ ನೆಲೆ ನಿಲ್ಲಲು ಆಗಿಲ್ಲ. ಒಂದೂವರೆ ವರ್ಷದಿಂದ ಕೆಲಸವೇ ಸಿಗಲಿಲ್ಲ. ಅಡುಗೆ ಕೆಲಸ ಮಾಡುವುದು ಬಿಟ್ಟು ನನಗೆ ಬೇರೆನೂ ಗೊತ್ತಿಲ್ಲ. ಈಗ ಕೆಲಸ ಇಲ್ಲದೆ ಮನೆಗೆ ಹೋಗಿದ್ದೇನೆ. ಈ ವಯಸ್ಸಿನಲ್ಲಿ ತಂದೆ–ತಾಯಿಗೆ ಭಾರವಾಗಿ ಇರಬೇಕಾಗಿದೆ’ ಎಂದು ಅಳಲು ತೋಡಿಕೊಂಡರು ವಿಶ್ವನಾಥ್.

‘ಮದುವೆ’ಗಳನ್ನೇ ನಂಬಿ ಜೀವನ ನಡೆಸುವ ಒಂದು ವರ್ಗವೇ ಇದೆ. ಕಲ್ಯಾಣ ಮಂಟಪದವರು, ಪುರೋಹಿತರು, ಅಡುಗೆಯವರು, ಹೂವು–ತರಕಾರಿ ಮಾರುವವರು, ಪಾತ್ರೆ ತೊಳೆಯುವವರು, ವಾಲಗದವರು... ಇಂತಹ ಒಂದು ಸಮೂಹವನ್ನೇ ಅಲ್ಲೋಲ–ಕಲ್ಲೋಲಗೊಳಿಸಿದ್ದು ಕೋವಿಡ್ ಬಿಕ್ಕಟ್ಟು.

ಬ್ಯಾಂಕ್ ಸಾಲದ ಕಂತು ಕಟ್ಟಲಾಗದೆ ಕಲ್ಯಾಣ ಮಂಟಪಗಳನ್ನು ಮಾರಿದವರು ಒಂದೆಡೆಯಾದರೆ, ಬೆಂಗಳೂರು ಬಿಟ್ಟು ಸ್ವಂತ ಊರ ಹಾದಿ ಹಿಡಿದವರು ಅನೇಕರು. ಮನೆಯ ಬಾಡಿಗೆ ಕಟ್ಟಲಾಗದೆ, ಮಕ್ಕಳ ಶಾಲಾ ಶುಲ್ಕವನ್ನೂ ಭರಿಸಲಾಗದೆ ಪರಿತಪಿಸುತ್ತಿರುವವರಿಗೆ ಲೆಕ್ಕವಿಲ್ಲ.

ಕಲ್ಯಾಣ ಮಂಟಪಗಳು ಸ್ಥಗಿತಗೊಂಡ ಒಂದೂವರೆ ವರ್ಷದ ನಂತರ, ಸೆ.1ರಿಂದ, ಮದುವೆ ಕಾರ್ಯಕ್ರಮಗಳಲ್ಲಿ 400 ಜನ ಅಥವಾ ಸಭಾಂಗಣ ಸಾಮರ್ಥ್ಯದ ಶೇ 50ರಷ್ಟು ಜನರ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡಲಾಯಿತು. ಕಲ್ಯಾಣಮಂಟಪಗಳ ಮಾಲೀಕರು ನಿಟ್ಟುಸಿರು ಬಿಟ್ಟರು.

‘ಉದ್ಯಮವೆಂದೇ ಪರಿಗಣಿಸುತ್ತಿಲ್ಲ’

ರಮೇಶ ರೆಡ್ಡಿ

‘ಕಲ್ಯಾಣ ಮಂಟಪಗಳೂ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ವಲಯದಡಿ (ಎಂಎಸ್ಎಂಇ) ನೋಂದಣಿಯಾಗಿವೆ. ಆದರೆ, ಆ ಉದ್ಯಮಗಳಿಗೆ ಸಿಗುತ್ತಿರುವ ಯಾವುದೇ ಸೌಲಭ್ಯಗಳು ಕಲ್ಯಾಣ ಮಂಟಪಗಳಿಗೆ ಸಿಗುತ್ತಿಲ್ಲ’ ಎಂದು ಕರ್ನಾಟಕ ಮ್ಯಾರೇಜ್ ಹಾಲ್ಸ್ ಅಸೋಸಿಯೇಷನ್‌ನ ಅಧ್ಯಕ್ಷ ರಮೇಶ್ ರೆಡ್ಡಿ ಹೇಳಿದರು.

‘ಕೋವಿಡ್ ಪರಿಸ್ಥಿತಿ ನಿಯಂತ್ರಣಕ್ಕೆ ಬರುವವರೆಗೆ ಕಲ್ಯಾಣ ಮಂಟಪಗಳಿಗೆ ವಿದ್ಯುತ್ ನಿಶ್ಚಿತ ಶುಲ್ಕ (ಫಿಕ್ಸ್‌ಡ್ ಚಾರ್ಜಸ್), ಬಿಬಿಎಂಪಿ ಉದ್ದಿಮೆ ಪರವಾನಗಿ ಶುಲ್ಕ ಮನ್ನಾ ಮಾಡಬೇಕು. ಜಿಎಸ್‌ಟಿ ಹಾಗೂ ಆದಾಯ ತೆರಿಗೆಯಿಂದ ವಿನಾಯಿತಿ ನೀಡಬೇಕು. ಕಲ್ಯಾಣ ಮಂಟಪಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಆರ್ಥಿಕ ನೆರವು ನೀಡಬೇಕು ಎಂದು ಹಲವು ಬಾರಿ ಬೇಡಿಕೆ ಸಲ್ಲಿಸಿದ್ದೇವೆ. ಸರ್ಕಾರದಿಂದ ಯಾವುದೇ ಸ್ಪಂದನೆ ಸಿಗುತ್ತಿಲ್ಲ’ ಎಂದು ಹೇಳಿದರು.

ತಿಂಗಳಿಗೆ ₹15 ಸಾವಿರ ದುಡಿಯುತ್ತಿದ್ದೆ. ಈಗ ₹5 ಸಾವಿರವೂ ಸಿಗುತ್ತಿಲ್ಲ. ಮೂರು ಲಕ್ಷ ಸಾಲ ಮಾಡಿದ್ದೇನೆ. ಹೆಂಡತಿ ತಾಳಿ ಅಡ ಇಟ್ಟು ಸಾಲ ತೀರಿಸಬೇಕಾದ ಸ್ಥಿತಿ ಇದೆ.

ಗುರುರಾಜ್, ಅಡುಗೆಯವರು

ಒಂದು ಮದುವೆಗೆ 10 ರಿಂದ 15 ಜನ ವಾಲಗದವರು ಇರುತ್ತಿದ್ದರು. ಈಗ 3 ಅಥವಾ ನಾಲ್ಕು ಜನ ಸಾಕು ಎನ್ನುತ್ತಾರೆ. ಮೊದಲಿಗಿಂತ ಅರ್ಧದಷ್ಟು ದುಡ್ಡು ಕೊಡಲು ಸಿದ್ಧರಿಲ್ಲ.

ಎನ್. ಮಂಜುನಾಥ್, ನಾದಸ್ವರ ವಾದಕ

ಆದರೆ, ಮತ್ತೆ ಮುಹೂರ್ತ ನೋಡಿ ಮದುವೆ ನಿಗದಿ ಆಗುವುದಕ್ಕೆ ಒಂದೂವರೆ, ಎರಡು ತಿಂಗಳುಗಳು ಬೇಕು. ಈಗ, ಪಿತೃ ಪಕ್ಷವಿದೆ. ಮುಂದಿನ ಮಹಾಲಯ ಅಮಾವಾಸ್ಯೆಯವರೆಗೂ ಯಾವುದೇ ಮದುವೆ–ಶುಭ ಸಮಾರಂಭಗಳು ನಡೆಯುವುದಿಲ್ಲ. ನಮ್ಮ ಕಷ್ಟ ನೀಗುವುದಿಲ್ಲ ಎನ್ನುತ್ತಾರೆ ಕಲ್ಯಾಣ ಮಂಟಪಗಳ ಮಾಲೀಕರು.

‘ಅಲಂಕಾರಿಕ ವಸ್ತುಗಳನ್ನೆಲ್ಲ ಕೊಂಡು ತಂದು ಗೋದಾಮಿನಲ್ಲಿ ಇಟ್ಟಿದ್ದೇವೆ. ಮದುವೆ ಸಮಾರಂಭ ನಡೆಯದೆ ಎಲ್ಲವೂ ಹಾಳಾಗುತ್ತಿವೆ. ಗೋದಾಮಿನ ಬಾಡಿಗೆ ಕಟ್ಟುವುದಕ್ಕೂ ಕಷ್ಟವಾಗುತ್ತಿದೆ’ ಎಂದು ‘ಫ್ಲವರ್ ಡೆಕೊರೇಷನ್’ನ ನಾಗೇಂದ್ರ ಅಳಲು ತೋಡಿಕೊಂಡರು.

‘ನನ್ನ ಬಳಿ 200 ಹುಡುಗರು ಕೆಲಸ ಮಾಡುತ್ತಿದ್ದರು. ಈಗ ಬಹಳಷ್ಟು ಜನ ಕೆಲಸ ಬಿಟ್ಟು ಹೋಗಿದ್ದಾರೆ. ಅವರಿಗೆ ಅರ್ಧ ಸಂಬಳ ಕೊಡಲೂ ಆಗುತ್ತಿಲ್ಲ. ಒಂದು ಹೊತ್ತಿನ ಊಟಕ್ಕೂ ಪರದಾಡುತ್ತಿದ್ದಾರೆ. ಸರ್ಕಾರದಿಂದ ದಿನಸಿ ಕಿಟ್ ಕೂಡ ಅವರಿಗೆ ಸಿಕ್ಕಿಲ್ಲ. ನಮ್ಮ ಅಸಹಾಯಕತೆ ಮತ್ತು ಅವರ ಕಷ್ಟ ನೆನೆದರೆ ಕಣ್ಣೀರು ಬರುತ್ತದೆ’ ಎಂದರು ಎಸ್‌ಬಿಆರ್ ಕೆಟರರ್ಸ್‌ನ ರಘು.

‘3 ಮೆಗಾ ಟೆಕ್ಸ್‌ಟೈಲ್ ಪಾರ್ಕ್‌ಗಳ ಸ್ಥಾಪನೆಗೆ ಕೇಂದ್ರಕ್ಕೆ ಪ್ರಸ್ತಾವ’



ಬಸವರಾಜ ಬೊಮ್ಮಾಯಿ

ದಾವಣಗೆರೆ: ‘ಹೆಚ್ಚಿನ ಉದ್ಯೋಗ ಸೃಷ್ಟಿಸಲು ರಾಜ್ಯದಲ್ಲಿ ಮೂರು ಮೆಗಾ ಟೆಕ್ಸ್‌ಟೈಲ್ ಪಾರ್ಕ್‌ಗಳ ಸ್ಥಾಪನೆಗೆ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಿದ್ದು, ಹಂತ ಹಂತವಾಗಿ ಆರಂಭಿಸಲಾಗು-ವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಇಲ್ಲಿನ ಪಿ.ಜಿ.ಬಡಾವಣೆಯಲ್ಲಿ ₹125 ಕೋಟಿ ವೆಚ್ಚದ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯ (ಎಂಜಿಎನ್‌ವಿವೈ) ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

‘ಉದ್ಯೋಗ ಸೃಷ್ಟಿಸುವ ಉದ್ಯಮಗಳಿಗೆ ಪ್ರೋತ್ಸಾಹ ನೀಡಲು ಆಟೊಮೊಬೈಲ್ ಕ್ಷೇತ್ರಗಳಲ್ಲಿ ಕ್ಲಸ್ಟರ್‌ಗಳನ್ನು ಹೆಚ್ಚಿಸುವ ಉದ್ದೇಶವಿದ್ದು, ನಾನೇ ಈ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿದ್ದೇನೆ’ ಎಂದರು.

10 ಜಿಲ್ಲೆಗಳಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ: ‘ಮಧ್ಯ ಕರ್ನಾಟಕ ಹಾಗೂ ಉತ್ತರ ಕರ್ನಾಟಕದಲ್ಲಿ 8ರಿಂದ 10 ಜಿಲ್ಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಕೇಂದ್ರ ಸಚಿವ ಪಿಯೂಷ್ ಗೋಯಲ್ ಜೊತೆ ಚರ್ಚಿಸಿದ್ದೇನೆ’ ಎಂದೂ ಹೇಳಿದರು.

‘ಇತ್ತೀಚಿನ ದಿನಗಳಲ್ಲಿ ಸಾಕಷ್ಟು ರೈತರು ರೇಷ್ಮೆ ಕೃಷಿಯನ್ನು ಅಭಿವೃದ್ಧಿ-ಪಡಿಸಿದ್ದಾರೆ. ಶ್ರೇಷ್ಠ ಗುಣಮಟ್ಟ ಇದೆ. ವಿದೇಶದಿಂದ ಆಮದಾಗುವ ರೇಷ್ಮೆಗೆ ಸರಿಸಮಾನವಾಗಿದ್ದದರಿಂದ ನಮ್ಮ ರಾಜ್ಯದ ರೇಷ್ಮೆಗೆ ಹೆಚ್ಚಿನ ಬೇಡಿಕೆ ಇದೆ ಎಂದರು.

ಕೋವಿಡ್: 29.67 ಲಕ್ಷಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಇಳಿಮು-ಖವಾಗಿದ್ದು, 783 ಮಂದಿ ಕೋವಿಡ್ ಪೀಡಿತರಾಗಿರುವುದು ಭಾನುವಾರ ದೃಢಪಟ್ಟಿದೆ. ಸೋಂಕಿತರ ಒಟ್ಟು ಸಂಖ್ಯೆ 29.67 ಲಕ್ಷ ದಾಟಿದೆ.

ಒಂದು ದಿನದಲ್ಲಿ 1.29 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.60ರಷ್ಟಿದೆ. 12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿಯ-ಲ್ಲಿದೆ. ಬಾಗಲಕೋಟೆ, ಕೊಪ್ಪಳ, ರಾಯಚೂರು, ರಾಮನಗರ ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 97, ಮೈಸೂರಿನಲ್ಲಿ 69 ಹಾಗೂ ಕೊಡಗಿನಲ್ಲಿ 41 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 267 ಹಾಗೂ ಉಡುಪಿಯಲ್ಲಿ 82 ಮಂದಿ ಸೋಂ-ಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ.

ಕೋವಿಡ್ ಪೀಡಿತರಲ್ಲಿ 16 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 6 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 7, ಬೆಳಗಾವಿಯಲ್ಲಿ 4 ಹಾಗೂ ಉಡುಪಿಯಲ್ಲಿ ಇಬ್ಬರು ಸಾವಿ-ಗೀಡಾಗಿದ್ದಾರೆ. ಹಾಸನ, ದಾವಣಗೆರೆ ಹಾಗೂ ದಕ್ಷಿಣ ಕನ್ನಡದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 2.04 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,603ಕ್ಕೆ ತಲುಪಿದೆ.

ಸೋಂಕಿತರಲ್ಲಿ 1,139 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.14 ಲಕ್ಷ ದಾಟಿದೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 15,383ಕ್ಕೆ ಇಳಿಕೆಯಾಗಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

29,67,866 ▲ ಒಟ್ಟು ಸೋಂಕಿತರು (29,67,083 ನಿನ್ನೆಯ ವಿವರ)

15,383 ▼ ಸಕ್ರಿಯ ಪ್ರಕರಣಗಳು

29,14,852 ▲ ಗುಣಮುಖರಾದವರು

37,603 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	783	▼
ಗುಣಮುಖ	1,139	▲
ಸಾವು	16	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

‘2ಎ ಮೀಸಲಾತಿ ಸಿಗದಿದ್ದರೆ ಧರಣಿ’

ಕೊಪ್ಪಳ: ‘ಪಂಚಮಸಾಲಿ ಸಮಾಜವನ್ನು 2ಎಗೆ ಸೇರಿಸಲು ಒತ್ತಾಯಿಸಿ ಅ.1ರಿಂದ ಬೆಂಗಳೂರಿನಲ್ಲಿ ಸತ್ಯಾಗ್ರಹ ನಡೆಸಲಾಗು-ವುದು’ ಎಂದು ಕೂಡಲಸಂಗಮ ಪಂಚಮಸಾಲಿ ಗುರುಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ಭಾನುವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ‘ಅಷ್ಟರೊಳಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೀಸಲಾತಿ ಘೋಷಿಸಿದರೆ ಒಳ್ಳೆಯದು’ ಎಂದು ಹೇಳಿದರು.

‘ಸಮಾಜವನ್ನು 2ಎಗೆ ಸೇರಿಸುವ ಭರವಸೆ ನೀಡಿದ್ದ ಬಿ.ಎಸ್. ಯಡಿಯೂರಪ್ಪ ಅವರು ಸಮಾಜದ ಶಾಪದಿಂದ ಅಧಿಕಾರ ಕಳೆದು-ಕೊಂಡಂತಾಯಿತು’ ಎಂದು ಅಖಿಲ ಭಾರತ ಪಂಚಮಸಾಲಿ ಮಹಾಸಭಾ ಕಾರ್ಯಾಧ್ಯಕ್ಷ ವಿಜಯಾನಂದ ಎಸ್. ಕಾಶಪ್ಪನವರ ಹೇಳಿದರು.

‘ಪ್ರಜಾವಾಣಿ’ಯ ‘ಆಲದ ಮರ‘ ಕ್ಲಬ್‌ಹೌಸ್ ಚರ್ಚೆಯಲ್ಲಿ ನಿರ್ದೇಶಕ ಪಿ.ಶೇಷಾದ್ರಿ ವಿಶ್ಲೇಷಣೆ

‘ಶೋಕೇಸ್ ಗೊಂಬೆಯಂತೆ ಸ್ತ್ರೀ ಪಾತ್ರಗಳು’

ಪ್ರಜಾವಾಣಿ ವಾರ್ತೆ

ನಂದಿನಿ ವಿಠ್ಠಲ್



ಮಾಧುರಿ ಶಿವಣಗಿ

ರಂಜನಿ ರಾಘವನ್

ಆರ್. ಪ್ರೀತಂ ಶೆಟ್ಟಿ

ಪಿ. ಶೇಷಾದ್ರಿ

ಬೆಂಗಳೂರು: ಇಂದಿನ ಧಾರಾವಾಹಿ-ಗಳಲ್ಲಿ ಸ್ತ್ರೀ ಪಾತ್ರಗಳನ್ನು ಸಶಕ್ತವಾಗಿ ಕಟ್ಟುತ್ತಿಲ್ಲ. ಪಾತ್ರಗಳನ್ನು, ಸೀರೆ ಅಂಗಡಿ ಮುಂದೆ ಒಪ್ಪ ಓರಣ ಮಾಡಿ ನಿಲ್ಲಿಸಿರುವ ಗೊಂಬೆಗಳಂತೆ ಮಾಡಿದ್ದೇವೆ; ಮಾಡೆ-ಲ್‌ಗಳನ್ನಾಗಿ ಮಾಡಿದ್ದೇವೆ’ ಎಂದು ಸಿನಿಮಾ ನಿರ್ದೇಶಕ ಪಿ.ಶೇಷಾದ್ರಿ ಅವರು ಅಭಿಪ್ರಾಯಪಟ್ಟರು.

‘ಕನ್ನಡ ಧಾರಾವಾಹಿಗಳಲ್ಲಿ ಮಹಿಳೆ’ ಎನ್ನುವ ವಿಷಯದ ಕುರಿತು ‘ಪ್ರಜಾವಾಣಿ’ಯ ‘ಆಲದಮರ’ ಕ್ಲಬ್‌ಹೌಸ್ ಕೋಣೆಯಲ್ಲಿ ಭಾನುವಾರ ನಡೆದ ಚರ್ಚೆಯಲ್ಲಿ ಅವರು ಅಭಿಪ್ರಾ-ಯವನ್ನು ಹಂಚಿಕೊಂಡರು.

ಚಿತ್ರಕತೆ ಬರಹಗಾರ್ತಿ ಮಾಧುರಿ ಶಿವಣಗಿ ಅವರು ಶೇಷಾದ್ರಿ ಅವರ ಅಭಿಪ್ರಾಯಕ್ಕೆ ಪೂರಕವಾಗಿ, ‘ಮಹಿಳಾ ಸಬಲೀಕರಣದ ಹಿನ್ನೆಲೆಯಲ್ಲಿ ಸ್ವತಂತ್ರವಾಗಿ ಯೋಚಿಸುವ ಮಹಿಳಾ ಪಾತ್ರಗಳನ್ನು ಸಕಾರಾತ್ಮಕ ಧೋರಣೆಯೊಂದಿಗೆ ಹಿಂದೆಲ್ಲ ಕಟ್ಟಲಾಗುತ್ತಿತ್ತು. ಇಂದು, ನಕಾರಾತ್ಮಕ ಅಂಶಗಳನ್ನೇ ಮಹಿಳಾ ಪಾತ್ರಗಳಿಗೆ ಹೊರಿಸಿ ಅದನ್ನೇ ವೈಭವೀ-ಕರಿಸಲಾಗುತ್ತಿದೆ’ ಎಂದು ಹೇಳಿದರು.

‘ಧಾರಾವಾಹಿಗಳನ್ನು ಮಹಿಳೆಯರೇ ಹೆಚ್ಚು ನೋಡುತ್ತಾರೆ. ಆದ್ದರಿಂದ ಧಾರಾವಾಹಿಗಳಲ್ಲಿ ಮಹಿಳೆಯೇ ಮುಖ್ಯ ಪಾತ್ರಧಾರಿ. ಅವರಿಗೆ ಭಾವನಾತ್ಮಕ ಅಂಶಗಳು ಹೆಚ್ಚು ಇಷ್ಟ. ಹಾಗಾಗಿ, ಮಹಿಳಾ ಪಾತ್ರ ಅನುಭವಿಸುವ ಕಷ್ಟ, ಅದರಿಂದ ಆಕೆ ಹೊರಬರುವುದನ್ನು ತೋರಿಸುವಾಗ ನಕಾರಾತ್ಮಕ ಅಂಶಗಳನ್ನು ವೈಭವೀಕ-ರಿಸಲೇಬೇಕಾಗುತ್ತದೆ’ ಎಂದು ಕಿರುತೆರೆ ಧಾರಾವಾಹಿ ನಿರ್ದೇಶಕ ಆರ್.ಪ್ರೀತಂ ಶೆಟ್ಟಿ ಸಮರ್ಥಿಸಿಕೊಂಡರು.

‘ಧಾರಾವಾಹಿಗಳಲ್ಲಿ ನಕಾರಾತ್ಮಕ ಅಂಶಗಳನ್ನು ತೋರಿಸೋದು ಹೆಚ್ಚುತ್ತಿದೆ. ಯುವಜನತೆ ಈಗ ಹೆಚ್ಚು ವೆಬ್ ಸೀರೀಸ್ ಕಡೆಗೆ ಮುಖ ಮಾಡಿದ್ದಾರೆ’ ಎಂದರು ನಟಿ ನಂದಿನಿ ವಿಠ್ಠಲ್.

ಪ್ರೇಕ್ಷಕ ಹೆಚ್ಚು ಜವಾಬ್ದಾರನಾಗಬೇಕು: ‘ಮದುವೆ ದೃಶ್ಯಗಳನ್ನೇ 10 ದಿನ ತೋರಿಸುತ್ತಾರೆ, ಅಸಂಬದ್ಧವಾಗಿ ಕಥೆ ಹೆಣೆಯುತ್ತಾರೆ ಎಂದು ಒಬ್ಬರು ನನ್ನ ಬಳಿ ಹೇಳಿದರು. ಇಂಥ ಧಾರಾವಾಹಿಗಳನ್ನು ತಿರಸ್ಕರಿಸಿ, ನೋಡುವುದನ್ನು ನಿಲ್ಲಿಸಿ ಎಂದು ಅವರಿಗೆ ಹೇಳಿದೆ. ಎಲ್ಲವೂ ಪ್ರೇಕ್ಷಕನ ಕೈಯಲ್ಲಿದೆ, ಆತ ಎಲ್ಲವನ್ನು ಸರಿಮಾಡಬಲ್ಲ’ ಎಂದು ಶೇಷಾದ್ರಿ ಹೇಳಿದರು.

ಸಾಮಾಜಿಕ ಜವಾಬ್ದಾರಿ ಇಲ್ಲ: ಮಹಿಳೆಯರನ್ನು ಬಿಂಬಿಸುವ ರೀತಿಯಲ್ಲಿ ಬದಲಾವಣೆಗಳು ಆಗಬೇಕಿದೆ. ವಾಹಿನಿ ಮತ್ತು ಜನರು, ಇಬ್ಬರೂ ಸಾಮಾಜಿಕ ಜವಾಬ್ದಾರಿಯನ್ನು ಅರಿಯಬೇಕಿದೆ ಎನ್ನುವುದಕ್ಕೆ ಬಹುಪಾಲು ಮಂದಿ ಚರ್ಚೆಯಲ್ಲಿ ಸಹಮತ ವ್ಯಕ್ತಪಡಿಸಿದರು.

‘ಬಾಲ್ಯ ವಿವಾಹದಂಥ ಕಥೆ ಆಧರಿಸಿ ಧಾರಾವಾಹಿ ಮಾಡಿದರು. ಸಮಾಜದೊಂದಿಗೆ ಸಂಬಂಧವೇ ಇಲ್ಲದಂತೆ ಅದನ್ನು ನಿರ್ವಹಿಸಲಾಯಿತು. ಬಾಲ್ಯ ವಿವಾಹದಿಂದ ನಿಜವಾದ ಸಮಸ್ಯೆ ಕಡೆ ಗಮನ ಹರಿಸಲೇ ಇಲ್ಲ’ ಎಂದು ಕಿರುತೆರೆ ನಟಿ ದೀಪಾ ರವಿಶಂಕರ್ ಅವರು ಅಭಿಪ್ರಾಯಪಟ್ಟರು.

ಒಳ್ಳೆಯ ಪ್ರಯತ್ನಗಳನ್ನು ಜನರು ಒಪ್ಪಿಕೊಂಡರೆ ನಾವು ಮಣ್ಣಿಗೆ ಹತ್ತಿರ ಇರುವ ಕಥೆಗಳನ್ನು ಮಾಡಬಹುದು

ಆರ್. ಪ್ರೀತಂ ಶೆಟ್ಟಿ, ಕಿರುತೆರೆ ಧಾರಾವಾಹಿ ನಿರ್ದೇಶಕ

ಕನ್ನಡತನ ಇಲ್ಲದ ಕಥೆಗಳು

‘ನಮಗೆ ಕನ್ನಡತನದ ಬಗ್ಗೆ ಹೆಚ್ಚು ಗೌರವ ಇಲ್ಲದಂತಾಗಿದೆ. ಇದು ಮುಖ್ಯ ಸಮಸ್ಯೆ. ಕೊನೆಗೂ ಟಿಆರ್‌ಪಿ ಮುಖ್ಯವಾಗುತ್ತದೆ. ಸದಭಿರುಚಿಯ ಕಥೆ, ಕಾರ್ಯಕ್ರಮಗಳು ಬರಬೇಕು ಎಂದಾದರೆ ಸಮಾಜದಲ್ಲಿ ಈ ಧೋರಣೆ ಬದಲಾಗಬೇಕು. ಯಾವುದು ಮಾರುಕಟ್ಟೆಯಲ್ಲಿ ಓಡುತ್ತದೆಯೋ ವಾಹಿನಿಯವರು ಅಂಥದ್ದೇ ಕಂಟೆಂಟ್‌ಗಳನ್ನು ಕೊಡುತ್ತಾರೆ ಅಷ್ಟೆ’ ಎಂದು ನಟಿ ರಂಜಿನಿ ರಾಘವನ್ ಹೇಳಿದರು. ಕನ್ನಡ ಕಿರುತೆರೆಯಲ್ಲಿ ಕೇವಲ ಆಮದು ಸರಕು ಹೆಚ್ಚಾಗಿದೆ. ಕನ್ನಡದ ಕಥೆಗಳು, ಇಲ್ಲಿನ ಸಂಸ್ಕೃತಿಗಳನ್ನು ತೋರಿಸುವ ಕಥೆಗಳು ಬರುತ್ತಿಲ್ಲ. ಯಾಕೆ ಹೀಗಾಗುತ್ತಿದೆ ಎನ್ನುವುದರ ಕುರಿತು ಚರ್ಚೆ ನಡೆಯಿತು.

‘ಧಾರಾವಾಹಿಯು ನಿರ್ದೇಶಕನ ಹಿಡಿತದಿಂದ ತಪ್ಪಿ, ವಾಹಿನಿಯ ಹಿಡಿತಕ್ಕೆ ಸಿಕ್ಕಿದೆ. ನಿರ್ದೇಶಕ, ಬರಹಗಾರ ಎಲ್ಲರೂ ವಾಹಿನಿಯ ಕೈಗೊಂಬೆಗಳಾಗಿದ್ದಾರೆ. ವಾಹಿನಿಗಿಂತ ಮೇಲೂ ಯಾರೋ ಬಿಗ್‌ಬಾಸ್ ಕೂತಿರಬಹುದು’ ಎಂದು ಶೇಷಾದ್ರಿ ಅಭಿಪ್ರಾಯಪಟ್ಟರೆ, ‘ವಾಹಿನಿಗಳಲ್ಲಿ ಕನ್ನಡದ ಮನಸ್ಸುಗಳನ್ನು ಕೂರಿಸುವ ಕೆಲಸ ಆಗಬೇಕಿದೆ’ ಎಂದು ಮಾಧುರಿ ಶಿವಣಗಿ ಅವರು ಹೇಳಿದರು.

ಪ್ರಜಾವಾಣಿ ಆಲದಮರ

ರಸ್ತೆ ಅಪಘಾತ: ‘ನಿರ್ಲಕ್ಷ್ಯದ್ದೇ ದೊಡ್ಡ ಕೊಡುಗೆ’

ನವದೆಹಲಿ: ಕೋವಿಡ್ ಲಾಕ್‌ಡೌನ್ ಹೊರತಾಗಿಯೂ ದೇಶದಾದ್ಯಂತ 2020ರಲ್ಲಿ ರಸ್ತೆ ಅಪಘಾತಗಳಿಂದ 1.20 ಲಕ್ಷ ಜನರು ಮೃತಪಟ್ಟದ್ದಾರೆ. ನಿತ್ಯ ಸರಾಸರಿ 328 ಜನರು ಜೀವ ಕಳೆದುಕೊಂಡಿದ್ದಾರೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಮಂಡಳಿ (ಎನ್‌ಸಿಆರ್‌ಬಿ) 2020ರ ‘ಕ್ರೈಂ ಇಂಡಿಯಾ’ ವರದಿಯಲ್ಲಿ ಈ ಅಂಶವನ್ನು ದಾಖಲಿಸಿದೆ



- ದೇಶದಾದ್ಯಂತ 2020ರಲ್ಲಿ ವೈದ್ಯಕೀಯ ನಿರ್ಲಕ್ಷ್ಯದ ಕಾರಣ ಸಂಭವಿಸಿದ ಅಪಘಾತಗಳಲ್ಲಿ 113 ಜನರು ಸತ್ತಿದ್ದಾರೆ. ಇದು, 2019ರಲ್ಲಿ 201 ಆಗಿದ್ದರೆ, 2018ರಲ್ಲಿ 218 ಆಗಿತ್ತು.
- ಸ್ಥಳೀಯ ಸಂಸ್ಥೆಗಳ ನಿರ್ಲಕ್ಷ್ಯದ ಕಾರಣ 2020ರಲ್ಲಿ 51 ಮಂದಿ ಸತ್ತಿದ್ದಾರೆ. ಇದು, 2019ರಲ್ಲಿ 147, 2018ರಲ್ಲಿ 40 ಮಂದಿ ಮೃತಪಟ್ಟದ್ದರು.
- 2020ರಲ್ಲಿ ಇತರೆ ನಿರ್ಲಕ್ಷ್ಯದ ಕಾರಣ ಸಾವು ಸಂಭವಿಸಿದ ಅಪಘಾತಗಳ ಸಂಖ್ಯೆ 6,367. ಇದು 2019ರಲ್ಲಿ 7,912 ಹಾಗೂ 2018ರಲ್ಲಿ 8,687 ಆಗಿತ್ತು.
- ಕೋವಿಡ್ ಕಾರಣದಿಂದ ದೇಶದಲ್ಲಿ ಮಾರ್ಚ್ 25, 2020ರಿಂದ, ಮೇ 31, 2020ರವರೆಗೆ ಪೂರ್ಣ ಲಾಕ್‌ಡೌನ್ ಇತ್ತು. ಈ ಅವಧಿಯಲ್ಲಿ ಸಾರ್ವಜನಿಕರ ಸಂಚಾರ ವಿರಳವಾಗಿತ್ತು ಎಂದು ವರದಿ ಉಲ್ಲೇಖಿಸಿದೆ.

‘ನಂಜನಗೂಡಿನ ಪ್ರಕರಣ ಮರುಕಳಿಸಲು ಬಿಡೊಲ್ಲ’

ಒಂದನೇ ಪುಟದಿಂದ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು, ‘ನಂಜನಗೂಡಿನಲ್ಲಿ ಮಂದಿರ ನಿರ್ಮಿಸಲು ಸರ್ಕಾರ ಕ್ರಮಕೈಗೊಳ್ಳಲಿದೆ. ಜತೆಗೆ ತಪ್ಪಿತಸ್ಥ ಅಧಿಕಾರಿಯ ಮೇಲೆ ಕಾನೂನು ಕ್ರಮ ಕೈಗೊಳ್ಳುತ್ತದೆ’ ಎಂ ದರು.

‘ನೂರಾರು ದೇವಸ್ಥಾನಗಳನ್ನು ಧ್ವಂಸ ಮಾಡಿದ ಟಿಪ್ಪು ಸುಲ್ತಾನ್‌ನ ಜಯಂತಿ ಮಾಡಿದ ಸಿದ್ದರಾಮಯ್ಯಗೆ, 24 ಮಂದಿ ಹಿಂದೂ ಕಾರ್ಯಕರ್ತರ ಹತ್ಯೆ ಆದಾಗಲೂ ಕಣ್ಣಲ್ಲಿ ನೀರು ಬಾರದ ಸಿದ್ದರಾಮಯ್ಯಗೆ, ಲಿಂಗಾಯತ–ವೀರಶೈವ ಎಂದು ಧರ್ಮವನ್ನು ಒಡೆಯಲು ಯತ್ನಿಸಿದ ಸಿದ್ದರಾಮಯ್ಯಗೆ ದೇವಸ್ಥಾನಗಳ ಬಗ್ಗೆ ಮಾತನಾಡುವ ಹಕ್ಕಿಲ್ಲ’ ಎಂದು ಹರಿಹಾಯ್ದರು.

‘ಇಂಧನ ಬೆಲೆ ಏರಿದೆ ಎಂದು ಕಾಂಗ್ರೆಸಿಗರು ಮೊನ್ನೆ ಎತ್ತಿನಗಾಡಿಯ-ಲ್ಲಿ ಬಂದಿದ್ದರು. ಅವರ ಸರ್ಕಾರವೇ ಇದ್ದಿದ್ದರೆ ಎತ್ತುಗಳೇ ಇರುತ್ತಿರಲಿಲ್ಲ’ ಎಂದು ವ್ಯಂಗ್ಯವಾಡಿದರು.

‘140 ಸೀಟು ಗುರಿ’

‘ವಿಧಾನಪರಿಷತ್‌ನ 25 ಸ್ಥಾನಗಳ ಚುನಾವಣೆ, ಜಿಲ್ಲಾ, ತಾಲ್ಲೂಕು ಪಂಚಾಯಿತಿ ಚುನಾವಣೆ ಗೆಲ್ಲುವ ಜೊತೆಗೆ ಮುಂದೆ ವಿಧಾನಸಭೆ ಚುನಾವಣೆಯಲ್ಲಿ 140 ಸೀಟು ಗೆಲ್ಲುವ ಗುರಿ ಇದೆ. ಅಭಿವೃದ್ಧಿ ಕಾರ್ಯ ಮಾಡಿ ಈ ಗುರಿ ತಲುಪುತ್ತೇವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕಾಂಗ್ರೆಸ್ ಸ್ವಾತಂತ್ರ್ಯ ಚಳವಳಿಯ ಅಲೆಯಲ್ಲಿ ರಾಜಕಾರಣ ಮಾಡಿದ ಪಕ್ಷ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪ್ರಜಾಪ್ರಭುತ್ವವಾದಿ ಗಾಂಧಿಯನ್ನು ಬಿಟ್ಟು, ಸರ್ವಾಧಿಕಾರಿ ಗಾಂಧಿಯನ್ನು ಹಿಡಿದುಕೊಂಡ ಪಕ್ಷ ಅದು ಎಂದು ಟೀಕಿಸಿದರು.

ವಿಡಿಯೊದಲ್ಲಿರುವುದು ನಾನಲ್ಲ: ಡಿ.ವಿ.ಎಸ್

ಪ್ರಜಾವಾಣಿ ವಾರ್ತೆ

ಡಿ.ವಿ. ಸದಾನಂದ ಗೌಡ

ಬೆಂಗಳೂರು: ‘ನನ್ನನ್ನು ಹೋಲುವ ರೀತಿಯಲ್ಲಿ ಸೃಷ್ಟಿಸಿರುವ (ಮಾರ್ಫ್) ನಕಲಿ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ನನ್ನ ನಿಷ್ಕಳಂಕ ವ್ಯಕ್ತಿತ್ವವನ್ನು ಹಾಳು ಮಾಡಲು ವಿರೋಧಿಗಳು ಇದನ್ನು ನಿರ್ಮಿಸಿದ್ದಾರೆ. ಆ ವಿಡಿಯೊದಲ್ಲಿ ಇರುವುದು ನಾನಲ್ಲ’ ಎಂದು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಸಂಸದ ಡಿ.ವಿ. ಸದಾನಂದ ಗೌಡ ಹೇಳಿದ್ದಾರೆ.

ಟ್ವಿಟರ್ ಹಾಗೂ ಫೇಸ್ ಬುಕ್ ಖಾತೆಗಳ ಮೂಲಕ ಹೇಳಿಕೆ ಬಿಡುಗಡೆ ಮಾಡಿರುವ ಅವರು, ‘ನಾನು ಈಗಾಗಲೇ ಸೈಬರ್ ಅಪರಾಧ ವಿಭಾಗದ ಪೊಲೀಸರಿಗೆ ದೂರು ನೀಡಿದ್ದೇನೆ. ಅಪರಾಧಿಗಳನ್ನು ಶೀಘ್ರವೇ ಬಂಧಿಸಲಾಗುತ್ತದೆ ಎಂಬ ನಂಬಿಕೆ ನನಗಿದೆ’ ಎಂದು ತಿಳಿಸಿದ್ದಾರೆ.

‘ಈ ವಿಷಯದಲ್ಲಿ ನಾನು ನ್ಯಾಯಾಲಯದಿಂದ ಪ್ರತಿಬಂಧಕಾಜ್ಞೆ-ಯನ್ನು ಪಡೆದಿರುವೆ. ನ್ಯಾಯಾಲಯದ ಆದೇಶ ಉಲ್ಲಂಘಿಸಿ ವಿಷಯವನ್ನು ಫಾರ್ವರ್ಡ್ ಮಾಡುವವರು ಮತ್ತು ಅಪ್‌ಲೋಡ್ ಮಾಡುವವರು ಕಾನೂನಿನ ಪ್ರಕಾರ ಶಿಕ್ಷೆಗೆ ಗುರಿಯಾಗುತ್ತಾರೆ. ಆ ರೀತಿ ಮಾಡುವ ಯಾರಾದರೂ ನಿಮಗೆ ತಿಳಿದಿದ್ದರೆ ನನಗೆ ಮಾಹಿತಿ ನೀಡಿ’ ಎಂದು ಮನವಿ ಮಾಡಿದ್ದಾರೆ.

ಅಪ್ಪನಿಂದ ದೂರು: ಇದೇ ವಿಷಯಕ್ಕೆ ಸಂಬಂಧಿಸಿ ಸದಾನಂದ ಗೌಡರ ಆಪ್ತ ತಮ್ಮೇಗೌಡ ಎಂ.ಎಂಬುವವರು ಬೆಂಗಳೂರು ನಗರ ಪೊಲೀಸ್ ಕಮಿಷನರ್, ಉತ್ತರ ವಿಭಾಗದ ಡಿಸಿಪಿ ಮತ್ತು ಆರ್‌.ಟಿ. ನಗರ ಉಪ ವಿಭಾಗದ ಎಸಿಪಿಗೆ ದೂರು ಸಲ್ಲಿಸಿದ್ದಾರೆ.

‘ರಾಜಕೀಯ ದುರುದ್ದೇಶದಿಂದ ಸಂಸದ ಡಿ.ವಿ. ಸದಾನಂದ ಗೌಡರನ್ನು ಹೋಲುವಂತೆ ನಕಲಿ ವಿಡಿಯೊ ಸೃಷ್ಟಿಸಿ ಫೇಸ್‌ಬುಕ್, ವಾಟ್ಸ್ ಆ್ಯಪ್ ಮತ್ತು ಇತರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯ-ಬಿಡಲಾಗಿದೆ. ಸಂಸದರ ವ್ಯಕ್ತಿತ್ವಕ್ಕೆ ಕಳಂಕ ತರುವ ಉದ್ದೇಶದಿಂದ ದುಷ್ಕರ್ಮಿಗಳು ಈ ಕೃತ್ಯ ಎಸಗಿದ್ದಾರೆ. ಅವರನ್ನು ಪತ್ತೆಮಾಡಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕು’ ಎಂದು ದೂರಿನಲ್ಲಿ ಮನವಿ ಮಾಡಿದ್ದಾರೆ.

ದೂರಿನ ಪ್ರತಿಯನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿರುವ ಸದಾನಂದ ಗೌಡ, ‘ನನ್ನ ರಾಜಕೀಯ ಏಳಿಗೆಯನ್ನು ಸಹಿಸದ ವಿರೋಧಿಗಳು ನನ್ನನ್ನು ಹೋಲುವ ರೀತಿಯಲ್ಲಿ ಕೀಳು ಅಭಿರುಚಿಯ ನಕಲಿ ವಿಡಿಯೊ ಸೃಷ್ಟಿಸಿ ಹರಿಯಬಿಟ್ಟಿದ್ದಾರೆ. ಈ ಕುರಿತು ಪೊಲೀಸರಿಗೆ ದೂರು ನೀಡಲಾಗಿದೆ. ಸಂಬಂಧಿಸಿದ ಅಧಿಕಾರಿಗಳು, ಆರೋಪಿಗಳನ್ನು ತಕ್ಷಣವೇ ಬಂಧಿಸಿ, ಶಿಕ್ಷೆಗೆ ಗುರಿಪಡಿಸಬೇಕು’ ಎಂದು ಒತ್ತಾ-ಯಿಸಿದ್ದಾರೆ.

ಮುಖ್ಯಾಂಶಗಳು

- ನಕಲಿ ವಿಡಿಯೊ ಮೂಲಕ ಹೆಸರು ಕೆಡಿಸಲು ಪ್ರಯತ್ನ
- ಸೈಬರ್ ವಿಭಾಗದಲ್ಲಿ ದೂರು ದಾಖಲು

The Printers (Mysore) Pvt. Ltd

Publishers of DECCAN HERALD, PRAJAVANI, SUDHA & MAYURA

No.7-12, Kumbalgodu Indl. Area, Mysore Road, Bangalore - 74

NEWSPRINT WASTE FOR SALE

Sealed Tenders are invited for the disposal of the following Newsprint wastes from our Press at Bangalore, Dharwad, Mangalore, Harihara, Mysore, Gulbarga and Hospet. For the period Oct-Dec 2021.

Details	Location-wise quantity in MT per month						
	Bangalore	Dharwad	Mangalore	Harihara	Mysore	Gulbarga	Hospet
DH &PV Print waste & unsolds (Voucher & Office Copies)	50	12	4.5	3	6	3.75	4
Mixed Print & Folded waste	3	1.5					
DH,PV, Sudha & Mayura Peel waste	2.5	0.6	0.4		0.5		
White Reel ends including core DH,PV, Sudha & Mayura	12	3.5	0.75	1.4	1	2	2
DH, PV, Sudha & Mayura Reel Wrappers/Miscelenous sweep/Bale pattie waste	12	3	1	2.2	1	1	1
Sudha & Mayura Print waste & unsolds-Magazine	1	0.6	0.9	0.8	0.9	0.9	0
Miscellaneous Tissue/Mixed White waste/ Carton boxes	2	1	1	1	1	1	1

For clarification, contact Procurement Head at 45557340. Sealed Tenders/mail may be addressed to Procurement Head and sent to the above address **within 7 days** from the date of this advertisement.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ (ತ್ಯಾ.ನೀ.ನಿ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1	ತ್ಯಾ.ನೀ.ನಿ.– ಕೆ&ಟಿ ವ್ಯಾಲಿ	ಬೆಂಜಮಂ/ಇಡಬ್ಲ್ಯೂಕೆಟಿ/ಪಿಬಿ/1213/ 2021–22, ದಿನಾಂಕ: 14.09.2021	81.65 ಲಕ್ಷಗಳು / 1.638 ಲಕ್ಷಗಳು	26.09.2021ರ ಸಂಜೆ 4:00 ಗಂಟೆಯವರೆಗೆ	28.09.2021ರ ಸಂಜೆ 4:00 ಗಂಟೆಗೆ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾ.ನೀ.ನಿ.–ಕೆ&ಟಿ ವ್ಯಾಲಿ)				
2	ತ್ಯಾ.ನೀ.ನಿ.– ಸಿ.ವ್ಯಾಲಿ	ಬೆಂಜಮಂ/ಕಾನಿಅ(ತ್ಯಾ.ನೀ.ನಿ)–(ಸಿವಿ)/ಪಿಬಿ/ 837/2021–22, ದಿನಾಂಕ: 13.09.2021	3.66 ಲಕ್ಷಗಳು / 10,000/–	27.09.2021ರ ಸಂಜೆ 4:00 ಗಂಟೆಯವರೆಗೆ	28.09.2021ರ ಸಂಜೆ 4:10 ಗಂಟೆಗೆ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾ.ನೀ.ನಿ.–ಸಿ.ವ್ಯಾಲಿ)				
3	ಎಸ್‌ಟಿಪಿ– ಕೆ.ವ್ಯಾಲಿ	ಬೆಂಜಮಂ/ಅಮುಅ(ತ್ಯಾ.ನೀ.ನಿ.)–3/ಪಿಬಿ/ 226/2021–22, ದಿನಾಂಕ: 13.09.2021	2,05,000/– / 5,125/–	05.10.2021ರ ಸಂಜೆ 4:00 ಗಂಟೆಯವರೆಗೆ	06.10.2021ರ ಸಂಜೆ 4:05 ಗಂಟೆಗೆ
4	ಎಸ್‌ಟಿಪಿ– ಕೆ.ವ್ಯಾಲಿ	ಬೆಂಜಮಂ/ಅಮುಅ(ತ್ಯಾ.ನೀ.ನಿ.)–3/ಪಿಬಿ/ 228/2021–22, ದಿನಾಂಕ: 13.09.2021	1,32,991/– / 3,325/–	05.10.2021ರ ಸಂಜೆ 4:00 ಗಂಟೆಯವರೆಗೆ	06.10.2021ರ ಸಂಜೆ 4:05 ಗಂಟೆಗೆ
	ಸಹಿ/– ಅಮುಅ (ತ್ಯಾ.ನೀ.ನಿ.–3)–(ಎಸ್‌ಟಿಪಿ–ಕೆ.ವ್ಯಾಲಿ)				
5	ಎಸ್‌ಟಿಪಿ– ಹೆಚ್.ವ್ಯಾಲಿ	ಬೆಂಜಮಂ/ಇಎಸ್‌ಹೆಚ್/ಪಿಬಿ/ 536/2021–22, ದಿನಾಂಕ: 17.09.2021	14,30,000/– / 35,726/–	04.10.2021ರ ಸಂಜೆ 5:00 ಗಂಟೆಯವರೆಗೆ	05.10.2021ರ ಸಂಜೆ 5:00 ಗಂಟೆಗೆ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಎಸ್‌ಟಿಪಿ–ಹೆಚ್.ವ್ಯಾಲಿ)				
	ಮುಖ್ಯ ಅಭಿಯಂತರರ ಕಚೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009				
6	ನೈರುತ್ಯ	ಬೆಂಜಮಂ/ಕಾನಿಅ(ನೈರುತ್ಯ)/ತಾಂಅ/ಪಿಬಿ/ 1481/2021–22, ದಿನಾಂಕ: 15.09.2021	2,83,447/– / 7,100/–	11.10.2021ರ ಸಂಜೆ 4:00 ಗಂಟೆಯವರೆಗೆ	13.10.2021ರ ಸಂಜೆ 3:00 ಗಂಟೆಯ ನಂತರ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ನೈರುತ್ಯ)				
7	ಕೇಂದ್ರ	ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/ 1567/2021–22, ದಿನಾಂಕ: 18.09.2021	8,93,214/– / 22,400/–	28.09.2021ರ ಸಂಜೆ 5:00 ಗಂಟೆಯವರೆಗೆ	30.09.2021ರ ಸಂಜೆ 5:01 ಗಂಟೆಯ ನಂತರ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ)				
	ಮುಖ್ಯ ಅಭಿಯಂತರರ ಕಚೇರಿ (ಪೂರ್ವ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009				
8	ಪೂರ್ವ–1	ಬೆಂಜಮಂ/ಕಾನಿಅ(ಪೂ)–1/ಪಿಬಿ/ 944/2021–22, ದಿನಾಂಕ: 13.09.2021	86,81,235/– / 1,73,625/–	05.10.2021ರ ಸಂಜೆ 4:00 ಗಂಟೆಯವರೆಗೆ	07.10.2021ರ ಸಂಜೆ 5:00 ಗಂಟೆಯ ನಂತರ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ–1)				

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು **https://eproc.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/DDU/BCPL/1566/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾಂಗ್ರೆಸ್ ಕಲಹದ ಬಗ್ಗೆ ಬೇಸರ ವ್ಯಕ್ತಪಡಿಸಿದ ಅಮರಿಂದರ್: ಸೋನಿಯಾಗೆ ಪತ್ರ

ಪಂಜಾಬ್ ಶಾಂತಿಗೆ ಧಕ್ಕೆ ಬಾರದಿರಲಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಂಜಾಬ್‌ನಲ್ಲಿ ತಮ್ಮ ನಾಯಕತ್ವದಲ್ಲಿ ಬಹಳ ಕಷ್ಟಪಟ್ಟು ಸ್ಥಾಪಿಸಲಾಗಿರುವ ಶಾಂತಿಯುತ ಪರಿಸ್ಥಿತಿ ಮತ್ತು ಅಭಿವೃದ್ಧಿಗೆ ಕಾಂಗ್ರೆಸ್ ಪಕ್ಷದಲ್ಲಿನ ಬೆಳವಣಿಗೆಗಳು ಧಕ್ಕೆ ಉಂಟು ಮಾಡಲಿಲ್ಲ ಎಂಬ ಭರವಸೆ ಇದೆ ಎಂದು ಅಮರಿಂದರ್ ಸಿಂಗ್ ಅವರು ಹೇಳಿದ್ದಾರೆ. ಪಂಜಾಬ್ ಮುಖ್ಯಮಂತ್ರಿ ಸ್ಥಾನಕ್ಕೆ ಶನಿವಾರ ರಾಜೀನಾಮೆ ನೀಡುವ ಮುನ್ನ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಬರೆದ ಪತ್ರದಲ್ಲಿ ಈ ವಿಚಾರವನ್ನು ಅವರು ಉಲ್ಲೇಖಿಸಿದ್ದಾರೆ.

ಐದು ತಿಂಗಳಿಂದ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಕಿತ್ತಾಟದ ಬಗ್ಗೆ ಅಮರಿಂದರ್ ಅವರು ಗಾಢ ಕಳವಳ ವ್ಯಕ್ತಪಡಿಸಿದ್ದಾರೆ.

'ನನಗೆ ವೈಯಕ್ತಿಕವಾಗಿ ಆಗಿರುವ ವೇದನೆ ಏನೇ ಇರಲಿ, ರಾಜ್ಯದ ಶಾಂತಿ, ಅಭಿವೃದ್ಧಿಗೆ ಧಕ್ಕೆ ಆಗಬಾರದು. ರಾಜ್ಯದ ಎಲ್ಲರಿಗೂ ನ್ಯಾಯ ದೊರೆಯಬೇಕು' ಎಂದು ಪತ್ರದಲ್ಲಿ ಅವರು ಕೋರಿದ್ದಾರೆ.

ಕಾಂಗ್ರೆಸ್ ಪಕ್ಷದ ಒಳಗಿನ ಬೆಳವಣಿಗೆಗಳು ರಾಜ್ಯದಲ್ಲಿ ಅಸ್ಥಿರತೆಗೆ ಕಾರಣ ಆಗಬಾರದು ಎಂಬ ಕಳವಳವನ್ನು ಪರೋಕ್ಷವಾಗಿ ಅಮರಿಂದರ್ ಅವರು ವ್ಯಕ್ತಪಡಿಸಿದ್ದಾರೆ. ಅಮರಿಂದರ್ ಅವರ ಕಚೇರಿಯೇ ಪತ್ರದ ಆಯ್ದ ಅಂಶಗಳನ್ನು ಮಾಧ್ಯಮಕ್ಕೆ ಒದಗಿಸಿದೆ.

ಪಂಜಾಬ್‌ನ ಬೆಳವಣಿಗೆಗಳು ರಾಷ್ಟ್ರ ಮಟ್ಟದ ಪರಿಣಾಮಗಳನ್ನು ಉಂಟು ಮಾಡುತ್ತವೆ. ಆದರೆ, ಈ ಬೆಳವಣಿಗೆಗಳಿಗೆ ಕಾರಣರಾದವರು ಈ ಬಗ್ಗೆ ಗಮನ ಹರಿಸಿಲ್ಲ. ಪಂಜಾಬ್ ರಾಜ್ಯದ ಹಿತಾಸಕ್ತಿಯನ್ನು ಗಣನೆಗೆ ತೆಗೆದುಕೊಂಡಿಲ್ಲ ಎಂದು ಅಮರಿಂದರ್ ಹೇಳಿದ್ದಾರೆ. ಪಂಜಾಬ್ ಗಡಿ ರಾಜ್ಯ ಎಂಬುದನ್ನೂ ಅವರು ನೆನಪಿಸಿದ್ದಾರೆ.

ಪ್ರೌಢ ಮತ್ತು ಪರಿಣಾಮಕಾರಿಯಾದ ಸಾರ್ವಜನಿಕ ನೀತಿಗಳಿಗಾಗಿ ಪಂಜಾಬ್‌ನ ಜನರು ಕಾಂಗ್ರೆಸ್‌ನತ್ತ ನೋಡುತ್ತಿದ್ದಾರೆ. ಇದು ಉತ್ತಮ ರಾಜಕಾರಣದ ಮಾತ್ರವಲ್ಲದೆ, ಸಾಮಾನ್ಯ ಜನರ ಕಾಳಜಿಗಳ ಬಗ್ಗೆಯೂ ಗಮನ ಹರಿಸುತ್ತದೆ ಎಂದು ಅವರು ವಿವರಿಸಿದ್ದಾರೆ.

ಹೊಸ ಮುಖ್ಯಮಂತ್ರಿ ಆಯ್ಕೆಯ ಬಳಿಕ ಕಾಂಗ್ರೆಸ್ ಬೆಂಬಲಿಗರು ರಾಜ್ಯಪಾಲರ ನಿವಾಸದ ಮುಂದೆ ಸಂಭ್ರಮ ಪ್ರದರ್ಶಿಸಿದರು ಪಿಟಿಐ– ಚಿತ್ರ

ಗಡಿ ರಾಜ್ಯವು ಭೌಗೋಳಿಕ ಮತ್ತು ಆಂತರಿಕ ಭದ್ರತೆಯ ಅಂಶಗಳನ್ನು ಹೊಂದಿದೆ. ರಾಜ್ ಇಲ್ಲದೆ ಎಲ್ಲವನ್ನೂ ಪರಿಣಾಮಕಾರಿಯಾಗಿ ನಿರ್ವಹಿಸಲು ಯತ್ನಿಸಿದ್ದೇನೆ
ಅಮರಿಂದರ್ ಸಿಂಗ್, ಪಂಜಾಬ್‌ನ ಮಾಜಿ ಮುಖ್ಯಮಂತ್ರಿ

ಅಮರಿಂದರ್ ಪಕ್ಷಕ್ಕೆ ಹಾನಿ ಮಾಡದೇ ಇರಲಿ: ಗೆಹಲೋತ್

ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದ ಕ್ಯಾ. ಅಮರಿಂದರ್ ಸಿಂಗ್ ಅವರು ತಮ್ಮ ರಾಜಕೀಯ ಆಯ್ಕೆ ತೆರೆದೇ ಇದೆ ಎಂದು ಸುಳಿವು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ನೀಡಿರುವ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಪಕ್ಷಕ್ಕೆ ಹಾನಿಯಾಗುವಂತಹ ಯಾವುದೇ ಕ್ರಮಗಳನ್ನು ಅಮರಿಂದರ್ ಸಿಂಗ್ ತೆಗೆದುಕೊಳ್ಳದೇ ಇರಲಿ ಎಂದು ಹೇಳಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ಮುಖ್ಯಮಂತ್ರಿ ಬದಲಾವಣೆ ಆದ ವೇಳೆ ಸ್ಥಾನದಿಂದ ಕೆಳಗಿಳಿದವರು ಅಸಮಾಧಾನಕ್ಕೆ ಒಳಗಾಗುತ್ತಾರೆ ಮತ್ತು ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಅಂಥ ಸಂದರ್ಭಗಳಲ್ಲಿ ಅವರು ತಮ್ಮ ಒಳದನಿಯನ್ನು ಕೇಳಬೇಕು' ಎಂದಿದ್ದಾರೆ.

ದಲಿತ ನಾಯಕ ಚನ್ನಿ

ಚಂಡೀಗಡ: ಪಂಜಾಬ್ ಮುಖ್ಯಮಂತ್ರಿ ಹುದ್ದೆಗಾಗಿ ಹಲವು ಹೆಸರುಗಳು ಕೇಳಿ ಬಂದಿದ್ದವು. ಆದರೆ, ಅದರಲ್ಲಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ಹೆಸರು ಇರಲಿಲ್ಲ. ದಲಿತ ಸಮುದಾಯದ ಪ್ರಭಾವಿ ನಾಯಕ ಎಂಬುದು ಅವರ ಆಯ್ಕೆಗೆ ಮುಖ್ಯ ಕಾರಣ.

ಪಂಜಾಬ್‌ನ ಮಾಲ್ವ ವಿಭಾಗದ ಚಮಕೌರ್ ಸಾಹಿಬ್ ಕ್ಷೇತ್ರದಿಂದ ಮೂರನೇ ಬಾರಿಗೆ ಶಾಸಕರಾಗಿ ಚನ್ನಿ ಆಯ್ಕೆಯಾಗಿದ್ದಾರೆ. ಅವರು ರಾಮದಾಸಿಯಾ ಸಿಖ್ ಸಮುದಾಯಕ್ಕೆ ಸೇರಿದವರು.

ಅಮರಿಂದರ್ ಸಿಂಗ್ ನೇತೃತ್ವದ ಸಚಿವ ಸಂಪುಟದಲ್ಲಿ ಅವರು ತಾಂತ್ರಿಕ ಶಿಕ್ಷಣ ಮತ್ತು ಕೈಗಾರಿಕಾ ಶಿಕ್ಷಣ ಖಾತೆಯ ಸಚಿವರಾಗಿದ್ದರು. 2015ರ ಡಿಸೆಂಬರ್‌ನಿಂದ 2016ರ ನವೆಂಬರ್‌ವರೆಗೆ ಅವರು ವಿರೋಧ ಪಕ್ಷದ ನಾಯಕರಾಗಿದ್ದರು. ಸಟ್ಲೆಜ್- ಯಮುನಾ ಕಾಲುವೆ ವಿವಾದದಲ್ಲಿ ವಿರೋಧ ಪಕ್ಷದ ಎಲ್ಲರೂ ರಾಜೀನಾಮೆ ನೀಡಿದ್ದರಿಂದ ಚನ್ನಿ ಅವರಿಗೆ ಅವಕಾಶ ಒದಗಿ ಬಂದಿತ್ತು. ಚನ್ನಿ ಅವರ ಆಯ್ಕೆಯ ಮೂಲಕ ದಲಿತರ ಪರವಾದ ಪಕ್ಷ ಎಂದು ತನ್ನನ್ನು ಬಿಂಬಿಸಲು ಕಾಂಗ್ರೆಸ್ ಯತ್ನಿಸಿದೆ.

ಸುದ್ದಿ 2 ನಿಮಿಷ

'ಉ.ಪ್ರ: ಜನರ ಸಮಸ್ಯೆಗಳ ಬಗೆಹರಿಸುವಲ್ಲಿ ಬಿಜೆಪಿ ಸೋತಿದೆ'

ನವದೆಹಲಿ (ಪಿಟಿಐ): ಉದ್ಯೋಗ ಸೃಷ್ಟಿ, ರೈತರಿಗೆ ಬಾಕಿ ನೀಡುವುದು ಮತ್ತು ಬೆಲೆ ಏರಿಕೆಯನ್ನು ನಿಯಂತ್ರಿಸುವಂತಹ ಹಲವು ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಬಿಜೆಪಿ ಸೋತಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಉತ್ತರ ಪ್ರದೇಶದ ಬಿಜೆಪಿ ಸರ್ಕಾರವನ್ನು ಟೀಕಿಸಿದ್ದಾರೆ.

ಉತ್ತರ ಪ್ರದೇಶ ಸರ್ಕಾರವು ನಾಲ್ಕೂವರೆ ವರ್ಷದ ಅಧಿಕಾರ ಅವಧಿಯಲ್ಲಿ ಜನರ ಈ ಸಮಸ್ಯೆಗಳನ್ನು ಪರಿಹರಿಸಬೇಕಿತ್ತು. ಆದರೆ, ಅದು ಕೇವಲ ಸುಳ್ಳುಗಳನ್ನೇ ಹೇಳುತ್ತಾ ಮುಂದುವರಿಸಿಕೊಂಡು ಬರುತ್ತಿದೆ ಎಂದು ಅವರು ಹೇಳಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ಉತ್ತರ ಪ್ರದೇಶದ ಅಭಿವೃದ್ಧಿ ಬಗ್ಗೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ನೀಡಿರುವ ಹೇಳಿಕೆಗಳನ್ನು ಉಲ್ಲೇಖಿಸಿದ್ದಾರೆ.

'ಲಕ್ಷ ಜನರಿಗೆ ಉದ್ಯೋಗ ನೀಡಿ ಖಾಲಿ ಹುದ್ದೆಗಳ ಭರ್ತಿ ಮಾಡುವುದು, ಕಬ್ಬು, ಗೋಧಿ, ಭತ್ತ, ಆಲೂಗಡ್ಡೆ ಬೆಳೆಗಳ ಮೇಲಿನ ರೈತರ ಬಾಕಿ ಹಣ ನೀಡುವುದು, ವಿದ್ಯುತ್ ದರ ಕಡಿಮೆ ಮಾಡುವುದು ಮತ್ತು ಬೆಲೆ ಏರಿಕೆ ನಿಯಂತ್ರಿಸುವಲ್ಲಿ ಉತ್ತರ ಪ್ರದೇಶ ಸರ್ಕಾರವು ವಿಫಲವಾಗಿದೆ' ಎಂದು ಟ್ವೀಟ್ ಮಾಡಿದ್ದಾರೆ.

'ಬಿಜೆಪಿ ಸರ್ಕಾರವು ಉತ್ತರ ಪ್ರದೇಶಕ್ಕೆ ಏನು ಮಾಡಿದೆ? ಅಪೌಷ್ಟಿಕತೆ, ಮಹಿಳೆಯರ ಮೇಲಿನ ಅಪರಾಧ, ಅಪಹರಣ, ಕೊಲೆ ಪ್ರಕರಣಗಳು ಮತ್ತು ದಲಿತರ ಮೇಲಿನ ದೌರ್ಜನ್ಯಗಳಲ್ಲಿ ರಾಜ್ಯ ಮೊದಲನೇ ಸ್ಥಾನ ಪಡೆಯುವಂತೆ ಮಾಡಿದೆ' ಎಂದು ಮತ್ತೊಂದು ಟ್ವೀಟ್‌ನಲ್ಲಿ ಆರೋಪಿಸಿದ್ದಾರೆ.

ಹೈಕೋರ್ಟ್‌ಗೆ ನ್ಯಾಯಮೂರ್ತಿಗಳ ನೇಮಕ: ನಿರ್ಧಾರ ಕೈಗೊಳ್ಳದ ಸರ್ಕಾರ

ನವದೆಹಲಿ: ಹೈಕೋರ್ಟ್ ನ್ಯಾಯಮೂರ್ತಿಗಳನ್ನಾಗಿ 68 ನ್ಯಾಯಾಂಗ ಅಧಿಕಾರಿಗಳು ಮತ್ತು ವಕೀಲರನ್ನು ನೇಮಿಸಲು ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿರುವ ಹೆಸರುಗಳ ಬಗ್ಗೆ ಸರ್ಕಾರ ಇನ್ನೂ ನಿರ್ಧಾರ ಕೈಗೊಳ್ಳಬೇಕಾಗಿದೆ.

12 ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳನ್ನು ನೇಮಿಸಲು ಕೊಲಿಜಿಯಂ ವಿವಿಧ ಹಂತದ ಪ್ರಕ್ರಿಯೆಗಳನ್ನು ಕೈಗೊಂಡಿತ್ತು.

ಕಳೆದ ಆಗಸ್ಟ್ 8 ಮತ್ತು ಸೆಪ್ಟೆಂಬರ್ 1ರ ನಡುವಣ ಅವಧಿಯಲ್ಲಿ ವಿವಿಧ ಹೈಕೋರ್ಟ್‌ಗಳು ಶಿಫಾರಸು ಮಾಡಿದ್ದ 100 ಮಂದಿಯ ಹೆಸರುಗಳನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರ ನೇತೃತ್ವದ ಸುಪ್ರೀಂ ಕೋರ್ಟ್ ಕೊಲಿಜಿಯಂ ಪರಿಶೀಲಿಸಿ, 68 ಮಂದಿಯ ಹೆಸರುಗಳನ್ನು ಅಂತಿಮಗೊಳಿಸಿತ್ತು.

68 ಹೆಸರುಗಳಲ್ಲಿ ಕರ್ನಾಟಕದ ಇಬ್ಬರು ಹಾಗೂ ಜಮ್ಮು ಮತ್ತು ಕಾಶ್ಮೀರದ ಒಬ್ಬರ ಹೆಸರನ್ನು ಮೂರನೇ ಬಾರಿ ಕಳುಹಿಸಲಾಗಿತ್ತು. ಇತರ 10 ಮಂದಿಯ ಹೆಸರನ್ನು ಎರಡನೇ ಬಾರಿ ಶಿಫಾರಸು ಮಾಡಲಾಗಿತ್ತು. ಉಳಿದವರ ಹೆಸರುಗಳನ್ನು ಮೊದಲ ಬಾರಿ ಶಿಫಾರಸು ಮಾಡಲಾಗಿತ್ತು.

ಕಲ್ಕತ್ತಾ ಹೈಕೋರ್ಟ್ ನ್ಯಾಯಮೂರ್ತಿ ರಾಜೇಶ್ ಬಿಂದಾಲ್ ಸೇರಿದಂತೆ ಎಂಟು ನ್ಯಾಯಮೂರ್ತಿಗಳ ಹೆಸರುಗಳನ್ನು ವಿವಿಧ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳನ್ನಾಗಿ ನೇಮಿಸುವಂತೆ ಸುಪ್ರೀಂ ಕೋರ್ಟ್ ಕೊಲಿಜಿಯಂ ಶುಕ್ರವಾರ ಶಿಫಾರಸು ಮಾಡಿದೆ ಎಂದು ತಿಳಿದು ಬಂದಿದೆ.

ಅಫ್ಘಾನಿಸ್ತಾನ: ಮತ್ತೊಂದು ಸ್ಫೋಟ–ಐವರ ಸಾವು

ಕಾಬೂಲ್ (ಎಪಿ): ಅಫ್ಘಾನಿಸ್ತಾನದ ಜಲಾಲಾಬಾದ್‌ನಲ್ಲಿ ಭಾನುವಾರ ಮತ್ತೊಂದು ಭೀಕರ ಸ್ಫೋಟ ನಡೆದಿದೆ. ಘಟನೆಯಲ್ಲಿ ಇಬ್ಬರು ನಾಗರಿಕರು, ಒಂದು ಮಗು ಸೇರಿದಂತೆ ಐವರು ಮೃತಪಟ್ಟಿದ್ದಾರೆ.

ತಾಲಿಬಾನಿಗಳಿಗೆ ಸೇರಿದ, ಗಡಿ ಪೊಲೀಸ್ ವಾಹನವನ್ನು ಗುರಿಯಾಗಿಸಿಕೊಂಡು ಈ ಸ್ಫೋಟ ನಡೆಸಲಾಗಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಇಸ್ಲಾಮಿಕ್ ಸ್ಟೇಟ್ ಉಗ್ರರ ಪ್ರಾಬಲ್ಯ ಇರುವ ಇಲ್ಲಿ ಶನಿವಾರವೂ ಮೂರು ಕಡೆ ಬಾಂಬ್ ಸ್ಫೋಟಿಸಲಾಗಿತ್ತು. ತಾಲಿಬಾನ್ ಹಾಗೂ ಇಸ್ಲಾಮಿಕ್ ಸ್ಟೇಟ್ ಉಗ್ರರ ನಡುವೆ ವೈರತ್ವವಿದೆ. ಅಫ್ಘಾನಿಸ್ತಾನವನ್ನು ತಾಲಿಬಾನಿಗಳು ವಶಪಡಿಸಿಕೊಳ್ಳುವ ಮುಂಚೆಯೂ ಅವರು ಪರಸ್ಪರ ಕಾದಾಟ ನಡೆಸಿದ್ದಾರೆ.

ಡ್ರೋನ್ ನಿಷ್ಕ್ರಿಯಗೊಳಿಸಲು ರಬ್ಬರ್ ಬುಲೆಟ್: ನಿರ್ದೇಶನ

ನವದೆಹಲಿ: ಅತಿ ಕಡಿಮೆ ಎತ್ತರದಲ್ಲಿ ಹಾರಾಟ ನಡೆಸುವ ಡ್ರೋನ್‌ಗಳನ್ನು ನಿಷ್ಕ್ರಿಯಗೊಳಿಸಲು ರಬ್ಬರ್ ಬುಲೆಟ್‌ಗಳನ್ನು ಉಪಯೋಗಿಸುವಂತೆ ಭದ್ರತಾ ಪಡೆಗಳಿಗೆ ನಿರ್ದೇಶನ ನೀಡಲಾಗಿದೆ.

ವಿಮಾನ ನಿಲ್ದಾಣಗಳು ಮತ್ತು ಪ್ರಮುಖ ಸ್ಥಳಗಳ ರಕ್ಷಣೆಯ ಜವಾಬ್ದಾರಿ ವಹಿಸಿಕೊಂಡಿರುವ ಕೇಂದ್ರೀಯ ಭದ್ರತಾ ಪಡೆಗಳಿಗೆ ಈ ಸೂಚನೆ ನೀಡಲಾಗಿದೆ. ಡ್ರೋನ್‌ಗಳ ಮೂಲಕ ನಡೆಯುವ ದಾಳಿಗಳನ್ನು ತಡೆಯಲು ಸಮರ್ಪಕವಾದ ಅತ್ಯಾಧುನಿಕ ತಂತ್ರಜ್ಞಾನ ಅಭಿವೃದ್ಧಿಪಡಿಸುವವರೆಗೂ ರಬ್ಬರ್ ಬುಲೆಟ್‌ಗಳನ್ನು ಬಳಸಬಹುದು ಎಂದು ಸೂಚಿಸಲಾಗಿದೆ.

60ರಿಂದ 100 ಮೀಟರ್‌ಗಳ ಎತ್ತರದಲ್ಲಿ ಹಾರಾಟ ನಡೆಸುವ ಡ್ರೋನ್‌ಗಳ ಮೇಲೆ ರಬ್ಬರ್ ಬುಲೆಟ್‌ಗಳನ್ನು ಸಿಡಿಸುವ ಮೂಲಕ ಕೆಳಗಿಳಿಸಬಹುದು ಎನ್ನುವುದನ್ನು ಪ್ರಾಯೋಗಿಕ ಕಾರ್ಯಾಚರಣೆ ಮೂಲಕ ಕಂಡುಕೊಳ್ಳಲಾಗಿದೆ ಎಂದು ಕೇಂದ್ರೀಯ ಶಸ್ತ್ರಾಸ್ತ್ರ ಪೊಲೀಸ್ ಪಡೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಗೆ (ಸಿಐಎಸ್‌ಎಫ್) ಹಲವಾರು ವಿಮಾನ ನಿಲ್ದಾಣಗಳು ಮತ್ತು ಅಣು ವಿದ್ಯುತ್ ಸ್ಥಾವರಗಳ ಭದ್ರತೆಯ ಜವಾಬ್ದಾರಿ ವಹಿಸಲಾಗಿದೆ. ಇಂತಹ ಸ್ಥಳಗಳ ಸಮೀಪ ಜನರು ವಾಸಿಸುತ್ತಿರಬಹುದು ಅಥವಾ ವಾಹನಗಳ ಸಂಚಾರವು ಇರುತ್ತದೆ. ಹೀಗಾಗಿ, ಇಂತಹ ಪ್ರದೇಶಗಳಲ್ಲಿ ದಾಳಿ ನಡೆಸಲು 'ಐಎನ್‌ಎಸ್‌ಎಸ್' ರೈಫಲ್‌ಗಳನ್ನು ಬಳಸುವುದರಿಂದ ನಾಗರಿಕರ ಜೀವ ಹಾನಿಗೂ ಆಪತ್ತು ಉಂಟಾಗಬಹುದು. ಹೀಗಾಗಿ, ಈ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಸುಮಾರು 6,300 ಕಿಲೋ ಮೀಟರ್ ಗಡಿ ಪ್ರದೇಶದ ಕಾವಲು ಕಾಯುವ ಗಡಿ ಭದ್ರತಾ ಪಡೆಗೆ, ಡ್ರೋನ್‌ಗಳನ್ನು ನಾಶಪಡಿಸಲು 'ಐಎನ್‌ಎಸ್‌ಎಸ್' ರೈಫಲ್‌ಗಳನ್ನು ಬಳಸುವಂತೆ ಸೂಚಿಸಲಾಗಿದೆ.

ನಟ ಅನುಪಮ್ ಖೇರ್‌ಗೆ ಗೌರವ ಡಾಕ್ಟರೇಟ್

ನ್ಯೂಯಾರ್ಕ್ (ಪಿಟಿಐ): ಫ್ಲಾರಿಡಾ ಮೂಲದ ಹಿಂದೂ ಯೂನಿವರ್ಸಿಟಿ ಆಫ್ ಅಮೆರಿಕ, ಬಾಲಿವುಡ್ ನಟ ಅನುಪಮ್ ಖೇರ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿದೆ.

ಹಿಂದೂ ಧರ್ಮ ಕುರಿತು ಖೇರ್ ಅವರು ಕೈಗೊಂಡ ಅಧ್ಯಯನವನ್ನು ಪರಿಗಣಿಸಿ ಈ ಗೌರವ ನೀಡಲಾಗಿದೆ. ಶನಿವಾರ ನಡೆದ ಕಾರ್ಯಕ್ರಮದಲ್ಲಿ ಈ ಗೌರವ ಪದವಿ ಪ್ರದಾನ ಮಾಡಲಾಯಿತು ಎಂದು ಮೂಲಗಳು ಹೇಳಿವೆ.



'ಈ ಗೌರವ ಡಾಕ್ಟರೇಟ್ ಸ್ವೀಕರಿಸಿದ್ದಕ್ಕೆ ಸಂತಸವಾಗಿದೆ. ನನ್ನ ಜೀವನದ ಪ್ರಮುಖ ಸಾಧನೆಗಳಲ್ಲಿ ಈ ಪದವಿಗೆ ಅತ್ಯಂತ ಎತ್ತರದ ಸ್ಥಾನವಿದೆ.' ಎಂದು ಖೇರ್ ಅವರು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ

ಕಾಬೂಲ್ ನಗರಪಾಲಿಕೆಯ ನಿರ್ಧಾರ; ಹೊಸ ಮೇಯರ್ ಆದೇಶ

ಮಹಿಳೆಯರ ಉದ್ಯೋಗಕ್ಕೆ ಕುತ್ತು

ಕಾಬೂಲ್ (ಎಪಿ): ಕಾಬೂಲ್ ನಗರಪಾಲಿಕೆಯ ಮಹಿಳಾ ಉದ್ಯೋಗಿಗಳಿಗೆ ಮನೆಯಲ್ಲಿಯೇ ಇರುವಂತೆ ಸೂಚಿಸಲಾಗಿದೆ. ಮಹಿಳೆಯರಿಗೆ ಪರ್ಯಾಯವಾಗಿ ಪುರುಷರು ಮಾಡಲು ಸಾಧ್ಯವಾಗದ ಕೆಲಸಗಳಿಗಷ್ಟೇ ಮಹಿಳೆಯರನ್ನು ಬಳಸಿಕೊಳ್ಳಲಾಗುವುದು ಎಂದು ಕಾಬೂಲ್‌ನ ಮಧ್ಯಂತರ ಮೇಯರ್ ಭಾನುವಾರ ಹೇಳಿದ್ದಾರೆ. ಅಫ್ಘಾನಿಸ್ತಾನದ ತಾಲಿಬಾನ್ ಆಡಳಿತಗಾರರು ಮಹಿಳೆಯರ ಮೇಲೆ ಹೇರಿರುವ ಹೊಸ ನಿರ್ಬಂಧ ಇದಾಗಿದೆ.

ಮುಂದಿನ ನಿರ್ಧಾರ ತಿಳಿಸುವವರೆಗೂ ಮಹಿಳಾ ಉದ್ಯೋಗಿಗಳಿಗೆ ಮನೆಯಲ್ಲೇ ಇರುವಂತೆ ಆದೇಶಿಸಲಾಗಿದೆ ಎಂದು ಮೇಯರ್ ನಮೋನಿ ಹೇಳಿದ್ದಾರೆ. ವಿನ್ಯಾಸ, ಎಂಜಿನಿಯರಿಂಗ್ ವಿಭಾಗಗಳು, ಮಹಿಳಾ ಸಾರ್ವಜನಿಕ ಶೌಚಾಲಯದ ಪರಿಚಾರಿಕೆ ಸೇರಿದಂತೆ ಪುರುಷರಿಂದ ಮಾಡಲಾಗದ ಕೆಲಸಗಳಲ್ಲಿ ಮಾತ್ರ ಅವರು ಮುಂದುವರಿಯಬಹುದು. ಆದರೆ ಎಷ್ಟು ಮಹಿಳಾ ಉದ್ಯೋಗಿಗಳನ್ನು ಮನೆಯಲ್ಲಿಯೇ ಇರಲು ತಿಳಿಸಲಾಗಿದೆ ಎಂದು ಅವರು ಸ್ಪಷ್ಟಪಡಿಸಿಲ್ಲ. ತಾಲಿಬಾನ್ ಆಡಳಿತಕ್ಕೂ ಮುನ್ನ ಕಾಬೂಲ್ ನಗರ ಪಾಲಿಕೆಯ ಸುಮಾರು 3,000 ಉದ್ಯೋಗಿಗಳ ಪೈಕಿ ಮೂರನೇ ಒಂದರಷ್ಟು ಮಹಿಳೆಯರು ಎಲ್ಲ ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದರು.

1990ರ ದಶಕದಲ್ಲಿ ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಆಳ್ವಿಕೆ ಇದ್ದಾಗ ಹೆಣ್ಣು ಮಕ್ಕಳು ಮತ್ತು ಮಹಿಳೆಯರು ಶಾಲೆಗೆ ಹೋಗುವುದು, ಉದ್ಯೋಗ ಮಾಡುವುದು ಮತ್ತು ಸಾರ್ವಜನಿಕ ಜೀವನದಲ್ಲಿ ಇರುವುದನ್ನು ನಿಷೇಧಿಸಲಾಗಿತ್ತು. ಈ ಬಾರಿ, ಕಠಿಣ ನಿಯಮಗಳನ್ನು ಹೇರುವುದಿಲ್ಲ ಎಂದು ತಾಲಿಬಾನ್ ಆರಂಭದಲ್ಲಿ ಹೇಳಿತ್ತು. ಆದರೆ, ನಗರಗಳಲ್ಲಿ ಮಹಿಳೆಯರು ಕೆಲಸ ಮಾಡುವುದು ಸಾಧ್ಯವಿಲ್ಲ ಎಂಬ ಸೂಚನೆಯನ್ನು ಈಗಿನ ನಿರ್ಧಾರವು ಸ್ಪಷ್ಟಪಡಿಸಿದೆ.

ಹೆಣ್ಣು ಮಕ್ಕಳು ಮತ್ತು ಮಹಿಳೆಯರ ಹಕ್ಕುಗಳನ್ನು ಮೊಟಕುಗೊಳಿಸುವ ಹಲವು ನಿರ್ಧಾರಗಳನ್ನು ತಾಲಿಬಾನ್ ಪ್ರಕಟಿಸಿದೆ. ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿಗೆ ಹೋಗಲು ಹೆಣ್ಣುಮಕ್ಕಳಿಗೆ ಸದ್ಯಕ್ಕೆ ಅವಕಾಶ ನೀಡುವುದಿಲ್ಲ ಎಂದು ತಿಳಿಸಿದೆ. ಆದರೆ ಈ ವರ್ಗದ ಹುಡುಗರು ಈಗಾಗಲೇ ಶಾಲೆಗೆ ಹೋಗಲು ಆರಂಭಿಸಿದ್ದಾರೆ. ಲಿಂಗಾಧಾರಿತವಾಗಿ ಪ್ರತ್ಯೇಕ ತರಗತಿಗಳಲ್ಲಿ ಅಧ್ಯಯನ ಮುಂದುವರಿಸಲು ವಿಶ್ವವಿದ್ಯಾಲಯಗಳ ವಿದ್ಯಾರ್ಥಿನಿಯರಿಗೆ ಸೂಚಿಸಲಾಗಿದೆ. ಇಸ್ಲಾಮಿಕ್ ವಸ್ತ್ರ ಸಂಹಿತೆಯನ್ನು ಕಡ್ಡಾಯವಾಗಿ ಪಾಲಿಸುವಂತೆ ತಿಳಿಸಲಾಗಿದೆ.

ಬೆಳೆಯುತ್ತಿರುವ ಹತಾಶೆಯ ಸಂಕೇತವಾಗಿ, ಕಾಬೂಲ್‌ನಲ್ಲಿ ಬೀದಿ ಮಾರುಕಟ್ಟೆಗಳು ಹುಟ್ಟಿಕೊಂಡಿವೆ. ಅಲ್ಲಿ ನಿವಾಸಿಗಳು ತಮ್ಮ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾರೆ. ಕೆಲವು ಅಫ್ಗನ್ನರು ದೇಶ ತೊರೆಯಲು ಬೇಕಾಗುವ ಹಣ ಹೊಂದಿಸುವ ಸಲುವಾಗಿ ಮಾರಾಟದಲ್ಲಿ ತೊಡಗಿದ್ದರೆ, ಇತರರು ಹೊತ್ತಿನ ಊಟಕ್ಕೆ ದಾರಿ ಮಾಡಿಕೊಳ್ಳುತ್ತಿದ್ದಾರೆ.

ಮಹಿಳಾ ವ್ಯವಹಾರಗಳ ಸಚಿವಾಲಯ ಸ್ಥಗಿತಗೊಳಿಸಿದ್ದನ್ನು ಖಂಡಿಸಿ ಕಾಬೂಲ್‌ನಲ್ಲಿ ಮಹಿಳೆಯರು ಭಾನುವಾರ ಪ್ರತಿಭಟನೆ ನಡೆಸಿದರು—ಎಪಿ ಚಿತ್ರ

ಹತ್ತು ನಿಮಿಷದ ಪ್ರತಿಭಟನೆ

ಮಹಿಳಾ ವ್ಯವಹಾರಗಳ ಸಚಿವಾಲಯವನ್ನು ತಾಲಿಬಾನ್ ಶುಕ್ರವಾರ ಸ್ಥಗಿತಗೊಳಿಸಿದೆ. ಅದರ ಬದಲಾಗಿ, ಇಸ್ಲಾಮಿಕ್ ಕಾನೂನುಗಳನ್ನು ಜಾರಿಗೊಳಿಸುವ ಕೆಲಸವನ್ನು ಹೊಸ ಸಚಿವಾಲಯಕ್ಕೆ ವಹಿಸಲಾಗಿದೆ. ಇದನ್ನು ಪ್ರಶ್ನಿಸಿ 10ಕ್ಕೂ ಹೆಚ್ಚು ಮಹಿಳೆಯರು ಸಚಿವಾಲಯದ ಕಚೇರಿ ಎದುರು ಭಾನುವಾರ ಪ್ರತಿಭಟನೆ ನಡೆಸಿದರು. 'ಮಹಿಳೆಯರು ಸಕ್ರಿಯವಾಗಿರದ ಸಮಾಜವು ಸತ್ತ ಸಮಾಜದ ಒಂದು ಚಿಹ್ನೆ' ಎಂದು ಅವರು ಪ್ರತಿಪಾದಿಸಿದರು.

'ತಾಲಿಬಾನ್‌ನವರು ಏಕೆ ನಮ್ಮ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದ್ದಾರೆ? ನಮ್ಮ ಹೆಣ್ಣುಮಕ್ಕಳಿಗೆ ಸಿಗಬೇಕಾದ ಹಕ್ಕುಗಳಿಗಾಗಿ ನಾವಿಲ್ಲಿ ಪ್ರತಿಭಟನೆ ನಡೆಸುತ್ತಿದ್ದೇವೆ' ಎಂದು ಬಸಿರಾ ತವಾನಾ ಎಂಬ ಮಹಿಳೆ ಹೇಳಿದ್ದಾರೆ.

ಕೇವಲ 10 ನಿಮಿಷದಲ್ಲಿ ಪ್ರತಿಭಟನೆ ಮುಕ್ತಾಯ ಕಂಡಿತು. ಸನಿಹದಲ್ಲಿ ಎರಡು ಕಾರುಗಳಲ್ಲಿ ಬಂದಿದ್ದ ತಾಲಿಬಾನ್ ಯೋಧರು ಇದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ತಾಲಿಬಾನ್ ಇತ್ತೀಚೆಗೆ ಮಹಿಳಾಪರವಾದ ಹಲವು ಪ್ರತಿಭಟನೆಗಳನ್ನು ತಡೆದಿದೆ.

ಭಾರತ–ಸೌದಿ ವಿದೇಶಾಂಗ ಸಚಿವರ ಸಭೆ

ನವದೆಹಲಿ (ಪಿಟಿಐ): ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಸೌದಿ ಅರೇಬಿಯಾದ ವಿದೇಶಾಂಗ ಸಚಿವ ಫೈಸಲ್ ಬಿನ್ ಫರ್ಹಾನ್ ಅಲ್ ಸೌದ್ ಅವರೊಂದಿಗೆ ಭಾನುವಾರ ಸಭೆ ನಡೆಸಿದ್ದು, ಅಫ್ಘಾನಿಸ್ತಾನದಲ್ಲಿನ ಬೆಳವಣಿಗೆಗಳ ಬಗ್ಗೆ ಪ್ರಮುಖವಾಗಿ ಚರ್ಚಿಸಿದ್ದಾರೆ.

ಇದೇ ವೇಳೆಗೆ ರಕ್ಷಣೆ, ವಾಣಿಜ್ಯ, ಹೂಡಿಕೆ ಹಾಗೂ ಇಂಧನ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರವನ್ನು ವಿಸ್ತರಿಸುವ ಬಗ್ಗೆಯೂ ಚರ್ಚಿಸಲಾಯಿತು ಎಂದು ವಿದೇಶಾಂಗ ವ್ಯವಹಾರಗಳ ಇಲಾಖೆಯ ಪ್ರಕಟಣೆ ತಿಳಿಸಿದೆ. ಕೋವಿಡ್–19 ಸಾಂಕ್ರಾಮಿಕದ ಸಂದರ್ಭದಲ್ಲಿ ಭಾರತೀಯರಿಗೆ ಸೌದಿ ಅರೇಬಿಯಾ ನೆರವಾಗಿದ್ದನ್ನು ಶ್ಲಾಘಿಸಿದ ಜೈಶಂಕರ್, ಭಾರತದಿಂದ ಗಲ್ಫ್ ದೇಶಗಳಿಗೆ ಪ್ರಯಾಣಿಸುವವರ ಮೇಲಿನ ನಿರ್ಬಂಧಗಳಲ್ಲಿ ಇನ್ನಷ್ಟು ಸಡಿಲಿಕೆ ಮಾಡುವಂತೆ ಆಗ್ರಹಿಸಿದರು.

ಸೌದ್, ಭಾರತದಲ್ಲಿ ಮೂರು ದಿನಗಳ ಪ್ರವಾಸದಲ್ಲಿದ್ದು ಶನಿವಾರ ದೆಹಲಿಗೆ ಬಂದಿದ್ದಾರೆ. ಇಬ್ಬರೂ ಸಚಿವರು ಅಫ್ಘಾನಿಸ್ತಾನದಲ್ಲಿನ ಬೆಳವಣಿಗೆಗಳು, ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಹಾಗೂ ಅಂತರರಾಷ್ಟ್ರೀಯ ವಿಷಯಗಳಿಗೆ ಸಂಬಂಧಿಸಿದ ಚರ್ಚೆ ನಡೆಸಿದರು ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಕಾಲೇಜುಗಳಲ್ಲಿ ಹಿಂಬಾಗಿಲ ಪ್ರವೇಶ ನಿಲ್ಲಬೇಕು: ದೆಹಲಿ ಹೈಕೋರ್ಟ್

ನವದೆಹಲಿ (ಪಿಟಿಐ): ಅರ್ಹತೆ ಆಧಾರದಲ್ಲಿ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ಸಲುವಾಗಿ ದೇಶದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ಶ್ರಮಪಟ್ಟು ಓದುತ್ತಿದ್ದಾರೆ. ಹೀಗಾಗಿ, ಹಿಂಬಾಗಿಲ ಮೂಲಕ ಕಾಲೇಜುಗಳಲ್ಲಿ ಪ್ರವೇಶ ಪಡೆಯುವುದಕ್ಕೆ ತುರ್ತಾಗಿ ಕಡಿವಾಣ ಹಾಕುವ ಅಗತ್ಯವಿದೆ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ಭೋಪಾಲ್‌ನಲ್ಲಿರುವ ಎಲ್.ಎನ್ ಮೆಡಿಕಲ್ ಕಾಲೇಜು, ಆಸ್ಪತ್ರೆ ಹಾಗೂ ಸಂಶೋಧನಾ ಸಂಸ್ಥೆಯಲ್ಲಿ ಪ್ರವೇಶ ಪಡೆದಿದ್ದ ಐವರು ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಪಿನ್ ಸಂಘಿ ಹಾಗೂ ಜಸ್ಮೀತ್ ಸಿಂಗ್ ಅವರಿರುವ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿತು.

ವೈದ್ಯಕೀಯ ಕಾಲೇಜುಗಳು ಸೇರಿದಂತೆ ಇತರ ಶಿಕ್ಷಣ ಸಂಸ್ಥೆಗಳಲ್ಲಿ ಈ ಹಿಂಬಾಗಿಲಿನಿಂದ ಪ್ರವೇಶ ಪಡೆಯುವುದನ್ನು ನಿಲ್ಲಿಸಬೇಕು ಎಂದೂ ನ್ಯಾಯಪೀಠ ಹೇಳಿತು.

ಮಧ್ಯಪ್ರದೇಶದ ವೈದ್ಯಕೀಯ ಶಿಕ್ಷಣ ಇಲಾಖೆ ನಡೆಸುವ ಕೇಂದ್ರೀಕೃತ ಕೌನ್ಸೆಲಿಂಗ್‌ಗೆ ಹಾಜರಾಗದಿದ್ದರೂ, ವಿದ್ಯಾರ್ಥಿಗಳಿಗೆ 2016ರಲ್ಲಿ ಈ ಕಾಲೇಜಿನಲ್ಲಿ ಪ್ರವೇಶ ನೀಡಲಾಗಿತ್ತು.

ಈ ವಿದ್ಯಾರ್ಥಿಗಳನ್ನು ಕಾಲೇಜಿನಿಂದ ಹೊರಹಾಕುವಂತೆ ನಿರ್ದೇಶಿಸಿ ಭಾರತೀಯ ವೈದ್ಯಕೀಯ ಮಂಡಳಿ (ಎಂಸಿಐ) 2017ರ ಏಪ್ರಿಲ್‌ನಲ್ಲಿ ಸಂಸ್ಥೆಗೆ ಪತ್ರಗಳನ್ನು ಬರೆದಿತ್ತು. ಇದಕ್ಕೆ ಸಂಸ್ಥೆಯಾಗಲಿ ಅಥವಾ ವಿದ್ಯಾರ್ಥಿಗಳಾಗಲಿ ಪ್ರತಿಕ್ರಿಯೆ ನೀಡಿರಲಿಲ್ಲ.

ನಂತರ, ವೈದ್ಯಕೀಯ ಕಾಲೇಜಿನಿಂದ ತಮ್ಮನ್ನು ಹೊರಹಾಕುವಂತೆ ಎಂಸಿಐ ನೀಡಿದ್ದ ನಿರ್ದೇಶನವನ್ನು ವಜಾಗೊಳಿಸಬೇಕು. ತಾವು ಅದೇ ಕಾಲೇಜಿನಲ್ಲಿ ಅಧ್ಯಯನ ಮುಂದುವರಿಸಲು ಅನುಮತಿ ನೀಡುವಂತೆ ಕೋರಿ ಐವರು ವಿದ್ಯಾರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು.

ಜಮ್ಮು: ಮೂವರು ಪೆಡ್ಲರ್‌ಗಳ ಬಂಧನ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಮತ್ತು ಉಧಂಪುರ ಜಿಲ್ಲೆಗಳಲ್ಲಿ ಮಾದಕ ದ್ರವ್ಯಗಳನ್ನು ಮಾರುತ್ತಿದ್ದ ಇಬ್ಬರು ಮಹಿಳೆಯರು ಸೇರಿ ಮೂವರು ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ಹೇಳಿದ್ದಾರೆ.

ಅವರಿಂದ 2.5 ಕೆಜಿ ಗಾಂಜಾ ಮತ್ತು 21.5 ಕೆ.ಜಿ ಗಸಗಸೆಯನ್ನು ಜಪ್ತಿ ಮಾಡಲಾಗಿದೆ. ರಿಯಾಸಿ ಜಿಲ್ಲೆಯ ಕತ್ರಾ ಪಟ್ಟಣದ ಡೊಮೇಲ್‌ನಲ್ಲಿ ರೇಖಾ ದೇವಿ ಮತ್ತು ಮಾಯಾ ಮಿರ್ ಭಾನುವಾರ ಬೆಳಿಗ್ಗೆ ಅನುಮಾನಸ್ಪದ ರೀತಿಯಲ್ಲಿ ಓಡಾಡುತ್ತಿದ್ದರು. ಇದನ್ನು ಗಮನಿಸಿದ ಪೊಲೀಸರು ಅವರನ್ನು ತಡೆದು ವಿಚಾರಣೆ ನಡೆಸಿದ್ದಾರೆ.

ಈ ವೇಳೆ ಮಾಯಾ ಅವರ ಚೀಲದಲ್ಲಿ 1.9 ಕೆಜಿ ಗಾಂಜಾ, ದೇವಿ ಅವರ ಬಳಿ 750 ಗ್ರಾಂ ಗಾಂಜಾ ದೊರೆತಿದೆ. ಇಬ್ಬರ ಮೇಲೆ ಮಾದಕ ದ್ರವ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸ್ ವಕ್ತಾರರು ಹೇಳಿದರು. ಈ ವರ್ಷದ ಮಾರ್ಚ್‌ನಿಂದ ಇದುವರೆಗೆ ಜಿಲ್ಲೆಯಲ್ಲಿ ಒಟ್ಟು 156 ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿ ಅವರ ವಿರುದ್ಧ 120 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದರು.

ವಿದೇಶಿ ಪ್ರವಾಸಿಗರಿಗೆ ಶೀಘ್ರವೇ ಮುಕ್ತ ಅವಕಾಶ

ನವದೆಹಲಿ: ದೇಶದಲ್ಲಿ ಕೊರೊನಾ ಸೋಂಕು ಪ್ರಕರಣಗಳು ಇಳಿಮುಖವಾಗಿರುವ ಕಾರಣ ಭಾರತ ಪ್ರವೇಶಕ್ಕೆ ವಿದೇಶಿ ಪ್ರವಾಸಿಗರಿಗೆ ಸದ್ಯದಲ್ಲೇ ಅನುಮತಿ ದೊರೆಯಲಿದೆ.

ಮುಂದಿನ 10 ದಿನಗಳಲ್ಲಿ ಅಧಿಕೃತ ಘೋಷಣೆ ಹೊರಬೀಳಲಿದೆ ಎಂದು ಗೃಹ ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ.

ಪ್ರವಾಸೋದ್ಯಮ, ನಾಗರಿಕ ವಿಮಾನಯಾನ ವಲಯವನ್ನು ಪುನಶ್ಚೇತನಗೊಳಿಸುವ ಯತ್ನವಾಗಿ ಮೊದಲ ಐದು ಲಕ್ಷ ವಿದೇಶಿ ಪ್ರವಾಸಿಗರಿಗೆ ವೀಸಾವನ್ನು ಉಚಿತವಾಗಿ ನೀಡಲಾಗುವುದು. ಇದರಿಂದ ಬೊಕ್ಕಸಕ್ಕೆ ಸುಮಾರು ₹100 ಕೋಟಿ ಹೊರೆಯಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೋವಿಡ್ ಸಾಂಕ್ರಾಮಿಕದ ಕಾರಣ 2020ರ ಮಾರ್ಚ್‌ನಲ್ಲಿ ದೇಶದಾದ್ಯಂತ ಲಾಕ್‌ಡೌನ್ ಘೋಷಣೆಯಾದ ಬಳಿಕ ಪ್ರವಾಸೋದ್ಯಮ, ನಾಗರಿಕ ವಿಮಾನಯಾನ ವಲಯ ಭಾರಿ ನಷ್ಟ ಕಂಡಿದೆ.

ಐದು ಲಕ್ಷದವರೆಗೆ ವೀಸಾ ಅಥವಾ 2022ರ ಮಾರ್ಚ್ 31ರವರೆಗೆ ಪ್ರವಾಸಿಗರಿಗೆ ಉಚಿತ ವೀಸಾ ನೀಡಲಾಗುವುದು.

ಕೋವಿಡ್ ಲಸಿಕೆ: ಕೇಂದ್ರದ ವಿರುದ್ಧ ರಾಹುಲ್ ಟೀಕೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನವಾದ ಶುಕ್ರವಾರ ದೇಶದಲ್ಲಿ ದಾಖಲೆ ಪ್ರಮಾಣದಲ್ಲಿ ಕೋವಿಡ್ ಲಸಿಕೆ ನೀಡಿರುವ ವಿಷಯವಾಗಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಕೇಂದ್ರ ಸರ್ಕಾರದ ವಿರುದ್ಧ ಟೀಕಾಪ್ರಹಾರ ನಡೆಸಿದ್ದಾರೆ.

ಈ ಕುರಿತು ಅವರು, 'ಕಾರ್ಯಕ್ರಮ ಮುಗಿಯಿತು' ಎಂಬುದಾಗಿ ಭಾನುವಾರ ಟ್ವೀಟ್ ಮಾಡುವ ಮೂಲಕ ಕೇಂದ್ರ ಸರ್ಕಾರವನ್ನು ಕುಟುಕಿದ್ದಾರೆ.

ಕಳೆದ 10 ದಿನಗಳ ಅವಧಿಯಲ್ಲಿ ಕೋವಿಡ್ ಲಸಿಕೆ ನೀಡಿರುವುದಕ್ಕೆ ಸಂಬಂಧಿಸಿ ಕೋವಿನ್ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಗ್ರಾಫ್‌ವೊಂದನ್ನು ಅವರು ಈ ಟ್ವೀಟ್‌ನಲ್ಲಿ ಹಂಚಿಕೊಂಡಿದ್ದಾರೆ.

'ದಾಖಲೆ ಪ್ರಮಾಣದಲ್ಲಿ ಲಸಿಕೆ ನೀಡಿದ ನಂತರ, ಲಸಿಕೆ ನೀಡುವಲ್ಲಿ ಮತ್ತೆ ಇಳಿಕೆ ಕಂಡು ಬಂದಿದೆ' ಎಂದೂ ಅವರು ಹೇಳಿದ್ದಾರೆ.

ಉತ್ತರಾಖಂಡ ವಿಧಾನಸಭೆ ಚುನಾವಣೆ: ಕೇಜ್ರಿವಾಲ್ ಭರವಸೆ

'ಅಧಿಕಾರಕ್ಕೆ ಬಂದರೆ ಉದ್ಯೋಗ ಮೀಸಲಾತಿ'

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡ್‌ನಲ್ಲಿ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ನಮ್ಮ ಪಕ್ಷವು ಅಧಿಕಾರಕ್ಕೆ ಬಂದರೆ ರಾಜ್ಯದ ಜನರಿಗೆ ನಿರುದ್ಯೋಗ ಭತ್ಯೆ ಮತ್ತು ಉದ್ಯೋಗದಲ್ಲಿ ಶೇಕಡ 80ರಷ್ಟು ಮೀಸಲಾತಿ ಕಲ್ಪಿಸಲಾಗುವುದು ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಭಾನುವಾರ ಹೇಳಿದ್ದಾರೆ.

ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಉತ್ತರಾಖಂಡದಲ್ಲಿ ನಡೆಯುತ್ತಿರುವ ವಲಸೆಯನ್ನು ಕೊನೆಗೊಳಿಸಲು ಯೋಜನೆ ರೂಪಿಸಲಾಗುವುದು ಎಂದು ಭರವಸೆ ನೀಡಿದರು.

ಆಮ್ ಆದ್ಮಿ ಪಕ್ಷವು ಅಧಿಕಾರದ ಚುಕ್ಕಾಣಿ ಹಿಡಿದರೆ ಉತ್ತರಾಖಂಡದ ಪ್ರತಿ ಯುವಕರಿಗೂ ಉದ್ಯೋಗ, ಉದ್ಯೋಗ ದೊರೆಯುವವರೆಗೆ ಕುಟುಂಬ ನಿರ್ವಹಣೆಗೆ ಪ್ರತಿಯೊಬ್ಬರಿಗೆ ಮಾಸಿಕ ₹ 5 ಸಾವಿರ, ರಾಜ್ಯದ ಜನರಿಗೆ ಖಾಸಗಿ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಶೇ 80ರಷ್ಟು ಮೀಸಲಾತಿ, ಪಕ್ಷವು ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿ ಒಂದು ಲಕ್ಷ ಉದ್ಯೋಗಾವಕಾಶ ಸೃಷ್ಟಿ ಸೇರಿದಂತೆ ಆರು ಭರವಸೆಗಳನ್ನು ಕೇಜ್ರಿವಾಲ್ ನೀಡಿದರು.

ಹಲ್ದ್ವಾನಿಯಲ್ಲಿ ಭಾನುವಾರ ನಡೆದ 'ತಿರಂಗ ಸಂಕಲ್ಪ ಯಾತ್ರೆ'ಯಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭಾಗವಹಿಸಿದ್ದರು. ಪಿಟಿಐ– ಚಿತ್ರ

ದೆಹಲಿಯಲ್ಲಿರುವಂತೆ ರಾಜ್ಯದಲ್ಲಿ ಉದ್ಯೋಗ ಪೋರ್ಟಲ್ ಪ್ರಾರಂಭಿಸಲಾಗುವುದು. ಇದು ಉದ್ಯೋಗ ಹುಡುಕುವವರಿಗೆ ಮತ್ತು ನೀಡುವವರಿಗೆ ಸೂಕ್ತ ವೇದಿಕೆ ಒದಗಿಸುತ್ತದೆ. ನಿರುದ್ಯೋಗ ಮತ್ತು ವಲಸೆ ಸಮಸ್ಯೆಗಳ ಪರಿಹಾರಕ್ಕೆ ಪ್ರತ್ಯೇಕ ಸಚಿವಾಲಯ ರಚಿಸಲಾಗುವುದು ಎಂದು ಕೇಜ್ರಿವಾಲ್ ಹೇಳಿದರು. ಉತ್ತರಾಖಂಡದಲ್ಲಿ ಸರ್ಕಾರಗಳು ಸತತವಾಗಿ ರಾಜ್ಯದ ಸಂಪನ್ಮೂಲಗಳನ್ನು ಲೂಟಿ ಮಾಡುವುದನ್ನು ಬಿಟ್ಟು ಏನೂ ಮಾಡಿಲ್ಲ ಎಂದು ಅವರು ಆರೋಪಿಸಿದರು.

'ನಾವು ಹೇಳಿದಂತೆಯೇ ಎಲ್ಲಾ ಭರವಸೆಗಳನ್ನೂ ಈಡೇರಿಸುತ್ತೇವೆ. ದೆಹಲಿಯಲ್ಲಿ ಮಾಡಿರುವಂತೆ ಇಲ್ಲಿಯೂ ರೈತರಿಗೆ ದಿನದ 24 ಗಂಟೆ ಅಥವಾ 300 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡುತ್ತೇವೆ' ಎಂದು ಕೇಜ್ರಿವಾಲ್ ಹೇಳಿದರು.

ಎಎಪಿಗೆ ಒಂದು ಅವಕಾಶ ನೀಡಿದರೆ ಉತ್ತರಾಖಂಡ ರಾಜ್ಯದ ಜನರ 21 ವರ್ಷಗಳ ದುಃಖವನ್ನು ಕೇವಲ 21 ತಿಂಗಳಲ್ಲಿ ಹೋಗಲಾಡಿಸಲು ಸಹಾಯ ಮಾಡುತ್ತದೆ. ದೆಹಲಿ ಮಾದರಿ ಅಭಿವೃದ್ಧಿಯನ್ನು ಇಲ್ಲಿಯೂ ಮಾಡಲಾಗುವುದು ಎಂದರು.

ಸಂಕ್ಷಿಪ್ತ ಸುದ್ದಿ

ಕಚ್‌ನಲ್ಲಿ 3.1ರಷ್ಟು ತೀವ್ರತೆಯ ಭೂಕಂಪ

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಕಚ್ ಜಿಲ್ಲೆಯಲ್ಲಿ ಭಾನುವಾರ 3.1ರಷ್ಟು ತೀವ್ರತೆಯ ಭೂಕಂಪ ಸಂಭವಿಸಿದೆ. ಆದರೆ, ಯಾವುದೇ ಪ್ರಾಣ ಹಾನಿ ಅಥವಾ ಆಸ್ತಿ ನಷ್ಟದ ವರದಿಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಳಿಗ್ಗೆ 8.38ರಲ್ಲಿ ಕಂಪನ ಉಂಟಾಗಿದೆ. ದುಧೈನಿಂದ 20 ಕಿ.ಮೀ. ದೂರದ ಉತ್ತರ–ಈಶಾನ್ಯ (ಎನ್‌ಎನ್‌ಇ) ಪ್ರದೇಶದಲ್ಲಿ 9.3 ಕಿ.ಮೀ. ಆಳದಲ್ಲಿ ಕಂಪನದ ಕೇಂದ್ರಬಿಂದು ಇತ್ತು ಎಂದು ಗಾಂಧಿನಗರ ಮೂಲದ ಭೂಕಂಪನ ಸಂಶೋಧನಾ ಸಂಸ್ಥೆ (ಐಎಸ್‌ಆರ್) ತಿಳಿಸಿದೆ.

ಅಹಮದಾಬಾದ್‌ನಿಂದ 300 ಕಿ.ಮೀ. ದೂರವಿರುವ ಕಚ್ ಜಿಲ್ಲೆಯು ಅತಿ ಹೆಚ್ಚು ಭೂಕಂಪ ಸಂಭವಿಸುವ ವಲಯದಲ್ಲಿದೆ. ನಿಯಮಿತವಾಗಿ ಇಲ್ಲಿ ಲಘು ಭೂಕಂಪಗಳು ಸಂಭವಿಸುತ್ತವೆ.

ಸುಲಿಗೆ: ದಾವೂದ್ ಸಹಚರ ತಾರಿಕ್ ಪರ್ವೀನ್ ಬಂಧನ

ಥಾಣೆ: ಭೂಗತ ಪಾತಕಿ ದಾವೂದ್ ಇಬ್ರಾಹಿಂನ ಸಹಚರ ತಾರಿಕ್ ಪರ್ವೀನ್ ಎಂಬಾತನನ್ನು ಸುಲಿಗೆ ಪ್ರಕರಣದಲ್ಲಿ ಥಾಣೆ ಪೊಲೀಸರು ಬಂಧಿಸಿದ್ದಾರೆ. ಪ್ರಕರಣದಲ್ಲಿ ಐಪಿಎಸ್ ಅಧಿಕಾರಿ ಪರಮ್ ವೀರ್ ಸಿಂಗ್ ಕೂಡ ಆರೋಪಿಯಾಗಿದ್ದಾರೆ.

ತಾರಿಕ್ ಅಬ್ದುಲ್ ಕರೀಮ್ ಮರ್ಚಂಟಾ ಅಲಿಯಾಸ್ ತಾರಿಕ್ ಪರ್ವೀನ್ (55), ಥಾಣೆ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಬೇರೊಂದು ಪ್ರಕರಣದಲ್ಲಿ ಈಗಾಗಲೇ ಜೈಲಿನಲ್ಲಿದ್ದಾನೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಿಲ್ಡರ್ ಕೇತನ್ ತನ್ನಾ ನೀಡಿರುವ ದೂರಿನ ಮೇರೆಗೆ ಸದ್ಯ ದಾಖಲಾಗಿರುವ ಎಫ್‌ಐಆರ್‌ನಲ್ಲಿ ಮುಂಬೈ ಮತ್ತು ಥಾಣೆಯ ಪೊಲೀಸ್ ಆಯುಕ್ತರಾಗಿದ್ದ ಸಿಂಗ್ ಮತ್ತು ಇತರ ಕೆಲವು ಪೊಲೀಸ್ ಅಧಿಕಾರಿಗಳು ಸೇರಿದಂತೆ 20ಕ್ಕೂ ಹೆಚ್ಚು ಜನರ ಹೆಸರುಗಳಿವೆ. ಸಿಂಗ್ ಥಾಣೆ ಪೊಲೀಸ್ ಕಮೀಷನರ್ ಆಗಿದ್ದಾಗ, ಬಿಲ್ಡರ್ ಕೇತನ್ ತನ್ನಾ ಅವರನ್ನು ಸುಳ್ಳು ಪ್ರಕರಣಗಳಲ್ಲಿ ಸಿಲುಕಿಸುವುದಾಗಿ ಬೆದರಿಕೆ ಹಾಕುವ ಮೂಲಕ ಸಿಂಗ್ ಮತ್ತು ಇತರ ಅಧಿಕಾರಿಗಳು ಹಣ ವಸೂಲಿ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.

ಗುಜರಾತ್: ₹200 ಕೋಟಿ ಮೌಲ್ಯದ ಹೆರಾಯಿನ್ ವಶ

ಅಹಮದಾಬಾದ್: ಗುಜರಾತ್ ಕರಾವಳಿಯಲ್ಲಿ ಹೆರಾಯಿನ್ ತುಂಬಿದ್ದ ದೋಣಿಯೊಂದನ್ನು ವಶಕ್ಕೆ ಪಡೆದಿದ್ದು, ಏಳು ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುಪ್ತಚರ ಮಾಹಿತಿ ಆಧರಿಸಿ ಗುಜರಾತ್ ಪೊಲೀಸರು ಮತ್ತು ಭಯೋತ್ಪಾದನಾ ನಿಗ್ರಹ ದಳ ನಡೆಸಿದ ಜಂಟಿ ಕಾರ್ಯಾಚರಣೆ ನಡೆಸಿ ಹೆರಾಯಿನ್ ವಶಪಡಿಸಿಕೊಂಡಿವೆ.



ಮರಳಿ ಶಾಲೆಗೆ

ಕಲಿಕಾ ಮಟ್ಟ ಕಡಿಮೆಯಾದ ಮಗುವಿಗಿರಲಿ ಹೆಚ್ಚು ಆದ್ಯತೆ

ಕೋಕಿಲ ಎಂ.ಎಸ್.

ವರ್ಷಗಳ ನಂತರ ಶಾಲೆಗೆ ಮರಳುವ ಕಾತರ, ಸ್ನೇಹಿತರೊಟ್ಟಿಗೆ ಹರಟುವ ಆಸೆಯ ಜೊತೆ ಹೊಸತೊಂದು ಹುರುಪಿನಲ್ಲಿ ಬೆಳಗ್ಗೆ ಶಾಲೆಗೆ ಹೋದ ಸುಮಂತ್ ಮುಖ ಸಂಜೆ ಮನೆಗೆ ವಾಪಸ್ಸಾದಾಗ ಬಾಡಿತ್ತು. ಅಮ್ಮನಿಗೂ ಆಶ್ಚರ್ಯ! ಅರೆ, ಅಷ್ಟು ಖುಷಿಯಾಗಿ ಹೋದ ಮಗ ಈಗ ಯಾಕೆ ಹೀಗಿದ್ದಾನೆ ಏನಾಯಿತೊ ಎನ್ನುವ ತಳಮಳ. ಆದರೂ ಬಂದ ತಕ್ಷಣ ಕೇಳುವುದು ಸರಿಯಲ್ಲವೆಂದು ರಾತ್ರಿ ಊಟವಾದ ಬಳಿಕ ಪಕ್ಕದಲ್ಲಿ ಕೂರಿಸಿ ತಲೆ ಸವರುತ್ತಾ ಮಾತು ಪ್ರಾರಂಭಿಸಿದಳು. 'ಸುಮಂತ್ ಶಾಲೆ ಇವತ್ತು ಹೇಗಿತ್ತು? ಸ್ನೇಹಿತರನ್ನೆಲ್ಲ ಭೇಟಿಯಾದೆಯಾ?' ಎಂಬ ಪ್ರಶ್ನೆಗಳಿಗೆ ಸುಮಂತ್‌ನಿಂದ ಬಂದ ಉತ್ತರ ಅಷ್ಟಕ್ಕಷ್ಟೆ. ಒಂದಿಷ್ಟು ಸಮಯದ ನಂತರ ತಾನಾಗಿಯೇ 'ಅಮ್ಮಾ, ಇವತ್ತು ಶಾಲೆಯಲ್ಲಿ ಟೀಚರ್ ಕೇಳಿದ ಸುಲಭದ ಪ್ರಶ್ನೆಗೆ ಉತ್ತರ ಕೊಡೋಕೆ ಆಗ್ಲಿಲ್ಲ, ಹಾಗಾಗಿ ಎಲ್ಲರ ಮುಂದೆ ನನ್ನನ್ನು ವರ್ಸ್ಟ್ ಫೆಲೋ, ಲಾಕ್‌ಡೌನ್‌ನಲ್ಲಿ ಕುದುರೆ ಹೋಗಿ ಕತ್ತೆಯಾದ ಹಾಗಾಯಿತು ಎಂದುಬಿಟ್ಟರು.' ಅಂದವನೆ ಜೋರಾಗಿ ಅಳಲಾರಂಭಿಸಿದ.

ಸದ್ಯದ ಪರಿಸ್ಥಿತಿಯಲ್ಲಿ ಈ ಸಮಸ್ಯೆ ಸುಮಂತ್‌ನಂತಹ ಒಂದು ಮಗುವಿನದ್ದಲ್ಲ. ಕೊರೊನಾ ರಜೆ ಮುಗಿಸಿ ಶಾಲೆಗೆ ಮರಳಿರುವ ಸಾವಿರಾರು ವಿದ್ಯಾರ್ಥಿಗಳದ್ದು. ಹೌದು, ಸಾಕಷ್ಟು ಗೊಂದಲ, ಆತಂಕದ ಮತ್ತು ಕಾತರದ ನಡುವೆಯೇ ಶಾಲೆಗಳು ಪುನಃ ಆರಂಭಗೊಂಡಿವೆ. ನಿರೀಕ್ಷೆಯಂತೆಯೇ ಎಲ್ಲವೂ ನಡೆದರೆ ಒಳ್ಳೆಯದೆ. ಆದರೆ ಶಾಲೆ ಮತ್ತೆ ಪ್ರಾರಂಭವಾಗಿರುವ ಸಮಾಧಾನದ ನಡುವೆಯೇ ಒಂದಿಷ್ಟು ವಿಚಾರಗಳಲ್ಲಿ ಪೋಷಕರು ಮತ್ತು ಶಿಕ್ಷಕರು ಗಮನ ಹರಿಸುವ ಅವಶ್ಯಕತೆ ಇದೆ. ಶುಚಿತ್ವ, ಸಾಮಾಜಿಕ ಅಂತರ ಕಾಪಾಡಿಕೊಳ್ಳುವ ಹಾಗೂ ಸರಿಯಾದ ರೀತಿಯಲ್ಲಿ ಮಾಸ್ಕ್ ಧರಿಸುವ ವಿಚಾರಗಳಿಗೆ ಎಷ್ಟು ಮಹತ್ವವನ್ನು ಕೊಡುತ್ತಿದ್ದೇವೆಯೋ ಹಾಗೆಯೇ ಮಗುವಿನ ಮಾನಸಿಕ ಸ್ಥಿಮಿತದ ಬಗ್ಗೆಯೂ ಗಮನ ಹರಿಸುವುದು ಒಳಿತು. ಈ ನಿಟ್ಟಿನಲ್ಲಿ ಪೋಷಕರ ಹಾಗೂ ಶಿಕ್ಷಕರ ಪಾತ್ರ ಬಹಳ ಪ್ರಮುಖವಾದದ್ದು.

> ಶಾಲೆ ಮತ್ತೆ ಪ್ರಾರಂಭವಾಗಿರುವ ಸಮಾಧಾನದ ನಡುವೆಯೇ ಒಂದಿಷ್ಟು ವಿಚಾರಗಳಲ್ಲಿ ಗಮನ ಹರಿಸುವ ಅವಶ್ಯಕತೆ ಇದೆ. ಮಗುವಿನ ಕಲಿಕಾ ಮಟ್ಟದ ಬಗ್ಗೆಯೂ ಹೆಚ್ಚು ಲಕ್ಷ್ಯ ಕೊಡುವುದು ಒಳಿತು. ಈ ನಿಟ್ಟಿನಲ್ಲಿ ಪೋಷಕರ ಹಾಗೂ ಶಿಕ್ಷಕರ ಪಾತ್ರ ಬಹಳ ಪ್ರಮುಖವಾದದ್ದು,

- ಒಂದೇ ಅಳತೆಯ ಶೂ ಎಲ್ಲರ ಕಾಲಿಗೂ ಆಗುವುದುಂಟೇ? ಹಾಗೆಯೇ ಎಲ್ಲ ಮಕ್ಕಳ ಮನಸ್ಥಿತಿಯೂ ಒಂದೇ ಸಮನಾಗಿರುವುದಿಲ್ಲ. ಒಂದೊಂದು ಮಗುವಿನ ಮನಸ್ಥಿತಿ ಮತ್ತು ಪರಿಸ್ಥಿತಿಯನ್ನು ನಿಭಾಯಿಸುವ ಕೌಶಲಗಳು ಬೇರೆ ಬೇರೆಯಾಗಿರುತ್ತವೆ. ಅದನ್ನು ಅರಿತು ಮಕ್ಕಳೊಟ್ಟಿಗೆ ವರ್ತಿಸುವುದು ಒಳ್ಳೆಯದು. ನಿಧಾನವಿರುವ ಮಕ್ಕಳಿಗೆ ಹೆಚ್ಚು ಸಮಯ ನೀಡಿ, ಉತ್ತೇಜಿಸಿ.
- ವರ್ಷದಿಂದ ಇರುವ ಪರಿಸ್ಥಿತಿ ಬೇರೆಯದ್ದೇ ಆಗಿರುವುದರಿಂದ ಮಕ್ಕಳಲ್ಲಿ ಭಾವನಾತ್ಮಕವಾಗಿಯೂ ಸಾಕಷ್ಟು ಬದಲಾವಣೆಗಳಾಗಿರುತ್ತವೆ. ಮೊದಲು ಅದನ್ನು ಗುರುತಿಸಿ, ನಂತರ ಅದಕ್ಕೆ ತಕ್ಕಂತೆ ವರ್ತಿಸಿ.
- ಆನ್‌ಲೈನ್ ತರಗತಿಗಳು ಎಷ್ಟೇ ಪರಿಣಾಮಾತ್ಮಕವಾಗಿ ಇದ್ದರೂ ಮಕ್ಕಳನ್ನು ಆಫ್‌ಲೈನ್ ತರಗತಿಗಳಂತೆ ತಲುಪಲು ಸಾಧ್ಯವಿಲ್ಲ. ಕಲಿತದ್ದು ಸ್ವಲ್ಪವಾದರೆ, ಮರೆತದ್ದು ಬಹುಪಾಲು. ಸಾಕಷ್ಟು ಮಕ್ಕಳು ಮೂಲಭೂತ ವಿಚಾರಗಳನ್ನೆ ಮರೆತಿರುತ್ತಾರೆ. ಹಾಗಾಗಿ ಪುನರಾವರ್ತನೆ ಮಾಡಿ ಪಕ್ವವಾದ ನಂತರ ಮುಂದಿನ ಕಲಿಕೆಗೆ ಹೋಗುವುದು ಒಳ್ಳೆಯದು.
- 'ಲಾಕ್‌ಡೌನ್‌ಗಿಂತ ಮುಂಚೆ ಚೂಟಿ ಇದ್ದ ನೀನು ಮನೆಯಲ್ಲೆ ಇದ್ದು ಸೋಮಾರಿಯಾಗಿದ್ದೀಯಾ' ಎಂದು ಬೈಯುವುದು ಸಾಮಾನ್ಯ. ಇದಕ್ಕೆ ಕಾರಣ ಏಕಾಗ್ರತೆ. ಕಲಿಕಾ ವಿಧಾನದಲ್ಲಿ ಆದ ಬದಲಾವಣೆ, ಅದರ ಪ್ರಭಾವ ಏಕಾಗ್ರತೆಯ ಮೇಲೂ ಬೀರಿರುತ್ತದೆ. ಹಾಗಾಗಿ ಮೊದಲಿದ್ದ ಏಕಾಗ್ರತೆಯನ್ನು ತಕ್ಷಣ ಆಪೇಕ್ಷಿಸುವುದು ಸರಿಯಲ್ಲ. ಒಂದಿಷ್ಟು ಕಾಲಾವಕಾಶ ಬೇಕು.
- ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ನಡುವಿನ ಬಾಂಧವ್ಯ ಮತ್ತು ಸಂಬಂಧದ ಕೊಂಡಿ ಕೊರೊನಾ ಕಾರಣದಿಂದ ಕೊಂಚ ಸಡಿಲಗೊಂಡಿದೆ. ಅದನ್ನು ಪುನಃ ಜೋಡಿಸುವ ಕೆಲಸವೂ ಆಗಬೇಕಿದೆ. ಉತ್ತಮ ಬಾಂಧವ್ಯ ಏರ್ಪಡಾಗದ ಹೊರತು ಕಲಿಕೆ ಅಪೂರ್ಣ.
- ಇಷ್ಟು ದಿನದ ಅಂತರದಲ್ಲಿ ಸಾಕಷ್ಟು ಮಕ್ಕಳು ಎಲ್ಲವನ್ನೂ ಮರೆತಿದ್ದಾರೆ, ಅದನ್ನೂ ಕಲಿಸಬೇಕು, ಸಿಲಬಸ್ ಕೂಡ ಮುಗಿಸಬೇಕು ಎನ್ನುವ ಧಾವಂತ ಶಿಕ್ಷಕರಲ್ಲಿ ಬೇಡ. ಮೊದಲು ಮಕ್ಕಳು ಶಾಲೆಗೆ ಹೊಂದಿಕೊಳ್ಳಲಿ ನಂತರ ಕಲಿಕೆ ಪ್ರಾರಂಭವಾಗಲಿ. ಇದು ನಿಮ್ಮ ಒಬ್ಬರದ್ದಲ್ಲ, ಎಲ್ಲ ಶಿಕ್ಷಕರ ವಿದ್ಯಾರ್ಥಿಗಳ ಸಮಸ್ಯೆಯೂ ಆಗಿರುವುದರಿಂದ ತಾಳ್ಮೆ ಇರಲಿ.
- ಏನೂ ಕಲಿತಿಲ್ಲ ಎಂದು ದೂರುವುದನ್ನು ಪೋಷಕರೂ ಬಿಡಬೇಕು. ಕಲಿಕೆಯ ಪ್ರಮಾಣದಲ್ಲಿ ಕುಂಠಿತವಾಗಿರಬಹುದು ಅಷ್ಟೆ ಅದರೆ ಅಪೂರ್ಣವಲ್ಲ. ಶಾಲೆಯಲ್ಲಿ ಶಿಕ್ಷಕರು ವಹಿಸುವ ಪಾತ್ರವನ್ನು ಮನೆಯಲ್ಲಿ ಪೋಷಕರು ವಹಿಸಬೇಕು.
- ಶಾಲೆಗೆ ಕೊರೊನಾ ಬಗೆಗಿನ ಗೊಂದಲ, ಮುಂಜಾಗ್ರತಾ ಕ್ರಮಗಳು ಹೀಗೆ ಸಾಕಷ್ಟು ವಿಚಾರಗಳನ್ನು ತಲೆಯಲ್ಲಿ ಹೊತ್ತು ಬರುವ ಮಕ್ಕಳು ಕಲಿಕೆಯಲ್ಲಿ ಗಮನ ಕೇಂದ್ರೀಕರಿಸಲು ಸ್ವಲ್ಪ ಕಷ್ಟವಾಗುತ್ತದೆ. ಹಾಗಾಗಿ ವೈರಸ್ ಬಗ್ಗೆ ಮಕ್ಕಳಲ್ಲಿ ಭಯ ತುಂಬುವುದು ಬೇಡ. ಹಾಗಂತ ನಿರ್ಲಕ್ಷ್ಯ ಮಾಡಬಾರದು, ಜಾಗೃತಿಯಿದ್ದರೆ ಸಾಕು.
- ಸಂಗೀತ, ಚಿತ್ರಕಲೆ, ನೃತ್ಯ, ನಾಟಕ ಹಾಗೂ ಆಟೋಟಗಳನ್ನು ಮಾಡಿಸುವ ಮುಖಾಂತರವೂ ಮಕ್ಕಳನ್ನು ಮುಕ್ತವಾಗಿ ಮಾತಾಡಲು ಮತ್ತು ಬೆರೆಯಲು ಅವಕಾಶ ನೀಡಬಹುದು.

ಈಗಿನ ಪರಿಸ್ಥಿತಿಯನ್ನೂ ಒಂದು ಸವಾಲಾಗಿ ಸ್ವೀಕರಿಸಿ ಅದನ್ನು ಗೆದ್ದು ಬರುವ ಅನಿವಾರ್ಯ ಶಿಕ್ಷಕರು ಮತ್ತು ಪೋಷಕರು ಇಬ್ಬರಲ್ಲಿಯೂ ಇದೆ. ಮಕ್ಕಳ ಭವಿಷ್ಯದ ದೃಷ್ಟಿಯಿಂದ ಇದು ಅವಶ್ಯಕ ಕೂಡ. ❖

> ಶುರುವಿನ ಒಂದೆರಡು ತರಗತಿಗಳನ್ನು ಮಕ್ಕಳಿಗಾಗೆ ಮೀಸಲಿಡಿ. ಅವರ ಅನಿಸಿಕೆ, ಅಭಿಪ್ರಾಯ ಮತ್ತು ಅನುಮಾನಗಳನ್ನು ಹಂಚಿಕೊಳ್ಳಲು ಹೇಳಿ. ಇದರಿಂದ ಅವರ ಮನಸ್ಸಿನ ಗೊಂದಲಗಳು ದೂರವಾಗುತ್ತವೆ ಮತ್ತು ಎಲ್ಲರೊಟ್ಟಿಗೆ ಮುಕ್ತವಾಗಿ ಬೆರೆಯಲು ಅವಕಾಶ ಕೊಟ್ಟಂತಾಗುತ್ತದೆ. ಮಾತನಾಡಲು ಸಾಧ್ಯವಾಗದಿದ್ದರೆ, ಒಂದು ಚೀಟಿಯಲ್ಲಿ ಬರೆದು ಮೊದಲೆ ಇಟ್ಟ ಬಾಕ್ಸ್‌ನಲ್ಲಿ ಹಾಕುವಂತೆಯೂ ಸೂಚಿಸಬಹುದು.

ಪದವಿ ಜೊತೆಗೆ ಬೇರೆ ಯಾವ ಕೋರ್ಸ್ ಸೂಕ್ತ?

ಸಿದ್ಧಾಂತ್ ಎಂ.ಜೆ.

ಈಗಂತೂ ಕಾಲೇಜಿನಲ್ಲಿ ಬಗೆಬಗೆಯ ಕೋರ್ಸ್‌ಗಳು ಲಭ್ಯ. ವಿದ್ಯಾರ್ಥಿಗಳಿಗೆ ಬೇಕಾದಷ್ಟು ಆಯ್ಕೆಗಳಿವೆ. ಈ ಹಿಂದೆ ಒಂದು ವಿಷಯದಲ್ಲಿ ನೀಡಲಾಗುತ್ತಿದ್ದ ಯಾವುದೋ ಒಂದು ಅಧ್ಯಾಯವನ್ನೇ ಒಂದು ಪ್ರತ್ಯೇಕ ಕೋರ್ಸ್ ಆಗಿ ಪರಿವರ್ತಿಸಲಾಗಿದೆ. ಹಾಗೆಯೇ ಪ್ರತಿಯೊಬ್ಬರೂ ಒಂದು ಪದವಿಯ ಜೊತೆಗೆ ಇತರ ಕೋರ್ಸ್‌ಗಳನ್ನು ಮಾಡಿಕೊಂಡು ಕೌಶಲವನ್ನು ಸಿದ್ಧಿಸಿಕೊಳ್ಳುತ್ತಾರೆ. ಉದಾಹರಣೆಗೆ ಸಾಹಿತ್ಯದಲ್ಲಿ ಪದವಿ ಮಾಡಿದವರು ಡಿಜಿಟಲ್, ಮಷೀನ್ ಲರ್ನಿಂಗ್ ಎಂದೆಲ್ಲ ಕೌಶಲದಲ್ಲಿ ಪರಿಣಿತರಾಗುವುದು ಹೊಸದೇನಲ್ಲ. ಕೌಶಲದ ಜೊತೆಗೆ ವಿವಿಧ ವಿಷಯಗಳಲ್ಲಿ ಜ್ಞಾನ ಸಂಪಾದಿಸುವುದು ಹಲವರ ಗುರಿ. ಹಾಗೆಯೇ ಉದ್ಯೋಗದಾತರೂ ಕೂಡ ಇಂತಹ ಬೇರೆ ಬೇರೆ ಕೌಶಲಗಳನ್ನು ಉದ್ಯೋಗಿಗಳಲ್ಲಿ ಬಯಸುವುದು ಸಾಮಾನ್ಯ.

ಮುಂದೆ ಉದ್ಯೋಗದಲ್ಲಿ ಮೇಲಿನ ಸ್ಥಾನಕ್ಕೇರಲು ಕೂಡ ಇಂತಹ ಬೇರೆ ಬೇರೆ ಕೋರ್ಸ್‌ಗಳು ನೆರವಿಗೆ ಬರುತ್ತವೆ. ಇದಕ್ಕೆಲ್ಲ ಕಾಲೇಜಿನಲ್ಲಿ ಕಲಿಯುತ್ತಿರುವಾಗಲೇ ಯೋಜನೆ ರೂಪಿಸಿಕೊಳ್ಳುವುದು ಸೂಕ್ತ. ಆ ಅವಧಿಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಜ್ಞಾನ ಪಡೆದರೆ ವಿದ್ಯಾರ್ಥಿಗಳಿಗೇ ಅನುಕೂಲ.

ಪದವಿ ಓದುವುದರ ಜೊತೆಗೆ ಮಾಡಬಹುದಾದ ಕೆಲವು ಕೋರ್ಸ್‌ಗಳು ಇಲ್ಲಿವೆ.

ಕಂಪ್ಯೂಟರ್ ಕೋಡಿಂಗ್: ಕಂಪ್ಯೂಟರ್ ವಿಜ್ಞಾನ ಕಲಿಯಬೇಕೆಂದೇನೂ ಇಲ್ಲ, ಅದರಲ್ಲಿ ಪದವಿ ಪಡೆದವರು ಮಾತ್ರ ಅದಕ್ಕೆ ಸಂಬಂಧಿಸಿದ ಇತರ ಕೋರ್ಸ್‌ಗಳನ್ನು ಮಾಡಬಹುದು ಎಂಬ ನಿಯಮವೇನೂ ಇಲ್ಲ. ಯಾವುದೇ ಪದವಿ ಇರಲಿ, ಜೊತೆಗೆ ಕೋಡಿಂಗ್ ಕಲಿತರೆ ನಿಮಗೇ ಅನುಕೂಲ.

ಪ್ರೋಗ್ರಾಮಿಂಗ್ ಬಗ್ಗೆ ಮುಖ್ಯವಾದ ಅಂಶಗಳನ್ನು ಕಲಿತರೆ ಮುಂದೆ ಯಾವುದೇ ಉದ್ಯೋಗ ಸೇರಿದರೂ ಕೂಡ ಅಲ್ಲಿ ಕಂಪ್ಯೂಟರ್ ಬಳಸುವಾಗ ಕೆಲವು ಪರಿಭಾಷೆಗಳನ್ನು ಅರ್ಥ ಮಾಡಿಕೊಂಡು ಚೆನ್ನಾಗಿ ಕಾರ್ಯನಿರ್ವಹಿಸಬಹುದು. ಕಂಪ್ಯೂಟರ್‌ನಲ್ಲಿ ಯಾವುದನ್ನು ಬಳಕೆ ಮಾಡಬಹುದು ಎಂಬುದಕ್ಕೆ ಬೇರೆಯವರ ಸಹಾಯ ಅಗತ್ಯವಿರುವುದಿಲ್ಲ.

ಮಾರ್ಕೆಟಿಂಗ್: ಈ ಸಾಮಾಜಿಕ ಜಾಲತಾಣ ಎಂಬುದು ಇದೆಯಲ್ಲ, ಪ್ರತಿಯೊಬ್ಬರೂ ತಮ್ಮದೇ ಆದ ಬ್ರ್ಯಾಂಡ್ ಇಮೇಜ್ ಬೆಳೆಸಿಕೊಳ್ಳಲು ಸಹಾಯ ಮಾಡಿದೆ. ಇದರ ಬಗ್ಗೆ ಆಳವಾಗಿ ತಿಳಿದುಕೊಂಡರೆ ಅದು ನಿಮ್ಮ ವ್ಯವಹಾರಕ್ಕೆ ನೆರವಾಗಬಹುದು. ನಿಮ್ಮ ಉತ್ಪನ್ನಗಳ ಪ್ರಚಾರಕ್ಕೆ, ಗ್ರಾಹಕರನ್ನು ಸೆಳೆಯಲು ಇದು ಪೂರಕ.

ವಹಿವಾಟು, ಅದರ ಬಗ್ಗೆ ಪ್ರಚಾರ ಮಾಡುವುದು ಹಾಗೂ ಬ್ರ್ಯಾಂಡಿಂಗ್ ಬಗ್ಗೆ ಮುಖ್ಯವಾದ ಅಂಶಗಳನ್ನು ಅರ್ಥ ಮಾಡಿಕೊಳ್ಳಬೇಕು. ಇದು ಮುಂದೆ ನಿಮಗೆ ಅವಕಾಶಗಳನ್ನು ಸೃಷ್ಟಿಸುವುದಲ್ಲದೇ, ಉದ್ಯಮದಲ್ಲಿ ಸಾಧನೆ ಮಾಡಲು ನೆರವಾಗುತ್ತದೆ. ಹೀಗಾಗಿ ವಿದ್ಯಾರ್ಥಿ ದೆಸೆಯಲ್ಲೇ ನಿಮ್ಮನ್ನು ನೀವು ಪರಿಚಯಿಸಿಕೊಂಡು, ಸ್ನೇಹಿತರ ದಂಡನ್ನು ಸಂಪಾದಿಸಬಹುದು.

ಗ್ರಾಫಿಕ್ ಡಿಸೈನ್: ಈ ವಿನ್ಯಾಸ ಕೌಶಲದಲ್ಲಿ ಪರಿಣತಿ ಸಂಪಾದಿಸಿದರೆ ಮುಂದೆ ಡಿಜಿಟಲ್ ಅಥವಾ ಪ್ರಿಂಟ್ ಮಾಧ್ಯಮದಲ್ಲಿ ನಿಮಗೆ ಅನುಕೂಲ. ಕಂಟೆಂಟ್ ಬರಹಗಾರರಾಗಿಯಲ್ಲದೇ, ಮಾರ್ಕೆಟಿಂಗ್‌ನಲ್ಲೂ ಕೆಲಸ ಮಾಡಬಹುದು. ಜೊತೆಗೆ ಫೋಟೊಶಾಪ್‌ನಲ್ಲೂ ತರಬೇತಿ ಪಡೆದುಕೊಳ್ಳಿ.

ಸಂಖ್ಯಾಶಾಸ್ತ್ರದಲ್ಲಿ ಪರಿಣತಿ: ಈಗಂತೂ ಅಂಕಿ– ಅಂಶಗಳು ಎಲ್ಲಾ ಕ್ಷೇತ್ರದಲ್ಲೂ ಅಗತ್ಯ. ಇಂದು ಸಿದ್ಧ ತಿನಿಸಿನ ಪ್ಯಾಕ್ ಮೇಲಿಂದ ಹಿಡಿದು, ಆರೋಗ್ಯ ಕ್ಷೇತ್ರದವರೆಗೂ ಇದರ ವ್ಯಾಪ್ತಿ ಚಾಚಿದೆ. ಇನ್ನೂ ಕಾಡುತ್ತಿರುವ ಕೋವಿಡ್ ಬಗ್ಗೆಯೂ ಸಾಕಷ್ಟು ಅಂಕಿ– ಅಂಶಗಳನ್ನು ತಜ್ಞರು ನೀಡುತ್ತಿರುವುದು ಗೊತ್ತೇ ಇದೆ. ಹೀಗಾಗಿ ಸಂಖ್ಯಾಶಾಸ್ತ್ರ ಕಲಿತರೆ ವಿಶ್ಲೇಷಣೆ ಸಾಮರ್ಥ್ಯವನ್ನೂ ಬೆಳೆಸಿಕೊಳ್ಳಬಹುದು.

ಆಳ ಅಧ್ಯಯನ

ನಿಮ್ಮ ಉದ್ಯೋಗಕ್ಕೆ ಸಂಬಂಧಿಸಿದ ಕೋರ್ಸ್ ಆದರೆ ಅದರಲ್ಲಿ ಆಳವಾದ ಅಧ್ಯಯನ ಮಾಡುವುದು ಒಳಿತು. ಮೂರು ಅಥವಾ ಆರು ತಿಂಗಳ ಅಲ್ಪಾವಧಿ ಕೋರ್ಸ್ ಅಥವಾ ಸರ್ಟಿಫಿಕೇಟ್ ಕೋರ್ಸ್‌ನಿಂದ ಅಷ್ಟೊಂದು ಪ್ರಯೋಜನವಾಗುವುದಿಲ್ಲ. ಯಾವಾಗಲೂ ಉದ್ಯೋಗದಾತರು ವಿದ್ಯಾರ್ಥಿಗಳ ಶೈಕ್ಷಣಿಕ ಹಿನ್ನೆಲೆ ನೋಡಿಕೊಂಡೇ ನೇಮಕಾತಿ ಮಾಡಿಕೊಳ್ಳುವುದು. ವಿದ್ಯಾರ್ಥಿ ಯಾವ ರೀತಿಯ ಕೋರ್ಸ್ ಆಯ್ಕೆ ಮಾಡಿಕೊಂಡಿದ್ದಾನೆ ಎಂಬುದರ ಮೇಲೆ ಆ ವಿದ್ಯಾರ್ಥಿಯ ಬದ್ಧತೆ ಮನದಟ್ಟಾಗುತ್ತದೆ. ಒಂದು ಕೋರ್ಸ್‌ಗೆ ಕೇವಲ ಹವ್ಯಾಸಕ್ಕೋಸ್ಕರ ಸೇರಿಕೊಂಡು ಸರ್ಟಿಫಿಕೇಟ್ ಪಡೆದುಕೊಂಡರೆ ಚಾಣಾಕ್ಷ ಉದ್ಯೋಗದಾತರು ಆ ವ್ಯಕ್ತಿಯ ಬದ್ಧತೆಯನ್ನು ಪತ್ತೆ ಮಾಡಬಲ್ಲರು.

ಹಾಗೆಯೇ ಯಾವುದೇ ಕೋರ್ಸ್ ಇರಲಿ, ಮುಂದೆ ಯಾವ ಉದ್ಯೋಗಕ್ಕೆ ಸೇರಬೇಕೆಂಬುದನ್ನು ನಿರ್ಧರಿಸಿ ಪದವಿ ಪಡೆದಿರಲಿ, ಇಂಗ್ಲಿಷ್ ಅನ್ನು ಚೆನ್ನಾಗಿ ಕಲಿತಿರಬೇಕು. ಅಂತರರಾಷ್ಟ್ರೀಯವಾಗಿ ಸಂವಹನ ಮಾಡುವುದು ಬರದಿದ್ದರೆ ಅವರು ತಮ್ಮ ಉದ್ಯೋಗದಲ್ಲಿ ಹೆಚ್ಚಿನ ಪ್ರಗತಿ ಸಾಧಿಸುವುದು ಕಷ್ಟ.

ಕೊನೆಯದಾಗಿ ವೈಯಕ್ತಿಕ ಹಣಕಾಸನ್ನು ನಿಭಾಯಿಸುವ ಸಾಮರ್ಥ್ಯವಿರಬೇಕು. ಉಳಿತಾಯ, ಹೂಡಿಕೆ, ಕ್ರೆಡಿಟ್ ಕಾರ್ಡ್, ತೆರಿಗೆ ಮೊದಲಾದವುಗಳನ್ನು ಸ್ವತಂತ್ರವಾಗಿ ನಿಭಾಯಿಸುವಂತಹ ಛಾತಿ ಬೆಳೆಸಿಕೊಳ್ಳಬೇಕು. ❖

ವಿದ್ಯಾರ್ಥಿ ವೇತನ ಕೈಪಿಡಿ

ಐಐಟಿ ಕಾನ್ಪುರ್ ಡಿಪಾರ್ಟ್‌ಮೆಂಟ್ ಆಫ್ ಮ್ಯಾಥ್‌ಮ್ಯಾಟಿಕ್ಸ್ ಆ್ಯಂಡ್ ಸ್ಟ್ಯಾಟಿಸ್ಟಿಕ್ಸ್ ಜೂನಿಯರ್ ರಿಸರ್ಚ್ ಫೆಲೋಶಿಪ್ 2021

- ವಿವರ: ಪಿಎಚ್‌ಡಿ/ ಎಂಎಸ್‌ಸಿ ಪದವಿ ಮುಗಿಸಿದವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- ಅರ್ಹತೆ: ಗಣಿತದಲ್ಲಿ ಪಿಎಚ್‌ಡಿ ಮತ್ತು ಎಂಎಸ್‌ಸಿ ಪದವಿ ಪಡೆದವರು ಅರ್ಜಿ ಸಲ್ಲಿಸಬಹುದು. ಸಂಶೋಧನೆಯಲ್ಲಿ ಸ್ವಲ್ಪ ಮಟ್ಟಿನ ಅನುಭವವನ್ನು ಹೊಂದಿದವರೂ ಅರ್ಜಿ ಸಲ್ಲಿಸಬಹುದು.
- ಆರ್ಥಿಕ ಸಹಾಯ: ತಿಂಗಳಿಗೆ ₹ 31 ಸಾವಿರ
- ಕೊನೆಯ ದಿನಾಂಕ: 30 ಸೆಪ್ಟೆಂಬರ್, 2021
- ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ
- ಹೆಚ್ಚಿನ ಮಾಹಿತಿಗೆ: www.b4s.in/praja/MSR4

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ (ಐಐಎ) ಚಂದ್ರಶೇಖರ್ ಪೋಸ್ಟ್ ಡಾಕ್ಟೊರಲ್ ಫೆಲೋಶಿಪ್ 2021

- ವಿವರ: ಆಸ್ಟ್ರೋನಮಿ ಮತ್ತು ಆಸ್ಟ್ರೋಫಿಸಿಕ್ಸ್ ವಿಷಯಗಳಲ್ಲಿ ಹೆಚ್ಚು ಅಂಕ ಪಡೆದವರು, ಪಿಎಚ್‌ಡಿ ಮಾಡಿದವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- ಅರ್ಹತೆ: 32 ವರ್ಷದೊಳಗಿನ ಪಿಎಚ್‌ಡಿ ಪದವಿ ಪಡೆದವರು ಅರ್ಜಿಯನ್ನು ಸಲ್ಲಿಸಬಹುದಾಗಿದೆ.
- ಆರ್ಥಿಕ ಸಹಾಯ: ₹ 80 ಸಾವಿರದವರೆಗೆ ಜೊತೆಗೆ ಇತರ ಖರ್ಚಿಗೆ ₹ 2 ಲಕ್ಷ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30 ಸೆಪ್ಟೆಂಬರ್, 2021
- ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಹೆಚ್ಚಿನ ಮಾಹಿತಿಗೆ: www.b4s.in/praja/ACD7 ❖

ದೈಹಿಕ ಶಿಕ್ಷಣ ಕೋರ್ಸ್ ಅವಕಾಶಗಳು ಭರಪೂರ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

- **ಸರ್, ನಾನು ಬಿಕಾಂ ಪದವಿಯನ್ನು ಮುಗಿಸಿ ಬಿಪಿಇಡಿ ಮಾಡಲು ಬಯಸುತ್ತಿದ್ದೇನೆ. ಇದನ್ನು ಯಾವ ವಿಶ್ವವಿದ್ಯಾಲಯದಲ್ಲಿ ಮಾಡಿದರೆ ಒಳ್ಳೆಯದು; ಇದರ ಅವಕಾಶಗಳೇನು?**

ಗುಡಿಯಪ್ಪರ ಲಕ್ಷ್ಮಣ ದೇವರ, ಹರಪನಹಳ್ಳಿ

ಬಿಪಿಇಡಿ ಕೋರ್ಸ್ ದೈಹಿಕ ಮತ್ತು ಮಾನಸಿಕ ಆರೋಗ್ಯ, ಮತ್ತು ಸ್ವಾಸ್ಥ್ಯಕ್ಕೆ ಸಂಬಂಧಿಸಿದ ಸವಿಸ್ತಾರವಾದ ಶಿಕ್ಷಣವನ್ನು ನೀಡಿ, ಈ ಕ್ಷೇತ್ರದಲ್ಲಿ ವೃತ್ತಿ ಜೀವನವನ್ನು ರೂಪಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಅನುವು ಮಾಡುತ್ತದೆ. ಈ ಪದವಿಯ ನಂತರ ಶಾಲಾ ಕಾಲೇಜುಗಳು, ಜಿಮ್ ಮತ್ತು ಫಿಟ್‌ನೆಸ್ ಸಂಸ್ಥೆಗಳು, ಕ್ರೀಡೆ ಮತ್ತು ಸಂಬಂಧಿತ ಸಂಸ್ಥೆಗಳು, ಮಾಧ್ಯಮ ಸಂಸ್ಥೆಗಳು, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಎನ್‌ಜಿಒ ಸಂಸ್ಥೆಗಳು, ಇತ್ಯಾದಿ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳಿವೆ. ಆರೋಗ್ಯವಂತ ಸಮಾಜದ ನಿರ್ಮಾಣಕ್ಕೆ ದೈಹಿಕ ಶಿಕ್ಷಣ ಅತ್ಯಗತ್ಯ. ಪದವಿಯ ನಂತರ ಬಿಪಿಇಡಿ ಸಾಮಾನ್ಯವಾಗಿ ಎರಡು ವರ್ಷದ ಕೋರ್ಸ್ ಆಗಿದ್ದರೂ ಕೆಲವೆಡೆ ಒಂದು ವರ್ಷದ ಕೋರ್ಸ್ ಸಹಾ ಲಭ್ಯ. ಕೆಲವು ವಿಶ್ವವಿದ್ಯಾಲಯಗಳಲ್ಲಿ ದೈಹಿಕ ಶಿಕ್ಷಣದ ಜೊತೆಗೆ ಕ್ರೀಡಾ ವಿಜ್ಞಾನವನ್ನೂ ಸೇರಿಸಿ ಕೋರ್ಸಿನ ಮೌಲ್ಯವನ್ನು ವೃದ್ಧಿಸಲಾಗಿದೆ. ಸಾಮಾನ್ಯವಾಗಿ, ಕೋರ್ಸ್ ಪ್ರವೇಶಕ್ಕೆ ಮುನ್ನ ಅಭ್ಯರ್ಥಿಗಳ ದೈಹಿಕ ಸಾಮರ್ಥ್ಯ, ದಾರ್ಢ್ಯತೆ ಮತ್ತು ಸದೃಢತೆಯನ್ನು ಪರೀಕ್ಷಿಸಲಾಗುತ್ತದೆ. ಹಾಗಾಗಿ, ನಿಮ್ಮ ಆಸಕ್ತಿ ಮತ್ತು ವೃತ್ತಿ ಜೀವನದ ಯೋಜನೆಯ ಅನುಸಾರ ವಿಶ್ವವಿದ್ಯಾಲಯದ ಆಯ್ಕೆ ಮಾಡಬಹುದು.

- **ನಾನು ಕರ್ನಾಟಕ ಚಿತ್ರ ಕಲಾ ಪರಿಷತ್ ಕಾಲೇಜಿನಲ್ಲಿ ಆರ್ಟ್ ಹಿಸ್ಟರಿ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಮಾಡುತ್ತಿದ್ದೇನೆ. ಪಿಎಚ್‌ಡಿ ಯಾವ ವಿಷಯದಲ್ಲಿ ಮಾಡಬಹುದು ಎಂದು ತಿಳಿಸಿ. ಆರ್ಟ್ ಹಿಸ್ಟರಿ ವಿಭಾಗದ ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿ ನೀಡಿ.**

ಹೆಸರು ತಿಳಿಸಿಲ್ಲ, ಬೆಂಗಳೂರು

ಪಿಎಚ್‌ಡಿ ಸಂಶೋಧನೆ ಕುರಿತು ಸಾಕಷ್ಟು ಸಂಪನ್ಮೂಲಗಳು ಇದ್ದರೂ ಸಹ ವಿಷಯವನ್ನು ನಿರ್ಧರಿಸುವುದು ಸುಲಭವಲ್ಲ. ವಿಷಯದ ಪ್ರಸ್ತುತತೆ, ವಿಷಯದ ಕುರಿತು ಸ್ವಾಭಾವಿಕವಾದ ಒಲವು ಮತ್ತು ಪ್ರೇರಣೆಯ ಜೊತೆಗೆ ಮಾರ್ಗದರ್ಶಕರ ಸಕಾರಾತ್ಮಕ ಅಭಿಪ್ರಾಯ ಮತ್ತು ಬೆಂಬಲವಿರಬೇಕು. ಹಾಗಾಗಿ, ವಿಷಯದ ಕುರಿತು ಪ್ರಾಥಮಿಕ ಸಂಶೋಧನೆ ಅಗತ್ಯ.

ಪಿಎಚ್‌ಡಿ ನಂತರ ಕಾಲೇಜು/ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಕ ವೃತ್ತಿ, ಸಂಶೋಧನೆ, ಆರ್ಟ್ ಡಿಸೈನರ್, ಇಂಟೀರಿಯರ್ ಡಿಸೈನರ್, ಚಿತ್ರೋದ್ಯಮ ಮತ್ತು ಮನರಂಜನಾ ಕ್ಷೇತ್ರ, ಮ್ಯೂಸಿಯಮ್ಸ್, ಸ್ವಯಂ ಉದ್ಯೋಗ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ವೃತ್ತಿ ಜೀವನವನ್ನು ರೂಪಿಸಿಕೊಳ್ಳಬಹುದು.

- **ಪದವಿಯ ನಂತರ ವೃತ್ತಿ ಜೀವನವನ್ನು ರೂಪಿಸಿಕೊಳ್ಳಲು ಸ್ಪರ್ಧಾತ್ಮಕ ಪರೀಕ್ಷೆ ಒಳ್ಳೆಯದೇ ಅಥವಾ ಕೋರ್ಸ್ ಒಳ್ಳೆಯದೇ?**

ಸುಂಕ, ಬಳ್ಳಾರಿ

- **ನಾನು ಬಿಎಸ್‌ಸಿ ಮೊದಲ ವರ್ಷ ಓದುತ್ತಿದ್ದೇನೆ. ಪದವಿ ನಂತರ ಮುಂದೆ ಯಾವ ಪರೀಕ್ಷೆಗಳನ್ನು ಬರೆಯಬೇಕು. ಅದಕ್ಕಾಗಿ ಯಾವ ಪುಸ್ತಕಗಳನ್ನು ಓದಬೇಕು ತಿಳಿಸಿ.**

ಸಿಂಧು ಮಹೇಂದ್ರಕರ್, ಊರು ತಿಳಿಸಿಲ್ಲ

ನೀವು ನೀಡಿರುವ ಮಾಹಿತಿಯ ಪ್ರಕಾರ ವೃತ್ತಿಯ ಯೋಜನೆಯನ್ನು ಮಾಡಿದ್ದೀರಾ ಎಂಬುದು ತಿಳಿಯದು. ವೃತ್ತಿಯ ಯೋಜನೆಯಿಲ್ಲದೆ ಕೋರ್ಸ್ ಆಯ್ಕೆ ಮಾಡಿದರೆ ಇಂತಹ ಗೊಂದಲಗಳು ಸ್ವಾಭಾವಿಕ. ಈಗಲೂ, ನಿಮ್ಮ ಸಾಮರ್ಥ್ಯ ಮತ್ತು ಆಸಕ್ತಿಯ ಆಧಾರದ ಮೇಲೆ ಸೂಕ್ತವಾದ ವೃತ್ತಿಯ ಯೋಜನೆಯನ್ನು ಮಾಡಿದರೆ, ವಿದ್ಯಾಭ್ಯಾಸವನ್ನು ಮುಂದುವರಿಸಬೇಕಾ ಅಥವಾ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ವೃತ್ತಿಯನ್ನು ಅರಸಬೇಕಾ ಎನ್ನುವುದು ಅರಿವಾಗುತ್ತದೆ ಮತ್ತು ಮುಂದಿನ ಹಾದಿ ಸ್ಪಷ್ಟವಾಗುತ್ತದೆ.

- **ಈಗ ಅಂತಿಮ ವರ್ಷದ ಪದವಿ (ಬಿಎಸ್‌ಸಿ) ಓದುತ್ತಿದ್ದೇನೆ. ನನಗೆ ಯುಪಿಎಸ್‌ಸಿ ಪರೀಕ್ಷೆ ಬರೆದು ಒಳ್ಳೆಯ ಕೆಲಸಕ್ಕೆ ಹೋಗುವ ಆಸೆ. ಆದರೆ ನಾನು ಓದುತ್ತಿರುವ ಪದವಿಗೂ ಹಾಗೂ ಆಯ್ಕೆ ಮಾಡಿಕೊಂಡಿರುವ ಪರೀಕ್ಷೆಗೂ ಸಂಬಂಧವಿಲ್ಲ. ನಾನು ಏನು ಮಾಡಬೇಕು?**

ವೆಂಕಟೇಶ್, ಊರು ತಿಳಿಸಿಲ್ಲ.

ಮೊದಲು ವೃತ್ತಿ ಜೀವನದ ಯೋಜನೆಯನ್ನು ಮಾಡಿ ಅದರಂತೆ ಕೋರ್ಸ್ ಆಯ್ಕೆ ಮಾಡಿಕೊಂಡಿದ್ದರೆ ಇಂತಹ ಸಮಸ್ಯೆಗಳು ಉದ್ಭವವಾಗುತ್ತಿರಲಿಲ್ಲ. ಯುಪಿಎಸ್‌ಸಿ ಪರೀಕ್ಷೆಯನ್ನು ಯಾವುದೇ ಪದವಿಯ ನಂತರ ಮಾಡಬಹುದು. ಹಾಗಾಗಿ, ನಿಮ್ಮೆಲ್ಲಾ ಚೈತನ್ಯ ಮತ್ತು ಪರಿಶ್ರಮವನ್ನು ಯುಪಿಎಸ್‌ಸಿ ಪರೀಕ್ಷೆಯ ತಯಾರಿಯತ್ತ ಕೇಂದ್ರೀಕರಿಸಿ, ಅದರಲ್ಲಿ ಯಶಸ್ಸನ್ನು ಗಳಿಸಿ. ಅಗತ್ಯವಿದ್ದರೆ, ಯುಪಿಎಸ್‌ಸಿ ಪರೀಕ್ಷೆಯ ತರಬೇತಿ ಪಡೆಯಿರಿ. ಶುಭಹಾರೈಕೆಗಳು.

- **ನಾನು ಪಿಯುಸಿಯಲ್ಲಿ ಒಂದು ಬಾರಿ ಅನುತ್ತೀರ್ಣಳಾಗಿ ಅನಂತರ ಉತ್ತೀರ್ಣಳಾದೆ. ಆದರೆ ಮನೆಯಲ್ಲಿ ಹಣಕಾಸಿನ ಸಮಸ್ಯೆ ಇರುವ ಕಾರಣ ದುಡಿಯಬೇಕಾದ ಪರಿಸ್ಥಿತಿಯಲ್ಲಿದ್ದೇನೆ. ಹಾಗಾಗಿ ನನಗೆ ಎಸ್‌ಡಿಎ ಪರೀಕ್ಷೆಯ ಬಗ್ಗೆ ಮಾಹಿತಿ ನೀಡಿ ಅಥವಾ ಬೇರೆ ಸರ್ಕಾರಿ ಹುದ್ದೆಗಳ ಬಗ್ಗೆ ಮಾಹಿತಿ ನೀಡಿ.**

ಪ್ರಮೇಯ, ತುಮಕೂರು

ಕರ್ನಾಟಕ ಸರ್ಕಾರದ ಎಸ್‌ಡಿಎ ಮತ್ತು ಇನ್ನಿತರ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗಳ ವಿವರಗಳಿಗಾಗಿ ಗಮನಿಸಿ:https://prepp.in/kpsc-exam

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 61

831. ಅಸ್ತಿತ್ವದಲ್ಲಿರುವ ರಾಜ್ಯಗಳ ಗಡಿ ಬದಲಾಯಿಸುವ ಮೂಲಕ ಹೊಸ ರಾಜ್ಯವನ್ನು ರಚಿಸಲು ಸಂಸತ್ತಿಗೆ ಸಂವಿಧಾನದ ಯಾವ ವಿಧಿ ಅವಕಾಶ ನೀಡುತ್ತದೆ?

ಎ) 1ನೇ ವಿಧಿ ಬಿ) 2ನೇ ವಿಧಿ
ಸಿ) 3ನೇ ವಿಧಿ ಡಿ) 4ನೇ ವಿಧಿ

832. ಲೋಕಸಭೆಯ ಸಭಾಪತಿ ಅವರು ತಮ್ಮ ರಾಜೀನಾಮೆಯನ್ನು ಯಾರಿಗೆ ನೀಡುತ್ತಾರೆ?

ಎ) ರಾಜ್ಯಸಭೆಯ ಅಧ್ಯಕ್ಷರು
ಬಿ) ಪ್ರಧಾನಮಂತ್ರಿ
ಸಿ) ಲೋಕಸಭೆಯ ಉಪಸಭಾಪತಿ
ಡಿ) ಭಾರತದ ರಾಷ್ಟ್ರಪತಿ

833. ಈ ಕೆಳಗಿನವುಗಳಲ್ಲಿ ಯಾವುದು ಸ್ವಾತಂತ್ರ್ಯದ ಹಕ್ಕನ್ನು ಒಳಗೊಂಡಿಲ್ಲ

ಎ) ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು
ಬಿ) ಆಸ್ತಿ ಮತ್ತು ಸಂಪತ್ತನ್ನು ಸಂಪಾದಿಸುವ ಹಕ್ಕು
ಸಿ) ದೇಶದ ಯಾವುದೇ ಭಾಗದಲ್ಲಿ ಮುಕ್ತವಾಗಿ ಚಲಿಸುವ ಮತ್ತು ವಾಸಿಸುವ ಹಕ್ಕು
ಡಿ) ಯಾವುದೇ ವೃತ್ತಿ, ಉದ್ಯೋಗ ಹೊಂದುವ ಹಕ್ಕು

834. 92ನೇ ತಿದ್ದುಪಡಿ ಕಾಯ್ದೆ ಮೂಲಕ ಸಂವಿಧಾನದ 8ನೇ ಅನುಸೂಚಿಯಲ್ಲಿ ಯಾವ ಭಾಷೆ ಸೇರಿಸಲಾಯಿತು?

ಎ) ಹಿಂದಿ ಬಿ) ಕೊಂಕಣಿ
ಸಿ) ಮಣಿಪುರಿ ಡಿ) ಮೈಥಿಲಿ

835. ಈ ಕೆಳಗಿನ ಯಾವ ರಾಜ್ಯವನ್ನು 'ಬೌದ್ಧಧರ್ಮದ ತೊಟ್ಟಿಲು' ಎಂದು ಕರೆಯಲಾಗುತ್ತದೆ?

ಎ) ಸಿಕ್ಕಿಂ
ಬಿ) ಬಿಹಾರ
ಸಿ) ಉತ್ತರಪ್ರದೇಶ
ಡಿ) ಮಧ್ಯಪ್ರದೇಶ

836. ನಿಜಾಮಿ ಮತ್ತು ಫಖ್-ಇ-ಮುದಬ್ಬೀರ ಎಂಬ ವಿದ್ವಾಂಸರಿಗೆ ಯಾವ ದೊರೆ ಆಶ್ರಯ ನೀಡಿದ್ದನು?

ಎ) ಜಹಾಂಗೀರ್
ಬಿ) ಷೇರ್ ಷಾ ಸೂರಿ
ಸಿ) ಕುತ್ಬುದ್ದೀನ್ ಐಬಕ್
ಡಿ) ಔರಂಗಜೇಬ್

837. ದೆಹಲಿ ಸುಲ್ತಾನರ ಆಳ್ವಿಕೆ ಅವಧಿಯಲ್ಲಿ ಬಳಸಲ್ಪಡುವ 'ಖರಜ್' ಎಂಬ ಪದದ ಅರ್ಥ

ಎ) ಮುಸ್ಲಿಮೇತರ ಮೇಲಿನ ಭೂ ತೆರಿಗೆ
ಬಿ) ಮುಸ್ಲಿಮರ ಮೇಲಿನ ಕೃಷಿ ತೆರಿಗೆ
ಸಿ) ಮುಸ್ಲಿಂ ಪ್ರಜೆಗಳ ಮೇಲಿನ ಆಸ್ತಿ ತೆರಿಗೆ
ಡಿ) ಹಿಂದೂಗಳ ಮೇಲಿನ ಧಾರ್ಮಿಕ ತೆರಿಗೆ

838. 'ಭಜಗೋವಿಂದಂ' ಸ್ತೋತ್ರದ ಪ್ರತಿಪಾದಕರು

ಎ) ಶಂಕರಾಚಾರ್ಯ
ಬಿ) ರಾಮಾನುಜಾಚಾರ್ಯ
ಸಿ) ಮಧ್ವಾಚಾರ್ಯ
ಡಿ) ಬಸವೇಶ್ವರ

839. 'ದಕ್ಷಿಣಾಪಥ ಚಕ್ರವರ್ತಿ' ಎನಿಸಿಕೊಂಡ ವಿಜಯನಗರದ ಸಾಮ್ರಾಟ ಯಾರು?

ಎ) ಮೊದಲನೇ ದೇವರಾಯ
ಬಿ) ಪ್ರೌಢದೇವರಾಯ
ಸಿ) ಒಂದನೇ ಹರಿಹರ
ಡಿ) 2ನೇ ನರಸಿಂಹ

840. ರೋಗಗಳು ಮತ್ತು ಅಂಗಗಳಿಗೆ ಸಂಬಂಧಿಸಿ ಯಾವ ಜೋಡಿ ಸರಿಯಾಗಿದೆ?

ಎ) ಕಾಲರಾ-ಕರುಳು
ಬಿ) ಕಾಮಾಲೆ-ಪಿತ್ತಜನಕಾಂಗ
ಸಿ) ಮಂಗನಬಾವು-ಲಾಲಾಗ್ರಂಥಿಗಳು
ಡಿ) ಮೇಲಿನ ಎಲ್ಲವೂ ಸರಿ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ- 60ರ ಉತ್ತರ: 816. ಬಿ, 817. ಸಿ, 818. ಬಿ, 819. ಎ, 820. ಸಿ, 821. ಬಿ, 822. ಸಿ, 823. ಸಿ, 824. ಎ, 825. ಬಿ, 826. ಬಿ, 827. ಎ, 828. ಬಿ, 829. ಬಿ, 830. ಬಿ



ಸುಭಾಷಿತ

ಯಾವುದೇ ಸಮಸ್ಯೆ ಒಂದು ಅವಕಾಶವಿದ್ದಂತೆ. ಸಮಸ್ಯೆ ದೊಡ್ಡದಾಗಿದ್ದಷ್ಟೂ ಅವಕಾಶವೂ ದೊಡ್ಡದಾಗೇ ಇರುತ್ತದೆ.
–ವಿನೋದ್ ಖೋಸ್ಲ

ಜಿಎಸ್‌ಟಿ ವ್ಯಾಪ್ತಿಗಿಲ್ಲ ತೈಲ ಬೆಲೆ ಏರಿಕೆಗೆ ಬೇಕಿದೆ ಮದ್ದು

ಉತ್ತರಪ್ರದೇಶದ ಲಖನೌದಲ್ಲಿ ಕಳೆದ ವಾರ ನಡೆದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿ ಸಭೆಯು, ಪೆಟ್ರೋಲ್, ಡೀಸೆಲ್ ಹಾಗೂ ಇತರ ಕೆಲವು ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಲು ಕಾಲ ಇನ್ನೂ ಪಕ್ವವಾಗಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ. ಈ ಉತ್ಪನ್ನಗಳ ಮೇಲಿನ ತೆರಿಗೆ ವ್ಯವಸ್ಥೆಯನ್ನು ಈಗಿರುವಂತೆಯೇ ಮುಂದುವರಿಸಿಕೊಂಡು ಹೋಗಲು ತೀರ್ಮಾನ ಮಾಡಿದೆ. ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಬೆಲೆಯು ದೇಶಿ ಮಾರುಕಟ್ಟೆಯಲ್ಲಿ ಗರಿಷ್ಠ ಮಟ್ಟದಲ್ಲಿ ಇದೆ. ಆದರೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿ ಏನೂ ಇಲ್ಲ. ಕೋವಿಡ್ ಮತ್ತು ಲಾಕ್‌ಡೌನ್ ಕಾರಣದಿಂದಾಗಿ ವರಮಾನದಲ್ಲಿ ಆದ ಕೊರತೆಯನ್ನು ತುಂಬಿಕೊಳ್ಳಲು, ವರಮಾನವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಹೆಚ್ಚುವರಿಯಾಗಿ ವಿಧಿಸಿದ ತೆರಿಗೆ ಮತ್ತು ಸುಂಕದ ಕಾರಣದಿಂದಾಗಿಯೇ ಪೆಟ್ರೋಲ್, ಡೀಸೆಲ್ ಬೆಲೆಯು ಈ ಮಟ್ಟ ತಲುಪಿದೆ. ಇವುಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತಂದಲ್ಲಿ, ಗರಿಷ್ಠ ಶೇಕಡ 28ರಷ್ಟಕ್ಕಿಂತ ಹೆಚ್ಚಿನ ತೆರಿಗೆ ವಿಧಿಸಲು ಅವಕಾಶ ಇರುವುದಿಲ್ಲ, ತೆರಿಗೆಯು ದೇಶದಾದ್ಯಂತ ಒಂದೇ ಪ್ರಮಾಣದಲ್ಲಿ ಇರುತ್ತದೆ. ಆಗ ಇವುಗಳ ಬೆಲೆಯು ದೇಶಿ ಮಾರುಕಟ್ಟೆಯಲ್ಲಿ ತಗ್ಗಬಹುದು ಎಂಬ ನಿರೀಕ್ಷೆಯಿಂದ ಸಾರ್ವಜನಿಕರು ಹಲವು ಸಂಘ-ಸಂಸ್ಥೆಗಳು ಕೆಲವು ರಾಜಕೀಯ ಪಕ್ಷಗಳು ಇವುಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬೇಕು ಎಂದು ಆಗ್ರಹಿಸುತ್ತಿವೆ. ಆದರೆ, ಪೆಟ್ರೋಲ್ ಮತ್ತು ಡೀಸೆಲ್ ಸದ್ಯಕ್ಕಂತೂ ಜಿಎಸ್‌ಟಿ ವ್ಯಾಪ್ತಿಗೆ ಬರುವುದಿಲ್ಲ ಎಂಬುದು ಈಗ ಸ್ಪಷ್ಟವಾಗಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪರಸ್ಪರ ಮಾತುಕತೆ ನಡೆಸಿ, ತೆರಿಗೆ ತಗ್ಗಿಸಿ ಬೆಲೆ ಇಳಿಕೆ ಆಗುವಂತೆ ಮಾಡಿದರೆ ಜನರ ಬದುಕು ತುಸುವಾದರೂ ಸಲೀಸಾದೀತು

ಪೆಟ್ರೋಲ್, ಡೀಸೆಲ್ ಹಾಗೂ ಮದ್ಯವು ರಾಜ್ಯಗಳಿಗೆ ವರಮಾನದ ಪ್ರಮುಖ ಮೂಲಗಳು. ಜಿಎಸ್‌ಟಿ ವ್ಯವಸ್ಥೆ ಜಾರಿಗೆ ಬಂದ ನಂತರವೂ ಈ ಉತ್ಪನ್ನಗಳನ್ನು ಅದರ ವ್ಯಾಪ್ತಿಯಿಂದ ಹೊರಗೆ ಇರಿಸಲಾಗಿದೆ. ತಮ್ಮ ವರಮಾನದ ಪ್ರಮುಖ ಮೂಲವಾಗಿರುವ ಈ ಉತ್ಪನ್ನಗಳನ್ನು ಜಿಎಸ್‌ಟಿಗೆ ಸೇರಿಸಿದರೆ, ರಾಜ್ಯಗಳಿಗೆ ಹೆಚ್ಚುವರಿ ವರಮಾನ ಸಂಗ್ರಹಕ್ಕೆ ದೊಡ್ಡ ಮೂಲಗಳೇ ಇರುವುದಿಲ್ಲ. ಹಾಗಾಗಿ, ಈ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಲು ಯಾವ ರಾಜ್ಯವೂ ಮನಃಪೂರ್ವಕವಾಗಿ ಒಪ್ಪುವುದಿಲ್ಲ ಎಂಬುದು ಮಂಡಳಿಯ ಸಭೆಗೂ ಮೊದಲೇ ಖಚಿತವಾಗಿತ್ತು. ಮಂಡಳಿಯಲ್ಲಿ ಆಗಿರುವ ತೀರ್ಮಾನವು ನಿರೀಕ್ಷಿತವೇ. ಆದರೆ, ಈ ತೀರ್ಮಾನವು ಒಂದು ವಿಚಾರದಲ್ಲಿ ಸ್ಪಷ್ಟತೆಯನ್ನು ನೀಡಿದೆ – ತೈಲ ಬೆಲೆ ಇಳಿಕೆಯಾಗಬೇಕು ಎಂದಾದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮುಂದಡಿ ಇರಿಸಬೇಕು ಎಂಬುದು ಸ್ಪಷ್ಟ. ಕಚ್ಚಾ ತೈಲ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಳಿಕೆಯಾದಾಗಲೆಲ್ಲ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಮೇಲಿನ ಸುಂಕವನ್ನು ಹೆಚ್ಚಿಸಿ ಬೆಲೆ ಇಳಿಕೆಯ ಪ್ರಯೋಜನವನ್ನು ಸಾರ್ವಜನಿಕರಿಗೆ ಸಿಗದಂತೆ ಮಾಡಲಾಗಿದೆ. ತೈಲ ಬೆಲೆಯನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸಿದ ಸುಧಾರಣಾ ಕ್ರಮದ ಆಶಯಕ್ಕೆ ಇದು ವಿರುದ್ಧ. ತೈಲ ಬೆಲೆ ಭಾರಿ ಪ್ರಮಾಣದಲ್ಲಿ ಏರಿಕೆ ಆಗಿರುವುದು ಜನರ ದೈನಂದಿನ ಬದುಕಿನ ವೆಚ್ಚಗಳು ಹೆಚ್ಚಾಗಲು ಮುಖ್ಯ ಕಾರಣ. ಬೆಲೆ ಏರಿಕೆಯು ಯಾವುದೇ ಚಲನಶೀಲ ಅರ್ಥ ವ್ಯವಸ್ಥೆಯ ಸೂಚಕ ಹೌದಾದರೂ, ಕೋವಿಡ್ ಮತ್ತು ಲಾಕ್‌ಡೌನ್ ಸಂದರ್ಭದಲ್ಲಿ ಈ ರೀತಿ ಆಗಬಾರದಿತ್ತು. ಅಂತಹ ಸಂದರ್ಭದಲ್ಲಿ ಸರ್ಕಾರಗಳು ಹೊಂದಿರಬೇಕಿದ್ದ ಸೂಕ್ಷ್ಮತೆ ಕಾಣಲಿಲ್ಲ. ಉದ್ಯೋಗ ಸೃಷ್ಟಿ, ಆದಾಯವು ಹಿಮ್ಮುಖ ಚಲನೆಯನ್ನು ಕಾಣುತ್ತಿರುವ ಸಂದರ್ಭದಲ್ಲಿ ದಿನನಿತ್ಯದ ವೆಚ್ಚಗಳು ಏರುಗತಿಯಲ್ಲಿ ಇದ್ದರೆ ಜನರ ಬದುಕು ದುರ್ಭರವಾಗುತ್ತದೆ ಎಂಬುದು ಅನುಭವದಿಂದ ಗೊತ್ತಿರಬೇಕಿತ್ತು.

'ತೈಲದ ಸುಂಕವನ್ನು ನಾವು ತಗ್ಗಿಸಿದರೆ ರಾಜ್ಯಗಳು ಸುಂಕ ಹೆಚ್ಚಿಸಿ ಬೆಲೆಯು ಮಾರುಕಟ್ಟೆಯಲ್ಲಿ ಕಡಿಮೆ ಆಗದಂತೆ ಮಾಡುತ್ತವೆ, ತಮ್ಮ ಬೊಕ್ಕಸವನ್ನು ತುಂಬಿಸಿಕೊಳ್ಳುತ್ತವೆ' ಎಂದು ಕೇಂದ್ರ ಹಣಕಾಸು ಸಚಿವರು ಈ ವರ್ಷದ ಆರಂಭದಲ್ಲಿ ಹೇಳಿಕೆ ನೀಡಿದ್ದರು. ಬೆಲೆ ಇಳಿಸಲು ಕೆಲವು ರಾಜ್ಯಗಳ ಕಡೆಯಿಂದ ಬೇಡಿಕೆ ಬಂದಿತ್ತು. ಜಿಎಸ್‌ಟಿ ಅಡಿ ಈ ಎರಡು ಉತ್ಪನ್ನಗಳನ್ನು ತಂದರೆ ಇವುಗಳ ಬೆಲೆ ಇಳಿಕೆ ಆಗಬಹುದು ಎಂಬ ನಿರೀಕ್ಷೆ ಹುಟ್ಟಿತ್ತು. ಈ ಆಸೆ ಕೂಡ ಈಗ ಇಲ್ಲವಾಗಿದೆ. ತೀರಾ ದುಬಾರಿ ಆಗಿರುವ ಪೆಟ್ರೋಲ್, ಡೀಸೆಲ್ ದರವನ್ನು ಇಳಿಸಲು ಕ್ರಮ ಕೈಗೊಳ್ಳುವುದು ಕೇಂದ್ರ ಹಾಗೂ ರಾಜ್ಯಗಳ ಸಮಾನ ಹೊಣೆ. ಇಬ್ಬರೂ ಒಬ್ಬರನ್ನು ಇನ್ನೊಬ್ಬರು ದೂಷಿಸುತ್ತ ಕುಳಿತುಕೊಳ್ಳುವುದರಿಂದ ಜನರಿಗೆ ಯಾವ ಉಪಕಾರವೂ ಆಗುವುದಿಲ್ಲ. ಎರಡೂ ಸರ್ಕಾರಗಳು ಪರಸ್ಪರ ಮಾತುಕತೆ ನಡೆಸಿ, ತೆರಿಗೆ ತಗ್ಗಿಸಿ ಬೆಲೆ ಇಳಿಕೆ ಆಗುವಂತೆ ಮಾಡಿದರೆ ಜನರ ಬದುಕು ತುಸುವಾದರೂ ಸಲೀಸಾದೀತು. ತೈಲ ಬೆಲೆ ತಗ್ಗಿಸಿ, ಇತರ ವಸ್ತುಗಳ ಬೆಲೆಯಲ್ಲಿಯೂ ಕೊಂಚ ಇಳಿಕೆ ಆದರೆ ಜನರ ಕೈಯಲ್ಲಿ ಒಂದಿಷ್ಟು ಹೆಚ್ಚು ಹಣ ಉಳಿಯಬಹುದು. ಅದನ್ನು ಅವರು ತಮ್ಮ ಸಾಲ ತೀರಿಸಲು ಅಥವಾ ಹೊಸ ಖರೀದಿಗಳಿಗೆ ಬಳಸಿಕೊಳ್ಳಬಹುದು. ಅದರ ಪ್ರಯೋಜನ ಸಿಗುವುದು ದೇಶದ ಅರ್ಥ ವ್ಯವಸ್ಥೆಗೆ. ಜನರ ಮೇಲೆ ತೆರಿಗೆ ಹೊರೆ ಹೆಚ್ಚಿಸುವುದಕ್ಕಿಂತ ಜನರ ಕೈಯಲ್ಲಿ ಹೆಚ್ಚು ಹಣ ಇರುವಂತೆ ಮಾಡಿ ವ್ಯವಸ್ಥೆಯನ್ನು ಕಟ್ಟುವುದು ಒಳಿತು.

ದಿನದ ಟ್ವೀಟ್

ನೆಪಮಾತ್ರದ ಆಯ್ಕೆ ಆಗಬಾರದು

ಶೇ 30ರಷ್ಟು ದಲಿತ ಜನಸಂಖ್ಯೆ ಹೊಂದಿರುವ ಪಂಜಾಬ್‌ನಲ್ಲಿ, ಸ್ವಾತಂತ್ರ್ಯ ದೊರೆತ 74 ವರ್ಷಗಳ ನಂತರ ದಲಿತರೊಬ್ಬರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದಾರೆ. ಜಾತಿ ವ್ಯವಸ್ಥೆಯನ್ನು ತೊಡೆದುಹಾಕುವುದು ಎಷ್ಟು ಅಗತ್ಯ ಎಂಬುದನ್ನು ಇದು ತೋರಿಸುತ್ತದೆ. ಇದೊಂದು ಸಾಂಕೇತಿಕ ಹೇಳಿಕೆಯಂತೆ ಅಥವಾ ನೆಪಮಾತ್ರಕ್ಕೆ ಮುಖ್ಯಮಂತ್ರಿ ಎಂಬಂತೆ ಆಗಬಾರದು. ಚರಣ್‌ಜಿತ್ ಚನ್ನಿ ಅವರು ಮುಂಬರುವ ಚುನಾವಣೆಯಲ್ಲೂ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿತವಾದರೆ ಈ ಆಯ್ಕೆಗೊಂದು ಅರ್ಥ ಬರುತ್ತದೆ.

ಡಾ. ಮೀನಾ ಕಂದಸಾಮಿ, ಕವಯಿತ್ರಿ

ಕಿಡಿನುಡಿ

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಅಮರಿಂದರ್ ಸಿಂಗ್ ಅವರು ಪಂಜಾಬ್ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ (ನವಜೋತ್ ಸಿಂಗ್ ಸಿಧು) ವಿರುದ್ಧ ಮಾಡಿರುವ ಆರೋಪ ಗಂಭೀರವಾದುದು. ಈ ಕುರಿತು ಕಾಂಗ್ರೆಸ್ ಪಕ್ಷ ಮೌನ ವಹಿಸಿದೆ. ಏನಿದರ ಅರ್ಥ?

ಪ್ರಕಾಶ್ ಜಾವಡೇಕರ್, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಶುಕ್ರವಾರ, 20-9-1996

• **ಗುಜರಾತ್‌ಗೆ ರಾಷ್ಟ್ರಪತಿ ಆಡಳಿತ**

ನವದೆಹಲಿ, ಸೆ. 19 (ಪಿಟಿಐ)– ಗುಜರಾತ್ ಮುಖ್ಯಮಂತ್ರಿ ಸುರೇಶ್ ಮೆಹತಾ ನೇತೃತ್ವದ ಹನ್ನೊಂದು ತಿಂಗಳ ಭಾರತೀಯ ಜನತಾ ಪಕ್ಷದ ಸರ್ಕಾರವನ್ನು ಇಂದು ವಜಾ ಮಾಡಿ, ರಾಷ್ಟ್ರಪತಿ ಆಳ್ವಿಕೆ ಜಾರಿಗೊಳಿಸಲಾಗಿದೆ. ಅಲ್ಲದೆ, ರಾಜ್ಯ ವಿಧಾನಸಭೆಯನ್ನು ಅನಿರ್ದಿಷ್ಟ ಅವಧಿವರೆಗೆ ಅಮಾನತಿನಲ್ಲಿಡಲಾಗಿದೆ.

ರಾಜ್ಯದಲ್ಲಿ ಉಂಟಾಗಿರುವ ಸಂವಿಧಾನ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ರಾಜ್ಯಪಾಲ ಕೆ.ಪಿ. ಸಿಂಗ್ ಅವರು ಕಳುಹಿಸಿರುವ ವರದಿ ಮೇರೆಗೆ ರಾಷ್ಟ್ರಪತಿ ಡಾ. ಶಂಕರ್ ದಯಾಳ್ ಶರ್ಮಾ ಅವರು ಸಂವಿಧಾನದ 356ನೇ ವಿಧಿ ಅನ್ವಯ ಗುಜರಾತ್‌ನಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಗೆ ತಂದಿದ್ದಾರೆ.

• **ಲಾಕಪ್‌ಗೆ ಸುಖ್‌ರಾಂ, ರುನುಗೆ ಜಾಮೀನು**

ನವದೆಹಲಿ, ಸೆ. 19 (ಪಿಟಿಐ)– ದೂರ ಸಂಪರ್ಕ ಇಲಾಖೆಯ 1.68 ಕೋಟಿ ರೂಪಾಯಿ ಹಗರಣದ ಆರೋಪಿಗಳಾದ ದೂರಸಂಪರ್ಕ ಇಲಾಖೆಯ ಉನ್ನತಾಧಿಕಾರಿ ರುನು ಘೋಷ್ ಮತ್ತು ಹೈದರಾಬಾದ್ ಮೂಲದ ಎ.ಆರ್.ಎಂ. ಉದ್ಯಮದ ವ್ಯವಸ್ಥಾಪಕ ನಿರ್ದೇಶಕ ಪಟ್ಟಾಲು ರಾಮ ರಾವ್ ಅವರನ್ನು ದೆಹಲಿ ಹೈಕೋರ್ಟ್ ಜಾಮೀನಿನ ಮೇಲೆ ಬಿಡುಗಡೆಗೆ ಆದೇಶಿಸಿದೆ.

ಈ ಮಧ್ಯೆ ಇಂದು ನಡೆದ ಪ್ರಮುಖ ಬೆಳವಣಿಗೆ ಎಂದರೆ, ಈ ಹಗರಣದ ಪ್ರಮುಖ ಆರೋಪಿ, ಸಂಪರ್ಕ ಖಾತೆಯ ಮಾಜಿ ಸಚಿವ ಸುಖ್‌ರಾಂ ಅವರನ್ನು ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಿಂದ ಇಂದು ಮಧ್ಯಾಹ್ನ ಬಿಡುಗಡೆ ಮಾಡಿದ ತಕ್ಷಣ ಲೋಕ ನಾಯಕ ಭವನದಲ್ಲಿನ ಸಿಬಿಐಯ ಲಾಕಪ್‌ಗೆ ಒಪ್ಪಿಸಲಾಯಿತು.

• **ಹತ್ತು ಸಾವಿರದಲ್ಲಿ 8 ಜನ ವರಮಾನ ತೆರಿಗೆದಾರರು**

ಬೆಂಗಳೂರು, ಸೆ. 19– ಆದಾಯ ತೆರಿಗೆ ಮಿತಿಯನ್ನು ಯಾವುದೇ ಕಾರಣಕ್ಕೂ ಏರಿಸುವುದನ್ನು ಇಂದು ಇಲ್ಲಿ ಬಲವಾಗಿ ವಿರೋಧಿಸಿದ ಯೋಜನಾ ಆಯೋಗದ ಉಪಾಧ್ಯಕ್ಷ ಪ್ರೊ. ಮಧು ದಂಡವತೆ ಅವರು, 'ಆದಾಯ ತೆರಿಗೆ ವ್ಯಾಪ್ತಿಯಿಂದ ಹೊರಕ್ಕೆ ಇರುವವರನ್ನು ಅದರ ಅಡಿಯಲ್ಲಿ ತರುವುದಕ್ಕೆ ಅಗತ್ಯವಿರುವ ಕ್ರಮವನ್ನು ಈಗ ಕೈಗೊಳ್ಳಬೇಕಾಗಿದೆ' ಎಂದರು.

ಆದಾಯ ತೆರಿಗೆ ಮಿತಿಯನ್ನು ರೂ.1000 ದಷ್ಟು ಹೆಚ್ಚಿಸಿದರೆ ವಾರ್ಷಿಕ ಒಂದು ನೂರು ಕೋಟಿ ಮೊತ್ತದ ವರಮಾನ ತೆರಿಗೆ ತಗ್ಗುತ್ತದೆ. ಇಷ್ಟು ಹಾನಿಯನ್ನು ಭರಿಸುವ ಸ್ಥಿತಿಯಲ್ಲಿ ದೇಶ ಇಲ್ಲ ಎಂದು ಅಭಿಪ್ರಾಯಪಟ್ಟರು.

ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಆಶ್ರಯದಲ್ಲಿ ನಡೆದ ಒಂದು ದಿನದ 'ಕೇಂದ್ರೀಯ ಹಣಕಾಸು ಪೂರೈಕೆ ಸಂಸ್ಥೆಗಳ ಸಮ್ಮೇಳನ'ದಲ್ಲಿ ಪ್ರಧಾನ ಭಾಷಣ ಮಾಡಿದ ಪ್ರೊ. ಮಧು ದಂಡವತೆ, 'ಜಗತ್ತಿನ ಯಾವುದೇ ದೇಶಕ್ಕೆ ಹೋಲಿಸಿದರೂ ಭಾರತದಲ್ಲಿ ವರಮಾನ ತೆರಿಗೆ ಕಟ್ಟುವವರ ಪ್ರಮಾಣ ತೀರಾ ಕಡಿಮೆ' ಎಂದರು.

ವರಿಷ್ಠರ ಮುದ್ರೆ ಹಾಗೂ ಅಚ್ಚರಿಯ ಅಂಶ ಬಿಜೆಪಿಯಲ್ಲಿ ಗೋಚರಿಸುತ್ತಿರುವ ವಿಶಿಷ್ಟ ಲಕ್ಷಣ

ಬದಲಾವಣೆ ನಿರಂತರ: ರಾಜಕೀಯ ಮಂತ್ರ

ಜನರಾಜಕಾರಣ

ಪ್ರೊ.ಸಂದೀಪ್ ಶಾಸ್ತ್ರಿ

ಬದಲಾವಣೆಯಷ್ಟೇ ನಿರಂತರ. ಇದು, ಸಮಕಾಲೀನ ಭಾರತೀಯ ರಾಜಕಾರಣದ ಹೊಸ ನಿಯಮವೆಂಬಂತೆ ತೋರುತ್ತಿದೆ. ಭಾರತದ ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳ ವಿಚಾರದಲ್ಲೂ ವಿಶೇಷವಾಗಿ ಬಿಜೆಪಿ ಮತ್ತು ಕಾಂಗ್ರೆಸ್ ವಿಚಾರದಲ್ಲಿ ಇದು ನಿಜ ಎನಿಸುತ್ತಿದೆ. ರಾಷ್ಟ್ರ ಮಟ್ಟದಲ್ಲಿ ಕೇಂದ್ರ ಸಂಪುಟದಲ್ಲಿ ಭಾರಿ ಬದಲಾವಣೆಗಳನ್ನು ರಾಷ್ಟ್ರ ಕಂಡಿದೆ. ಪ್ರಶ್ನಾತೀತ ನಿಷ್ಠೆ ಹಾಗೂ ಕಾರ್ಯನಿರ್ವಹಣೆಯ ಸಾಕ್ಷ್ಯ ಇಲ್ಲಿ ಮುಖ್ಯವಾಗಿ ತೋರುತ್ತಿತ್ತು.

ಕಳೆದ ಕೆಲವು ತಿಂಗಳುಗಳಲ್ಲಿ ಮೂರು ಪ್ರಮುಖ ರಾಜ್ಯಗಳಲ್ಲಿ ನಾಯಕತ್ವ ಬದಲಾವಣೆಯನ್ನು ಬಿಜೆಪಿ ಕಂಡಿದೆ. ಪಂಜಾಬ್‌ನಲ್ಲಿ ಕಾಂಗ್ರೆಸ್ ಈಗ ನಾಯಕತ್ವ ಬದಲಾವಣೆ ಮಾಡಿದೆ. ಕರ್ನಾಟಕದಲ್ಲಿ ಜೆಡಿಎಸ್ ಪಕ್ಷವು ಕೆಲವೊಮ್ಮೆ ಕಾಂಗ್ರೆಸ್ ಅನ್ನು ಓಲೈಸುತ್ತಾ ಮತ್ತೆ ಕೆಲವು ಬಾರಿ ಬಿಜೆಪಿ ಜೊತೆ ಸೇರಿಕೊಳ್ಳುತ್ತಾ ತನ್ನ ಮಿತ್ರಪಕ್ಷವನ್ನು ನಿರಂತರವಾಗಿ ಬದಲಿಸುತ್ತಲೇ ಇರುತ್ತದೆ. ಸ್ಥಳೀಯ ಸಂಸ್ಥೆಗಳಲ್ಲಿ ಅದು ವಿವಿಧ ಪಕ್ಷಗಳ ಜೊತೆ ಸಖ್ಯ ಹೊಂದಿರುತ್ತದೆಯಾದರೂ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ರಾಜಕಾರಣದಲ್ಲಿ ಮಾತ್ರ ತನ್ನ ನಿಲುವನ್ನು ನಿರಂತರವಾಗಿ ಬದಲಿಸುತ್ತಲೇ ಇರುತ್ತದೆ.

ಪಶ್ಚಿಮ ಬಂಗಾಳದಲ್ಲಿ ಅಧಿಕಾರದ ಗದ್ದುಗೆಗೆ ತೃಣಮೂಲ ಕಾಂಗ್ರೆಸ್ ಏರಿದ ನಂತರ, ತೃಣಮೂಲ ಪಕ್ಷಕ್ಕೆ 'ಸೇರ್ಪಡೆಯಾಗುವವರ' ಅಥವಾ 'ಮರಳಿ ಬರುವ' ಬಿಜೆಪಿ ನಾಯಕರ ಮೆರವಣಿಗೆಯನ್ನೇ ನಾವು ನೋಡಿದೆವು. ಗುಜರಾತ್‌ನಲ್ಲಿ ಮುಖ್ಯಮಂತ್ರಿ ಬದಲಾವಣೆಯಷ್ಟೇ ಅಲ್ಲ, ಒಬ್ಬರೂ ಹಳೆ ಸಚಿವರಿಲ್ಲದಂತಹ ಪೂರ್ಣ ಹೊಸಬರೇ ಇರುವ ಸಚಿವ ಸಂಪುಟದ ಪುನರ್ ರಚನೆಯ ತಿರುಳು ಏನೆಂದರೆ, ಬದಲಾವಣೆ ಮಾತ್ರವೇ ನಿರಂತರ!

ಗುಜರಾತ್‌ನಲ್ಲಿನ ಬೆಳವಣಿಗೆಗಳು ಎಲ್ಲರ ಗಮನದ ಕೇಂದ್ರಬಿಂದುವಾಗಿವೆ. ಮೊದಲಿಗೆ, ಮುಖ್ಯಮಂತ್ರಿ ಇದ್ದಕ್ಕಿದ್ದಂತೆ ರಾಜೀನಾಮೆ ಸಲ್ಲಿಸಿದರು. ಅವರ ಉತ್ತರಾಧಿಕಾರಿ ಯಾರು ಎಂಬುದರ ಬಗ್ಗೆ ತೀವ್ರ ಊಹಾಪೋಹಗಳಿದ್ದವು. ಅಚ್ಚರಿಯ ಹೆಸರೊಂದನ್ನು ಬಿಜೆಪಿಯ ಕೇಂದ್ರೀಯ ನಾಯಕತ್ವ ಪ್ರಕಟಿಸಲಿದೆ ಎಂಬಂತಹ ವಾದವನ್ನು ಮುದ್ರಣ ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ನಾನು ಮಂಡಿಸಿಕೊಂಡೇ ಬಂದಿದ್ದೆ. ಅದೇ ನಿಜವಾಯಿತು. 2014ರಿಂದ ಹೊಸ ಮುಖ್ಯಮಂತ್ರಿಗಳ ಆಯ್ಕೆಯ ವಿಚಾರಕ್ಕೆ ಸಂಬಂಧಿಸಿದಂತೆ, ಆಯ್ಕೆಯನ್ನು ಮಾಡುವಲ್ಲಿ ಕೇಂದ್ರೀಯ ನಾಯಕತ್ವದ ಮುದ್ರೆ ಹಾಗೂ ಅಚ್ಚರಿಯ ಅಂಶವು ಬಿಜೆಪಿಯಲ್ಲಿ ಕಂಡುಬರುತ್ತಿರುವ ವಿಶಿಷ್ಟ ಲಕ್ಷಣವಾಗಿದೆ. ಹರಿಯಾಣ, ಜಾರ್ಖಂಡ್, ಉತ್ತರಪ್ರದೇಶ, ಗೋವಾ, ಉತ್ತರಾಖಂಡ, ಕರ್ನಾಟಕ ಹಾಗೂ ಈಗ ಗುಜರಾತ್ (ರೂಪಾನಿಯವರು ಮುಖ್ಯಮಂತ್ರಿಯಾದಾಗ ಹಾಗೂ ಈಗ ಪಟೇಲ್ ಅಧಿಕಾರ ವಹಿಸಿಕೊಂಡಾಗಲೂ) ರಾಜ್ಯಗಳಲ್ಲಿ ಕಂಡು ಬಂದಿರುವುದು ಇದೇ.

ಇದು, ಕೆಲವು ರೀತಿಗಳಲ್ಲಿ, 1970ರ ಹಾಗೂ 1980ರ ದಶಕಗಳಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ನಡೆಯುತ್ತಿದ್ದುದನ್ನೇ ನೆನಪಿಸುತ್ತದೆ. ಹೈಕಮಾಂಡ್‌ನ ಇಚ್ಛೆಯ ಅನುಸಾರ ಮುಖ್ಯಮಂತ್ರಿಗಳು ಪದೇ ಪದೇ ಬದಲಾವಣೆಯಾಗುವುದನ್ನು ಕಾಂಗ್ರೆಸ್ ಅಧಿಕಾರದಲ್ಲಿದ್ದ ರಾಜ್ಯಗಳು ಕಂಡಿದ್ದವು. ಶಾಸಕಾಂಗ ಪಕ್ಷವು 'ಸರ್ವಾನುಮತದಿಂದ ಚುನಾಯಿಸಬೇಕಾದ' ಹೊಸ ನಾಯಕನ ಹೆಸರನ್ನು 'ಬಲಿಷ್ಠ' ಕೇಂದ್ರೀಯ ವೀಕ್ಷಕರು ತರುತ್ತಿದ್ದರು. ಕಾಂಗ್ರೆಸ್ ಹೈಕಮಾಂಡ್‌ಗೆ ಸಂಬಂಧಿಸಿದಂತೆ ಒಂದು ಸುಪ್ರಸಿದ್ಧ ಕಥೆ ಇದೆ. ರಾಜ್ಯವೊಂದರಲ್ಲಿ ನಾಯಕತ್ವ ಬದಲಾವಣೆಯಾಗಬೇಕಿತ್ತು, ಆದರೆ ಹೊಸ ನಾಯಕರು ಯಾರಾಗಬೇಕು ಎಂಬ ಬಗ್ಗೆ ಹೈಕಮಾಂಡ್‌ಗೆ ಖಚಿತತೆ ಇರಲಿಲ್ಲ. ಶಾಸಕಾಂಗ ಪಕ್ಷದ ಸಭೆ ನಿಗದಿಯಾಗಿತ್ತು, ರಾಜ್ಯ ರಾಜಧಾನಿಗೆ ದೆಹಲಿಯಿಂದ 'ಕೇಂದ್ರೀಯ ವೀಕ್ಷಕರು' ಹೊರಡುವವರಿದ್ದರು. ಅವರಿಗೆ ಮೂರು ಹೆಸರುಗಳಿರುವ ಮೂರು ಲಕೋಟೆಗಳನ್ನು ಹಸ್ತಾಂತರಿಸಿ, ಯಾವ ಹೆಸರು ಪ್ರಕಟಿಸಬೇಕು ಎಂಬ ಬಗ್ಗೆ ಹೈಕಮಾಂಡ್‌ನ ಅಂತಿಮ ನಿರ್ಣಯಕ್ಕೆ ಕಾಯಬೇಕೆಂದು ಸೂಚಿಸಲಾಗಿತ್ತು. ಆದರೆ ವೀಕ್ಷಕರು ತಪ್ಪಾದ ಲಕೋಟೆಯನ್ನು ತೆರೆದು ಹೆಸರು ಪ್ರಕಟಿಸಿದ್ದರು ಎಂಬುದೊಂದು ಕಥೆಯಿದೆ. ಆ ವ್ಯಕ್ತಿ ಸರ್ವಾನುಮತದಿಂದ ಆಯ್ಕೆಯಾಗಿ ಎರಡು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಅಧಿಕಾರ ಅನುಭವಿಸಿದ್ದರು!

ಗುಜರಾತ್‌ನಲ್ಲಿ ಮುಖ್ಯಮಂತ್ರಿ ಆಯ್ಕೆಯ ವಿಚಾರವು ಅಚ್ಚರಿಯದು ಮಾತ್ರವಲ್ಲ, ಇನ್ನೂ ಹೆಚ್ಚಿನ ಕುತೂಹಲ ಕಾಯ್ದುಕೊಂಡಿತ್ತು. ಈ ಹಿಂದಿನ ಸಂಪುಟದಲ್ಲಿದ್ದ ಯಾವ ಸಚಿವರೂ ಇಲ್ಲದ ಸಚಿವ ಸಂಪುಟದ ನೇತೃತ್ವವನ್ನು ಹೊಸ ಮುಖ್ಯಮಂತ್ರಿ ವಹಿಸಲಿದ್ದರು. ಈ ಭಾರಿ ಬದಲಾವಣೆಗಳನ್ನು ಸಾರ್ವಜನಿಕವಾಗಿ ಬೆಂಬಲಿಸಿ ತಮ್ಮ ಉತ್ತರಾಧಿಕಾರಿಗಳ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ರೂಪಾನಿ ಸಂಪುಟದ ಸಚಿವರು ಪಾಲ್ಗೊಂಡಾಗಲೇ ಕೇಂದ್ರೀಯ ನಾಯಕತ್ವದ ಫರ್ಮಾನಿನ ಎಳೆ ಸ್ಪಷ್ಟವಾಗಿ ಗೋಚರವಾಗಿತ್ತು. ಬಹು ಹಂತಗಳಲ್ಲಿ ಬಿಜೆಪಿಯ ಕೇಂದ್ರೀಯ ನಾಯಕತ್ವದ ಫರ್ಮಾನನ್ನು ಪಾಲಿಸಲಾಗಿದೆ. ಕೇಂದ್ರ ಸಂಪುಟದ ಪುನರ್‌ರಚನೆ, ಉತ್ತರಾಖಂಡ, ಕರ್ನಾಟಕ ಹಾಗೂ ಈಗ ಗುಜರಾತ್‌ನಲ್ಲಿನ ನಾಯಕತ್ವ ಬದಲಾವಣೆಗಳಲ್ಲಿ ಇದು ಕಂಡುಬಂದಿದೆ.

ಕರ್ನಾಟಕ ಹಾಗೂ ಗುಜರಾತ್‌ನಲ್ಲಿನ ಘಟನಾವಳಿಗಳಲ್ಲಿ ಕೆಲವು ಮುಖ್ಯ ಸಾಮ್ಯತೆಗಳು ಹಾಗೂ ವಿಭಿನ್ನತೆಗಳು ಕಂಡುಬಂದಿವೆ. ಸಾಮ್ಯತೆಗಳು ಏನು? ಬದಲಾವಣೆಯ ಸಮಯವನ್ನು ಪಕ್ಷದ ಕೇಂದ್ರೀಯ ನಾಯಕತ್ವ ನಿರ್ಧರಿಸಿದ್ದು ಸ್ಪಷ್ಟವಾಗಿತ್ತು. ಹೊಸ ನಾಯಕನ ಆಯ್ಕೆಗೆ ಪಕ್ಷದ ಕೇಂದ್ರೀಯ ನಾಯಕತ್ವದ ಅಂಗೀಕಾರದ ಮುದ್ರೆ ಸ್ಪಷ್ಟವಾಗಿತ್ತು. ಸಚಿವ ಸಂಪುಟ ರಚನೆ ರೀತಿಯಲ್ಲೂ ಕೇಂದ್ರೀಯ ನಾಯಕತ್ವ ವಹಿಸಿದ ಪಾತ್ರವು ಎದ್ದು ಕಾಣುವಂತಿತ್ತು. ಈ ಸಾಮ್ಯತೆಗಳು ಇಲ್ಲಿಗೇ ಅಂತ್ಯವಾಗುತ್ತವೆ. ಕರ್ನಾಟಕದಲ್ಲಿ 1989ರಿಂದಲೂ (ಮೂರು ದಶಕಗಳಿಗೂ ಹೆಚ್ಚು ಕಾಲ) ಪ್ರತೀ ಐದು ವರ್ಷಗಳಿಗೊಮ್ಮೆ ಆಡಳಿತ ಪಕ್ಷವನ್ನು ಮತದಾರರು ಬದಲಿಸಿಕೊಂಡೇ ಬಂದಿದ್ದಾರೆ. ಆದರೆ ಗುಜರಾತ್‌ನಲ್ಲಿ ಮೂರು ದಶಕಗಳಿಂದ ನಿರಂತರವಾಗಿ ಅಧಿಕಾರದಲ್ಲಿರುವ ಬಿಜೆಪಿಯು ಮುಂದಿನ ವರ್ಷ ಚುನಾವಣೆಯನ್ನು ಎದುರಿಸಲಿದೆ. ಆಡಳಿತ ವಿರೋಧಿ ಅಲೆಯ ಸಾಧ್ಯತೆಯ ಕಿಂಚಿತ್ತು ಛಾಯೆಯನ್ನೂ ದೂರವಿರಿಸಿ ಅಧಿಕಾರಕ್ಕೆ ಮರಳುವ ಯತ್ನವು ಗುಜರಾತ್‌ನಲ್ಲಿನ ಪೂರ್ಣ ಹೊಸದಾದ ಸಚಿವ ಸಂಪುಟ ರಚನೆಯ ಕಸರತ್ತಿನ ಹಿಂದಿದೆ. ಸರ್ಕಾರದಲ್ಲಿನ ಸಂಪೂರ್ಣ ಹೊಸ ನಾಯಕರ 'ತಂಡ'ವನ್ನು ಮತದಾರರ ಎದುರು ಪ್ರದರ್ಶಿಸುವುದೂ ಆಡಳಿತ ವಿರೋಧಿ ಅಲೆಯನ್ನು ದೂರವಿರಿಸುವ ಒಂದು ಮಾರ್ಗವಾಗಿದೆ. ಈ ಕಾರ್ಯತಂತ್ರವು ರಾಜಕೀಯ ಲಾಭ ತಂದುಕೊಡುವುದೇ ಎಂಬುದು ಮುಂದಿನ ವರ್ಷ ತಿಳಿಯಲಿದೆ.

ಕರ್ನಾಟಕದಲ್ಲೂ ಸಚಿವ ಸಂಪುಟ ರಚನೆಯಲ್ಲಿ ಕೇಂದ್ರೀಯ ನಾಯಕತ್ವದ ಎದ್ದು ಕಾಣಿಸುವ ಸ್ಪಷ್ಟ ಪ್ರಭಾವವನ್ನು ಗುರುತಿಸಬಹುದು. ಉಪಮುಖ್ಯಮಂತ್ರಿಗಳನ್ನು ನೀಡದಿರುವುದು, ಹಳೆಯ ತಂಡದ ಕೆಲವು ಪ್ರಮುಖರನ್ನು ಉಳಿಸಿಕೊಳ್ಳದೆ ಹೊಸಬರನ್ನು ತಂದಿರುವಂತಹದ್ದು ಇಲ್ಲಿನ ಕಾರ್ಯತಂತ್ರ. ಕರ್ನಾಟಕದಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯು ಎಂದೂ ಸ್ಪಷ್ಟ ಬಹುಮತ ಪಡೆದಿಲ್ಲ. ಹೀಗಾಗಿ, ಸಮತೋಲಿತ ಕಸರತ್ತು ಅಗತ್ಯವಾಗಿತ್ತು.

ಕಾಂಗ್ರೆಸ್ ಪಕ್ಷದಲ್ಲೂ ಬದಲಾವಣೆಯ ಪರ್ವ. ಪಂಜಾಬ್‌ನಲ್ಲಿ ದೀರ್ಘಕಾಲ ಅಧಿಕಾರ ಅನುಭವಿಸಿದ ಆ ಪಕ್ಷದ ಮುಖ್ಯಮಂತ್ರಿ ರಾಜೀನಾಮೆ ನೀಡಿ ಹೊಸ ನಾಯಕತ್ವಕ್ಕೆ ಹಾದಿ ಮಾಡಿಕೊಟ್ಟಿದ್ದಾರೆ. ಹೀಗಿದ್ದೂ, ಕಾಂಗ್ರೆಸ್ ವಿಚಾರದಲ್ಲಿ, ಕೇಂದ್ರೀಯ ನಾಯಕತ್ವದಲ್ಲಿನ ಸ್ಪಷ್ಟತೆ ಹಾಗೂ ಸ್ಥಿರತೆಯ ಕೊರತೆಯು 'ಕಮಾಂಡ್' ಮಾಡಬಹುದಾದ 'ಹೈಕಮಾಂಡ್'ನ ಸಾಮರ್ಥ್ಯವನ್ನು ಸ್ವಲ್ಪಮಟ್ಟಿಗೆ ದುರ್ಬಲವಾಗಿಸಿದೆ. ಈ ಹಿಂದೆ, ಇಂತಹ ಬದಲಾವಣೆಗಳಾದಾಗ ನಾಯಕರು ಕಾಂಗ್ರೆಸ್‌ನಿಂದ ಹೊರ ಹೋಗಿ ತಮ್ಮದೇ ಪಕ್ಷಗಳನ್ನು ಸ್ಥಾಪಿಸಿಕೊಳ್ಳಲು ಕಾರಣವಾಗಿದೆ. ಇದು ಪಶ್ಚಿಮ ಬಂಗಾಳ ಹಾಗೂ ಆಂಧ್ರಪ್ರದೇಶದಲ್ಲಿ ಆಗಿತ್ತು. ಇಂತಹ ಬೆಳವಣಿಗೆಗಳಿಂದಾಗಿ ಮಧ್ಯಪ್ರದೇಶದಲ್ಲಿ ಸರ್ಕಾರ ಬಿದ್ದಿತ್ತು ಹಾಗೂ ಅಸ್ಸಾಂನಲ್ಲಿ ಸರ್ಕಾರ ದುರ್ಬಲಗೊಂಡಿತ್ತು. ಈ ಹಿಂದಿನ ಕಾಂಗ್ರೆಸ್ ನಾಯಕನೇ ಈಗ ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಸರ್ಕಾರದ ಮುಖ್ಯಮಂತ್ರಿ. ತನ್ನ ಕೇಂದ್ರೀಯ ನಾಯಕತ್ವಕ್ಕೆ ಸಂಬಂಧಿಸಿದಂತೆ ಸ್ಪಷ್ಟತೆ ಹಾಗೂ ನಿರ್ಣಾಯಕತೆಯ ಅಂಶವನ್ನು ಕಾಂಗ್ರೆಸ್ ತರುವವರೆಗೂ ಕೆಳಹಂತಗಳಲ್ಲಿ ಯಾವುದೇ ಬದಲಾವಣೆಗಳಿಗೂ ಅವುಗಳದೇ ಅಡೆತಡೆಗಳು ಹಾಗೂ ಸಮಸ್ಯೆಗಳಿರುತ್ತವೆ.

ಹೀಗಾಗಿ, ಬದಲಾವಣೆಗೆ ಸಂಬಂಧಿಸಿದಂತೆ ಎರಡು ಮಾದರಿಗಳಿವೆ. ಒಂದು, ಬಿಜೆಪಿಯಿಂದ ಅಂಗೀಕೃತಗೊಂಡದ್ದು, ಮತ್ತೊಂದು ಕಾಂಗ್ರೆಸ್ ಅಳವಡಿಸಿಕೊಂಡಿರುವಂತಹದ್ದು. ಬರಲಿರುವ ತಿಂಗಳುಗಳಲ್ಲಿ ಹಾಗೂ ಮುಂದಿನ ವರ್ಷದ ಮಹತ್ವದ ಚುನಾವಣೆಗಳಲ್ಲಿ ರಾಜಕೀಯ ಹೇಗೆ ರೂಪು ತಳೆಯುತ್ತದೆ ಎಂಬುದು ಈ ಬದಲಾವಣೆಗಳ ಪರಿಣಾಮವನ್ನು ನಿರ್ಧರಿಸುವುದಲ್ಲದೆ ಈ ಬದಲಾವಣೆಗಳ ವ್ಯಾಖ್ಯೆಯೂ ದಕ್ಕಲಿದೆ.

ಚುರುಮುರಿ

ವಿಶೇಷ ಪಥ

• ಸುಮಂಗಲಾ

ಬೆಕ್ಕಣ್ಣ ಕರ್ನಾಟಕದ ನಕ್ಷೆಯ ಮೇಲೆ ಅದೇನೋ ರಸ್ತೆಗಳ ಹಾಗೆ ಬಿಡಿಸಿತ್ತು. ಶ್ರೀಸಾಮಾನ್ಯಳಾದ ನಾನು ಏನೆಂದು ಗೊತ್ತಾಗದೇ ತಲೆಕೆರೆದುಕೊಂಡೆ. ಬೆಕ್ಕಣ್ಣ ತಲೆಎತ್ತದೆ ಇನ್ನೂ ಗೀಚುತ್ತಲೇ 'ಇದು ಬೆಂಗಳೂರಿನಿಂದ ಹಿಡಿದು ಇಡೀ ರಾಜ್ಯದ ಕುಗ್ರಾಮಗಳವರೆಗೆ ಎಲಿವೇಟೆಡ್ ಎಕ್ಸ್‌ಪ್ರೆಸ್ ಹೈವೇ' ಎಂದಿತು.

'ನಮ್ಮ ಎಷ್ಟೋ ಹಳ್ಳಿಗಳಿಗೆ ನೆಲದ ಮ್ಯಾಗೇ ರಸ್ತೆ ಇಲ್ಲ, ಹಳ್ಳಿ ಬಿಡು, ಬೆಂಗಳೂರಿನಾಗೂ ಎಷ್ಟೋ ಕಡಿಗಿ ಗುಂಡಿಗಳನ್ನ ಹೈಜಂಪ್ ಮಾಡ್ತಾ ಹೋಗಬೇಕಾಗೈತಿ. ಅಂಥಾದ್ರಾಗೆ ಇದೇನಲೇ ನೆಲದಿಂದ ಮ್ಯಾಗಿನ ರಸ್ತೆ' ಎಂದೆ ಬೆಪ್ಪಳಾಗಿ.

'ಮೊನ್ನೆ ಶಾಸಕರೊಬ್ಬರು ಅಲವತ್ತುಕೊಂಡಾರ, ಟೋಲ್ನಾಗೆ ನಮಗೆ ನಿಂದ್ರಿಸಿ ಐಡಿ ಕೇಳಿ ಅವಮಾನಿಸ್ತಾರ. ನಾವೇನು ಶ್ರೀಸಾಮಾನ್ಯರೇನು ಐಡಿಪೈಡಿ ಎಲ್ಲ ತೋರಿಸಿಗೋತ ನಿಂದರಾಕೆ, ನಮಗೆ ಪ್ರತ್ಯೇಕ ಪಥವೇ ಬೇಕು ಅಂತ. ಬರೋಬ್ಬರಿ ಹೇಳ್ಯಾರ. ಟೋಲ್ಗೇಟಿನಾಗೆ ಮಾತ್ರವಲ್ಲ, ಜನಸೇವೆ ಮಾಡಾಕ ಟೊಂಕ ಕಟ್ಟಿ ನಿಂತೋರಿಗೆ ಎಲ್ಲಾ ಕಡಿಗಿ ಓಡಾಡಾಕೆ ಸ್ಪೆಶಲ್ ರಸ್ತೆ ಬೇಕು. ನೆಲದ ಮ್ಯಾಗೆ ವಿಶೇಷ ಪಥ ಮಾಡಿದ್ರ, ಎಲ್ಲಾ ಮಂದೀನೂ ಅದ್ರಾಗೆ ಎಮ್ಮಿ ಹಂಗ ನುಗ್ಗತಾರ. ಶಾಸಕರು, ಸಚಿವರು ಅಂದ್ರ ಕಿಮ್ಮತ್ತಿಲ್ಲೇನ್? ಅವರಿಗೆ ಅಡ್ಡಾಡಕಂತ ಈ ಎಲಿವೇಟೆಡ್ ಎಕ್ಸ್‌ಪ್ರೆಸ್ ಹೈವೇ ಯೋಜನೆ ತಯಾರು ಮಾಡೀನಿ' ಉದ್ದಕ್ಕೆ ವಿವರಿಸುತ್ತಲೇ ಇತ್ತು.

'ಹಂಗಾರೆ ಇವ್ರಿಗೆಲ್ಲ ಬೇರೆಬೇರೆ ಕಡೇನೂ ಸ್ಪೆಶಲ್ ಜಾಗ ಇಡಬೇಕಾಗತೈತಿ' ಎಂದೆ. 'ಹೌದು, ಅದು ಬ್ಯಾರೆ ಪ್ರಾಜೆಕ್ಟ್ ತಯಾರು ಮಾಡೀನಿ' ಎಂದು ಕಣ್ಣು ಮಿಟುಕಿಸಿತು.

'ನಯಾಪೈಸಿ ದುಡಿಮೆ ಇಲ್ಲದ ಹಿಂತಾ ಕಾರುಬಾರು ಮಾಡೂ ಬದಲಿಗಿ, ನಿಮ್ಮ ಗಡ್ಕರಿ ಅಂಕಲ್ ಯುಟ್ಯೂಬಿನಾಗೆ ವಿಡಿಯೊ ಅಪ್ಲೋಡ್ ಮಾಡಿ ತಿಂಗಳಿಗೆ ನಾಕು ಲಕ್ಷ ಸಂಪಾದನೆ ಮಾಡತಾನಂತ. ಅಂತಾದೇನರೂ ಮಾಡಲೇ' ಅಂದೆ.

'ಹಿಂತಾ ಯೋಜನೆಗಳ ವಿಡಿಯೊ ಮಾಡಿ, ಯುಟ್ಯೂಬಿನಾಗೆ ಅಪ್ಲೋಡ್ ಮಾಡತೀನಿ, ನನ್ನ ವಿಡಿಯೊನೂ ಬೇಜಾನ್ ಮಂದಿ ನೋಡತಾರ' ಎಂದು ಮತ್ತೊಂದು ಹೊಸ ಯೋಜನೆ ಹೊಸೆಯಿತು!

ಸಂಗತ

ಪ್ರತಿಮನೆಗೂ ಬೇಕು ಹಿರಿಯ ಜೀವ

ಶಿಕ್ಷಣದೊಂದಿಗೆ ಆಧುನಿಕತೆ ಜೊತೆಗೂಡಿ ಭಾವನೆಗಳು ಜಡವಾಗುತ್ತಿವೆ

• ರಾಜಕುಮಾರ ಕುಲಕರ್ಣಿ

ನನ್ನ ಬಂಧುವೊಬ್ಬರು ತುಂಬ ಶಿಸ್ತಿನ ಮನುಷ್ಯ. ಇತ್ತೀಚೆಗೆ ಎರಡು ದಿನಗಳ ಕಾಲ ಹೆಂಡತಿ ಮತ್ತು ಮಗಳೊಂದಿಗೆ ಅವರ ಮನೆಯಲ್ಲಿ ತಂಗಬೇಕಾಯಿತು. ಆ ಎರಡು ದಿನಗಳು ನಮಗೆ ಅಕ್ಷರಶಃ ಜೈಲಿನಲ್ಲಿದ್ದ ಅನುಭವವಾಯಿತು. ಅವರ ಮನೆಯಲ್ಲಿ ಧ್ವನಿ ಎತ್ತರಿಸಿ ಮಾತನಾಡುವಂತಿಲ್ಲ, ಜೋರಾಗಿ ನಗುವಂತಿಲ್ಲ, ಸೀನು, ಕೆಮ್ಮುಗಳಿಗೆ ಅವಕಾಶವೇ ಇಲ್ಲ, ಅಪಾನುವಾಯುವನ್ನು ಕೂಡ ಜಠರದೊಳಗೇ ಇಂಗಿಸಿಕೊಳ್ಳಬೇಕು. ನನಗೋ ಚಹಾ ಬಾಯಿ ಚಪ್ಪರಿಸಿ ಕುಡಿದೇ ರೂಢಿ. ಆದರೆ ಬಾಯಿ ಚಪ್ಪರಿಸುವುದಾಗಲೀ, ಕಚ್ಚಿ ನೀರು ಕುಡಿಯುವುದಾಗಲೀ ಅನಾಗರಿಕತೆಯ ಲಕ್ಷಣ ಎಂದು ಭಾವಿಸಿದ ಮನೆಯದು. ಆ ಮನೆಯ ಜನ ಮಾತಿನಲ್ಲಷ್ಟೇ ತೂಕಬದ್ಧರಲ್ಲ ಆಹಾರವನ್ನು ಕೂಡ ಅವರು ತೂಗಿಯೇ ತಿನ್ನುವರು.

ವಯಸ್ಸಾದ ಅಜ್ಜಿಯೊಬ್ಬಳಿದ್ದಾಳೆ ಅವರ ಮನೆಯಲ್ಲಿ. ಬದುಕಿನ ಬಹುಭಾಗ ಹಳ್ಳಿಯಲ್ಲೇ ಕಳೆದವಳು ಈಗ ಆಶ್ರಯಕ್ಕಾಗಿ ಮಗನ ಮನೆಗೆ ಬಂದಿದ್ದಾಳೆ. ನಗರ ಬದುಕಿನ ನಾಗರಿಕತೆಯ ಸ್ಪರ್ಶ ಆ ಅಜ್ಜಿಗೆ ಇನ್ನೂ ಸೋಕಿಲ್ಲದ ಕಾರಣ, ಮನೆಯ ಸದಸ್ಯರಿಗೆ ಅವಳನ್ನು ಸಂಭಾಳಿಸುವುದೇ ದೊಡ್ಡ ಸಮಸ್ಯೆಯಾಗಿದೆ. ನಾವಿದ್ದ ಸಮಯದಲ್ಲೇ ತುಂಬ ಸಿವಿಲೈಜ್ಡ್ ಕುಟುಂಬವೊಂದು ಆ ಮನೆಗೆ ಭೇಟಿ ನೀಡುವ ಕಾರ್ಯಕ್ರಮ ನಿಗದಿಯಾಗಿದ್ದರಿಂದ, ಅಜ್ಜಿಯನ್ನು ಒಂದು ದಿನದ ಮಟ್ಟಿಗೆ ದೂರದ ಸಂಬಂಧಿಕರ ಮನೆಗೆ ಸಾಗಹಾಕಲಾಯಿತು. ಅದುವರೆಗೂ ಸಮಾಜದಲ್ಲಿ ತಾವು ಕಾಯ್ದುಕೊಂಡುಬಂದಿದ್ದ ಗೌರವ, ಪ್ರತಿಷ್ಠೆಗೆ ಆ ಅನಾಗರಿಕ ಅಜ್ಜಿಯಿಂದ ಧಕ್ಕೆ ಬರಬಹುದೆನ್ನುವ ಆತಂಕ ಅವರದಾಗಿತ್ತು. ಪ್ರತಿರೋಧಿಸುವುದು ಎಲ್ಲಿ ಅನಾಗರಿಕತೆಯಾದೀತೋ ಎಂದು ಹೆದರಿ ಬಾಯಿಮುಚ್ಚಿ ಕುಳಿತುಕೊಳ್ಳಬೇಕಾದ ಅಸಹಾಯಕತೆ ನನ್ನದಾಗಿತ್ತು. ಆ ಅಸಹಾಯಕತೆಯೂ ಒಂದರ್ಥದಲ್ಲಿ ಅನಾಗರಿಕತೆಯ ರೂಪಾಂತರವಾಗಿತ್ತು ಎಂದು ಈಗ ನನಗನಿಸುತ್ತಿದೆ.

ಆಧುನಿಕ ನಾಗರಿಕತೆಯ ಇನ್ನೊಂದು ಘಟನೆ ಹೀಗಿದೆ. ನನ್ನ ಪರಿಚಿತರೊಬ್ಬರು ಮಗಳಿಗೆ ಗಂಡು ಹುಡುಕುತ್ತಿದ್ದಾರೆ. ಸಾಫ್ಟ್‌ವೇರ್ ಓದಿರುವ ಮಗಳಿಗೆ ಗಂಡು ಸಾಫ್ಟ್‌ವೇರ್ ಉದ್ಯೋಗಿಯಾಗಿದ್ದು ಸ್ವಂತಕ್ಕೊಂದು ಸೂರಿದ್ದರೆ ಸಾಕು. ನಾದಿನಿಯರ ಕಾಟದಿಂದ ಮನೆ ಮುಕ್ತವಾಗಿರಬೇಕಾದ್ದರಿಂದ ತಂದೆ- ತಾಯಿಗೆ ಒಬ್ಬನೇ ಮಗನಾಗಿರಬೇಕು. ಅಪ್ಪ-ಅಮ್ಮ ಸ್ವರ್ಗಸ್ಥರಾಗಿದ್ದರೆ ಅದಕ್ಕಿಂತ ಹೆಚ್ಚಿನ ಸಂತೋಷ ಇನ್ನೊಂದಿಲ್ಲ. ದೊಡ್ಡಪ್ಪ, ಚಿಕ್ಕಪ್ಪ, ಸೋದರತ್ತೆ, ಸೋದರಮಾವ ಈ ಎಲ್ಲ ಸಂಬಂಧಗಳಿಂದ ಮದುವೆ ಗಂಡು ಒಂದು ನಿರ್ದಿಷ್ಟ ಅಂತರವನ್ನು ಕಾಯ್ದುಕೊಂಡಿರಬೇಕು. ಒಟ್ಟಾರೆ ಬಂಧು- ಬಳಗ ಇಲ್ಲದ ಅನಾಥನಾಗಿದ್ದರೆ ಮೊದಲ ಆದ್ಯತೆ. ಬಹುತೇಕ ಕನ್ಯಾಮಣಿಗಳ ಅಪ್ಪ- ಅಮ್ಮಂದಿರ ಬೇಡಿಕೆಗಳಿವು. ಹಾಗೆಂದು ಇದನ್ನು ಅನಾಗರಿಕತೆ ಎಂದು ಸಾರಾಸಗಟಾಗಿ ತಳ್ಳಿಹಾಕುವಂತಿಲ್ಲ. ಆಧುನಿಕ ಸಮಾಜದ ಸುಶಿಕ್ಷಿತ ಅಪ್ಪ- ಅಮ್ಮಂದಿರ ನಾಗರಿಕ ಬೇಡಿಕೆಗಳಿವು.

ಆಧುನಿಕ ತಂತ್ರಜ್ಞಾನದ ಫಲವಾಗಿ ಇಂದು ಮಾಹಿತಿ ಪ್ರಸರಣ ಅತೀ ವೇಗವನ್ನು ಪಡೆದುಕೊಂಡಿದೆ. ರಸ್ತೆ ಅಪಘಾತ, ಬೆಂಕಿ ಅವಘಡದಂತಹ ಸಂದರ್ಭಗಳಲ್ಲೂ ಮನುಷ್ಯ ಸಂವೇದನೆಯನ್ನೇ ಕಳೆದುಕೊಂಡು, ಘಟನೆಯನ್ನು ಚಿತ್ರೀಕರಿಸಿ ಶೀಘ್ರವಾಗಿ ಮಾಹಿತಿಯನ್ನು ಇತರರಿಗೆ ತಲುಪಿಸುವ ಧಾವಂತಕ್ಕೆ ಒಳಗಾಗುತ್ತಿದ್ದಾನೆ. ಸಂಗತಿಯೊಂದನ್ನು ವಿಶ್ಲೇಷಿಸಿ ವಿಮರ್ಶಿಸುವ ವ್ಯವಧಾನವಾಗಲೀ ಸಂಯಮವಾಗಲೀ ಇಲ್ಲದ ಮನುಷ್ಯ ಮಾಡುತ್ತಿರುವುದು ಸುದ್ದಿಯ ವಿಲೇವಾರಿಯೊಂದೇ.

ಸಾವಿನ ಮನೆಯ ಸೂತಕವೂ ಇಂದು ಪ್ರಸರಣ ಯೋಗ್ಯ ಸಂಗತಿಯಾಗಿದೆ. ಸ್ನೇಹಿತರೊಬ್ಬರು ಫೇಸ್‌ಬುಕ್ ಪುಟದಲ್ಲಿ ಹಂಚಿಕೊಂಡ ಅವರ ತಂದೆಯ ಸಾವಿನ ಸುದ್ದಿಗೆ ಸರಿಸುಮಾರು ನೂರು ಕಮೆಂಟ್‌ಗಳು, ಐದುನೂರು ಲೈಕ್‌ಗಳು ಪ್ರಾಪ್ತವಾಗಿದ್ದವು. ವಿಪರ್ಯಾಸವೆಂದರೆ, ಅಂತಿಮಸಂಸ್ಕಾರದಲ್ಲಿ ಹಾಜರಿದ್ದವರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ.

ಆಧುನಿಕ ಪರಿವೇಷ ಧರಿಸಿರುವ ಇಂಥ (ಅ)ನಾಗರಿಕತೆಗಳನ್ನು ನೋಡುತ್ತಿದ್ದರೆ ನನಗೆ ನನ್ನೂರಿನ ಗಂಗಜ್ಜಿ ನೆನಪಾಗುತ್ತಾಳೆ. ಹತ್ತು ಹಡೆದು ಗಂಡನೊಡನೆ ಹೆಗಲೆಣೆಯಾಗಿ ದುಡಿದು ಬದುಕು ಕಟ್ಟಿಕೊಂಡವಳು ಗಂಗಜ್ಜಿ. ಈಗ ವಯಸ್ಸಾಗಿದೆ. ಮನೆಯ ಯಜಮಾನಿಕೆಯನ್ನು ಸೊಸೆಯಂದಿರಿಗೆ ಒಪ್ಪಿಸಿ ಊರ ಉಸಾಬರಿಯಲ್ಲಿ ತೊಡಗಿಕೊಂಡಿದ್ದಾಳೆ. ಯಾರದೇ ಮನೆಯ ಶುಭ, ಅಶುಭ ಕಾರ್ಯಗಳಿರಲಿ ಹಾಜರಿರುತ್ತಾಳೆ. ಅವರ ಸಂಭ್ರಮದಲ್ಲಿ ತಾನೂ ಸಂಭ್ರಮಿಸುತ್ತಾಳೆ. ಸಾವಿನ ಮನೆಯಾಗಿದ್ದರೆ ಆ ಕುಟುಂಬದ ಸದಸ್ಯರ ದುಃಖದಲ್ಲಿ ಭಾಗಿಯಾಗಿ ಅವರ ಕಣ್ಣೊರೆಸುತ್ತಾಳೆ. ಯಾರದೋ ಮನೆಯ ರಚ್ಚೆಹಿಡಿದ ಮಗು ಅವಳ ಸೊಂಟದಲ್ಲಿ ಕುಳಿತು ಅಳು ಮರೆಯುತ್ತದೆ. ಅತಿಥಿ ಸತ್ಕಾರದಲ್ಲಿ ಗಂಗಜ್ಜಿ ಅಕ್ಷರಶಃ ಮಾತೃ ಸಮಾನಳು. ನಾಗರಿಕತೆಯ ಯಾವ ಶಿಷ್ಟಾಚಾರಕ್ಕೂ ಒಳಗಾಗದ ಗಂಗಜ್ಜಿಯ ವರ್ತನೆ, ಆಧುನಿಕತೆಗೆ ಪಕ್ಕಾದ ಮೊಮ್ಮಕ್ಕಳಿಗೆ ಅನಾಗರಿಕವಾಗಿ ಕಾಣಿಸುತ್ತಿದೆ.

ಶಿಕ್ಷಣದೊಂದಿಗೆ ಆಧುನಿಕತೆ ಜೊತೆಗೂಡಿ ಮನುಷ್ಯನ ಭಾವನೆಗಳು ಜಡವಾಗುತ್ತಿವೆ. ಸಂಬಂಧಗಳು ಸಂಕುಚಿತಗೊಂಡು ಬದುಕು ದ್ವೀಪವಾಗುತ್ತಿದೆ. ವಿಪರ್ಯಾಸವೆಂದರೆ, ಹೀಗೆ ಬದುಕುವುದನ್ನೇ ಜನರು ನಾಗರಿಕತೆ ಎಂದು ಭಾವಿಸಿದ್ದಾರೆ. ಪ್ರೀತಿ, ವಾತ್ಸಲ್ಯದ ಭಾವನೆಗಳು ಹಿಂದೆ ಸರಿದು ಲಾಭ, ನಷ್ಟದ ವ್ಯಾಪಾರಿ ಮನೋಭಾವವೇ ಮುನ್ನೆಲೆಗೆ ಬಂದಿದೆ.

ಕಟ್ಟುವುದಾದರೆ ಸೇತುವೆಗಳನ್ನು ಕಟ್ಟಿ, ಕೆಡಹುವುದಾದರೆ ಗೋಡೆಗಳನ್ನು ಕೆಡವಿ ಎಂದಿರುವರು ಅನುಭಾವಿಗಳು. ಆದರೆ ಮನುಷ್ಯನು ಮನಸ್ಸುಗಳ ನಡುವೆ ಸೇತುವೆಗಳನ್ನು ಕೆಡವುತ್ತ ಗೋಡೆಗಳನ್ನು ಕಟ್ಟುತ್ತಿದ್ದಾನೆ. ಗೋಡೆಗಳನ್ನು ಕೆಡವಿ ನಾಗರಿಕತೆಯ ಆಧುನಿಕ ಮುಖವಾಡ ಕಿತ್ತೊಗೆಯಲು ಪ್ರತಿಮನೆಗೂ ಗಂಗಜ್ಜಿಯಂಥ ಹಿರಿಯ ಜೀವದ ಅಗತ್ಯವಿದೆ.

ವಾಚಕರ ವಾಣಿ

ಪಶುಸಂಗೋಪನೆ: ನೌಕರರ ಕೊರತೆ ನೀಗಿಸಿ

ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಪಶುವೈದ್ಯಕೀಯ ಮತ್ತು ಪಶುಸಂಗೋಪನಾ ಇಲಾಖೆಯಲ್ಲಿನ ಸಿಬ್ಬಂದಿ ಕೊರತೆಯ ಬಗ್ಗೆ ವಿಸ್ತೃತ ವರದಿ ಪ್ರಕಟಿಸಿರುವುದು (ಪ್ರ.ವಾ., ಸೆ. 19) ಶ್ಲಾಘನೀಯ. ಹೈನೋದ್ಯಮ ಅತ್ಯಂತ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಹೊಂದಿರುವ ರಾಜ್ಯದ ದಕ್ಷಿಣ ಜಿಲ್ಲೆಗಳಲ್ಲಿ ಪದವೀಧರ ಪಶುವೈದ್ಯರ ಕೊರತೆ ಅಷ್ಟೊಂದು ತೀವ್ರವಾಗಿಲ್ಲ. ಆದರೆ ಪಶುಚಿಕಿತ್ಸಾಲಯಗಳಲ್ಲಿ ಪೂರಕ ಸಿಬ್ಬಂದಿ, ವಿಶೇಷವಾಗಿ ಗ್ರೂಪ್ 'ಡಿ' ನೌಕರರ ತೀವ್ರ ಕೊರತೆಯಿದೆ. ಪಶು ಚಿಕಿತ್ಸಾಲಯಗಳಲ್ಲಿ ಜಾನುವಾರುಗಳಿಗೆ ಚಿಕಿತ್ಸೆ ನೀಡುವಾಗ ಅವುಗಳನ್ನು ನಿಯಂತ್ರಿಸಲು ನುರಿತ ಹಾಗೂ ಗಟ್ಟಿಮುಟ್ಟಾದ ಸಹಾಯಕ ಸಿಬ್ಬಂದಿ ಅತ್ಯವಶ್ಯಕ. ಆದರೆ ಇಲಾಖೆಯಲ್ಲಿ ಹಲವಾರು ವರ್ಷಗಳಿಂದ ಗ್ರೂಪ್ 'ಡಿ' ನೌಕರರ ನೇಮಕಾತಿಯೇ ನಡೆದಿಲ್ಲ. ಪ್ರಸ್ತುತ ಇರುವ ನೌಕರರು ಈಗಾಗಲೇ ನಿವೃತ್ತಿಯ ಅಂಚಿಗೆ ಬಂದಿದ್ದಾರೆ. ಹೊರಗುತ್ತಿಗೆಯಲ್ಲಿ ನೇಮಿಸಿಕೊಳ್ಳಲು ಆರ್ಥಿಕ ಕೊರತೆ.

ಪ್ರಸ್ತುತ ಗ್ರಾಮೀಣ ಭಾಗದ ಅನೇಕ ಚಿಕಿತ್ಸಾಲಯಗಳಲ್ಲಿ ಪಶುವೈದ್ಯರೇ ಬಾಗಿಲು ತೆಗೆದು, ಸ್ವಚ್ಛಗೊಳಿಸುವ ಕಾರ್ಯವನ್ನು ಮಾಡುತ್ತಿದ್ದಾರೆ. ಹೈನೋದ್ಯಮ ಉಚ್ಛ್ರಾಯ ಸ್ಥಿತಿಯಲ್ಲಿರುವ ದಕ್ಷಿಣ ಕರ್ನಾಟಕ ಭಾಗದ ಜನಪ್ರತಿನಿಧಿಯು ಇಲಾಖೆಯ ಸಚಿವರಾದರೆ, ಅವರಿಗೆ ಹೈನೋದ್ಯಮದ ಬಗ್ಗೆ ಒಳನೋಟ ಇರುತ್ತದೆ. ಆ ಕಾರಣದಿಂದ ಅಂತಹವರಿಂದ ಇಲಾಖೆಯ ಸುಧಾರಣೆ ನಿರೀಕ್ಷಿಸಬಹುದು. ಹಿಂದೆ, ದಿವಂಗತ ನಾಗೇಗೌಡರು ಪಶುಸಂಗೋಪನಾ ಸಚಿವರಾಗಿ ಜಿಲ್ಲಾ ಕೇಂದ್ರಗಳಲ್ಲಿ ಪಾಲಿ ಕ್ಲಿನಿಕ್‌ಗಳ ಪ್ರಾರಂಭದಂತಹ ಹಲವಾರು ನೂತನ ಕಾರ್ಯಕ್ರಮಗಳನ್ನು ಕೈಗೊಂಡು, ಇಲಾಖೆಗೆ ಹೆಚ್ಚಿನ ಮಹತ್ವ ಸಿಗುವ ರೀತಿ ಕಾರ್ಯನಿರ್ವಹಿಸಿದ್ದನ್ನು ಸ್ಮರಿಸಬಹುದು.

ಡಾ. ಟಿ.ಜಯರಾಂ, ಕೋಲಾರ

ಪುರುಷ ರಾಜಕೀಯದ ಹುನ್ನಾರ

'ನಮ್ಮ ನಾಯಕಿಯರು ಪಕ್ಷಭೇದ ಮೀರಿ ದನಿಯೆತ್ತಿದರೆ ಮಾತ್ರ ಮಹಿಳಾ ಮೀಸಲಾತಿ ಮಸೂದೆ ಜಾರಿಯಾಗಬಹುದು' ಎಂದು ನಟರಾಜ್ ಹುಳಿಯಾರ್ ಅವರು ಹೇಳಿರುವುದು (ಪ್ರ.ವಾ., ಸೆ. 17) ಸತ್ಯವಾದ ಮಾತು. ಇದುವರೆಗೂ ಯಾವ ರಾಜಕಾರಣಿಗೂ ಇದರ ಬಗ್ಗೆ ದನಿ ಎತ್ತಬೇಕು ಎಂದು ಅನಿಸದಿರುವುದು ಸಹಜವೆ. ಏಕೆಂದರೆ, ನಮ್ಮದು ಪುರುಷ ಪ್ರಧಾನ ಸಮಾಜವಲ್ಲವೇ? ಇಲ್ಲಿ ಯಾವತ್ತೂ ಪುರುಷ ರಾಜಕಾರಣಿಗಳ ಸ್ವಾರ್ಥ, ಹುನ್ನಾರಗಳೇ ಮೇಲುಗೈ ಸಾಧಿಸುವುದು. ಅಧಿಕಾರದ ದಾಹ, ದುರಾಸೆ, ಸ್ತ್ರೀವಿರೋಧಿ ಧೋರಣೆಗಳು ಎಲ್ಲವೂ ಮಸೂದೆಯು ಕಡತಗಳಲ್ಲಿ ಕೊಳೆಯುವಂತೆ ಮಾಡಿವೆ.

ಮನೆಯಿಂದಲೇ ಆರಂಭವಾಗುವ ಈ ಪುರುಷ ದಬ್ಬಾಳಿಕೆಯು ದೇಶದ ರಾಜಕಾರಣದವರೆಗೂ ಹೆಮ್ಮರವಾಗಿ ಬೆಳೆದು ನಿಂತಿದೆ. ಹೀಗಿರುವಾಗ, ಅಧಿಕಾರದಲ್ಲಿರುವ ಮಹಿಳೆಯರು, ಮುಂಚೂಣಿಯಲ್ಲಿರುವ ಮಹಿಳಾ ರಾಜಕಾರಣಿಗಳು, ಮಂತ್ರಿಗಳು ಮಸೂದೆಯ ಪರವಾಗಿ ಗಟ್ಟಿಯಾಗಿ ನಿಲ್ಲಬೇಕು. ಎಲ್ಲಾ ಪಕ್ಷಗಳ ಮಹಿಳಾಮಣಿಗಳು ಒಗ್ಗಟ್ಟಾಗಿ ಮೀಸಲಾತಿ ಜಾರಿಗೆ ಪಣ ತೊಡಬೇಕು. ಇಲ್ಲದಿದ್ದರೆ, ಪುರುಷ ರಾಜಕೀಯದ ಹುನ್ನಾರದಿಂದ ಪ್ರತಿಭೆ ಇದ್ದರೂ ಮಹಿಳೆಯು ಎಲ್ಲದರಿಂದ ವಂಚಿತಳಾಗುತ್ತಾ ಹೋಗುತ್ತಾಳೆ.

ವೀಣಾ ಸುಬ್ರಹ್ಮಣ್ಯ, ಬೆಂಗಳೂರು

ಅನಗತ್ಯ ಪರೀಕ್ಷೆಯ ಕಿರಿಕಿರಿ

ಕರ್ನಾಟಕ ಲೋಕಸೇವಾ ಆಯೋಗದಿಂದ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನಡೆದ ಕಡ್ಡಾಯ ಕನ್ನಡ ಪರೀಕ್ಷೆಯಲ್ಲಿ, ಎಷ್ಟೋ ಅಭ್ಯರ್ಥಿಗಳು ಒಂದರಿಂದ ಹತ್ತನೇ ತರಗತಿಯವರೆಗೂ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿದ್ದರೂ ಒಂದು ಸಣ್ಣ ತಪ್ಪಿನಿಂದಾಗಿ ಮತ್ತೆ ಪರೀಕ್ಷೆ ಬರೆದಿದ್ದಾರೆ. ಆಯೋಗದ ಹುದ್ದೆಗಳಿಗೆ ಅಭ್ಯರ್ಥಿಗಳು ವೈಯಕ್ತಿಕ ವಿವರಗಳನ್ನು ಭರ್ತಿ ಮಾಡುವಾಗ, ಕನ್ನಡ ಮಾಧ್ಯಮದಲ್ಲಿ ಮತ್ತು ಗ್ರಾಮೀಣ ಪ್ರದೇಶದಲ್ಲಿ ಅಧ್ಯಯನ ಮಾಡಿರುವ ಬಗ್ಗೆ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ ದೃಢೀಕರಿಸಿ ಅಪ್‌ಲೋಡ್ ಮಾಡಲಾಗುತ್ತದೆ.

ಇಷ್ಟಾದರೂ ಅರ್ಜಿ ಸಲ್ಲಿಸಿದ ನಂತರ ಕೊನೆಯಲ್ಲಿ ಮತ್ತೆ 'ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದೀರಾ?' ಎಂಬ ಪ್ರತ್ಯೇಕ ಕಾಲಂ ಇರುತ್ತದೆ. ಒಂದು ವೇಳೆ ಈ ಕಾಲಂ ಭರ್ತಿ ಮಾಡುವಾಗ ಕಣ್ತಪ್ಪಿನಿಂದಾಗಿ ಬಿಟ್ಟುಹೋದರೆ ಆ ಅಭ್ಯರ್ಥಿ ಮತ್ತೆ ಕಡ್ಡಾಯ ಕನ್ನಡ ಪರೀಕ್ಷೆಗೆ ಹಾಜರಾಗಬೇಕು. ಈ ದ್ವಂದ್ವವನ್ನು ಸಂಬಂಧಪಟ್ಟವರು ಕೂಡಲೇ ಸರಿಪಡಿಸಬೇಕು. ಏಕೆಂದರೆ ಎಲ್ಲಾ ದಾಖಲಾತಿಗಳನ್ನು ಈ ಮೊದಲೇ ಸ್ಕ್ಯಾನ್ ಮಾಡಿ ಸಲ್ಲಿಸಿದ್ದಾಗಿಯೂ ಮತ್ತೆ ಅದೇ ಪ್ರಶ್ನೆ ಕೇಳುವುದು, ಮತ್ತೆ ಪರೀಕ್ಷೆ ಬರೆಸುವುದು ಸಮಂಜಸವಲ್ಲ.

ವಿಜಯ ಕುಮಾರ್ ಎಸ್. ಸುಜ್ಜಲೂರು, ವಾಟಾಳು, ಟಿ.ನರಸೀಪುರ

ಕಲ್ಯಾಣ ಕರ್ನಾಟಕ ಹಿಂದುಳಿದಿದೆ... ಯಾಕೆ?

ಕಲ್ಯಾಣ ಕರ್ನಾಟಕ ಅಭಿವೃದ್ಧಿ ಆಗದೆ ಹಿಂದೆ ಉಳಿದಿರುವ ಕುರಿತು ಬಹಳಷ್ಟು ಚರ್ಚೆ ಆಗುತ್ತಿದೆ. ಅಭಿವೃದ್ಧಿಯಾಗದೇ ಇರುವುದಕ್ಕೆ ಕಾರಣರಾರು? ಬಹಳಷ್ಟು ಅನುದಾನ ಬಂದರೂ ಅದನ್ನು ಸರಿಯಾಗಿ ಬಳಸದೇ ಇರುವ ಜನಪ್ರತಿನಿಧಿಗಳೇ? ಇಷ್ಟು ವರ್ಷವೂ ಅಂತಹ ಜನಪ್ರತಿನಿಧಿಗಳನ್ನೇ ಆರಿಸಿ ಕಳಿಸುತ್ತಿರುವ ಜನರೇ? ಸ್ವಲ್ಪ ಅಧಿಕಾರ, ಸವಲತ್ತು ಬಂದ ಕೂಡಲೇ ಬೆಂಗಳೂರಿಗೆ ಬಂದು ನೆಲೆಸಿ ಊರನ್ನೇ ಮರೆಯುವ ರಾಜಕಾರಣಿಗಳು ಮತ್ತು ಅಧಿಕಾರಿಗಳೇ? ಸಮರ್ಪಕವಾಗಿ ಜಾರಿ ಮಾಡದಿದ್ದರೆ ಎಂತಹ ಯೋಜನೆಯೇ ಆಗಲಿ ವಿಶೇಷ ಅನುದಾನವೇ ಆಗಲಿ ಹಳ್ಳ ಹಿಡಿಯುತ್ತವೆ. ಉದಾಹರಣೆಗೆ, ರಾಜ್ಯ ಸರ್ಕಾರದ ಹುದ್ದೆಗಳಲ್ಲಿ ಕಲ್ಯಾಣ ಕರ್ನಾಟಕದ ಸ್ಥಳೀಯ ಹುದ್ದೆಗಳಿಗೆ ಸ್ಥಳೀಯರಿಗೆ ನೀಡಿದ ಮೀಸಲಾತಿಯನ್ನೇ ತೆಗೆದುಕೊಳ್ಳಿ. ಆ ಮೀಸಲಾತಿಯಡಿಯಲ್ಲಿ ನೇಮಕಾತಿಯನ್ನೋ ಬಡ್ತಿಯನ್ನೋ ಪಡೆದ ಎಷ್ಟು ಮಂದಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ? ಮೀಸಲಾತಿಯಡಿಯಲ್ಲಿ ಹುದ್ದೆಗಳನ್ನು ಪಡೆದು ಬೆಂಗಳೂರಿಗೋ ಅಥವಾ ಇನ್ಯಾವುದೋ ಅನುಕೂಲಕರವಾದ ಸ್ಥಳಕ್ಕೆ ವರ್ಗಾವಣೆ ಮಾಡಿಸಿಕೊಂಡು ಹಾಯಾಗಿದ್ದಾರೆ.

ಇತ್ತ ಕಲ್ಯಾಣ ಕರ್ನಾಟಕದಲ್ಲಿ ಅದೇ ಖಾಲಿ ಹುದ್ದೆಗಳು, ಬಾಕಿ ಉಳಿಯುವ ಸರ್ಕಾರಿ ಕಾರ್ಯಗಳು. ಅಲ್ಲಿಗೆ ಮತ್ತೊಂದು ವಿಫಲ ಯೋಜನೆ. ಮೀಸಲಾತಿಯಡಿಯಲ್ಲಿ ನಡೆದ ನೇಮಕಾತಿ, ಬಡ್ತಿ ದಾಖಲೆಗಳನ್ನು ಪರಿಶೀಲಿಸಿದರೆ ಎಲ್ಲವೂ ತಿಳಿಯುತ್ತದೆ. ಆದರೆ ಅದನ್ನು ಯಾರೂ ಸರಿ ಮಾಡುವುದಿಲ್ಲ. ಮತ್ತೆ ಅದೇ ಗೋಳು: ಕಲ್ಯಾಣ ಕರ್ನಾಟಕ ಹಿಂದುಳಿದಿದೆ.

ಮಂಜುನಾಥ ಎಸ್., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನಾಯಕತ್ವ ಬದಲು ಕಾಂಗ್ರೆಸ್‌ನ ಸವಾಲು

2014ರ ಲೋಕಸಭಾ ಚುನಾವಣೆಯ ಸೋಲಿನ ಆಘಾತವನ್ನು ಅರಗಿಸಿಕೊಂಡು, ಮೈಕೊಡವಿ ಎದ್ದು ನಿಲ್ಲಲು ಕಾಂಗ್ರೆಸ್ ಪಕ್ಷಕ್ಕೆ ಸಾಧ್ಯವಾಗಲೇ ಇಲ್ಲ ಎನ್ನಬಹುದು. ಸಮರ್ಥವಾದ ನಾಯಕತ್ವ ಇಲ್ಲದೇ ಇರುವುದೇ ಈ ಪರಿಸ್ಥಿತಿಗೆ ಕಾರಣ ಎಂದು ಕಾಂಗ್ರೆಸ್‌ನ ಮುಖಂಡರೇ ವಿಶ್ಲೇಷಿಸುತ್ತಿದ್ದಾರೆ. ಪಕ್ಷದ ಅಧ್ಯಕ್ಷೆಯಾಗಿದ್ದ ಸೋನಿಯಾ ಗಾಂಧಿ ಅವರ ಅನಾರೋಗ್ಯದ ಕಾರಣ 2017ರಲ್ಲಿ ಅಧ್ಯಕ್ಷ ಸ್ಥಾನವನ್ನು ರಾಹುಲ್ ಗಾಂಧಿ ಅವರಿಗೆ ವಹಿಸಲಾಯಿತು. ಆದರೆ, ಅವರ ನಾಯಕತ್ವದಲ್ಲಿ 2019ರ ಲೋಕಸಭಾ ಚುನಾವಣೆಯಲ್ಲಿ 52 ಕ್ಷೇತ್ರಗಳಲ್ಲಿ ಗೆಲ್ಲಲು ಮಾತ್ರ ಕಾಂಗ್ರೆಸ್‌ಗೆ ಸಾಧ್ಯವಾಯಿತು. ಸ್ವಕ್ಷೇತ್ರ ಅಮೇಠಿಯಲ್ಲಿ ರಾಹುಲ್ ಅವರೇ ಸೋತರು. ಪಕ್ಷದ ಸೋಲಿನ ಹೊಣೆ ಹೊತ್ತು 2019ರ ಜುಲೈನಲ್ಲಿ ಅಧ್ಯಕ್ಷ ಸ್ಥಾನಕ್ಕೆ ಅವರು ರಾಜೀನಾಮೆ ಕೊಟ್ಟರು. ಅದಾದ ಬಳಿಕ ಪಕ್ಷಕ್ಕೆ ಪೂರ್ಣಾವಧಿ ಅಧ್ಯಕ್ಷರೇ ಇಲ್ಲ.

ಈಗಿನ ನಾಯಕತ್ವ ರಹಿತ ಸ್ಥಿತಿಯು ಪಕ್ಷವನ್ನು ನಿಷ್ಕ್ರಿಯಗೊಳಿಸಿದೆ. ಅದು ಪಕ್ಷವು ಅಧಿಕಾರದಲ್ಲಿರುವ ರಾಜ್ಯಗಳ ನಾಯಕತ್ವದ ಮೇಲೆಯೂ ಪರಿಣಾಮ ಬೀರಿದೆ. ಕೇಂದ್ರದ ನಾಯಕತ್ವವು ದುರ್ಬಲವಾದ ಕಾರಣ ರಾಜ್ಯ ಮಟ್ಟದ ನಾಯಕರನ್ನು ಹಿಡಿತದಲ್ಲಿ ಇರಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ ಎಂಬುದಕ್ಕೆ ಹಲವು ನಿದರ್ಶನಗಳಿವೆ. ಜ್ಯೋತಿರಾದಿತ್ಯ ಸಿಂಧಿಯಾ ಅವರು ಮಧ್ಯ ಪ್ರದೇಶ ಸರ್ಕಾರ ಪತನವಾಗಲು ಕಾರಣವಾಗಿದ್ದು ಅದಕ್ಕೆ ಒಂದು ಉದಾಹರಣೆ.

ಸೋನಿಯಾ

ಗೋವಾ ವಿಧಾನಸಭೆಗೆ 2017ರಲ್ಲಿ ನಡೆದ ಚುನಾವಣೆಯಲ್ಲಿ ದೊಡ್ಡ ಪಕ್ಷವಾಗಿ ಕಾಂಗ್ರೆಸ್ ಹೊರಹೊಮ್ಮಿತ್ತು. 40 ಕ್ಷೇತ್ರಗಳ ಪೈಕಿ 17ರಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿತ್ತು. ಹಾಗಿದ್ದರೂ ಸರ್ಕಾರ ರಚಿಸಲು ಸಾಧ್ಯವಾಗಲಿಲ್ಲ. 10 ಶಾಸಕರು 2019ರ ಜುಲೈಯಲ್ಲಿ ಬಿಜೆಪಿ ಸೇರ್ಪಡೆಯಾದರು. 2017ರಲ್ಲಿ ಅತಿದೊಡ್ಡ ಪಕ್ಷ ಎನಿಸಿಕೊಂಡಿದ್ದ ಕಾಂಗ್ರೆಸ್ ಈಗ ಅಲ್ಲಿ ಅಸ್ತಿತ್ವಕ್ಕಾಗಿ ಹೆಣಗಾಡುತ್ತಿದೆ.

ಪಕ್ಷಕ್ಕೆ ಸಕ್ರಿಯ ಅಧ್ಯಕ್ಷರು ಬೇಕು ಎಂದು ಪಕ್ಷದ 23 ಮುಖಂಡರು ಸೋನಿಯಾ ಅವರಿಗೆ ಪತ್ರ ಬರೆದದ್ದೇ ಬಿಕ್ಕಟ್ಟು ಸೃಷ್ಟಿಯಾಗಲು ಕಾರಣವಾಗಿತ್ತು. ಈ ಪತ್ರದ ಬಳಿಕ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಗಳು ನಡೆದರೂ ಅಧ್ಯಕ್ಷರ ಆಯ್ಕೆಯ ದಿಸೆಯಲ್ಲಿ ದೃಢವಾದ ಯಾವ ಕ್ರಮವೂ ಆಗಿಲ್ಲ. 'ಪಕ್ಷಕ್ಕೆ ಹೊಸ ಅಧ್ಯಕ್ಷರ ಆಯ್ಕೆ ತಕ್ಷಣವೇ ಆಗಬೇಕು. ಈ ವಿಚಾರದಲ್ಲಿ ವಿಳಂಬ ಸಲ್ಲದು. ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಯಲ್ಲಿ ನಾನು ಇರುವುದೇ ಇಲ್ಲ' ಎಂದು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ ಸಂದರ್ಭದಲ್ಲಿ ರಾಹುಲ್ ಹೇಳಿದ್ದರು. ಆದಾಗಿ ಎರಡು ವರ್ಷಗಳಾದರೂ ಅಧ್ಯಕ್ಷ ಸ್ಥಾನ ಖಾಲಿಯೇ ಇದೆ. ಪಕ್ಷದಲ್ಲಿ ಎದುರಾಗುವ ಯಾವುದೇ ಸಮಸ್ಯೆಗೆ ಪರಿಹಾರಕ್ಕಾಗಿ ರಾಹುಲ್ ಅವರತ್ತಲೇ ನೋಡಲಾಗುತ್ತದೆ. ಆದರೆ, ಅವರು ಪಕ್ಷದ ಯಾವುದೇ ಹುದ್ದೆಯಲ್ಲಿ ಇಲ್ಲ.


ರಾಹುಲ್

ಅಧ್ಯಕ್ಷರಿಲ್ಲ ಎಂಬುದೇ ಪಕ್ಷದಲ್ಲಿ ಹತ್ತಾರು ಬಣಗಳು ಹುಟ್ಟಿಕೊಳ್ಳಲು ಕಾರಣವಾಗಿದೆ. ಈ ಪರಿಸ್ಥಿತಿಯು ಪಕ್ಷದ ಸರ್ಕಾರಗಳು ದುರ್ಬಲಗೊಳ್ಳಲು, ಅಧಿಕಾರಕ್ಕೆ ಮರಳುವ ಸಾಧ್ಯತೆ ಕಮರಿ ಹೋಗಲು ಕಾರಣವಾಗುತ್ತಿದೆ.

ರಾಜಕೀಯವಾಗಿ ಅತ್ಯಂತ ಮುಖ್ಯವಾದ ಉತ್ತರ ಪ್ರದೇಶ, ಕಾಂಗ್ರೆಸ್ ಅಧಿಕಾರದಲ್ಲಿರುವ ಪಂಜಾಬ್ ಮತ್ತು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ತವರು ರಾಜ್ಯ ಗುಜರಾತ್‌ನಲ್ಲಿ ಇನ್ನು ಕೆಲವೇ ತಿಂಗಳಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆ. ಬಿಜೆಪಿಯನ್ನು ಎದುರಿಸಲು ಸಜ್ಜಾಗುವ ಬದಲಿಗೆ ಕಾಂಗ್ರೆಸ್ ಪಕ್ಷವು ಒಳಜಗಳದಲ್ಲಿ ಮುಳುಗಿ ಹೋಗಿದೆ.

'ಕಾಂಗ್ರೆಸ್ ಪಕ್ಷವು ಪುಟಿದೇಳಬೇಕಿದ್ದರೆ, ನಾಯಕತ್ವ ಬದಲಾವಣೆ ತಕ್ಷಣವೇ ಆಗಬೇಕು' ಎಂದು ಪಕ್ಷದ ಸಂಸದ ಶಶಿ ತರೂರ್ ಅವರು ಹೇಳಿದ್ದಾರೆ. ಗಟ್ಟಿ ನಾಯಕತ್ವ ಬೇಕು ಎಂಬ ಬೇಡಿಕೆ ಕಾಂಗ್ರೆಸ್‌ನಲ್ಲಿ ಮೊಳಗುತ್ತಲೇ ಇದೆ.

ಸಿಧು–ಅಮರಿಂದರ್

ಪಂಜಾಬ್: ಅಮರಿಂದರ್–ಸಿಧು ಗುದ್ದಾಟ

ಪಂಜಾಬ್ ಮುಖ್ಯಮಂತ್ರಿಯಾಗಿದ್ದ ಅಮರಿಂದರ್ ಸಿಂಗ್ ಮತ್ತು 2017ರ ವಿಧಾನಸಭೆ ಚುನಾವಣೆಗೆ ಮುನ್ನ ಬಿಜೆಪಿಯಿಂದ ಕಾಂಗ್ರೆಸ್ ಸೇರಿದ್ದ ನವಜೋತ್ ಸಿಂಗ್ ಸಿಧು ನಡುವೆ ಮೊದಲಿನಿಂದಲೂ ಹಗ್ಗಜಗ್ಗಾಟ ಇತ್ತು. ಈ ಕಿತ್ತಾಟವು ಅಮರಿಂದರ್ ತಲೆದಂಡಕ್ಕೆ ಕಾರಣವಾಗುವ ಸ್ಥಿತಿ ತೀರಾ ಇತ್ತೀಚಿನವರೆಗೆ ಇರಲಿಲ್ಲ. ಆದರೆ, 117 ಶಾಸಕರಿರುವ ವಿಧಾನಸಭೆಯಲ್ಲಿ ಕಾಂಗ್ರೆಸ್‌ನ 80 ಶಾಸಕರ ಪೈಕಿ 40 ಮಂದಿ ಅಮರಿಂದರ್ ವಿರುದ್ಧ ಸೋನಿಯಾ ಗಾಂಧಿಗೆ ಕಳೆದ ವಾರ ಪತ್ರ ಬರೆದು ತೀವ್ರ ಅಸಮಾಧಾನ ತೋರಿದ್ದಾರೆ. ಈ ಭಿನ್ನಮತವು ಅಮರಿಂದರ್ ರಾಜೀನಾಮೆಗೆ ಕಾರಣವಾಗಿದೆ.

ಪಂಜಾಬ್‌ನಲ್ಲಿ ಕಾಂಗ್ರೆಸ್ ಪಕ್ಷವು ಮರಳಿ ಅಧಿಕಾರಕ್ಕೆ ಬರುವ ಸಾಧ್ಯತೆ ಇತ್ತು. ಆದರೆ, ಅಮರಿಂದರ್ ಅವರು ಪಕ್ಷದ ವಿರುದ್ಧ ಬಂಡಾಯ ಎದ್ದರೆ ಈ ಸಾಧ್ಯತೆ ಕಮರಬಹುದು. ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಅಮರಿಂದರ್ ಅವರು ಸಿಧು ವಿರುದ್ಧ ಗಂಭೀರವಾದ ಆರೋಪ ಮಾಡಿದ್ದಾರೆ. ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಮತ್ತು ಸೇನಾ ಮುಖ್ಯಸ್ಥ ಕಮರ್ ಜಾವೇದ್ ಬಾಜ್ವಾ ಜತೆಗೆ ನಿಕಟ ಸಂಪರ್ಕವನ್ನು ಸಿಧು ಹೊಂದಿದ್ದಾರೆ. ಈ ಸಂಬಂಧವು ದೇಶದ ಭದ್ರತೆಗೆ ಮಾರಕವಾಗಬಹುದು ಎಂದು ಹೇಳಿದ್ದಾರೆ. ಈ ಆರೋಪದಿಂದಾಗಿ ಸಿಧು ಅವರನ್ನು ಮುನ್ನೆಲೆಗೆ ತರುವುದು ಕಾಂಗ್ರೆಸ್‌ಗೆ ಕಷ್ಟವಾಗಬಹುದು.

ಅರವಿಂದ ಕೇಜ್ರಿವಾಲ್ ನೇತೃತ್ವದ ಎಎಪಿ ಮತ್ತು ಬಿಜೆಪಿ ಅವಕಾಶಗಳಿಗಾಗಿ ಎದುರು ನೋಡುತ್ತಿವೆ. ಅಮರಿಂದರ್ ಅವರು ಸ್ವಂತ ಪಕ್ಷ ಕಟ್ಟಿ, ಈ ಎರಡರಲ್ಲಿ ಒಂದು ಪಕ್ಷದ ಜತೆಗೆ ಸೇರಿಕೊಳ್ಳಬಹುದು. ಇಲ್ಲವೇ, ನೇರವಾಗಿ ಇದರಲ್ಲಿ ಒಂದು ಪಕ್ಷಕ್ಕೆ ಸೇರಬಹುದು. ಇಂತಹ ಯಾವುದೇ ನಡೆಯು ಕಾಂಗ್ರೆಸ್‌ನ ಗೆಲುವಿನ ಸಾಧ್ಯತೆಗೆ ಭಾರಿ ತೊಡಕು ಉಂಟು ಮಾಡಬಹುದು.

ಪೈಲಟ್–ಗೆಹಲೋತ್ ಬಣ ರಾಜಕಾರಣ

ಗೆಹಲೋತ್–ಪೈಲಟ್

ರಾಜಸ್ಥಾನ ಕಾಂಗ್ರೆಸ್ ಘಟಕದ ಅಧ್ಯಕ್ಷ ನಾಯಕ ಸಚಿನ್ ಪೈಲಟ್ ಅವರ ನೇತೃತ್ವದಲ್ಲಿ ವಿಧಾನಸಭೆಗೆ 2018ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದರೂ, ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದು ಹಿರಿಯ ನಾಯಕ ಅಶೋಕ್ ಗೆಹಲೋತ್. ಹೈಕಮಾಂಡ್ ನಿರ್ಧಾರವನ್ನು ಪೈಲಟ್ ಆರಂಭದಲ್ಲಿ ಒಪ್ಪಿಕೊಂಡರೂ, ತಮ್ಮ ಬಣಕ್ಕೆ ಅನ್ಯಾಯವಾಗುತ್ತಿದೆ ಎಂದು 2020ರಲ್ಲಿ ಅವರು ಭಿನ್ನಮತ ಶುರು ಮಾಡಿದರು. ಬೆಂಬಲಿಗ ಶಾಸಕರನ್ನು ಹರಿಯಾಣ ಹಾಗೂ ದೆಹಲಿಯ ಹೋಟೆಲ್‌ಗಳಲ್ಲಿ ಇರಿಸಿ ಒತ್ತಡ ತಂತ್ರ ಶುರು ಮಾಡಿದರು. ತಿಂಗಳವರೆಗೆ ನಡೆದ ಈ ಜಟಾಪಟಿಯಲ್ಲಿ ಗೆಹಲೋತ್ ಕೈ ಮೇಲಾಯಿತು. ಪೈಲಟ್ ಬಣವನ್ನು ಸಮಾಧಾನಪಡಿಸಿ, ತಾತ್ಕಾಲಿಕವಾಗಿ ಮುನಿಸು ಶಮನ ಮಾಡಲಾಯಿತು.

ಈ ಮಧ್ಯೆ ಪಕ್ಷೇತರ ಶಾಸಕರು ಹಾಗೂ ಬಿಎಸ್‌ಪಿ ಶಾಸಕರಿಗೆ ಗೆಹಲೋತ್ ಗಾಳ ಹಾಕಿ ತಮ್ಮ ಸ್ಥಾನ ಭದ್ರಪಡಿಸಿಕೊಂಡಿದ್ದರು. ಬಿಎಸ್‌ಪಿಯಿಂದ ಗೆದ್ದಿದ್ದ ಆರು ಶಾಸಕರು ಕಾಂಗ್ರೆಸ್ ಜೊತೆ ವಿಲೀನವಾಗಿದ್ದೇವೆ ಎಂಬ ಪತ್ರ ನೀಡಿ, ಗೆಹಲೋತ್ ಬೆನ್ನಿಗೆ ನಿಂತರು. ಪೈಲಟ್ ಬೇಡಿಕೆಗಳ ಬಗ್ಗೆ ಪರಾಮರ್ಶೆ ನಡೆಸಲು ಕಾಂಗ್ರೆಸ್ ಮೂವರು ಸದಸ್ಯರ ಸಮಿತಿ ರಚಿಸಿತು. ವರ್ಷ ಕಳೆದರೂ ಬೇಡಿಕೆ ಈಡೇರಿಲ್ಲ ಎಂದು ಪೈಲಟ್ ಮತ್ತೆ ಬುಸುಗುಡುತ್ತಿದ್ದಾರೆ. ಅವರ ಬಣಕ್ಕೆ ಸೂಕ್ತ ಸ್ಥಾನಮಾನ ನೀಡಿ, ಸಮಾಧಾನಪಡಿಸುವ ಯಾವ ಖಚಿತ ಯತ್ನವನ್ನೂ ಕಾಂಗ್ರೆಸ್ ಮಾಡಿದಂತಿಲ್ಲ. ಪೈಲಟ್–ಗೆಹಲೋತ್ ಬಣ ಜಗಳ ಮತ್ತೊಂದು ಸುತ್ತಿನ ಭಿನ್ನಮತಕ್ಕೆ ಯಾವ ಕ್ಷಣದಲ್ಲಿ ಬೇಕಾದರೂ ದಾರಿ ಮಾಡಿಕೊಡುವ ಸಾಧ್ಯತೆಗಳಿವೆ.

'ಗುಜ್ಜರ್'ನತ್ತ ಬಿಜೆಪಿ ಚಿತ್ತ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶ ವಿಧಾನಸಭೆಗೆ ಮುಂದಿನ ವರ್ಷ ನಡೆಯಲಿರುವ ಚುನಾವಣೆಯಲ್ಲಿ ಜಾಟ್ ಸಮುದಾಯದ ಬೆಂಬಲ ಗಳಿಸುವ ಗಟ್ಟಿ ವಿಶ್ವಾಸ ಬಿಜೆಪಿಗೆ ಇಲ್ಲ. ಏಕೆಂದರೆ, ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಯ ಮುಂಚೂಣಿಯಲ್ಲಿ ಈ ಸಮುದಾಯವೇ ಇದೆ. ಹಾಗಾಗಿ, ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಗಣನೀಯ ಪ್ರಮಾಣದಲ್ಲಿರುವ ಗುಜ್ಜರ್ ಸಮುದಾಯದ ಮೇಲೆ ಗಮನ ಕೇಂದ್ರೀಕರಿಸಲು ಬಿಜೆಪಿ ಮುಂದಾಗಿದೆ.

9ನೇ ಶತಮಾನದ ದೊರೆ, 'ಗುರ್ಜರ್–ಪ್ರತಿಹಾರ್' ಸಮುದಾಯದ ಮಿಹಿರ್‌ಭೋಜಾ ಅವರ ಗೌರವಾರ್ಥ ಕಾರ್ಯಕ್ರಮಗಳನ್ನು ನಡೆಸಲು ಬಿಜೆಪಿ ನಿರ್ಧರಿಸಿದೆ. ಮಿಹಿರ್‌ಭೋಜಾ ಅವರ 12 ಅಡಿ ಎತ್ತರದ ಪ್ರತಿಮೆಯನ್ನು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಅನಾವರಣಗೊಳಿಸಲಿದ್ದಾರೆ. ಗೌತಮ ಬುದ್ಧ ನಗರದ ಪದವಿ ಕಾಲೇಜು ಆವರಣದಲ್ಲಿ ಈ ಪ್ರತಿಮೆ ಸ್ಥಾಪನೆ ಆಗಲಿದೆ. ಬುಧವಾರ ಈ ಕಾರ್ಯಕ್ರಮವು ನಡೆಯಲಿದೆ.

ಯೋಗಿ ಅವರು ಪ್ರತಿಮೆ ಅನಾವರಣದ ಬಳಿಕ ಗುಜ್ಜರ್ ಸಮುದಾಯದ ಜನರನ್ನು ಉದ್ದೇಶಿಸಿ ಮಾತನಾಲಿದ್ದಾರೆ.

ಗುಜ್ಜರ್ ಸಮುದಾಯವು ಅತಿ ಹೆಚ್ಚು ಗೌರವದಿಂದ ಕಾಣುವ ವ್ಯಕ್ತಿಗಳಲ್ಲಿ ಮಿಹಿರ್‌ಭೋಜಾ ಮುಖ್ಯವಾಗಿದ್ದಾರೆ. ಮಿಹಿರ್‌ಭೋಜಾ ಹೆಸರಿನಲ್ಲಿ ಹಲವು ವಿದ್ಯಾಸಂಸ್ಥೆಗಳು ಇವೆ. ಉತ್ತರ ಪ್ರದೇಶದ ಪಶ್ಚಿಮದ ಜಿಲ್ಲೆಗಳಾದ ಭಾಗ್‌ಪತ್, ಶಾಮ್ಲಿ ಮತ್ತು ಗಾಜಿಯಾಬಾದ್‌ನಲ್ಲಿ ಈ ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ.

'ಹಿಂದೂ ಧರ್ಮವನ್ನು ರಕ್ಷಿಸಲು ಹೋರಾಡಿದ ಹಿಂದೂ ದೊರೆಗಳನ್ನು ಗೌರವಿಸಲು ನಮ್ಮ ಸರ್ಕಾರವು ಬದ್ಧವಾಗಿದೆ' ಎಂದು ಬಿಜೆಪಿ ಶಾಸಕರೊಬ್ಬರು ಹೇಳಿದ್ದಾರೆ. ಅವರು ಗುಜ್ಜರ್ ಸಮುಯದಾವರು.

ಮಿಹಿರ್‌ಭೋಜಾ ಅವರ ಪ್ರತಿಮೆ ಸ್ಥಾಪನೆಯಲ್ಲಿ ರಾಜಕೀಯ ಉದ್ದೇಶವೇನೂ ಇಲ್ಲ ಎಂದು ಅವರು ಹೇಳಿದ್ದಾರೆ. ಆದರೆ, ಇದು ಚುನಾವಣಾ ತಂತ್ರ ಎಂದು ಸಮಾಜವಾದಿ ಪಕ್ಷವು ಹೇಳಿದೆ. 'ಚುನಾವಣೆ ಹತ್ತಿರ ಬಂದಾಗ ಮಹಾನ್ ವ್ಯಕ್ತಿಗಳೆಲ್ಲರೂ ಬಿಜೆಪಿಗೆ ನೆನಪಾಗುತ್ತಾರೆ' ಎಂದು ಎಸ್‌ಪಿ ಮುಖಂಡರೊಬ್ಬರು ಟೀಕಿಸಿದ್ದಾರೆ.


ಯೋಗಿ

'ಸಾಧನೆ' ಬಿಚ್ಚಿಟ್ಟ ಯೋಗಿ

ಉತ್ತರ ಪ್ರದೇಶವು ತಮ್ಮ ಆಳ್ವಿಕೆಯಲ್ಲಿ ಆಮೂಲಾಗ್ರವಾಗಿ ಬದಲಾಗಿದೆ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದ್ದಾರೆ. 2017ರ ಬಳಿಕ ರಾಜ್ಯದಲ್ಲಿ ಒಂದೇ ಒಂದು ಗಲಭೆ ನಡೆದಿಲ್ಲ ಎಂದಿದ್ದಾರೆ. ವಿಧಾನಸಭೆ ಚುನಾವಣೆಗೆ ಕೆಲವೇ ತಿಂಗಳಿರುವ ಈ ಸಂದರ್ಭದಲ್ಲಿ ಯೋಗಿ ಅವರು ಸರ್ಕಾರದ 'ಸಾಧನೆ'ಗಳನ್ನು ಹೇಳಿಕೊಂಡಿದ್ದಾರೆ.

ಕೇಂದ್ರದ 44 ಯೋಜನೆಗಳ ಅನುಷ್ಠಾನದಲ್ಲಿ ಉತ್ತರ ಪ್ರದೇಶವು ಮೊದಲ ಸ್ಥಾನದಲ್ಲಿದೆ. ಮೊದಲು ಇದ್ದ ಹಾಗೆ ಗಲಭೆಗಳು ಮತ್ತು ಕಾನೂನು ಸುವ್ಯವಸ್ಥೆ ರಹಿತ ಸ್ಥಿತಿ ಈಗ ರಾಜ್ಯದಲ್ಲಿ ಇಲ್ಲ. ಆಡಳಿತವು ಪರಿಣಾಮಕಾರಿ ಮತ್ತು ಪಾರದರ್ಶಕವಾಗಿದೆ ಎಂದೂ ಅವರು ಹೇಳಿದ್ದಾರೆ.

ಆದರೆ, ಯೋಗಿ ಅವರು ನೀಡಿರುವ 'ಸಾಧನೆಗಳ ವರದಿ'ಯು ಸುಳ್ಳುಗಳ ಕಂತೆ ಎಂದು ವಿರೋಧ ಪಕ್ಷಗಳಾದ ಎಸ್‌ಪಿ, ಬಿಎಸ್‌ಪಿ ಮತ್ತು ಕಾಂಗ್ರೆಸ್ ಹೇಳಿವೆ.

ಗುಜ್ಜರ್ ಅಲ್ಲವೇ?

ಮಿಹಿರ್‌ಭೋಜಾ ಅವರು ಗುಜ್ಜರ್ ಸಮುದಾಯಕ್ಕೆ ಸೇರಿದವರು ಅಲ್ಲ. ಅವರು ರಜಪೂತ ಎಂದು ರಜಪೂತ ಸಮುದಾಯದ ಸಂಘಟನೆ ಕರ್ನಿ ಸೇನಾ ಹೇಳಿದೆ. ಮಿಹಿರ್‌ಭೋಜಾ ಅವರು ಗುಜ್ಜರ್ ಸಮುದಾಯದವರು ಎಂದು ಹೇಳಿ ಅವರ ಪ್ರತಿಮೆ ಸ್ಥಾಪಿಸಿದರೆ ಪ್ರತಿಭಟನೆ ನಡೆಸಲಾಗುವುದು ಎಂದು ಈ ಸಂಘಟನೆಯು ಎಚ್ಚರಿಕೆ ಕೊಟ್ಟಿದೆ.

ಜಾಟ್ ದೊರೆ ಮಹೇಂದ್ರ ಪ್ರತಾಪ ಸಿಂಗ್ ಅವರ ಪ್ರತಿಮೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಕೆಲವೇ ದಿನಗಳ ಹಿಂದೆ ಅಲಿಗಡದಲ್ಲಿ ಅನಾವರಣಗೊಳಿಸಿದ್ದರು.

ಛತ್ತೀಸಗಡ: ನಾಯಕತ್ವ ಬದಲಾವಣೆ ಅನಿವಾರ್ಯವೇ?

ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಮತ್ತು ಪ್ರಭಾವಿ ನಾಯಕ ಟಿ.ಎಸ್. ಸಿಂಗ್‌ದೇವ್ ನಡುವೆ ಮುಖ್ಯಮಂತ್ರಿ ಗಾದಿಗಾಗಿ ತಿಕ್ಕಾಟ ಆರಂಭವಾಗಿದೆ. ಎರಡೂವರೆ ವರ್ಷದ ಬಳಿಕ ಮುಖ್ಯಮಂತ್ರಿ ಬದಲಾಯಿಸಲಾಗುವುದು ಎಂದು ಸಿಂಗ್‌ದೇವ್ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಛತ್ತೀಸಗಡದಲ್ಲಿ ಸರ್ಕಾರ ರಚಿಸುವ ಸಂದರ್ಭದಲ್ಲಿ ಭರವಸೆ ನೀಡಿತ್ತು ಎಂದು ಹೇಳಲಾಗುತ್ತಿದೆ. ಈ ಮಾತನ್ನು ಉಳಿಸಿಕೊಳ್ಳಲು ಕಾಂಗ್ರೆಸ್ ಬಯಸಿದೆ ಎನ್ನಲಾಗಿದೆ.

ಆದರೆ, ಎರಡೂವರೆ ವರ್ಷದ ಬಳಿಕ ಮುಖ್ಯಮಂತ್ರಿ ಬದಲಾವಣೆಯ ಒಪ್ಪಂದವೇ ಆಗಿಲ್ಲ ಎಂದು ಬಘೇಲ್ ಬಣದವರು ಹೇಳುತ್ತಿದ್ದಾರೆ. 90 ಸದಸ್ಯ ಬಲದ ಛತ್ತೀಸಗಡ ವಿಧಾನಸಭೆಯಲ್ಲಿ ಕಾಂಗ್ರೆಸ್ ಸದಸ್ಯರ ಸಂಖ್ಯೆ 68. ಇವರಲ್ಲಿ 40ಕ್ಕೂ ಹೆಚ್ಚು ಮಂದಿ ಬಘೇಲ್ ಬೆಂಬಲಕ್ಕೆ ನಿಂತಿದ್ದಾರೆ ಎಂದು ಹೇಳಲಾಗುತ್ತಿದೆ. ಬಘೇಲ್ ಅವರು ತಮ್ಮ ಬೆಂಬಲಿಗ ಶಾಸಕರನ್ನು ದೆಹಲಿಗೆ ಕಳುಹಿಸಿ ಬಲಪ್ರದರ್ಶನವನ್ನೂ ನಡೆಸಿದ್ದಾರೆ.

ಬಘೇಲ್ ಅವರು ರಾಜೀನಾಮೆ ನೀಡುವ ಸಾಧ್ಯತೆ ಇಲ್ಲ ಎಂದು ಅವರ ಆಪ್ತರು ಹೇಳಿದ್ದಾರೆ. ಹೀಗಾಗಿ, ಮುಖ್ಯಮಂತ್ರಿ ಬದಲಾವಣೆಯ ಕಸರತ್ತು ಕಾಂಗ್ರೆಸ್‌ಗೆ ಭಾರಿ ಹೊಡೆತ ನೀಡುವ ಅಪಾಯ ಇದೆ.


ಬಘೇಲ್

ಗಾಯಕ್ಕೆ ಮದ್ದು ಅರೆಯದ ಕಾಂಗ್ರೆಸ್

ಕಾಂಗ್ರೆಸ್ ಮುಖಂಡ ಕಪಿಲ್ ಸಿಬಲ್ ಅವರು, 'ಸಮಸ್ಯೆಯು ಬೃಹದಾಕಾರ ತಾಳುವ ಮುನ್ನವೇ ಪರಿಹಾರ ಕ್ರಮ ಕೈಗೊಳ್ಳಬೇಕು' ಎಂಬ ಅರ್ಥ ಬರುವ ಟ್ವೀಟ್ ಮಾಡಿದ್ದಾರೆ. ಈ ಮೂಲಕ, ಕಾಂಗ್ರೆಸ್ ಪಕ್ಷವು ಬಿಕ್ಕಟ್ಟುಗಳನ್ನು ಬೆಳೆಯಲು ಬಿಟ್ಟು, ಪರಿಸ್ಥಿತಿ ಕೈಮೀರುವಂತೆ ಮಾಡಿಕೊಳ್ಳುತ್ತಿದೆ ಎಂದು ಪರೋಕ್ಷವಾಗಿ ಹೇಳಿದ್ದಾರೆ. ಪಂಜಾಬ್ ಬಿಕ್ಕಟ್ಟನ್ನು ಅತ್ಯಂತ ಕೆಟ್ಟದಾಗಿ ನಿರ್ವಹಿಸಲಾಗಿದೆ ಎಂಬ ಭಾವನೆ ಕಾಂಗ್ರೆಸ್‌ನ ಹಲವು ಮುಖಂಡರಲ್ಲಿ ಇದೆ. ಸಿಬಲ್ ಅವರ ಹೇಳಿಕೆಯು ಅದರ ಸೂಚನೆ ಮಾತ್ರ.

ಮೋದಿ ಅಲೆಯ ನಡುವೆಯೂ ಕಾಂಗ್ರೆಸ್ ಪಕ್ಷವು ಪಂಜಾಬ್, ಛತ್ತೀಸಗಡ, ಮಧ್ಯಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ಅಧಿಕಾರ ಹಿಡಿಯಿತು. ಆದರೆ ಎಲ್ಲ ಕಡೆಯೂ ಬಿಕ್ಕಟ್ಟುಗಳು ಮೇಲುಗೈ ಸಾಧಿಸಿವೆ. ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರು ಪಂಜಾಬ್ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದ್ದು ದಿಢೀರ್ ಎದುರಾದ ಬೆಳವಣಿಗೆಯಲ್ಲ ಎಂಬುದು ಸ್ಪಷ್ಟ. ಹಾಗಿದ್ದರೂ ಸಂಕಷ್ಟ ಶಮನಕ್ಕೆ ಗಂಭೀರ ಪ್ರಯತ್ನ ನಡೆದಿಲ್ಲ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಾರೆ. ಬಿಕ್ಕಟ್ಟು ಪರಿಹಾರಕ್ಕಾಗಿ ಕಾಂಗ್ರೆಸ್ ನೇಮಿಸಿದ್ದ ಮೂವರು ಸದಸ್ಯರ ಸಮಿತಿಯು ಬಿಕ್ಕಟ್ಟನ್ನು ಹೆಚ್ಚಿಸಿತೇ ವಿನಾ ನಯಾಪೈಸೆಯಷ್ಟು ಕಡಿಮೆ ಮಾಡಲಿಲ್ಲ ಎಂದೂ ಹೇಳಲಾಗುತ್ತಿದೆ.

ಮಧ್ಯಪ್ರದೇಶ ಸರ್ಕಾರವನ್ನು ಪಕ್ಷವು ಕೈಯಾರೇ ಬಲಿಕೊಟ್ಟಿತು. ಪಕ್ಷದೊಳಗಿನ ಭಿನ್ನಮತವನ್ನು ಅರಿತು, ಅದಕ್ಕೆ ಮದ್ದು ಅರೆಯುವ ಕೆಲಸವನ್ನು ಮಾಡಲಿಲ್ಲ. ಬಂಡಾಯ ಎದ್ದಿದ್ದ ಮುಖಂಡ ಜ್ಯೋತಿರಾದಿತ್ಯ ಸಿಂಧಿಯಾ ಅವರನ್ನು ಹಿಡಿದಿಟ್ಟುಕೊಳ್ಳಲು ಸ್ವತಃ ರಾಹುಲ್ ಗಾಂಧಿ ಅವರಿಗೇ ಆಗಲಿಲ್ಲ.

ರಾಜಸ್ಥಾನದ ಸರ್ಕಾರವು ಪತನದ ಅಂಚಿಗೆ ಹೋಗಿತ್ತು. ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ತಮ್ಮ ಚಾಣಾಕ್ಷತನದಿಂದ ಸರ್ಕಾರ ಉಳಿಸಿಕೊಂಡರು. ಸರ್ಕಾರ ಉಳಿಯುವಲ್ಲಿ ಪಕ್ಷದ ಹೈಕಮಾಂಡ್‌ನ ಪಾತ್ರ ದೊಡ್ಡದೇನೂ ಇರಲಿಲ್ಲ. ಭಿನ್ನಮತ ನಿಲ್ಲಿಸಿದ ಸಚಿನ್ ಅವರಿಗೆ ಕೆಲವು ಭರವಸೆಗಳನ್ನು ಪಕ್ಷದ ನಾಯಕತ್ವವು ನೀಡಿತ್ತು. ವರ್ಷವಾದರೂ ಅವು ಯಾವುವೂ ಈಡೇರಿಲ್ಲ ಎಂದು ಸಚಿನ್ ಅವರು ಬಹಿರಂಗವಾಗಿಯೇ ಅತೃಪ್ತಿ ಹೊರ ಹಾಕಿದ್ದಾರೆ. ಪಕ್ಷ ಇನ್ನಷ್ಟು ತಡ ಮಾಡಿದರೆ ರಾಜಸ್ಥಾನದಲ್ಲೂ ಕಾಂಗ್ರೆಸ್ ಬುಡ ಅಲುಗಾಡುವ ದಿನ ದೂರವಿಲ್ಲ ಎನ್ನುತ್ತಾರೆ ವಿಶ್ಲೇಷಕರು.

ಛತ್ತೀಸಗಡದಲ್ಲಿಯೂ ನಾಯಕತ್ವ ಕಿತ್ತಾಟ ಇದೆ. ಆದರೆ, ಪರಿಹಾರ ಸೂತ್ರವೇನೂ ಸಿದ್ಧವಾದಂತೆ ಕಾಣಿಸುತ್ತಿಲ್ಲ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನ ನಿಮಿತ್ತ ಶುಕ್ರವಾರ ಬೃಹತ್ ಲಸಿಕಾ ಕಾರ್ಯಕ್ರಮ ನಡೆಯಿತು. ಒಂದೇ ದಿನ ಎರಡೂವರೆ ಕೋಟಿ ಜನರಿಗೆ ಲಸಿಕೆ ನೀಡಲಾಯಿತು. ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ಲಸಿಕೆ ಕುರಿತು ಮಾಡಿರುವ ಟ್ವೀಟ್ ಚರ್ಚಾಸ್ಪದವಾಗಿದೆ. 'ಪ್ರಧಾನಿ ನರೇಂದ್ರ ಮೋದಿ ಅವರು ಎಲ್ಲರಿಗೂ ಉಚಿತ ಕೋವಿಡ್ ಲಸಿಕೆಯ ಉಡುಗೊರೆ ನೀಡಿದ್ದಾರೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

ಮಾಂಡವೀಯ ಅವರ ಟ್ವೀಟ್ ತಪ್ಪುದಾರಿಗೆಳೆಯುವ ರೀತಿಯಲ್ಲಿದೆ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ದೇಶದ ಎಲ್ಲರಿಗೂ 'ಉಚಿತ' ಲಸಿಕೆ ನೀಡಲಾಗುತ್ತಿಲ್ಲ. ಕೇಂದ್ರ ಸರ್ಕಾರವು ಶೇ 50ರಷ್ಟು ಲಸಿಕೆಯನ್ನು ಉಚಿತವಾಗಿ ನೀಡುತ್ತಿದೆ. ರಾಜ್ಯ ಸರ್ಕಾರಗಳು ಶೇ 25ರಷ್ಟು ಲಸಿಕೆಗಳನ್ನು ತಮ್ಮ ರಾಜ್ಯಗಳಲ್ಲಿ ಉಚಿತವಾಗಿ ನೀಡುತ್ತಿವೆ. ಆದರೆ ಇನ್ನುಳಿದ ಶೇ 25ರಷ್ಟು ಲಸಿಕೆಗಳನ್ನು ಖಾಸಗಿ ಆಸ್ಪತ್ರೆಗಳು ಮಾರಾಟ ಮಾಡುತ್ತಿವೆ. ಈ ಮಾಹಿತಿ ಕೇಂದ್ರ ಆರೋಗ್ಯ ಸಚಿವಾಲಯದ ವೆಬ್‌ಸೈಟ್‌ನಲ್ಲಿದೆ. ಕೋವಿಶೀಲ್ಡ್ ಅನ್ನು ₹780ಕ್ಕೆ, ಕೋವ್ಯಾಕ್ಸಿನ್ ಅನ್ನು ₹1,410ಕ್ಕೆ ಹಾಗೂ ಸ್ಪುಟ್ನಿಕ್ ಲಸಿಕೆಯನ್ನು ₹1,145 ದರದಲ್ಲಿ ನೀಡಲಾಗುತ್ತಿದೆ. ಹೀಗಾಗಿ ಉಚಿತ ಎಂಬುದು ದಾರಿ ತಪ್ಪಿಸುವ ಹೇಳಿಕೆ ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ



ದಿನ ಭವಿಷ್ಯ

ಸೋಮವಾರ ಸೆಪ್ಟೆಂಬರ್ 20, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರ ಫಲ್ಗುಣಿ ಪೂರ್ಣಿಮಾ ಗಂ. 55-47 (ರಾ. 4-34) ಸೋಮವಾರ ನಿತ್ಯ ನಕ್ಷತ್ರ ಪೂರ್ವಾಭಾದ್ರ ಗಂ. 55-23 (ರಾ. 4-24) ಶೂಲ ನಾಮ ಯೋಗ ಗಂ. 26-29 ಭದ್ರೆ ಕರಣ ಗಂ. 26-8 ವಿಷ ಗಂ. 10-47 ಅಮೃತ ಗಂ 35-20 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-12 ಸೂರ್ಯಾಸ್ತ: 6-16 ಅದೃಷ್ಟ ಸಂಖ್ಯೆ 3, 4

ಮೇಷ: ವೃತ್ತಿರಂಗದಲ್ಲಿ ನಿರೀಕ್ಷಿತ ಯಶಸ್ಸು. ಉದ್ಯೋಗಸ್ಥರಿಗೆ ಮತ್ತು ರಾಜಕಾರಣಿಗಳಿಗೆ ಬಡ್ತಿ ದೊರಕುವ ಲಕ್ಷಣ. ಗುತ್ತಿಗೆ ವ್ಯವಹಾರ ನಡೆಸುತ್ತಿರುವವರಿಗೆ ಹಣಕಾಸಿನ ಹರಿವು ಉತ್ತಮವಾಗಿರುವುದು.

ವೃಷಭ: ಕೆಲಸ–ಕಾರ್ಯಗಳಲ್ಲಿ ಹಿನ್ನಡೆಯಿಂದಾಗಿ ನಿರಾಸೆ ತಾಳುವುದು ಸರಿಯಲ್ಲ. ಅನಿಶ್ಚಿತತೆಯಿಂದಾಗಿ ತೊಂದರೆ. ಆತ್ಮವಿಶ್ವಾಸದಿಂದ ಮುನ್ನುಗ್ಗುವುದರಿಂದ ಪ್ರಗತಿಯ ದಾರಿ ಕಾಣಲಿದೆ. ಸಂಗಾತಿಯ ಸಾಂತ್ವನ.

ಮಿಥುನ: ಆರ್ಥಿಕ ಸ್ಥಿತಿಯಲ್ಲಿ ಸ್ವಲ್ಪಮಟ್ಟಿನ ಏರುಪೇರುಗಳು ಕಂಡುಬಂದರೂ ದೈವಾನುಗ್ರಹದಿಂದಾಗಿ ನಿಶ್ಚಿತ ಆದಾಯಕ್ಕೆ ಕೊರತೆ ಆಗಲಾರದು. ಆತ್ಮೀಯರ ಸಹಕಾರದಿಂದ ಕಾರ್ಯಸಿದ್ಧಿ. ಚಿನ್ನಾಭರಣ ಖರೀದಿಸಿ ನೆಮ್ಮದಿ.

ಕರ್ಕಾಟಕ: ಸ್ವಲ್ಪಮಟ್ಟಿನ ಆರ್ಥಿಕ ತೊಂದರೆಗಳು ಎದುರಾಗುವ ಸಾಧ್ಯತೆ. ನಿರೀಕ್ಷಿತ ಮೂಲಗಳಿಂದ ಸಣ್ಣ ಪ್ರಮಾಣದ ಆದಾಯ. ಮಕ್ಕಳ ವಿದ್ಯಾಭ್ಯಾಸದಲ್ಲಿನ ಪ್ರಗತಿಯಿಂದಾಗಿ ಸಂತಸ ಮೂಡಿಬರಲಿದೆ.

ಸಿಂಹ: ನಿಮ್ಮ ಅಭಿವೃದ್ಧಿಗೆ ಪೂರಕವಾದ ಅನೇಕ ಅವಕಾಶಗಳು ಕೂಡಿಬರಲಿವೆ. ಅವುಗಳನ್ನು ಸಮರ್ಥವಾಗಿ ಬಳಸಿಕೊಳ್ಳುವುದು ನಿಮ್ಮ ಜಾಣ್ಮೆಗೆ ಕೈಗನ್ನಡಿಯಾಗಲಿದೆ. ಆರೋಗ್ಯದಲ್ಲಿ ಸುಧಾರಣೆ.

ಕನ್ಯಾ: ಸದಾಚಾರದಿಂದ ತೆಗೆದುಕೊಂಡ ನಿರ್ಧಾರಗಳು ಸರಿಯಾಗಿದ್ದು ಯಶಸ್ಸನ್ನು ಕಂಡುಕೊಳ್ಳಲಿದ್ದೀರಿ. ಕೀಳರಿಮೆಯಿಂದ ಹೊರ ಬಂದು ಆತ್ಮವಿಶ್ವಾಸದಿಂದ ಮುಂದಡಿ ಇಡುವುದು ಅವಶ್ಯಕ.

ತುಲಾ: ಅವಿವಾಹಿತರಿಗೆ ವಿವಾಹ ಭಾಗ್ಯ. ವೃತ್ತಿರಂಗದಲ್ಲಿ ಕ್ರಿಯಾಶೀಲತೆಯಿಂದಾಗಿ ಸಾಫಲ್ಯ. ಸಾಮಾಜಿಕ ಕ್ಷೇತ್ರದಲ್ಲಿ ಜನಮನ್ನಣೆಯ ಅನುಭವ ನಿಮ್ಮದಾಗಲಿದೆ. ಅಪೇಕ್ಷಿತರಿಗೆ ಸಂತಾನ ಪ್ರಾಪ್ತಿ ಯೋಗ.

ವೃಶ್ಚಿಕ: ರಾಜಕೀಯ ಕ್ಷೇತ್ರದಲ್ಲಿರುವವರಿಗೆ ಉತ್ತಮವಾದ ಕಾಲವಾಗಿದ್ದು ಜನಾನುರಾಗಿಗಳಾಗಿ ಬಿಂಬಿಸುವ ಸಾಧ್ಯತೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಹೆಚ್ಚಿನ ಅನುಕೂಲತೆಗಳು ಒದಗಿ ಪ್ರಗತಿ.

ಧನು: ಹೊಸ ವಾಹನ ಖರೀದಿ ಯೋಗ. ಕೈಗೆತ್ತಿಕೊಂಡ ಕೆಲಸ–ಕಾರ್ಯಗಳು ನಿಮ್ಮ ಪ್ರಯತ್ನದಿಂದಾಗಿ ಯಶಸ್ವಿಯಾಗಲಿವೆ. ಸಾಂಸಾರಿಕ ಸುಖ, ಶಾಂತಿ ಅನುಭವಿಸಲಿದ್ದೀರಿ. ಆದಾಯದಲ್ಲಿ ವೃದ್ಧಿ.

ಮಕರ: ಸಮಾಧಾನದಿಂದ ವ್ಯವಹರಿಸುವುದರಿಂದ ಎಲ್ಲ ಕೆಲಸಕಾರ್ಯಗಳು ಸುಗಮವಾಗಲಿವೆ. ಗೃಹ ನಿರ್ಮಾಣ ಕಾರ್ಯದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ. ಶುಭಕಾರ್ಯಗಳಿಗಾಗಿ ಹಿರಿಯರೊಂದಿಗೆ ಸಮಾಲೋಚನೆ.

ಕುಂಭ: ಸಾಹಸ ಮತ್ತು ಕ್ರೀಡಾ ಕ್ಷೇತ್ರದಲ್ಲಿರುವವರಿಗೆ ಉತ್ತಮ ಅವಕಾಶ. ವಿದ್ಯಾರ್ಥಿಗಳಿಗೆ ಹೊಸ ಉತ್ಸಾಹ ಮೂಡಿಸುವ ಸಾಧ್ಯತೆ. ಪ್ರಾಪ್ತ ವಯಸ್ಕ ಅವಿವಾಹಿತರಿಗೆ ಸಂಬಂಧಗಳು ಕೂಡಿಬರಲಿವೆ.

ಮೀನ: ಸರ್ಕಾರಿ ಉದ್ಯೋಗಿಗಳಿಗೆ ವರ್ಗಾವಣೆ ಸಾಧ್ಯತೆ. ಉದ್ಯೋಗ ಕ್ಷೇತ್ರದಲ್ಲಿ ಸ್ವಲ್ಪಮಟ್ಟಿನ ಕಿರಿಕಿರಿ. ಜೀವನಶೈಲಿಯನ್ನು ಬದಲಾಯಿಸಿಕೊಳ್ಳಲು ನಿಮಗೆ ಕಾಲವು ಪಕ್ವವಾಗಿರುವುದು.

ನಿಮ್ಮ ಜನ್ಮದಿನ 20-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕ. ಸ್ವಯಂ ಉದ್ಯೋಗದಲ್ಲಿ ತೊಡಗಿರುವವರಿಗೆ ಪರಿಶ್ರಮದ ಫಲವಾಗಿ ಹೆಚ್ಚಿನ ಗಳಿಕೆ. ಸರ್ಕಾರದಿಂದ ಆಗಬೇಕಾದ ಹೆಚ್ಚಿನ ಕೆಲಸ ಕಾರ್ಯಗಳು ನಿಮ್ಮಿಚ್ಛೆಯಂತೆ ನಡೆಯಲಿವೆ. ರೈತಾಪಿ ವರ್ಗದವರಿಗೆ ಉತ್ತಮ ಫಸಲನ್ನು ನಿರೀಕ್ಷಿಸಬಹುದಾಗಿದೆ.

ಬೆರಗಿನ ಬೆಳಕು
ಗುರುರಾಜ ಕರಜಗಿ

ಮಹರ್ಷಿಗಳ ಮಹಾಕಾವ್ಯಗಳು

ಪ್ರೀತಿಮಹಿಮೆಯ ಚಿತ್ರರೀತಿಯಂ ವಾಲ್ಮೀಕಿ |
ನೀತಿಸೂಕ್ಷ್ಮದ ಗಹನಮಾರ್ಗಮಂ ವ್ಯಾಸರ್ ||
ಗೀತೆಯಲ್ಲಿ ವಿಶ್ವಜೀವನರಹಸ್ಯವನವರ್ |
ಖ್ಯಾತಿಸಿಹರದು ಕಾವ್ಯ – ಮಂಕುತಿಮ್ಮ || 462 ||

ಪದ-ಅರ್ಥ: ಗಹನಮಾರ್ಗಮಂ = ಕಷ್ಟದ ದಾರಿ, ವಿಶ್ವಜೀವನ ರಹಸ್ಯವನವರ್ = ವಿಶ್ವಜೀವನ + -ರಹಸ್ಯವನು + ಅವರ್, ಖ್ಯಾತಿಸಿಹರು = ಪ್ರಸಿದ್ಧಿಪಡಿಸಿದ್ದಾರೆ.

ವಾಚ್ಯಾರ್ಥ: ಪ್ರೀತಿಯ ಮಹಿಮೆಯನ್ನು ವಾಲ್ಮೀಕಿ ಮಹರ್ಷಿಗಳು, ನೀತಿಸೂಕ್ಷ್ಮದ ಕಠಿಣದಾರಿಯನ್ನು ಮತ್ತು ಗೀತೆಯಲ್ಲಿ ವಿಶ್ವಜೀವನದ ರಹಸ್ಯವನ್ನು ವ್ಯಾಸರು ಪ್ರಸಿದ್ಧಿಪಡಿಸಿದ್ದಾರೆ. ಅದು ಕಾವ್ಯ.

ವಿವರಣೆ: ಇಡೀ ಸಾಹಿತ್ಯ ಪ್ರಪಂಚದಲ್ಲಿ ಭರತಭೂಮಿಯ ಕೀರ್ತಿ ಎರಡು ಕಾವ್ಯಗಳಿಂದ ಅಮರವಾಗಿ, ಅತ್ಯುನ್ನತವಾಗಿ ನಿಂತಿದೆ. ಆ ಎರಡು ಕಾವ್ಯಗಳು – ರಾಮಾಯಣ ಮತ್ತು ಮಹಾಭಾರತ. ವೇದ, ಉಪನಿಷತ್ತುಗಳ ನಂತರ ಈ ಕಾವ್ಯಗಳು ನಮಗೆ ಪರಮಪೂಜ್ಯವಾದ, ಜೀವನಾದರ್ಶದ ಮಾರ್ಗದರ್ಶಿಗಳು.

ರಾಮಾಯಣ ಹಿಮವತ್ಪರ್ವತದಂತೆ, ಅತ್ಯಂತ ರಮಣೀಯವೂ, ಗಗನಚುಂಬಿಯೂ ಆಗಿದೆ. ರಾಮಾಯಣದಲ್ಲಿ ಬರುವ ಅಪೂರ್ವವಾದ, ನಿಷ್ಕಲ್ಮಷವಾದ ಪ್ರೀತಿಯ ನೆಲೆಗಳು ಅನೇಕ. ದಶರಥನಿಗೆ ರಾಮನ ಮೇಲೆ ಪ್ರೀತಿ, ಲಕ್ಷ್ಮಣನ ಸಂಪೂರ್ಣ ಶರಣಾಗತಿಯ ಪ್ರೀತಿ, ರಾಮ-ಸೀತೆಯರ ಪ್ರೀತಿ, ರಾಮ-ಭರತರ ಪ್ರೀತಿ, ರಾಮ-ಆಂಜನೇಯರ ಪ್ರೀತಿ, ರಾಮ-ಶಬರಿಯ ಪ್ರೀತಿ, ಹೀಗೆ ಪಟ್ಟಿ ಮಾಡುತ್ತ ಹೋದರೆ ಪ್ರೀತಿಯ ಅನೇಕ ಛಾಯೆಗಳು ಕಾಣುತ್ತವೆ. ಆದ್ದರಿಂದ ವಾಲ್ಮೀಕಿ ಮಹರ್ಷಿಗಳ ರಾಮಾಯಣ, ಪ್ರೀತಿಯ ವಿವಿಧ ಮುಖಗಳ ಅನನ್ಯ ಚಿತ್ರಣ.

ಭಗವಾನ್ ವೇದವ್ಯಾಸರು ಬರೆದ ಮಹಾಭಾರತ ಸಮುದ್ರದಂತೆ, ವಿಸ್ತಾರವಾಗಿ, ಪ್ರಕ್ಷುಬ್ಧವಾಗಿ ಜೀವನದ ತೊಡಕಿನ ಪ್ರಸಂಗಗಳನ್ನು ತೋರಿಸುವುದಾಗಿದೆ. ಮಹಾಭಾರತದ ಕಾಲ ದ್ವಾಪರಯುಗ. ಅದನ್ನು ಕಲಿಯುಗದ ಅರುಣೋದಯ ಕಾಲವೆಂದು ವರ್ಣಿಸಲಾಗಿದೆ. ನಮಗೆ ಈಗ ಇಪ್ಪತ್ತೊಂದನೆಯ ಶತಮಾನದಲ್ಲಿ, ನಮ್ಮ ಪ್ರಪಂಚದಲ್ಲಿ ಎಂಥ ಸಂದೇಹಗಳು, ಎಂಥ ಸಂಕಟ, ಸಂಕ್ಷೋಭೆಗಳು ವಿಕಟರೂಪದಲ್ಲಿ ನಮ್ಮನ್ನು ಕೆಣಕುತ್ತಿವೆಯೋ ಅಂಥ ಉತ್ಕಟವಾದ ಧಾರ್ಮಿಕ, ನೈತಿಕ ಪ್ರಶ್ನೆಗಳೇ ಮಹಾಭಾರತದ ಗ್ರಂಥಿಸ್ಥಾನಗಳು. ದುರ್ಯೋಧನನ ಛಲ, ಧರ್ಮಿಷ್ಠರಾದ ಪಾಂಡವರ ಸಂಕಟಗಳು, ಜ್ಞಾನಿಗಳಾದ ಭೀಷ್ಮ, ದ್ರೋಣರ ಅಸಹಾಯಕತೆ, ದ್ರೌಪದಿಯ ಅಪಮಾನ, ಅದರಿಂದಾಗಿ ಉದ್ಭವಿಸಿದ ಸೇಡಿನ ಪ್ರತಿಜ್ಞೆಗಳು, ಅವುಗಳ ಸಾಧನೆಗೆ ಹಿಡಿಯಬೇಕಾದ ಕುಟಿಲೋಪಾಯಗಳು, ಕೊನೆಗೆ ಕೃಷ್ಣನ ಧರ್ಮಪ್ರಜ್ಞೆ, ಧರ್ಮರಕ್ಷಣೆ, ದುಷ್ಟರ ನಾಶ ಇವೆಲ್ಲ ಸೇರಿ ಭಾರತ ನಮಗೆ ಒಂದು ದೃಷ್ಟಿಯಿಂದ ಸಮಕಾಲೀನ ಚರಿತ್ರೆಯಾಗಿದೆ.

ಮಹಾಭಾರತದ ಭಾಗವೇ ಆಗಿರುವ ಭಗವದ್ಗೀತೆ, ಒಂದು ಸ್ವತಂತ್ರ ಕೃತಿಯೋ ಎನ್ನುವಷ್ಟು ಪ್ರಖ್ಯಾತವಾಗಿದೆ. ಉಪನಿಷತ್ತುಗಳು ಜೀವ, ಜಗತ್ತು ಮತ್ತು ಈಶ್ವರ ಎಂಬ ಮೂರರನ್ನು ಕುರಿತು ಚರ್ಚಿಸುವ ವೇದಾಂತ ಗ್ರಂಥಗಳಾದರೆ, ಗೀತೆಯು ಈ ವೇದಾಂತ ತತ್ವಗಳನ್ನು ಪ್ರತಿಯೊಬ್ಬನೂ ತನ್ನ ನಿತ್ಯ ಜೀವನದಲ್ಲಿ ಹೇಗೆ ಅಳವಡಿಸಿಕೊಂಡು ಬದುಕಬಹುದು ಎಂಬುದನ್ನು ಸರಳವಾಗಿ ಉಪದೇಶಿಸುವ ಜೀವನಧರ್ಮಶಾಸ್ತ್ರವಾಗಿದೆ.

ಹೀಗೆ ಮಹರ್ಷಿ ವಾಲ್ಮೀಕಿ ಹಾಗೂ ಭಗವಾನ್ ವೇದವ್ಯಾಸರು ನೀಡಿದ ಮಹಾಕಾವ್ಯಗಳು, ಸಹಸ್ರಾರು ವರ್ಷಗಳಿಂದ ಮತ್ತು ಮುಂದೆ ಸಹಸ್ರಾರು ವರ್ಷಗಳವರೆಗೆ ಮಾನವರಿಗೆ ಧೈರ್ಯ, ಸಾಂತ್ವನ, ನೀತಿಯನ್ನು ಬೋಧಿಸುವ ಗ್ರಂಥಗಳಾಗಿವೆ ಎನ್ನುವುದು ಈ ಕಗ್ಗದ ಸಾರ.

ಪದಬಂಧ 4724
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ತಂದೆಯ ತಂದೆ (4)
3.ಮನಸ್ಸಿನ ಕೆಚ್ಚು (4)
5.ವಿರಾಟರಾಜನ ಸೇನಾಪತಿ (3)
6.ಕತ್ತು ತಿರಿಗಿಸುತ್ತಾ ಮಾಡಿದ ವ್ಯಾಯಾಮ (4)
7.ಸೇನಾನಾಯಕನಿವನು (4)
9.ಈ ತರ ಬಂದಿರುವ ಏರ್ಪಾಟು (4)
11.ಸಂಭ್ರಮಕ್ಕಿಲ್ಲಿ ಗರ ಬಡಿದಿದೆ! (4)
13.ಕೊನೆಗೆ ಕೈ ಕೊಟ್ಟಿರುವ ಆಳು! (3)
14.ಕಾಲುನಡಿಗೆಯಿಂದ ಸಂಚರಿಸುವವನು (4)
15.ಒಳ್ಳೆಯ ಅಭಿಪ್ರಾಯ (4)

ಮೇಲಿಂದ ಕೆಳಕ್ಕೆ
2.ಹತ್ತು ಹೇಳುತ್ತಲೇ ಹೂಡಿರುವ ಸಂಚು (4)
3.ಹೂವಿನಲ್ಲಿಯ ಸಿಹಿರಸ (4)
4.ಹಣದ ಅಧಿದೇವತೆ (2)
6.ಖೋತಾ ಎಂದರೆ ನವೆಯಾಗುವುದೇ? (3)
8.ಇಲ್ಲಿ ಅಂಧಕಾರವಿದೆ (3)
10.ಈತ ಕೆಟ್ಟ ನಡತೆಯವನು (4)
11.ಸರಸ ಹಾಗೂ ವಿರಸ ಸಮನಾಗಿರುವಿಕೆ (4)
12.ಕೆಟ್ಟ ಕೆಲಸವನ್ನು ಮಾಡಿದವ ತಿರುಗಿದ್ದಾನೆ (2)



4723ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ನಿಷ್ಪಕ್ಷಪಾತ 4.ಆಮೋದ 5.ಮರ 7.ವಿಧ 10.ಕರಿ 13.ಪುಣ್ಯ 15.ಸಿಕತ 16.ಗಗನಚುಂಬಿ
ಮೇಲಿಂದ ಕೆಳಕ್ಕೆ: 1.ಅಕ್ಷರಸ್ಥ 2.ನಿದರ್ಶನ 3.ತಮ 4.ಆರಾಧಕ 6.ರವಿ 8.ಧನವಂತ 9.ಕ್ತರಸಿಬಿ 11.ರಿಪು 12.ಬಡನಡು 14.ಣ್ಯಗ

ಸುಡೊಕು 5110

		6		7		3		
			2		4		1	7
7		1		5		4		
	9		5				7	
1				4	7			3
	6				8		5	
9		5			6			1
				3			8	
6		8	4			9	3	5

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5109 ಸುಡೊಕು

8	5	3	1	6	2	4	9	7
6	1	9	7	5	4	3	2	8
7	4	2	8	9	3	1	6	5
4	6	7	5	3	9	2	8	1
1	2	8	6	4	7	9	5	3
3	9	5	2	1	8	7	4	6
5	7	4	3	2	6	8	1	9
9	3	1	4	8	5	6	7	2
2	8	6	9	7	1	5	3	4

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಬೆಳಿಗ್ಗೆ 7 : ವಚನವಾಣಿ, ಬೆಳಿಗ್ಗೆ 7.30: ದಿನದ ಸೂಕ್ತಿ, ಬೆಳಿಗ್ಗೆ 8: ಪ್ರಜಾವಾಣಿ ವಾರ್ತೆ, ಬುಲೆಟಿನ್, ಬೆಳಿಗ್ಗೆ 9: ಪ್ರಚಲಿತ, ಬೆಳಿಗ್ಗೆ 9.30: ಸಂಪಾದಕೀಯ, ಮಧ್ಯಾಹ್ನ 2: ಪ್ರಜಾವಾಣಿ ವಾರ್ತೆ, ಬುಲೆಟಿನ್, ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್
ಪ್ರಜಾವಾಣಿ ಕನ್ನಡ ಧ್ವನಿ

'ದೇಶದಲ್ಲಿ ಅಘೋಷಿತ ತುರ್ತುಪರಿಸ್ಥಿತಿ'

ಲಖನೌ (ಪಿಟಿಐ): ಮಾಧ್ಯಮಗಳ ಮೇಲಾಗುತ್ತಿರುವ ಸತತ ದಾಳಿಗಳನ್ನು ಗಮನಿಸಿದರೆ ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಹೇರಲಾಗಿದೆ ಎನಿಸುತ್ತದೆ ಎಂದು ಆಮ್ ಆದ್ಮಿ ಪಕ್ಷದ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಭಾನುವಾರ ಆರೋಪಿಸಿದ್ದಾರೆ.

ಆಂಧ್ರ: ಜಿಲ್ಲಾ ಪರಿಷತ್ ಚುನಾವಣೆ ವೈಎಸ್‌ಆರ್ ಕಾಂಗ್ರೆಸ್ ಜಯಭೇರಿ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರಪ್ರದೇಶದಲ್ಲಿ ಆಡಳಿತಾರೂಢ ವೈಎಸ್‌ಆರ್ ಕಾಂಗ್ರೆಸ್ ಪಕ್ಷವು ಮಂಡಲ ಮತ್ತು ಜಿಲ್ಲಾ ಪರಿಷತ್ ಚುನಾವಣೆಯಲ್ಲೂ ಜಯಭೇರಿ ಬಾರಿಸಿದೆ. ಜಿಲ್ಲಾ ಪರಿಷತ್‌ನ ಒಟ್ಟು 553 ಸ್ಥಾನಗಳಲ್ಲಿ 547ಕ್ಕೂ ಹೆಚ್ಚು ಸ್ಥಾನಗಳಲ್ಲಿ ಹಾಗೂ ಮಂಡಲ ಪರಿಷತ್‌ನ ಒಟ್ಟು 8083 ಸ್ಥಾನಗಳಲ್ಲಿ 7284ಕ್ಕೂ ಹೆಚ್ಚು ಸ್ಥಾನಗಳಲ್ಲಿ ವೈಎಸ್‌ಆರ್ ಕಾಂಗ್ರೆಸ್ ಪಕ್ಷ ಜಯಗಳಿಸಿದೆ.

ತೆಲುಗು ದೇಶಂ ಪಕ್ಷಕ್ಕೆ (ಟಿಡಿಪಿ) ಚುನಾವಣೆಯಲ್ಲಿ ಭಾರಿ ಹಿನ್ನಡೆಯಾಗಿದೆ. ಮಾಜಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಪ್ರತಿನಿಧಿಸುವ ಕುಪ್ಪಂ ವಿಧಾನಸಭೆ ಕ್ಷೇತ್ರದಲ್ಲೂ ಟಿಡಿಪಿ ಗೆಲುವು ಸಾಧಿಸಲು ಸಾಧ್ಯವಾಗಿಲ್ಲ.

ಏಪ್ರಿಲ್‌ನಲ್ಲಿ ಈ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲಾಗಿತ್ತು. ಆದರೆ, ಆಂಧ್ರಪ್ರದೇಶ ಹೈಕೋರ್ಟ್ ನೀಡಿದ ಆದೇಶದ ಕಾರಣಕ್ಕೆ ಮತಗಳ ಎಣಿಕೆಯನ್ನು ತಡೆಹಿಡಿಯಲಾಗಿತ್ತು.

ರಾಜ್ಯ ಚುನಾವಣಾ ಆಯೋಗವು ಚುನಾವಣೆ ನಡೆಸುವಾಗ ಸಮರ್ಪಕವಾದ ಪ್ರಕ್ರಿಯೆಗಳನ್ನು ಪಾಲಿಸಿಲ್ಲ ಎಂದು ಟಿಡಿಪಿ ಮತ್ತು ಜನ ಸೇನಾ ಪಕ್ಷಗಳು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದವು. ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಾಲಯವು ಕಳೆದ ವಾರ ಮತ ಎಣಿಕೆ ನಡೆಸಲು ಅವಕಾಶ ಕಲ್ಪಿಸಿ ಆದೇಶ ನೀಡಿತ್ತು. ಹೀಗಾಗಿ, ಭಾನುವಾರ ಮತ ಎಣಿಕೆ ಕೈಗೊಳ್ಳಲಾಯಿತು.

ಈ ಚುನಾವಣೆ ಪ್ರಕ್ರಿಯೆಯಲ್ಲಿ ಯಾವುದೇ ವಿಶ್ವಾಸ ಉಳಿದಿಲ್ಲ. ರಾಜ್ಯ ಚುನಾವಣಾ ಆಯುಕ್ತರು ರಾಜ್ಯ ಸರ್ಕಾರದ ರಬ್ಬರ್ ಸ್ಟ್ಯಾಂಪ್ ಆಗಿದ್ದಾರೆ. ಹೊಸದಾಗಿ ಚುನಾವಣಾ ಅಧಿವೇಶನ ಹೊರಡಿಸಬೇಕು ಎಂದು ಆಗ್ರಹಿಸಿದ್ದ ಚಂದ್ರಬಾಬು ನಾಯ್ಡು ಅವರು, ಮತದಾನ ನಡೆಯುವ ಕೆಲವೇ ದಿನಗಳ ಮುನ್ನ ಪರಿಷತ್ ಚುನಾವಣೆಯಿಂದ ದೂರ ಉಳಿಯುವುದಾಗಿ ಘೋಷಿಸಿದ್ದರು. ಆದರೂ, ಚುನಾವಣಾ ಕಣದಲ್ಲಿ ಟಿಡಿಪಿ ಅಭ್ಯರ್ಥಿಗಳು ಉಳಿದಿದ್ದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪಿಪಿಎಫ್: ಗೊತ್ತಿರಲಿ 5 ವಿಚಾರಗಳು

ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ಷೇರು, ಮ್ಯೂಚುವಲ್ ಫಂಡ್, ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ಹೀಗೆ ಹತ್ತಾರು ಹೊಸ ಮಾದರಿ ಹೂಡಿಕೆಗಳ ನಡುವೆಯೂ ಪಿಪಿಎಫ್ (ಸಾರ್ವಜನಿಕ ಭವಿಷ್ಯ ನಿಧಿ) ಹೆಚ್ಚು ಪ್ರಸ್ತುತ ಅನ್ನಿಸುವಂತಹ ಹೂಡಿಕೆಯಾಗಿ ಗಮನ ಸೆಳೆಯುತ್ತಿದೆ. ಪಿಪಿಎಫ್ ಹೂಡಿಕೆ ಮೊತ್ತಕ್ಕೆ ಕೇಂದ್ರ ಸರ್ಕಾರ ಕೊಡುವ ಖಾತರಿ, ತೆರಿಗೆ ವಿನಾಯಿತಿ, ಬಡ್ಡಿ ಗಳಿಕೆ ಮೇಲೆ ತೆರಿಗೆ ಇಲ್ಲದಿರುವುದು, ಅಲ್ಪ ಮೊತ್ತದ ಹೂಡಿಕೆಗೂ ಅವಕಾಶವಿರುವುದು ಸೇರಿ ಹಲವು ವಿಚಾರಗಳು ಪಿಪಿಎಫ್‌ಅನ್ನು ಆಕರ್ಷಕ ಹೂಡಿಕೆಯಾಗಿಸಿವೆ.

ಅತ್ಯಂತ ಜನಪ್ರಿಯ ಉಳಿತಾಯ ಯೋಜನೆಗಳಲ್ಲಿ ಒಂದು ಎಂದು ಕರೆಸಿಕೊಂಡಿರುವ ಪಿಪಿಎಫ್ ಬಗ್ಗೆ ಎಲ್ಲರೂ ತಿಳಿದಿರಬೇಕಾದ ಕೆಲವು ಅಂಶಗಳತ್ತ ಗಮನಹರಿಸೋಣ.

1. ಕೆಲವು ಸಂದರ್ಭಗಳಲ್ಲಿ ಟಿಡಿಎಸ್ ಅನ್ವಯ: ಪಿಪಿಎಫ್ ಹೂಡಿಕೆಗೆ ಯಾವುದೇ ಹಂತದಲ್ಲೂ ತೆರಿಗೆ ಇಲ್ಲ. ಹೂಡಿಕೆ ಮಾಡುವಾಗ ಸೆಕ್ಷನ್ 80ಸಿ ಅಡಿಯಲ್ಲಿ ತೆರಿಗೆ ವಿನಾಯಿತಿ ಸಿಗುತ್ತದೆ. ಪಿಪಿಎಫ್ ಹೂಡಿಕೆಯಿಂದ ಬರುವ ಬಡ್ಡಿ ಲಾಭಕ್ಕೆ ಯಾವುದೇ ತೆರಿಗೆ ಇಲ್ಲ. ಅವಧಿ ಮುಗಿದ ಬಳಿಕ ಪಡೆಯುವ ಒಟ್ಟು ಮೊತ್ತಕ್ಕೂ ಬಂಡವಾಳ ವೃದ್ಧಿ ತೆರಿಗೆ ಅನ್ವಯಿಸುವುದಿಲ್ಲ. ಹಾಗಾಗಿ ಪಿಪಿಎಫ್‌ಅನ್ನು 'ವಿನಾಯಿತಿ, ವಿನಾಯಿತಿ ಮತ್ತು ವಿನಾಯಿತಿ' (Exempt, Exempt, Exempt) ಇರುವ ಹೂಡಿಕೆ ಯೋಜನೆ ಎಂದು ಗುರುತಿಸಲಾಗುತ್ತದೆ. ಈ ವಿನಾಯಿತಿಗಳು ಮೆಚ್ಯೂರಿಟಿವರೆಗೆ ಖಾತೆಯನ್ನು ಚಾಲ್ತಿಯಲ್ಲಿಟ್ಟುಕೊಂಡವರಿಗೆ ಮಾತ್ರವೇ ಅಲ್ಲ, ಹೂಡಿಕೆ ಹಣವನ್ನು ಭಾಗಶಃ ಹಿಂಪಡೆಯುವವರಿಗೆ ಮತ್ತು ವಿವಿಧ ಕಾರಣಗಳಿಂದಾಗಿ ಅವಧಿಗೆ ಮುನ್ನ ಖಾತೆ ಸ್ಥಗಿತಗೊಳಿಸುವವರಿಗೂ ಅನ್ವಯಿಸುತ್ತದೆ.

ಆದರೆ ಕಳೆದ ವರ್ಷ ಹೊಸ ನಿಯಮವೊಂದನ್ನು ಜಾರಿಗೆ ತರಲಾಗಿದೆ. ₹ 20 ಲಕ್ಷ ಮೇಲ್ಪಟ್ಟು ಹೂಡಿಕೆ ಹಣವನ್ನು ಭಾಗಶಃ ಹಿಂಪಡೆಯುವವರು ಹಿಂದಿನ ಮೂರು ವರ್ಷಗಳಲ್ಲಿ ತೆರಿಗೆ ವಿವರ ಸಲ್ಲಿಸದೇ ಇದ್ದಲ್ಲಿ ಶೇ 2ರಿಂದ ಶೇ 5ರಷ್ಟು ಟಿಡಿಎಸ್ ಪಾವತಿಸಬೇಕಾಗುತ್ತದೆ.

2. ಅವಧಿ ವಿಸ್ತರಣೆ ಹೇಗೆ?: ಪಿಪಿಎಫ್ ಹೂಡಿಕೆ ಮಾಡಿ 15 ವರ್ಷಗಳನ್ನು ಪೂರೈಸಿದ ನಂತರ ಒಟ್ಟು ಹಣ ಹಿಂಪಡೆದು ಖಾತೆ ಮುಚ್ಚಬಹುದು. ಒಂದೊಮ್ಮೆ, ಹೂಡಿಕೆ ಅವಧಿ ವಿಸ್ತರಿಸುತ್ತೇವೆ ಎಂದರೆ ಐದು ವರ್ಷಗಳಿಗೆ ವಿಸ್ತರಿಸಬಹುದು. ಒಮ್ಮೆ ವಿಸ್ತರಿಸಿದ ಬಳಿಕ ಎಷ್ಟು ಬಾರಿಯಾದರೂ ಈ ರೀತಿ ಐದು ವರ್ಷಗಳ ಅವಧಿಗೆ ಮರುವಿಸ್ತರಣೆ ಮಾಡಿಕೊಳ್ಳಲು ಅವಕಾಶವಿದೆ. ಆದರೆ ಪಿಪಿಎಫ್ ಖಾತೆ ವಿಸ್ತರಿಸಲು ಮೆಚ್ಯೂರಿಟಿ ಆದ ದಿನದಿಂದ ಒಂದು ವರ್ಷದ ಒಳಗಾಗಿ ಅರ್ಜಿ ಸಲ್ಲಿಸಬೇಕು. ವಿಸ್ತರಣೆ ಅವಧಿಯಲ್ಲಿ ನೀವು ಪಿಪಿಎಫ್ ಖಾತೆಗೆ ಹೂಡಿಕೆ ಮಾಡಬೇಕೋ ಬೇಡವೋ ಎನ್ನುವ ಆಯ್ಕೆಯನ್ನು ಮಾಡಬಹುದು. ಹೂಡಿಕೆ ಮಾಡಬೇಕು ಎಂದಾದರೆ ಫಾರಂ ಎಚ್ ಸಲ್ಲಿಸಬೇಕು.

3. ಅಪ್ರಾಪ್ತ ಮಗುವಿನ ಹೆಸರಲ್ಲಿ ಖಾತೆ: ಅಪ್ರಾಪ್ತ ಮಗುವಿನ ಹೆಸರಿನಲ್ಲಿ ಪಿಪಿಎಫ್ ಖಾತೆಯನ್ನು ತಂದೆ ಅಥವಾ ತಾಯಿ ಆರಂಭಿಸಬಹುದು. ಆದರೆ ತಂದೆ- ತಾಯಿ ಇಬ್ಬರೂ ಅಪ್ರಾಪ್ತ ಮಗುವಿನ ಹೆಸರಲ್ಲಿ ಒಂದೊಂದು ಪ್ರತ್ಯೇಕ ಖಾತೆ ತೆರೆಯುವಂತಿಲ್ಲ. ನೀವು ಒಂದು ಪಿಪಿಎಫ್ ಖಾತೆ ಹೊಂದಿದ್ದು ಅಪ್ರಾಪ್ತ ಮಗುವಿನ ಹೆಸರಿನಲ್ಲಿ ಒಂದು ಪಿಪಿಎಫ್ ಖಾತೆ ಆರಂಭಿಸಿದರೆ ಅದರ ಒಟ್ಟು ವಾರ್ಷಿಕ ಹೂಡಿಕೆ ಮಿತಿ ₹ 1.5 ಲಕ್ಷ ಮಾತ್ರ. ಅಜ್ಜ-ಅಜ್ಜಿ ತಮ್ಮ ಮೊಮ್ಮಕ್ಕಳ ಹೆಸರಿನಲ್ಲಿ ಪಿಪಿಎಫ್ ಖಾತೆ ತೆರೆಯುವಂತಿಲ್ಲ. ಒಂದೊಮ್ಮೆ ಮಗುವಿನ ತಂದೆ-ತಾಯಿ ಮೃತಪಟ್ಟಿದ್ದು, ಅಜ್ಜ-ಅಜ್ಜಿ ಕಾನೂನಾತ್ಮಕ ಪೋಷಕರಾಗಿದ್ದರೆ ಮಗುವಿನ ಹೆಸರಿನಲ್ಲಿ ಪಿಪಿಎಫ್ ಖಾತೆ ಆರಂಭಿಸಬಹುದು.

4. ಪಿಪಿಎಫ್ ಹಣದಿಂದ ಸಾಲ ಕಟ್ಟಿ ಎನ್ನುವಂತಿಲ್ಲ!: ಒಂದೊಮ್ಮೆ ನೀವು ಸಾಲ ಪಡೆದಿದ್ದು ಸಾಲ ಮರುಪಾವತಿ ಸಾಧ್ಯವಾಗದಿದ್ದಲ್ಲಿ ನಿಮ್ಮ ಪಿಪಿಎಫ್ ಖಾತೆಯಲ್ಲಿ ಇರುವ ಹಣದಿಂದ ಸಾಲ ಮರುಪಾವತಿ ಮಾಡುವಂತೆ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳು ಕೇಳುವಂತಿಲ್ಲ. ಪಿಪಿಎಫ್ ಹಣದ ಮೇಲೆ ಖಾತೆದಾರನಿಗಷ್ಟೇ ಸಂಪೂರ್ಣ ಹಕ್ಕಿರುತ್ತದೆ. ಆದಾಯ ತೆರಿಗೆ ಪಾವತಿ ವಿಚಾರವಾಗಿ ತಕರಾರು ಬಂದಲ್ಲಿ ಮಾತ್ರ ಆದಾಯ ತೆರಿಗೆ ಅಧಿಕಾರಿಗಳು ಪಿಪಿಎಫ್ ಖಾತೆಯಲ್ಲಿರುವ ಹಣ ಜಪ್ತಿ ಮಾಡಬಹುದು.

5. ಮೆಚ್ಯೂರಿಟಿ ಅವಧಿ: ಪಿಪಿಎಫ್ ಖಾತೆಯ ಮೆಚ್ಯೂರಿಟಿ ಅವಧಿ 15 ವರ್ಷ ಎಂದು ಬಹುತೇಕರು ತಿಳಿದಿದ್ದಾರೆ. ಆದರೆ ಪಿಪಿಎಫ್ ಮೆಚ್ಯೂರಿಟಿಗೆ 16 ವರ್ಷಗಳು ಬೇಕಾಗುತ್ತವೆ. ಉದಾಹರಣೆಗೆ, 25 ಜುಲೈ 2017ರಲ್ಲಿ ನೀವು ಮೊದಲ ಕಂತಿನ ಪಿಪಿಎಫ್ ಹೂಡಿಕೆ ಮಾಡಿದಿರಿ ಎಂದಿಟ್ಟುಕೊಳ್ಳಿ. ಹೀಗಿದ್ದರೂ ಸಹ, ಅವಧಿ ಲೆಕ್ಕಹಾಕುವಾಗ ಆ ಹಣಕಾಸು ವರ್ಷದ ಕೊನೆಯಿಂದ 15 ವರ್ಷಗಳು ಎಂದು ಲೆಕ್ಕಾಚಾರ ಮಾಡಲಾಗುತ್ತದೆ. ಆದ್ದರಿಂದ ಏಪ್ರಿಲ್ 1, 2033ಕ್ಕೆ ಇಲ್ಲಿ ಹೂಡಿಕೆ ಹಣ ಮೆಚ್ಯೂರಿಟಿ ಆಗುತ್ತದೆ. ಈ ಲೆಕ್ಕಾಚಾರದಂತೆ 16 ವರ್ಷಗಳ ವರೆಗೆ ನೀವು ಹೂಡಿಕೆ ಮಾಡಿರುತ್ತೀರಿ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ., ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಷೇರುಪೇಟೆ

ಹೊಸ ದಾಖಲೆ ಬರೆದ ಸೂಚ್ಯಂಕಗಳು

ಷೇರುಪೇಟೆ ಸೂಚ್ಯಂಕಗಳು ಹೊಸ ದಾಖಲೆ ಬರೆದಿವೆ. ವಾರದ ಅವಧಿಯ ಲೆಕ್ಕಾಚಾರ ತೆಗೆದುಕೊಂಡರೆ 59,015 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ಶೇ 1.21ರಷ್ಟು ಹೆಚ್ಚಳ ಕಂಡಿದ್ದರೆ, 17,585 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ನಿಫ್ಟಿ ಶೇ 1.24ರಷ್ಟು ಜಿಗಿದಿದೆ.

ಗ್ರಾಹಕ ಹಣದುಬ್ಬರ ಪ್ರಮಾಣ ನಿಯಂತ್ರಣದಲ್ಲಿ ಇರುವುದು, ಸೊರಗಿರುವ ದೂರಸಂಪರ್ಕ ವಲಯಕ್ಕೆ ಪ್ಯಾಕೇಜ್ ಘೋಷಣೆ, ವಿದ್ಯುತ್ ಚಾಲಿತ ಮತ್ತು ಹೈಡ್ರೋಜನ್ ಇಂಧನದ ವಾಹನಗಳ ಉತ್ಪಾದನೆಗೆ ಸರ್ಕಾರ ಪ್ರೋತ್ಸಾಹಧನ ಘೋಷಿಸಿರುವುದು ಸೇರಿ ಹಲವು ಅಂಶಗಳು ಸೂಚ್ಯಂಕಗಳ ಜಿಗಿತಕ್ಕೆ ಕಾರಣ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 6,545.51 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 2,292.49 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 13ರಷ್ಟು ಗಳಿಸಿದೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 5ರಷ್ಟು ಹೆಚ್ಚಳವಾಗಿದೆ. ನಿಫ್ಟಿ ಲೋಹ, ರಿಯಲ್ ಎಸ್ಟೇಟ್ ಸೂಚ್ಯಂಕಗಳು ತಲಾ ಶೇ 1ರಷ್ಟು ಕುಸಿದಿವೆ.

ನಿಫ್ಟಿಯಲ್ಲಿ ಇಂಡಸ್ ಇಂಡ್ ಬ್ಯಾಂಕ್ ಶೇ 13.1ರಷ್ಟು, ಕೋಟಕ್ ಮಹೀಂದ್ರ ಬ್ಯಾಂಕ್ ಶೇ 10.5ರಷ್ಟು, ಐಟಿಸಿ ಶೇ 8.7ರಷ್ಟು, ಎನ್‌ಟಿಪಿಸಿ ಶೇ 8.0ರಷ್ಟು, ಏರ್‌ಟೆಲ್ ಶೇ 6.1ರಷ್ಟು, ಕೋಲ್ ಇಂಡಿಯಾ ಶೇ 5.4ರಷ್ಟು, ಎಚ್‌ಸಿಎಲ್ ಟೆಕ್ ಶೇ 5.4ರಷ್ಟು, ಎಸ್‌ಬಿಐ ಶೇ 5ರಷ್ಟು, ಹಿರೋ ಮೋಟೊಕಾರ್ಪ್ ಶೇ 4.8ರಷ್ಟು ಮತ್ತು ಇಂಡಿಯನ್ ಆಯಿಲ್ ಶೇ 4.8ರಷ್ಟು ಹೆಚ್ಚಳವಾಗಿವೆ. ಭಾರತ್ ಪೆಟ್ರೋಲಿಯಂ ಶೇ 2.9ರಷ್ಟು, ಹಿಂದೂಸ್ಥಾನ್ ಯುನಿಲಿವರ್ 3.2ರಷ್ಟು, ಟಾಟಾ ಸ್ಟೀಲ್ 4.2ರಷ್ಟು, ಅಲ್ಟ್ರಾಟೆಕ್ ಶೇ 2.9ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ಜಾಗತಿಕವಾಗಿ ಸಾಕಷ್ಟು ಬೆಳವಣಿಗೆಗಳು ಪ್ರಭಾವ ಬೀರುವ ಸಾಧ್ಯತೆ ಇದೆ. ಫೆಡರಲ್ ಮುಕ್ತ ಮಾರುಕಟ್ಟೆ ಸಮಿತಿ (ಎಫ್‌ಒಎಂಸಿ) ಸಭೆ ಸೆಪ್ಟೆಂಬರ್ 21-22ರಂದು ನಡೆಯಲಿದ್ದು, ಅಲ್ಲಿ ತೆಗೆದುಕೊಳ್ಳುವ ನಿರ್ಣಯಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಬ್ಯಾಂಕ್ ಆಫ್ ಇಂಗ್ಲೆಂಡ್ ಮತ್ತು ಬ್ಯಾಂಕ್ ಆಫ್ ಜಪಾನ್ ಸಹ ಹಣಕಾಸು ಸಮಿತಿ ಸಭೆ ನಡೆಸಲಿದ್ದು, ಇದಕ್ಕೂ ಮಾರುಕಟ್ಟೆ ಪ್ರತಿಕ್ರಿಯಿಸಲಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹465

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಸಂಕ್ಷಿಪ್ತ ಸುದ್ದಿ

ವಿದೇಶಿ ಸಾಲ: ಆಂಧ್ರದ ವಿವರಣೆ ಕೇಳಿದ ಕೇಂದ್ರ

ಅಮರಾವತಿ (ಪಿಟಿಐ): ಬಾಹ್ಯ ಅನುದಾನಿತ ಯೋಜನೆಗಳಿಗಾಗಿ (ಇಎಪಿ) ವಿದೇಶಿ ಸಂಸ್ಥೆಗಳಿಂದ ಸಾಲವಾಗಿ ಪಡೆದಿರುವ ₹ 960 ಕೋಟಿ ಹಾಗೂ ಈ ಪೈಕಿ ಬಳಕೆಯಾಗದೇ ಉಳಿದಿರುವ ಮೊತ್ತದ ಪ್ರಮಾಣ ಕುರಿತಂತೆ ಸಮಗ್ರ ವರದಿಯನ್ನು ಸಲ್ಲಿಸಬೇಕು ಎಂದು ಕೇಂದ್ರ ಸರ್ಕಾರ ಆಂಧ್ರ ಪ್ರದೇಶ ಸರ್ಕಾರಕ್ಕೆ ಸೂಚಿಸಿದೆ.

ಒಂದೆಡೆ, ಆಗಿರುವ ಕಾಮಗಾರಿಗಳ ಸಂಬಂಧ ಗುತ್ತಿಗೆದಾರರಿಗೆ ಕೋಟ್ಯಂತರ ರೂಪಾಯಿ ಬಾಕಿ ಉಳಿದಿದ್ದು, ಕಾಮಗಾರಿಯನ್ನು ಜಾರಿಗೊಳಿಸುತ್ತಿರುವ ಇಲಾಖೆಗಳಿಗೆ ಈ ಕುರಿತಂತೆ ಅಸ್ಪಷ್ಟತೆ ಇದೆ. ಇನ್ನೊಂದೆಡೆ, ಕಾಮಗಾರಿಗಳ ಅನುಷ್ಠಾನ ವಿಳಂಬ ಹಾಗೂ ಬಾಕಿ ಪಾವತಿಸಲಾಗದ ಕಾರಣ ರಾಜ್ಯವು ಈ ಯೋಜನೆಗಳಿಗಾಗಿ ಹೊಸದಾಗಿ ವಿದೇಶಿ ಸಂಸ್ಥೆಗಳಿಂದ ಸಾಲವನ್ನು ಪಡೆಯಲಾಗದ ಸ್ಥಿತಿಯಲ್ಲಿದೆ.

ಚೀನಾದಲ್ಲಿ ದೋಣಿ ಮುಳುಗಿ 9 ಸಾವು

ಬೀಜಿಂಗ್: ವಾಯವ್ಯ ಚೀನಾದ ಗಿಝೌವ್ ಪ್ರಾಂತ್ಯದಲ್ಲಿ ಪ್ರಯಾಣಿಕರ ದೋಣಿಯೊಂದು ಮುಳುಗಿ ಕನಿಷ್ಠ 9 ಮಂದಿ ಸಾವಿಗೀಡಾಗಿದ್ದಾರೆ ಮತ್ತು 6 ಮಂದಿ ನಾಪತ್ತೆಯಾಗಿದ್ದಾರೆ.

ಜಾಂಗ್ಕೆ ನದಿಯಲ್ಲಿ ಈ ದುರ್ಘಟನೆ ನಡೆದಿದೆ. 40 ಜನರು ಪ್ರಯಾಣಿಸಬಹುದಾದ ಸಾಮರ್ಥ್ಯವನ್ನು ದೋಣಿ ಹೊಂದಿತ್ತು. ದೋಣಿ ಮುಳುಗಿದ ಸಂದರ್ಭದಲ್ಲಿದ್ದ ಪ್ರಯಾಣಿಕರ ನಿಖರ ಸಂಖ್ಯೆಯ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ.

9 ಮೃತದೇಹಗಳನ್ನು ಪತ್ತೆ ಮಾಡಲಾಗಿದೆ. 39 ಜನರನ್ನು ರಕ್ಷಿಸಿದ್ದು ತನಿಖೆ ಕೈಗೊಳ್ಳಲಾಗಿದೆ ಎಂದು ವರದಿಯಾಗಿದೆ.

ನಿಯಮ ರೂಪಿಸುವಲ್ಲಿ ರಾಜ್ಯಗಳಿಂದ ವಿಳಂಬ

ಕಾರ್ಮಿಕ ಸಂಹಿತೆ ಅನುಷ್ಠಾನ ಅನುಮಾನ

ನವದೆಹಲಿ (ಪಿಟಿಐ): ಹಲವು ರಾಜ್ಯಗಳು ನಿಯಮ ರೂಪಿಸುವ ಕೆಲಸವನ್ನು ತ್ವರಿತವಾಗಿ ಮಾಡುತ್ತಿಲ್ಲದ ಕಾರಣ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಹಾಲಿ ಹಣಕಾಸು ವರ್ಷದಲ್ಲಿ ಅನುಷ್ಠಾನಕ್ಕೆ ತರುವ ಸಾಧ್ಯತೆ ಕಡಿಮೆ ಎಂದು ಮೂಲಗಳು ತಿಳಿಸಿದೆ. ಉತ್ತರ ಪ್ರದೇಶ ವಿಧಾನಸಭೆಗೆ ಚುನಾವಣೆ ಹತ್ತಿರವಾಗುತ್ತಿರುವುದು ಕೂಡ ಇದಕ್ಕೆ ಒಂದು ಕಾರಣ ಎನ್ನಲಾಗಿದೆ.

ಈ ನಾಲ್ಕು ಸಂಹಿತೆಗಳನ್ನು ಅನುಷ್ಠಾನಕ್ಕೆ ತಂದರೆ ನೌಕರರಿಗೆ ಕೈಗೆ ಸಿಗುವ ವೇತನದ ಮೊತ್ತ ಕಡಿಮೆ ಆಗುತ್ತದೆ, ಕಂಪನಿಗಳು ನೌಕರರ ಪಿ.ಎಫ್. ಖಾತೆಗೆ ಹೆಚ್ಚಿನ ಮೊತ್ತವನ್ನು ಕೊಡುಗೆಯಾಗಿ ನೀಡಬೇಕಾಗುತ್ತದೆ. 'ಕೇಂದ್ರ ಕಾರ್ಮಿಕ ಸಚಿವಾಲಯವು ನಿಯಮಗಳನ್ನು ರೂಪಿಸಿ ಆಗಿದೆ. ಆದರೆ ರಾಜ್ಯಗಳ ಕಡೆಯಿಂದ ಈ ಕೆಲಸ ವೇಗವಾಗಿ ಆಗುತ್ತಿಲ್ಲ. ಅಲ್ಲದೆ, ರಾಜಕೀಯ ಕಾರಣಗಳಿಂದಾಗಿ ಈ ಸಂಹಿತೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಸರ್ಕಾರಕ್ಕೆ ಹೆಚ್ಚಿನ ಆಸಕ್ತಿ ಇಲ್ಲ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಈ ಸಂಹಿತೆಗಳನ್ನು ಸಂಸತ್ತು ಅನುಮೋದಿಸಿದೆ. ಇವುಗಳನ್ನು ಅನುಷ್ಠಾನಕ್ಕೆ ತರಬೇಕು ಎಂದಾದರೆ ಇವುಗಳಿಗೆ ಸಂಬಂಧಿಸಿದ ನಿಯಮಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅಧಿಸೂಚನೆಯಲ್ಲಿ ಪ್ರಕಟಿಸಬೇಕು. ಈ ಸಂಹಿತೆಗಳು ಜಾರಿಗೆ ಬಂದರೆ ನೌಕರರ ಮೂಲವೇತನ ಲೆಕ್ಕಹಾಕುವ ಬಗೆಯಲ್ಲಿ ಬದಲಾವಣೆ ಆಗುತ್ತದೆ. ಒಟ್ಟು ವೇತನದ ಶೇಕಡ 50ರಷ್ಟು ಮೂಲವೇತನವೇ (ಮೂಲ ವೇತನ ಹಾಗೂ ಡಿ.ಎ.) ಆಗಿರುತ್ತದೆ.

ಸ್ವಿಗ್ಗಿ, ಜೊಮ್ಯಾಟೊ ಸೇವೆಗೆ ಜಿಎಸ್‌ಟಿ: ಗ್ರಾಹಕರಿಗಿಲ್ಲ ಹೊರೆ

• ವಿಶ್ವನಾಥ ಎಸ್.

ಬೆಂಗಳೂರು: ಆಹಾರ ವಸ್ತುಗಳನ್ನು ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಿಂದ ಗ್ರಾಹಕರ ಮನೆ ಬಾಗಿಲಿಗೆ ತಲುಪಿಸುವ ಸ್ವಿಗ್ಗಿ, ಜೊಮ್ಯಾಟೊದಂತಹ ಕಂಪನಿಗಳಿಗೆ ಜಿಎಸ್‌ಟಿ ವ್ಯವಸ್ಥೆಯ ಅಡಿ ತೆರಿಗೆ ವಿಧಿಸುವುದರಿಂದ ಗ್ರಾಹಕರಿಗೆ ಹೆಚ್ಚಿನ ಹೊರೆ ಆಗದು ಎಂದು ತೆರಿಗೆ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಆಹಾರ ವಸ್ತುಗಳನ್ನು ಗ್ರಾಹಕರಿಗೆ ತಲುಪಿಸುವ ಕಂಪನಿಗಳು ಜನವರಿ 1ರಿಂದ ಗ್ರಾಹಕರಿಂದ ಶೇ 5ರಷ್ಟು ತೆರಿಗೆ ಸಂಗ್ರಹಿಸಿ ಅದನ್ನು ಸರ್ಕಾರಕ್ಕೆ ಪಾವತಿಸಬೇಕು ಎಂಬ ತೀರ್ಮಾನವನ್ನು ಜಿಎಸ್‌ಟಿ ಮಂಡಳಿ ಕಳೆದ ವಾರ ತೆಗೆದುಕೊಂಡಿದೆ. ಸದ್ಯ ರೆಸ್ಟೋರೆಂಟ್‌ಗಳೇ ತೆರಿಗೆ ಪಾವತಿಸುತ್ತಿವೆ.

ಆಹಾರ ವಸ್ತುಗಳಿಗೆ ಗ್ರಾಹಕರು ಕೊಡುವ ಮೊತ್ತದಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ. ಈಗ, ಆಹಾರ ವಸ್ತುಗಳನ್ನು ಖರೀದಿಸಿದ್ದಕ್ಕೆ ರೆಸ್ಟೋರೆಂಟ್ ನೀಡುವ ಬಿಲ್‌ಅನ್ನು ಸ್ವಿಗ್ಗಿ, ಜೊಮ್ಯಾಟೊದಂತಹ ಕಂಪನಿಗಳು ಗ್ರಾಹಕರಿಗೆ ನೀಡುತ್ತಿವೆ. ಇನ್ನುಮುಂದೆ ಈ ಕಂಪನಿಗಳೇ ಆಹಾರ ವಸ್ತುಗಳಿಗೆ ಬಿಲ್ ನೀಡಿ ಗ್ರಾಹಕರಿಂದ ತೆರಿಗೆ ಸಂಗ್ರಹಿಸುತ್ತವೆ. ಆಹಾರ ವಿತರಣಾ ಸೇವೆಯನ್ನು ವ್ಯವಸ್ಥಿತಗೊಳಿಸಲು ಇದನ್ನು ಜಾರಿಗೆ ತರಲಾಗುತ್ತಿದೆ. ಕೆಲವು ಹೋಟೆಲ್‌ಗಳು ತೆರಿಗೆ ತಪ್ಪಿಸುವುದನ್ನು ತಡೆಯಲು ಇದು ನೆರವಾಗುತ್ತದೆ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ತೆರಿಗೆ ತಜ್ಞ ಬಿ.ಟಿ. ಮನೋಹರ್ ಮಾಹಿತಿ ನೀಡಿದರು.

ಜಿಎಸ್‌ಟಿ ದರ, ಸರ್ಕಾರಕ್ಕೆ ಬರುವ ವರಮಾನ ಯಾವುದರಲ್ಲಿಯೂ ವ್ಯತ್ಯಾಸ ಆಗುವುದಿಲ್ಲ. ಹಲವರು ಜಿಎಸ್‌ಟಿ ವಿಧಿಸದೇ ಆಹಾರ ವಸ್ತುಗಳನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅಂಥವರನ್ನು ಪತ್ತೆ ಮಾಡುವುದು ಕಷ್ಟ. ಹೀಗಾಗಿ ಜಿಎಸ್‌ಟಿ ಸಂಗ್ರಹಿಸಿ ಸರ್ಕಾರಕ್ಕೆ ಪಾವತಿಸುವ ಹೊಣೆಗಾರಿಕೆಯನ್ನು ವಿತರಣಾ ಕಂಪನಿಗಳಿಗೇ ನೀಡುವ ನಿರ್ಧಾರಕ್ಕೆ ಬಂದಿರಬಹುದು ಎಂದು ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ ಡಿ.ಮುರಳೀಧರ್ 'ಪ್ರಜಾವಾಣಿ'ಗೆ ತಿಳಿಸಿದರು.

'ವಾಜೆಯಿಂದ ದೇಶಮುಖ್ ₹4.7 ಕೋಟಿ ಪಡೆದಿರುವುದು ಮೇಲ್ನೋಟಕ್ಕೆ ಸಾಬೀತು'

ಮುಂಬೈ (ಪಿಟಿಐ): 'ಮಾಜಿ ಪೊಲೀಸ್ ಅಧಿಕಾರಿ ಸಚಿನ್ ವಾಜೆ ವಿರುದ್ಧದ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಿರುವಂತೆ ಹಣ ಹಸ್ತಾಂತರಗೊಂಡಿರುವ ಜಾಡನ್ನು ಗಮನಿಸಿದಾಗ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರು ವಾಜೆ ಹಾಗೂ ಅವರ ಆಪ್ತ ಕುಂದನ್ ಶಿಂಧೆ ಅವರಿಂದ ₹ 4.7 ಕೋಟಿ ಪಡೆದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ' ಎಂದು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ವಿಶೇಷ ಕೋರ್ಟ್ ಅಭಿಪ್ರಾಯಪಟ್ಟಿದೆ.

ಜಾರಿ ನಿರ್ದೇಶನಾಲಯ (ಇ.ಡಿ) ದೇಶಮುಖ್ ವಿರುದ್ಧ ಸೆ.16ರಂದು ಸಲ್ಲಿಸಿರುವ ಚಾರ್ಜ್‌ಶೀಟ್‌ನಲ್ಲಿನ ಅಂಶಗಳನ್ನು ಗಮನಿಸಿದ ವಿಶೇಷ ನ್ಯಾಯಾಧೀಶ ಎಂ.ಜಿ.ದೇಶಪಾಂಡೆ ಶನಿವಾರ ಈ ಅಭಿಪ್ರಾಯ ವ್ಯಕ್ತಪಡಿಸಿದರು.

'ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಲಾಗಿರುವ ಹೇಳಿಕೆಗಳು ಹಾಗೂ ಹಣದ ಹರಿವಿನ ಜಾಡನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ದೇಶಮುಖ್ ಅವರು ₹ 4.7 ಕೋಟಿ ಪಡೆದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ'.

ಪುತ್ರ ಹೃಷಿಕೇಶ್ ದೇಶಮುಖ್ ಸೂಚನೆ ಮೇರೆಗೆ ಅನಿಲ್ ದೇಶಮುಖ್ ಅವರು ಈ ಹಣವನ್ನು 'ಹವಾಲಾ' ಮಾರ್ಗದ ಮೂಲಕ ಸುರೇಂದ್ರ ಜೈನ್ ಹಾಗೂ ವೀರೇಂದ್ರ ಜೈನ್ ಅವರ ಖಾತೆಗೆ ವರ್ಗಾವಣೆ ಮಾಡಿದ್ದಾರೆ. ನಂತರ, ಕೇವಲ ದಾಖಲೆಗಳಲ್ಲಿ ಮಾತ್ರ ಇರುವ ಕಂಪನಿಗಳ ಮೂಲಕ ಈ ಹಣವನ್ನು ದೇಶಮುಖ್ ಒಡೆತನದ ಶ್ರೀ ಸಾಯಿ ಶಿಕ್ಷಣ ಸಂಸ್ಥೆಯ ಖಾತೆಗಳಲ್ಲಿ ಜಮೆ ಮಾಡಲಾಗಿದೆ' ಎಂದೂ ಕೋರ್ಟ್ ಹೇಳಿದೆ.

'ಅಕ್ರಮ ಹಣ ವರ್ಗಾವಣೆ ಕಾಯ್ದೆಯಡಿ ಆರೋಪಿಗಳ ವಿರುದ್ಧ ತನಿಖೆ ಮುಂದುವರಿಸಲು ಮೇಲ್ನೋಟಕ್ಕೆ ಸಾಕಷ್ಟು ಆಧಾರಗಳಿವೆ' ಎಂದೂ ಕೋರ್ಟ್ ಹೇಳಿದೆ. ಹೃಷಿಕೇಶ್, ಸುರೇಂದ್ರ ಜೈನ್ ಹಾಗೂ ವೀರೇಂದ್ರ ಜೈನ್ ಸಹ ಈ ಪ್ರಕರಣದ ಆರೋಪಿಗಳಾಗಿದ್ದಾರೆ.

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹289-491
ದ್ವಿತಳಿ (ಬಿ.ವಿ)	₹318-566

ಸಣ್ಣ ಕಾರುಗಳಿಗೂ ಬೇಕು ಆರು ಏರ್‌ಬ್ಯಾಗ್: ಗಡ್ಕರಿ

ನವದೆಹಲಿ (ಪಿಟಿಐ): ಕೆಳಮಧ್ಯಮ ವರ್ಗದ ಜನ ಹೆಚ್ಚಾಗಿ ಖರೀದಿಸುವ ಸಣ್ಣ ಕಾರುಗಳಲ್ಲಿ ಕೂಡ ಅಗತ್ಯ ಸಂಖ್ಯೆಯಲ್ಲಿ ಏರ್‌ಬ್ಯಾಗ್‌ಗಳು ಇರಬೇಕು ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದರು. ಆಟೊಮೊಬೈಲ್ ಕಂಪನಿಗಳು ಶ್ರೀಮಂತರು ಮಾತ್ರ ಖರೀದಿಸುವ ದೊಡ್ಡ ಕಾರುಗಳಲ್ಲಷ್ಟೇ ಎಂಟು ಏರ್‌ಬ್ಯಾಗ್‌ಗಳನ್ನು ಅಳವಡಿಸುತ್ತಿರುವುದು ಏಕೆ ಎಂದು ಪ್ರಶ್ನಿಸಿದರು.

ಜನರ ಸುರಕ್ಷತೆಯ ದೃಷ್ಟಿಯಿಂದ ತಾವು ಸಣ್ಣ ಕಾರುಗಳಲ್ಲಿ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಏರ್ ಬ್ಯಾಗ್‌ಗಳು ಇರಬೇಕು ಎಂದು ಒತ್ತಾಯಿಸುತ್ತಿರುವುದಾಗಿ ಹೇಳಿದರು. ಹೆಚ್ಚಿನ ತೆರಿಗೆ, ಸುರಕ್ಷತೆ ಮತ್ತು ಅನಿಲ ಹೊರಸೂಸುವಿಕೆಗೆ ಸಂಬಂಧಿಸಿದಂತೆ ಇರುವ ಕಠಿಣ ನಿಯಮಗಳು ವಾಹನಗಳನ್ನು ದುಬಾರಿ ಆಗಿಸಿವೆ ಎಂದು ಆಟೊಮೊಬೈಲ್ ಉದ್ದಿಮೆಯು ಕಳವಳ ವ್ಯಕ್ತಪಡಿಸಿರುವ ಹೊತ್ತಿನಲ್ಲಿಯೇ ಗಡ್ಕರಿ ಅವರು ಈ ಮಾತು ಹೇಳಿದ್ದಾರೆ.

ಕೆಳಮಧ್ಯಮ ವರ್ಗದ ಜನ ಸಣ್ಣ ಕಾರುಗಳನ್ನು ಹೆಚ್ಚಾಗಿ ಖರೀದಿಸುತ್ತಾರೆ. ಅವರು ಖರೀದಿಸುವ ಕಾರುಗಳಲ್ಲಿ ಏರ್‌ಬ್ಯಾಗ್‌ಗಳು ಇರದಿದ್ದರೆ ಅಪಘಾತ ಆದಾಗ ಸಾವು ಸಂಭವಿಸಬಹುದು. ಹಾಗಾಗಿ, ಎಲ್ಲ ಮಾದರಿಗಳ ಕಾರುಗಳಲ್ಲಿಯೂ ಕನಿಷ್ಠ ಆರು ಏರ್‌ಬ್ಯಾಗ್‌ಗಳು ಇರುವಂತೆ ಆಟೊಮೊಬೈಲ್ ಕಂಪನಿಗಳು ನೋಡಿಕೊಳ್ಳಬೇಕು ಎಂದು ಗಡ್ಕರಿ ಮನವಿ ಮಾಡಿದರು.

ಸಣ್ಣ ಕಾರುಗಳಲ್ಲಿ ಹೆಚ್ಚುವರಿಯಾಗಿ ಏರ್‌ಬ್ಯಾಗ್‌ಗಳನ್ನು ಅಳವಡಿಸುವುದರಿಂದ ಕಾರುಗಳ ಬೆಲೆ ₹ 3,000ದಿಂದ ₹ 4,000ದಷ್ಟು ಹೆಚ್ಚಾಗಬಹುದು ಎಂಬುದನ್ನು ಒಪ್ಪಿಕೊಂಡ ಗಡ್ಕರಿ, 'ರಸ್ತೆ ಅಪಘಾತ ಸಂಭವಿಸಿದರೆ ಬಡವರಿಗೆ ಕೂಡ ರಕ್ಷಣೆ ಇರಬೇಕು' ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಹೇಳಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business to Business
Finance
ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್:7837015557

ಉದ್ಯೋಗಾವಕಾಶ
Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

★ಮನೆಯಿಂದಲೇ ಮೆಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ. ತರಬೇತಿಗಾಗಿ: ಬೆಂಗಳೂರು.9060472077, ಶಿವಮೊಗ್ಗ.9008012895

WORK FROM Home No Qualification Housewifes, Employes, Students, Visit our Office Near SP Circle, Bellary -8123012124, 7022121569

General
TVS, ವಿಡಿಯೋಕಾನ್, TOYOTA, ಬ್ರಿಟಾನಿಯಾ MNC ಕಂಪನಿಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) 17,800-56,000/- ವಸತಿಯೂಟವಿದೆ. 9611715755

ಮನೆ ಕೆಲಸಕ್ಕೆ, ಅಡುಗೆಗೆ, ಮಕ್ಕಳನ್ನು ಮತ್ತು ರೋಗಿಗಳನ್ನು ನೋಡಿಕೊಳ್ಳಲು ಮಹಿಳೆಯರು / ಹುಡುಗಿಯರು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಸೌಲಭ್ಯವಿದೆ. ಸಂಬಳ: 15,000-20,000 ಸಾವಿರ ಸಂಪರ್ಕಿಸಿ: 9326447402, 9892396441

ರಾವ್ ಸಂಸ್ಥೆಗೆ ಅನುಭವವುಳ್ಳವರು ಆಫೀಸ್ ವರ್ಕ್, ಫೀಲ್ಡ್ ವರ್ಕ್ (Any Degree) ವಯಸ್ಸಾದವರನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು, ಹೋಂನರ್ಸ್ ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ.10,000-15,000. 8951315839, 9880545002

ಕರ್ನಾಟಕದಾದ್ಯಂತ ಹೆಸರಾಂತ 450ಕಂಪನಿಗಳಿಗೆ, ಕಂಪನಿ ಹಾಗೂ ಆಫೀಸ್ ವರ್ಕ್ ಗೆ, ಯುವಕ, ಯುವತಿಯರು ಬೇಕಾಗಿದ್ದಾರೆ. ನೇರನೇಮಕಾತಿ 16,200-65,000/-ಊಟ, ವಸತಿಯೊಂದಿಗೆ 7022366461, 8904049301.

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

TOYOTA, ಟಾಟಾಮೋಟರ್ಸ್, ಬಿಗ್ ಬಜಾರ್ಸ್ ಬ್ರಿಟಾನಿಯಾಗಳಿಗೆ 5th, SSLC, Degree, ITI, Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಭವಿಷ್ಯ
Astrology
★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

"ವಶೀಕರಣ ಯಂತ್ರ" ಜನವಶೀಕರಣ, ಲಕ್ಷ್ಮಿವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರು ವಶೀಕರಣ, ಕೇವಲ 2001 ರೂಪಾಯಿ. ಗುರೂಜಿ ಮಹೇಶ್ 9686999517

"ಉಚಿತ ಭವಿಷ್ಯ, ಕ್ಷಣದಲ್ಲಿ ಪರಿಹಾರ" ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ, ಧನವಶೀಕರಣ, ಶತ್ರುವಶೀಕರಣ, ಸ್ತ್ರೀಪುರುಷವಶೀಕರಣ, ನಿಮ್ಮಲ್ಲಿ ಸಮಸ್ಯೆಯೇ?? ಪರಿಹಾರವಾಗಬೇಕೆ?? ಒಂದೇಕರೆಯಲ್ಲಿ ವಶೀಕರಣದ ವಿಶೇಷತಾಂತ್ರಿಕರಾದ ಗುರುರಾಜನ್ "ನಂಬಿದವರ ಪಾಲಿನಬೆಳಕು" 9731309181

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★||ಮೋಡಿ ಮಾಂತ್ರಿಕರು||★ ನಂಬರ್.1 ವಶೀಕರಣ ಸಪೆಷಲಿಸ್ಟ್, ಪ್ರೀತಿಪ್ರೇಮ, ಸಾಲದಬಾದೆ, ಗಂಡಹೆಂಡತಿ ವಿಚಾರ ಇನ್ನೂಯಾವುದೆ ಗುಪ್ತ ಸಮಸ್ಯೆಗಳಿಗೆ ಪೋನಿನ ಮೂಲಕ ಶಾಶ್ವತ ಪರಿಹಾರ. 9591588881

★||ಶ್ರೀಶಾಕಾಂಬರಿದೇವಿ||★ ಆರಾಧಕರು ಸ್ತ್ರೀ ಪುರುಷ ವಶೀಕರಣ, ಸಂಭೋಗ ವಶೀಕರಣ ಇನ್ನೂಯಾವುದೇ ಕಠಿಣ, ಗುಪ್ತ ಸಮಸ್ಯೆಗಳಿಗೆ 11 ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900222591

ಕೇರಳ ಮತ್ತು ಕೊಳ್ಳೇಗಾಲದ ಪ್ರಚಂಡ ಅಮಾನುಷ ಮಾಂತ್ರಿಕ ವಿದ್ಯೆಯಿಂದ ಪ್ರೀತಿಯಲ್ಲಿ ನಂಬಿ ಮೋಸ ಇಷ್ಟಪಟ್ಟವರು ನಿಮ್ಮಂತಾಗಲುಸ್ತ್ರಿ ಸ್ತ್ರೀ/ ಪುರುಷ ವಶೀಕರಣ, ಇನ್ನೂ ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿದ್ದರೂ ಕೇವಲ 2 ದಿನಗಳಲ್ಲಿ 100% ಪರಿಹಾರ ಮಾಡುತ್ತಾರೆ. 9945530666.

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs.999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008"

ಪ್ರವಾಸ
Travel
ಶ್ರೀರಾಜರಾಜೇಶ್ವರಿ ಟೂರ್ಸ್ 9743895346, 9739618243, 11.11.2021, 7/10 ದಿನಗಳ ಅಲಹಾಬಾದ್, ಚಿತ್ರಕೂಟ, ವಾರಣಾಸಿ, ಅಯೋಧ್ಯ, ಗಯಾ, ನೈಮಿಷಾರಣ್ಯ, 18.11.2021, 5/9 ದಿನಗಳ ದೆಹಲಿ, ಬೃಂದಾವನ, ತಾಜ್‌ಮಹಲ್, ವೈಷ್ಣೊದೇವಿ, ಶಿವಕೋರಿ. ಎ/ಸಿ ರೈಲು/ವಿಮಾನ ಪ್ರವಾಸ.

ದಸರ ರಜಾ ಪ್ರಯುಕ್ತ: 16.10.2021 7ದಿನಗಳ ತಮಿಳುನಾಡು, 24.10.2021 5ದಿನಗಳ ಕಾಶಿ, ಗಯಾ, 18.10.2021 12ದಿನಗಳ ಗುಜರಾತ್, ಮಧ್ಯಪ್ರದೇಶ, 18.10.2021, 24.10.2021 10ದಿನಗಳ ಲೇಹ್‌ಲಡಾಕ್. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್, 9342848791, 9880847001

ಅಂಡಮಾನ್ ಹವಳದ್ವೀಪ ಸೆಪ್ಟಂಬರ್, ಅಕ್ಟೊಬರ್, ನವೆಂಬರ್‌ನಲ್ಲಿ 5 ದಿನಗಳು ವಿಮಾನದಲ್ಲಿ. Royal Package. ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
For Lineage & Single/ Multi Column Classifieds Display ads
BOOK YOUR AD ON SUNDAY & GET 50% OFF ON WEEKDAYS
For more information contact:
9880856233 / 9845114560
9606912256

ರಾಯಲ್ ಚಾಲೆಂಜರ್ಸ್ ಬೆಂಗಳೂರು–ಕೋಲ್ಕತ್ತ ನೈಟ್ ರೈಡರ್ಸ್ ಮುಖಾಮುಖಿ ಇಂದು

ವಿರಾಟ್ ಬಳಗದ ಮೇಲೆ ಕಣ್ಣು

ಅಬುಧಾಬಿ(ಪಿಟಿಐ): ಟ್ವೆಂಟಿ–20 ವಿಶ್ವಕಪ್ ಟೂರ್ನಿ ಮುಗಿದ ನಂತರ ಭಾರತ ಚುಟುಕು ಕ್ರಿಕೆಟ್ ತಂಡದ ನಾಯಕತ್ವ ಬಿಟ್ಟುಕೊಡುವುದಾಗಿ ಹೇಳಿರುವ ವಿರಾಟ್ ಕೊಹ್ಲಿ ಅವರ ಮೇಲೆ ಈಗ ಎಲ್ಲರ ಕಣ್ಣು ನೆಟ್ಟಿದೆ.

ವಿಶ್ವಕಪ್ ಟೂರ್ನಿಗೂ ಮುನ್ನ ನಡೆಯುತ್ತಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ 14ನೇ ಆವೃತ್ತಿಯ ದ್ವಿತೀಯಾರ್ಧದಲ್ಲಿ ಅವರ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಪ್ರಶಸ್ತಿ ಜಯಿಸಬಹುದೇ ಎಂಬ ನಿರೀಕ್ಷೆ ಮೂಡಿದೆ. ಈ ಟೂರ್ನಿಯ ನಂತರ ಆರ್‌ಸಿಬಿ ನಾಯಕತ್ವಕ್ಕೂ ಅವರು ವಿದಾ ಹೇಳಲಿದ್ದಾರೆ. ಹೀಗಾಗಿ ಕುತೂಹಲ ಹೆಚ್ಚಾಗಿದೆ.

2008ರಲ್ಲಿ ಟೂರ್ನಿ ಆರಂಭವಾದಾಗಿನಿಂದಲೂ ತಾರಾ ವರ್ಚಸ್ಸಿನ ದಿಗ್ಗಜ ಆಟಗಾರರು ಈ ತಂಡದಲ್ಲಿ ಆಡಿದ್ದಾರೆ. ಅಲ್ಲದೇ ದಾಖಲೆ ಸಂಖ್ಯೆಯ ಅಭಿಮಾನಿ ಬಳಗ ಕೂಡ ಈ ತಂಡಕ್ಕೆ ಇದೆ. ಆದರೂ ಇಲ್ಲಿಯವರೆಗೆ ಒಂದು ಬಾರಿಯೂ ಪ್ರಶಸ್ತಿ ಗೆದ್ದಿಲ್ಲ. ಆದರೆ ಈ ಸಲದ ಟೂರ್ನಿಯ ಮೊದಲಾರ್ಧದಲ್ಲಿ ಉತ್ತಮ ಆರಂಭವನ್ನೇ ಮಾಡಿರುವುದು ಪ್ರಶಸ್ತಿ ನಿರೀಕ್ಷೆ ಮೂಡಲು ಕಾರಣವಾಗಿದೆ. ಆರ್‌ಸಿಬಿಯು ಸೋಮವಾರ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಕಣಕ್ಕಿಳಿಯಲಿದೆ.

ಪಾಯಿಂಟ್ ಪಟ್ಟಿ ಯಲ್ಲಿ ಆರ್‌ಸಿಬಿ 10 ಪಾಯಿಂಟ್‌ಗಳೊಂದಿಗೆ ಮೂರನೇ ಸ್ಥಾನದಲ್ಲಿದೆ. ಗ್ಲೆನ್ ಮ್ಯಾಕ್ಸ್‌ವೆಲ್ (7 ಪಂದ್ಯಗಳಿಂದ 223 ರನ್), ಎಬಿ ಡಿವಿಲಿಯರ್ಸ್ (7 ಪಂದ್ಯಗಳಿಂದ 207), ವಿರಾಟ್ ಕೊಹ್ಲಿ (198) ಮತ್ತು ದೇವದತ್ತ ಪಡಿಕ್ಕಲ್ (195) ಅವರ ಆಟ ತಂಡದ ಜಯದಲ್ಲಿ ಪ್ರಮುಖವಾಗಿದೆ.

ಹರ್ಷಲ್ ಪಟೇಲ್, ನವದೀಪ್ ಸೈನಿ, ಮೊಹಮ್ಮದ್ ಸಿರಾಜ್ ಅವರೂ ಜಯದ ಕಾಣಿಕೆ ನೀಡಿದ್ದಾರೆ. ವಿಶ್ವಕಪ್ ಟೂರ್ನಿಗೆ ಆಯ್ಕೆಯಾಗಿರುವ ತಂಡದಲ್ಲಿ ಸ್ಥಾನ ಪಡೆಯದ ಸ್ಪಿನ್ನರ್ ಯಜುವೇಂದ್ರ ಚಾಹಲ್ ಸಾಮರ್ಥ್ಯ ಮೆರೆದು ಆಯ್ಕೆಗಾರರ ಗಮನ ಸೆಳೆಯಲು ಸಿದ್ಧರಾಗಿದ್ದಾರೆ. ಆ್ಯಡಂ ಜಂಪಾ ಮತ್ತು ಕೇನ್ ರಿಚರ್ಡ್ಸನ್ ಅವರ ಬದಲಿಗೆ ಶ್ರೀಲಂಕಾದ ವನಿಂದು ಹಸರಂಗಾ ಮತ್ತು ದುಷ್ಮಂತಾ ಚಮೀರ ಸ್ಥಾನ ಪಡೆದಿದ್ದಾರೆ.

ಎರಡು ಬಾರಿಯ ಚಾಂಪಿಯನ್ ಕೆಕೆಆರ್ ಏಳು ಪಂದ್ಯಗಳಲ್ಲಿ ಎರಡರಲ್ಲಿ ಮಾತ್ರ ಜಯಿಸಿ ಒತ್ತಡದಲ್ಲಿದೆ. ಏಯಾನ್ ಮಾರ್ಗನ್ ನಾಯಕತ್ವದ ಬಳಗವು ಪ್ಲೇ ಆಫ್ ಪ್ರವೇಶಿಸಬೇಕಾದರೆ ಮುಂದಿನ ಹಂತದಲ್ಲಿ ಕನಿಷ್ಠ ಐದು ಪಂದ್ಯಗಳಲ್ಲಿ ಉತ್ತಮ ರನ್ ಸರಾಸರಿಯೊಂದಿಗೆ ಜಯಿಸುವ ಸವಾಲು ಇದೆ.

ವಿರಾಟ್ ಕೊಹ್ಲಿ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್

2014ರಲ್ಲಿ ಟೂರ್ನಿಯ ಆರಂಭದಲ್ಲಿ ಇಂತಹದೇ ಸ್ಥಿತಿ ಎದುರಿಸಿದ್ದ ಕೆಕೆಆರ್ ನಂತರ ಸತತ ಒಂಬತ್ತು ಪಂದ್ಯಗಳಲ್ಲಿ ಜಯಿಸಿ ಪ್ರಶಸ್ತಿ ಮುಡಿಗೇರಿಸಿಕೊಂಡಿತ್ತು.

‘ಈ ಮೊದಲು ಕೂಡ ಕಠಿಣ ಸ್ಥಿತಿಯಿಂದ ಮೇಲೆದ್ದು ಪ್ರಶಸ್ತಿ ಗೆದ್ದಿರುವ ಇತಿಹಾಸ ನಮ್ಮದು. ಈಗಲೂ ಅಂತಹ ಆತ್ಮವಿಶ್ವಾಸ ಇದೆ. ಪ್ರತಿಭಾವಂತ ಆಟಗಾರರೂ ತಂಡದಲ್ಲಿದ್ದಾರೆ’ ಎಂದು ಕೆಕೆಆರ್ ಮಾರ್ಗದರ್ಶಕ ಡೇವಿಡ್ ಹಸ್ಸಿ ಹೇಳಿದ್ದಾರೆ. ಮೊದಲ ಹಂತದಲ್ಲಿ ಇವೆರಡೂ ತಂಡಗಳು ಮುಖಾಮುಖಿಯಾದಾಗ ಆರ್‌ಸಿಬಿ ಜಯಿಸಿತ್ತು. ಮತ್ತೊಂದು ಜಯದ ಕನಸಿನಲ್ಲ ವಿರಾಟ್ ಬಳಗವಿದೆ.

ಬಲಾಬಲ



ಆರ್‌ಸಿಬಿ ನಾಯಕತ್ವಕ್ಕೂ ವಿರಾಟ್ ವಿದಾಯ

ದುಬೈ (ಪಿಟಿಐ): ಈಗ ನಡೆಯುತ್ತಿರುವ ಐಪಿಎಲ್ ಟೂರ್ನಿಯ ನಂತರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕತ್ವಕ್ಕೆ ವಿದಾಯ ಹೇಳುವುದಾಗಿ ವಿರಾಟ್ ಕೊಹ್ಲಿ ತಿಳಿಸಿದ್ದಾರೆ.

‘ಆರ್‌ಸಿಬಿ ನಾಯಕನಾಗಿ ಇದು ನನ್ನ ಕೊನೆಯ ಐಪಿಎಲ್ ಆಗಲಿದೆ. ಆದರೆ ಆರ್‌ಸಿಬಿ ಬಳಗದಲ್ಲಿ ಆಟಗಾರನಾಗಿ ಮುಂದುವರಿಯುವೆ. ನನ್ನಲ್ಲಿ ನಂಬಿಕೆ ಇಟ್ಟ ಅಭಿಮಾನಿಗಳು ಮತ್ತು ಬೆಂಬಲಿಗರಿಗೆ ಕೃತಜ್ಞ-ನಾಗಿದ್ದೇನೆ’ ಎಂದು ಭಾನುವಾರ ರಾತ್ರಿ ತಂಡವು ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ವಿರಾಟ್ ತಿಳಿಸಿದ್ದಾರೆ.

‘ಆರ್‌ಸಿಬಿಯಲ್ಲಿ ಪ್ರತಿಭಾವಂತ ಆಟಗಾರರೊಂದಿಗೆ ಆಡಿದ್ದು ಬಹಳ ದೊಡ್ಡ ಅನುಭವ. ಪ್ರೇರಣಾದಾಯಕವಾದ ಪಯಣ ಇದಾಗಿದೆ. ಆರ್‌ಸಿಬಿ ಆಡಳಿತ ಮಂಡಳಿ, ಕೋಚ್‌ಗಳು, ನೆರವು ಸಿಬ್ಬಂದಿ, ಆಟಗಾರರು ಮತ್ತು ಆರ್‌ಸಿಬಿಯ ಸಮಗ್ರ ಕುಟುಂಬಕ್ಕೆ ಧನ್ಯವಾದಗಳು. ಇದು ಬಹಳ ಕಠಿಣವಾದ ನಿರ್ಧಾರವಾಗಿದೆ’ ಎಂದು ವಿರಾಟ್ ಹೇಳಿದ್ದಾರೆ.

ಏಯಾನ್ ಮಾರ್ಗನ್



ಪಂದ್ಯ ಆರಂಭ ರಾತ್ರಿ 7.30
ನೇರಪ್ರಸಾರ
ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಮೊದಲ ಸುತ್ತಿನಲ್ಲಿ ಹೆಚ್ಚು ರನ್ ಗಳಿಸಿದವರು

ಆಟಗಾರ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ
ರಾಯಲ್ ಚಾಲೆಂಜರ್ಸ್ ಬೆಂಗಳೂರು					
ಗ್ಲೆನ್ ಮ್ಯಾಕ್ಸ್‌ವೆಲ್	7	223	78	0	2
ಎಬಿ ಡಿವಿಲಿಯರ್ಸ್	7	207	76*	0	2
ವಿರಾಟ್ ಕೊಹ್ಲಿ	7	198	72*	0	1
ದೇವದತ್ತ ಪಡಿಕ್ಕಲ್	6	195	101*	1	0
ಕೋಲ್ಕತ್ತ ನೈಟ್ ರೈಡರ್ಸ್					
ನಿತೀಶ್ ರಾಣಾ	7	201	80	0	2
ರಾಹುಲ್ ತ್ರಿಪಾಠಿ	7	187	53	0	1
ಆ್ಯಂಡ್ರೆ ರಸೆಲ್	7	163	54	0	1
ಶುಭಮನ್ ಗಿಲ್	7	132	43	0	0

ಹೆಚ್ಚು ವಿಕೆಟ್ ಗಳಿಸಿದವರು

ಬೌಲರ್	ಪಂದ್ಯ	ವಿಕೆಟ್	ಶ್ರೇಷ್ಠ
ಬೆಂಗಳೂರು			
ಹರ್ಷಲ್ ಪಟೇಲ್	7	17	27ಕ್ಕೆ5
ಆವೇಶ್ ಖಾನ್	8	14	32ಕ್ಕೆ3
ಕ್ರಿಸ್ ಮೊರಿಸ್	7	14	23ಕ್ಕೆ4
ರಾಹುಲ್ ಚಾಹರ್	8	11	27ಕ್ಕೆ4
ಕೋಲ್ಕತ್ತ			
ಪ್ಯಾಟ್ ಕಮಿನ್ಸ್	7	9	24ಕ್ಕೆ3
ಪ್ರಸಿದ್ಧಕೃಷ್ಣ	7	8	30ಕ್ಕೆ3
ವರುಣ ಚಕ್ರವರ್ತಿ	7	7	32ಕ್ಕೆ2
ಆ್ಯಂಡ್ರೆ ರಸೆಲ್	7	7	15ಕ್ಕೆ5

ದೇವದತ್ತ ಪಡಿಕ್ಕಲ್

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	380
ಕೆ.ಎಲ್.ರಾಹುಲ್	ಪಂಜಾಬ್	331
ಡುಪ್ಲೆಸಿ	ಚೆನ್ನೈ	320

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	17
ಆವೇಶ್ ಖಾನ್	ಆರ್‌ಸಿಬಿ	14
ಮೊರಿಸ್	ರಾಜಸ್ತಾನ್	14

ಋತುರಾಜ್ ಗಾಯಕವಾಡ್ ಬ್ಯಾಟಿಂಗ್ ಸೊಬಗು –ಬಿಸಿಸಿಐ/ಪಿಟಿಐ ಚಿತ್ರ

ಚೆನ್ನೈಗೆ ಗೆಲುವು ತಂದುಕೊಟ್ಟ ಋತುರಾಜ್, ಡ್ವೇನ್ ಬ್ರಾವೊ

ದುಬೈ (ಪಿಟಿಐ): ಉದಯೋನ್ಮುಖ ಪ್ರತಿಭೆ ಋತುರಾಜ್ ಗಾಯಕವಾಡ್ ಭಾನುವಾರ ಇಲ್ಲಿ ಆರಂಭವಾದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಎರಡನೇ ಹಂತದ ಮೊದಲ ಪದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದಜಯಕ್ಕೆ ಕಾರಣರಾದರು.

ಎರಡಂಕಿ ಮೊತ್ತಕ್ಕೆ ಆಲೌಟ್ ಆಗುವ ಆತಂಕದಲ್ಲಿದ್ದ ಚೆನ್ನೈ ತಂಡಕ್ಕೆ ಆರಂಭಿಕ ಬ್ಯಾಟ್ಸ್‌ಮನ್ ಋತುರಾಜ್ (ಔಟಾಗದೆ 88;58ಎಸೆತ, 9ಬೌಂಡರಿ, 4ಸಿಕ್ಸರ್) ಆಸರೆಯಾದರು.

ಅದರಿಂದಾಗಿ ಚೆನ್ನೈ ತಂಡವು ಮುಂಬೈ ಇಂಡಿಯನ್ಸ್ ಎದುರು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 156 ರನ್ ಗಳಿಸಿತು.

ಗುರಿ ಬೆನ್ನತ್ತಿದ ಮುಂಬೈ ತಂಡ ದೀಪಕ್ ಚಾಹರ್ ಮತ್ತು ಡ್ವೇನ್ ಬ್ರಾವೊ ದಾಳಿಗೆ ನಲುಗಿ ಎಂಟು ವಿಕೆಟ್‌ಗಳಿಗೆ 136 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಸೌರಭ್ ತಿವಾರಿ ಗಳಿಸಿದ ಅರ್ಧಶತಕ ವ್ಯರ್ಥವಾಯಿತು. ಈ ಜಯದೊಂದಿಗೆ ಚೆನ್ನೈ ತಂಡ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಮುಂಬೈ ತಂಡದ ಟ್ರೆಂಟ್ ಬೌಲ್ಟ್ ಮತ್ತು ಆ್ಯಡಂ ಮಿಲ್ನೆ ಪರಿಣಾಮಕಾರಿ ಬೌಲಿಂಗ್‌ನಿಂದಾಗಿ ಆರು ಓವರ್‌ಗಳು ಮಕ್ತಾಯವಾಗುಷ್ಟರಲ್ಲಿಯೇ ಚೆನ್ನೈ 24 ರನ್‌ಗಳಿಗೆ 4 ವಿಕೆಟ್‌ಗಳನ್ನು ಕಳೆದುಕೊಂಡಿತು.

ಮೊದಲ ಓವರ್‌ನಲ್ಲಿಯೇ ಫಫ್ ಡುಪ್ಲೆಸಿ, ಎರಡನೇ ಓವರ್‌ನಲ್ಲಿ ಮೋಯಿನ್ ಅಲಿ, ಮೂರನೇ ಓವರ್‌ನಲ್ಲಿ ಸುರೇಶ್ ರೈನಾ ಮತ್ತು ಆರನೇ ಓವರ್‌ನಲ್ಲಿ ನಾಯಕ ಮಹೇಂದ್ರಸಿಂಗ್ ಧೋನಿ ಔಟಾದರು ಭರವಸೆಯ ಬ್ಯಾಟ್ಸ್‌ಮನ್ ಅಂಬಟಿ ರಾಯುಡು ಗಾಯಗೊಂಡು ನಿವೃತ್ತರಾದರು.

ಈ ಹಂತದಲ್ಲಿ ಏಕಾಂಗಿ ಹೋರಾಟ ನಡೆಸುತ್ತಿದ್ದ ಋತುರಾಜ್ ಜೊತೆ ಸೇರಿದ ರವೀಂದ್ರ ಜಡೇಜ (26; 33ಎ, 1ಬೌಂಡರಿ) ತಮ್ಮ ಬಿರುಸಿನ ಆಟಕ್ಕೆ ಕಡಿವಾಣ ಹಾಕಿ ವಿಕೆಟ್ ಪತನ ತಡೆದರು. 5ನೇ ವಿಕೆಟ್ ಜೊತೆಯಾಟದಲ್ಲಿ 81 ರನ್ ಸೇರಿಸಿದರು.

100ನೇ ಪಂದ್ಯ ಆಡಿದ ಜಸ್‌ಪ್ರೀತ್ ಬೂಮ್ರಾ ಹಾಕಿದ 17ನೇ ಓವರ್‌ನಲ್ಲಿ ಜಡೇಜ ಔಟಾದರು. ಚೆನ್ನೈ ಆಲ್‌ರೌಂಡರ್ ಡ್ವೇನ್ ಬ್ರಾವೊ ಋತುರಾಜ್ ಜೊತೆಗೂಡಿ ಆರನೇ ವಿಕೆಟ್‌ಗೆ 39 ರನ್ ಸೇರಿಸಿದರು. ಬ್ರಾವೊ ಅವರಿಗೂ ಇದು ಐಪಿಎಲ್‌ನಲ್ಲಿ ನೂರನೇ ಪಂದ್ಯ. ಅವರ ವಿಕೆಟ್ ಕೂಡ ಬೂಮ್ರಾ ಅವರ ಪಾಲಾಗಿದ್ದು ವಿಶೇಷ. ಆದರೆ ಇದೆಲ್ಲದರ ನಡುವೆ ಉತ್ತಮ ಸ್ಟ್ರೋಕ್ ಪ್ಲೇಯೊಂದಿಗೆ ಗಮನ ಸೆಳೆದ ಮಹಾರಾಷ್ಟ್ರದ ಋತುರಾಜ್ ಮಿಂಚಿದರು.

ಎದುರಾಳಿ ತಂಡದ ಉತ್ತಮ ಬೌಲಿಂಗ್ ದಾಳಿಯನ್ನು ಮೆಟ್ಟಿ ನಿಂತ ಋತುರಾಜ್ ನಾಲ್ಕು ಆಕರ್ಷಕ ಸಿಕ್ಸರ್‌ಗಳನ್ನು ಸಿಡಿಸಿದರು.

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 6ಕ್ಕೆ 156 (20 ಓವರ್)

ಋತುರಾಜ್ ಔಟಾಗದೆ 88, (58ಎ, 4X9, 6X6)- ಡುಪ್ಲೆಸಿ ಸಿ ಮಿಲ್ನೆ ಬಿ ಬೌಲ್ಟ್ 0, (3ಎ)- ಮೋಯಿನ್ ಅಲಿ ಸಿ ತಿವಾರಿ ಬಿ ಮಿಲ್ನೆ 0, (3 ಎ)-ರಾಯುಡು ಗಾಯಗೊಂಡು ನಿವೃತ್ತಿ 0, (3ಎ)- ರೈನಾ ಸಿ ಚಾಹರ್ ಬಿ ಬೌಲ್ಟ್ 4, (6 ಎ, 4X1)- ಧೋನಿ ಸಿ ಬೌಲ್ಟ್ ಬಿ ಮಿಲ್ನೆ 3, (5 ಎ)- ಜಡೇಜ ಸಿ ಪೊಲಾರ್ಡ್ ಬಿ ಬೂಮ್ರಾ 26 (33 ಎ, 4X1)- ಬ್ರಾವೊ ಸಿ ಕೃಣಾಲ್ ಬಿ ಬೂಮ್ರಾ 23 (8 ಎ, 6X3)-ಶಾರ್ದೂಲ್ ಔಟಾಗದೆ 1, (1ಎ)

ಇತರೆ (ಲೆಗ್‌ಬೈ 3, ವೈಡ್ 8) 11

ವಿಕೆಟ್ ಪತನ: 1-1 (ಫಫ್ ಡು ಪ್ಲೆಸಿ, 0.5), 2-2 (ಮೊಯಿನ್ ಅಲಿ, 1.3), 3-7 (ಸುರೇಶ್ ರೈನಾ, 2.6), 4-24 (ಮಹೇಂದ್ರ ಸಿಂಗ್ ಧೋನಿ, 5.6), 5-105 (ರವೀಂದ್ರ ಜಡೇಜ, 16.4), 6-144 (ಡ್ವೆನ್ ಬ್ರಾವೊ, 19.2)

ಬೌಲಿಂಗ್: ಟ್ರೆಂಟ್ ಬೌಲ್ಟ್ 4–1–35–2, ಆ್ಯಡಂ ಮಿಲ್ನೆ 4–0–21–2, ಜಸ್‌ಪ್ರೀತ್ ಬೂಮ್ರಾ 4–0–33–2, ಕೀರನ್ ಪೊಲಾರ್ಡ್ 2–0–15–0, ರಾಹುಲ್ ಚಾಹರ್ 4–0–22–0,ಕೃಣಾಲ್ ಪಾಂಡ್ಯ 2–0–27–0

ಮುಂಬೈ ಇಂಡಿಯನ್ಸ್ 8ಕ್ಕೆ 136 (20 ಓವರ್)

ಕ್ವಿಂಟನ್ ಎಲ್‌ಬಿಡಬ್ಲ್ಯು ಬಿ ಚಾಹರ್ 17, (12ಎ, 4X3)-ಅನ್ಮೋಲ್‌ಪ್ರೀತ್ ಬಿ ಚಾಹರ್ 16-(14ಎ, 4X2)-ಸೂರ್ಯಕುಮಾರ್ ಸಿ ಡುಪ್ಲೆಸಿ ಬಿ ಠಾಕೂರ್ 3-(7ಎ)- ಇಶಾನ್ ಸಿ ರೈನಾ ಬಿ ಬ್ರಾವೊ 11 -(10ಎ, 4X1)- ಸೌರಭ್ ಔಟಾಗದೆ 50 (40 ಎ, 4X5), ಪೊಲಾರ್ಡ್ ಎಲ್‌ಬಿಡಬ್ಲ್ಯು ಬಿ ಹೇಜಲ್‌ವುಡ್ 15,(14 ಎ, 4X1) ಕೃಣಾಲ್ ರನೌಟ್ ಬ್ರಾವೊ/ಧೋನಿ 4, (5ಎ)- ಮಿಲ್ನೆ ಸಿ ಗೌತಮ್ (ಬದಲಿ) ಬಿ ಬ್ರಾವೊ 15, (15ಎ, 6X1)- ಚಾಹರ್ ಸಿ ರೈನಾ ಬಿ ಬ್ರಾವೊ 0,(1ಎ)- ಬೂಮ್ರಾ ಔಟಾಗದೆ 1, (2ಎ)

ಇತರೆ (ವೈಡ್ 4) 4

ವಿಕೆಟ್ ಪತನ: 1–18 (ಕ್ವಿಂಟನ್ ಡಿ ಕಾಕ್, 2.2), 2–35 (ಅನ್ಮೋಲ್‌ಪ್ರೀತ್ ಸಿಂಗ್, 4.6), 3–37 (ಸೂರ್ಯಕುಮಾರ್ ಯಾದವ್, 5.4), 4–58 (ಇಶಾನ್ ಕಿಶನ್, 9.2), 5–87 (ಕೀರನ್ ಪೊಲಾರ್ಡ್, 13.1), 6–94 (ಕೃಣಾಲ್ ಪಾಂಡ್ಯ, 14.4), 7–134 (ಆಡಂ ಮಿಲ್ನೆ, 19.2), 8–135 (ರಾಹುಲ್ ಚಾಹರ್, 19.4)

ಬೌಲಿಂಗ್: ದೀಪಕ್ ಚಾಹರ್ 4–0–19–2, ಜೋಶ್ ಹ್ಯಾಜಲ್‌ವುಡ್ 4–0–34–1 , ಶಾರ್ದೂಲ್ ಠಾಕೂರ್ 4–0–29–1, ಮೋಯಿನ್ ಅಲಿ 3–0–16–0, ಡ್ವೇನ್ ಬ್ರಾವೊ 4–0–25–3, ರವೀಂದ್ರ ಜಡೇಜ 1–0–13–0

ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್‌ಗೆ 20 ರನ್‌ಗಳ ಗೆಲುವು

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಚೆನ್ನೈ ಸೂಪರ್ ಕಿಂಗ್ಸ್	8	6	2	00	00	12
ಡೆಲ್ಲಿ ಕ್ಯಾಪಿಟಲ್ಸ್	8	6	2	00	00	12
ಬೆಂಗಳೂರು	7	5	2	00	00	10
ಮುಂಬೈ ಇಂಡಿಯನ್ಸ್	8	4	4	00	00	8
ರಾಜಸ್ಥಾನ್ ರಾಯಲ್ಸ್	7	3	4	00	00	6
ಪಂಜಾಬ್ ಕಿಂಗ್ಸ್	8	3	5	00	00	6
ಕೋಲ್ಕತ್ತ	7	2	5	00	00	4
ಹೈದರಾಬಾದ್	7	1	6	00	00	2

* ಭಾನುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಜಸ್‌ಪ್ರೀತ್ ಬೂಮ್ರಾ

ಬೂಮ್ರಾ, ಬ್ರಾವೊ ‘ಶತಕ’

ದುಬೈ: ಮುಂಬೈ ಇಂಡಿಯನ್ಸ್ ತಂಡದ ‘ಡೆತ್ ಓವರ್’ ಪರಿಣತ ಮಧ್ಯಮವೇಗಿ ಜಸ್‌ಪ್ರೀತ್ ಬೂಮ್ರಾ ಮತ್ತು ಚೆನ್ನೈ ಸೂಪರ್ ಕಿಂಗ್ಸ್‌ನ ಆಲ್‌ರೌಂಡರ್ ಡ್ವೇನ್ ಬ್ರಾವೊ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್‌ನಲ್ಲಿ ‘ಶತಕ’ದ ಸಾಧನೆ ಮಾಡಿದರು. ಅವರು ಒಟ್ಟು 100 ಪಂದ್ಯಗಳನ್ನಾ-ಡಿದ ಸಾಧನೆ ಮಾಡಿದರು.

ಡ್ವೇನ್ ಬ್ರಾವೊ

ಭಾನುವಾರ ಇಲ್ಲಿ ನಡೆದ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿಯುವ ಮೂಲಕ ಈ ಮೈಲಿಗಲ್ಲು ತಲುಪಿದರು.

ಜಸ್‌ಪ್ರೀತ್ ಬೂಮ್ರಾ ಐಪಿಎಲ್‌ನಲ್ಲಿ ಇದುವರೆಗೆ 115 ವಿಕೆಟ್‌ಗಳನ್ನು ಗಳಿಸಿದ್ದಾರೆ.

2013ರಲ್ಲಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧದ ಪಂದ್ಯದ ಮೂಲಕ ಐಪಿಎಲ್‌ಗೆ ಪದಾರ್ಪಣೆ ಮಾಡಿದ್ದರು. ಇಲ್ಲಿಯವರೆಗೂ ಅವರು ಮುಂಬೈ ತಂಡದಲ್ಲಿಯೇ ಇದ್ದಾರೆ. ತಂಡದ ಟ್ರೋಫಿ ವಿಜಯಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಇದೇ ಸಂದರ್ಭದಲ್ಲಿ ವಿಂಡೀಸ್ ಆಲ್‌ರೌಂಡರ್ ಡ್ವೇನ್ ಬ್ರಾವೊ ಕೂಡ ಐಪಿಎಲ್‌ನಲ್ಲಿ ನೂರು ಪಂದ್ಯಗಳನ್ನು ಆಡಿದ ಸಾಧನೆ ಮಾಡಿದ್ದಾರೆ. ಅವರು ಚೆನ್ನೈ ತಂಡದ ಪರ ಕಣಕ್ಕಿಳಿಯುವ ಮೂಲಕ ಈ ಸಾಧನೆ ಮಾಡಿದ್ದಾರೆ.

ಇಬ್ಬರೂ ಆಟಗಾರರ ಸಾಧನೆಯನ್ನು ಶ್ಲಾಘಿಸಿ ಐಪಿಎಲ್ ಅಧಿಕೃತ ಟ್ವಿಟರ್‌ನಲ್ಲಿ ಸಂದೇಶ ಹಾಕಲಾಗಿದೆ.

ಸೆಮಿಫೈನಲ್‌ಗೆ ಶಿವ ಥಾಪಾ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಏಷ್ಯನ್ ಚಾಂಪಿಯನ್‌ಷಿ-ಪ್‌ನಲ್ಲಿ ಐದು ಬಾರಿ ಪದಕಗಳನ್ನು ಗಳಿಸಿರುವ ಶಿವ ಥಾಪ ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಪ್ರವೇಶಿಸಿದರು. ಭಾನುವಾರ ನಡೆದ ರೋಚಕ ಬೌಟ್‌ನಲ್ಲಿ ಅವರು ಅಂಕಿತ್ ನರ್ವಾಲ್ ಎದುರು ಜಯ ಗಳಿಸಿದರು.

63.5 ಕೆಜಿ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಆರ್‌ಎಸ್‌ಪಿಬಿಯ ಅಂಕಿತ್ ವಿರುದ್ಧ ಅತ್ಯುತ್ತಮ ತಂತ್ರಗಳನ್ನು ಬಳಸಿದ ಅಸ್ಸಾಂ ಬಾಕ್ಸರ್ ಭರ್ಜರಿ ಪಂಚ್‌ಗಳ ಮೂಲಕ 4–1ರಲ್ಲಿ ಜಯ ಸಾಧಿಸಿದರು.

ಶಿವ ಥಾಪಾ —ಟ್ವಿಟರ್ ಚಿತ್ರ

54 ಕೆಜಿ ವಿಭಾಗದಲ್ಲಿ ಸ್ಪರ್ಧಿಸು-ತ್ತಿರುವ ಆರ್‌ಎಸ್‌ಪಿಬಿಯ ಸಚಿನ್ ಮತ್ತು ವರಿಂದರ್ ಸಿಂಗ್ ಸೆಮಿಫೈನಲ್ ಪ್ರವೇಶಿಸಿದರು. ಗೋವಾದ ರೋಷನ್ ಜಮೀರ್ ಎದುರು ಸಚಿನ್ ಜಯ ಸಾಧಿಸಿದರೆ ವರಿಂದರ್ 5–0ಯಿಂದ ಇಂದ್ರಜೀತ್ ಸಿಂಗ್ ವಿರುದ್ಧ ಗೆದ್ದರು. 48 ಕೆಜಿ ವಿಭಾಗದಲ್ಲಿ ಉತ್ತರಪ್ರದೇಶದ ರವಿಕುಮಾರ್ ಒಡಿಶಾದ ಸಂತೋಷ್ ಪ್ರಧಾನ್ ಎದುರು ಗೆದ್ದು ನಾಲ್ಕರ ಘಟ್ಟ ಪ್ರವೇಶಿಸಿದರು.

57 ಕೆಜಿ ವಿಭಾಗದಲ್ಲಿ ಮುಹಮ್ಮದ್ ಹಸಮುದ್ದೀನ್ ಮಹಾರಾಷ್ಟ್ರದ ಋಷಿಕೇಶ್ ಗೌಡ್ ವಿರುದ್ಧ ಗೆದ್ದರು. ಪಂಜಾಬ್‌ನ ವಿಜಯ್ ಕುಮಾರ್ 60 ಕೆಜಿ ವಿಭಾಗದಲ್ಲಿ ರಾಜ್‌ಪಿಂದರ್ ಸಿಂಗ್ ಎದುರು ಗೆಲುವು ಸಾಧಿಸಿದರು.

ಕಜಕಸ್ತಾನ ಓಪನ್: ಫೈನಲ್‌ಗೆ ಸ್ನೇಹಿತ್

ನವದೆಹಲಿ: ಭಾರತದ ಫಿಡೆಲ್ ಸ್ನೇಹಿತ್ ಅವರು ಐಟಿಟಿಎಫ್ ಕಜಕಸ್ತಾನ ಓಪನ್ ಟೇಬಲ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನ ಫೈನಲ್ ಪ್ರವೇಶಿಸಿದ್ದಾರೆ.

ಭಾನುವಾರ ನಡೆದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಅವರು ಬೆಲಾರಸ್‌ನ ಪವೆಲ್ ಪ್ಲಟನೊವ್ ಎದುರು 4–1ರ ಗೆಲುವು ಸಾಧಿಸಿದರು. ಮಹಿಳೆಯರ ಡಬಲ್ಸ್‌ನಲ್ಲಿ ಕೌಶನಿ ನಾಥ್ ಮತ್ತು ಪ್ರಾಪ್ತಿ ಸೇನ್ ಜೋಡಿ ಉಜ್ಬೆಕಿಸ್ತಾನದ ಕಮಿಲ ಖಲಿಕೋವ ಮತ್ತು ಮೆಖ್ರಿನಿಸೊ ನೊರ್ಕುಲೊವ ಎದುರು 3–1ರಲ್ಲಿ ಜಯ ಗಳಿಸಿ ಫೈನಲ್ ಪ್ರವೇಶಿಸಿದರು. ಅಂತಿಮ ಹಣಾಹಣಿಯಲ್ಲಿ ರಷ್ಯಾದ ವಲೇರಿಯಾ ಕೊಟ್ಯೂರ್ ಮತ್ತು ವಲೇರಿಯಾ ಶೆರ್ಬಟಿಖ್ ಎದುರು ಸೆಣಸುವರು.

ಪುರುಷರ ಜೋಡಿಗೆ ಕಂಚಿನ ಪದಕ ಟೂರ್ನಿಯುದ್ದಕ್ಕೂ ಅಮೋಘ ಆಟವಾಡಿದ ಸಿದ್ದೇಶ್ ಪಾಂಡೆ–ಮಂದಿತ್ ದಾನಿ ಮತ್ತು ಫಿಡೆಲ್ ಸ್ನೇಹಿತ್–ಸುಧಾಂಶು ಗ್ರೋವರ್ ಜೋಡಿ ಪುರುಷರ ಡಬಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ನಿರಾಸೆ ಕಂಡರು. ಈ ಮೂಲಕ ಕಂಚಿನ ಪದಕಕ್ಕೆ ಸಮಾ-ಧಾನಪಟ್ಟುಕೊಂಡರು. ಮಹಾರಾಷ್ಟ್ರ-ದವರಾದ ಸಿದ್ದೇಶ್ ಮತ್ತು ಮಂದಿತ್ ಅವರು ಸೌದಿ ಅರೆಬಿಯಾದ ಅಲಿ ಅಲ್ಖದ್ರಾವಿ ಮತ್ತು ಅಬ್ದುಲ್ ಅಜೀಜ್ ಶುಲೈಬಿ ಎದುರು 0–3ರಲ್ಲಿ ಸೋತರು. ಸ್ನೇಹಿತ್ ಮತ್ತು ಸುಧಾಂಶು 2–3ರಲ್ಲಿ ಕಜಕಸ್ತಾನದ ಅಲನ್ ಕುರ್ಮಂಗ್ಲಿಯೆವ್ ಹಾಗೂ ಕಿರಿಲ್ ಜೆರಸಿಮೆಂಕೊ ಜೋಡಿಗೆ ಮಣಿದರು.

ದಾವಣಗೆರೆಯಲ್ಲಿ ಅಂತರರಾಷ್ಟ್ರೀಯ ಟೆನಿಸ್ ಟೂರ್ನಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಮುಂದಿನ ವರ್ಷ ಜನವರಿಯಲ್ಲಿ ದಾವಣಗೆರೆಯಲ್ಲಿ ಅಂತರರಾಷ್ಟ್ರೀಯ ರ‍್ಯಾಂಕಿಂಗ್ ಟೆನಿಸ್ ಟೂರ್ನಿ ನಡೆಯಲಿದೆ. ಪಂದ್ಯಗಳು ನಡೆಯಲಿರುವ ಪ್ರೌಢಶಾಲಾ ಮೈದಾನದ ಅಂಗಣವನ್ನು ಯುವಸಬಲೀಕರಣ ಮತ್ತು ಕ್ರೀಡಾ ಸಚಿವ ನಾರಾಯಣಗೌಡ ಅವರು ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಅಧ್ಯಕ್ಷ ಆರ್.ಅಶೋಕ್ ಅವರೊಂದಿಗೆ ಭಾನುವಾರ ಪರಿಶೀಲಿಸಿದರು.

‘ಸ್ಮಾರ್ಟ್ ಸಿಟಿ ಯೋಜನೆಯಡಿ ₹1.50 ಕೋಟಿ ವೆಚ್ಚದಲ್ಲಿ ಪೆವಿಲಿಯನ್ ನಿರ್ಮಿಸಿದ್ದು ಪ್ರೇಕ್ಷಕರ ಸ್ಟ್ಯಾಂಡ್‌ಗಳ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ’ ಎಂದು ಜಿಲ್ಲಾ ಟೆನಿಸ್ ಸಂಸ್ಥೆಯ ಅಧ್ಯಕ್ಷ ಎಸ್.ಎಂ. ಬ್ಯಾಡಗಿ ತಿಳಿಸಿದರು.

‘ಟೆನಿಸ್‌ಗೆ ಉತ್ತೇಜನ ನೀಡುವ ಉದ್ದೇಶದಿಂದ ಬಳ್ಳಾರಿ ಮತ್ತು ಗದಗ ಸೇರಿದಂತೆ ರಾಜ್ಯದ 12 ಜಿಲ್ಲಾ ಕೇಂದ್ರಗಳಲ್ಲಿ ಸಿಂಥೆಟಿಕ್ ಅಂಗಣಗಳನ್ನು ನಿರ್ಮಿಸಲಾಗುವುದು’ ಎಂದು ಆರ್. ಅಶೋಕ್ ತಿಳಿಸಿದರು.

ಸೆಮಿಫೈನಲ್‌ಗೆ ಅಥರ್ವ, ಸಾನ್ವಿ

ಬೆಂಗಳೂರು: ಅಥರ್ವ ವೇದರಾಜ್, ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಎಐಟಿಎ 10 ವರ್ಷದೊಳಗಿನವರ ಟೂರ್ನಿಯ ಬಾಲಕರ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು.

ಭಾನುವಾರ ನಡೆದ ಎಂಟರ ಘಟ್ಟದ ಪಂದ್ಯದಲ್ಲಿ ಅಥರ್ವ 8–1ರಲ್ಲಿ ಮನ್ವಿಂದರ್ ವಿರುದ್ಧ ಜಯ ಗಳಿಸಿದರು. ಕೀರ್ತನ ವಿಶ್ವಾಸ್ 8–2ರಲ್ಲಿ ಅಶ್ವತ್ಥ್ ಅರುಣ್ ವಿರುದ್ಧ, ಯಶ್ ಕುಮಾರ್ 8–5ರಲ್ಲಿ ಕಿರಣ್ ಪಟೇಲ್ ವಿರುದ್ಧ, ರುನ್‌ಮಾನ್ ಮಹೇಶ್ 8–0ಯಿಂದ ಮಹಿನ್ ವಿರುದ್ಧ ಜಯ ಗಳಿಸಿದರು.

ಬಾಲಕಿಯರ ವಿಭಾಗದಲ್ಲಿ ಇಹಾ ರಸ್ತೋಗಿ ಎದುರು 8–0ಯಿಂದ ಗೆಲುವು ಸಾಧಿಸಿದ ಸಾನ್ವಿ ಪ್ರಕಾಶ್ ಸೆಮಿಫೈನಲ್ ಪ್ರವೇಶಿಸಿದರು. ಉನ್ನತಿ ಮುರಳೀಧರ್ 8–4ರಲ್ಲಿ ಸಹಸ್ರ ಜಯಂತ್ ಎದುರು, ಎಶಿತಾ ಸ್ರಿಯಾಲ 8–1ರಲ್ಲಿ ಧೃತಿ ವಿರುದ್ಧ ಮತ್ತು ಸೃಷ್ಟಿ ಕಿರಣ್ 8–0ಯಿಂದ ಭವಿಕಾ ಲೋಕೇಶ್ ವಿರುದ್ಧ ಜಯ ಗಳಿಸಿದರು.

ದೇವಾಂಗ, ಭಾರತ್ ಫೈನಲ್ ಹಣಾಹಣಿ

ಬೆಂಗಳೂರು: ದೇವಾಂಗ ಯೂನಿಯನ್ ಮತ್ತು ಭಾರತ್ ಎಸ್‌ಯು ತಂಡಗಳು ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಆಯೋಜಿಸಿರುವ ಎಸ್.ರಂಗರಾಜನ್ ಸ್ಮಾರಕ ‘ಸಿ’ ಡಿವಿಷನ್ ಲೀಗ್‌ನ ಫೈನಲ್ ಪ್ರವೇಶಿಸಿದವು. ಫೈನಲ್ ಪಂದ್ಯ ಸೋಮವಾರ ಸಂಜೆ 5ಕ್ಕೆ ನಡೆಯಲಿದೆ.

ಪ್ರಜಾವಾಣಿ

ಪ್ರಶ್ನೆಯ ? ಗುಟ್ಟು ಮಾಡಿರಿ ರಟ್ಟು

ಗಲಿಬಿಲಿ ಪ್ರಶ್ನೆ ನಮ್ಮದು, ಚುರುಕು ಉತ್ತರ ನಿಮ್ಮದು

ಗಡಿಬಿಡಿ ಆಗದೆ ಸರಿಯಾದ ಉತ್ತರವನ್ನು www.bit.ly/pvgutturattuಗೆ ಇಂದು ಸಂಜೆ 6ರ ಒಳಗೆ ಕಳುಹಿಸಿ ಆಕರ್ಷಕ ಬಹುಮಾನ ಗೆಲ್ಲಿ!

ಪ್ರಶ್ನೆ 1 15 ಮೀಟರ್ ಹಗ್ಗವನ್ನು 3ಮೀಟರಿನಂತೆ ಎಷ್ಟು ಬಾರಿ ಕತ್ತರಿಸಬೇಕು?

ಪ್ರಶ್ನೆ 2 ನಿಮಿಷಕ್ಕೊಮ್ಮೆ ದ್ವಿಗುಣವಾಗುವ ಹಣ್ಣುಬುಟ್ಟಿ, 10 ನಿಮಿಷಕ್ಕೆ ತುಂಬುತ್ತದೆ. ಆ ಬುಟ್ಟಿಯು ಅರ್ಧ ತುಂಬಲು ಎಷ್ಟು ನಿಮಿಷ ಬೇಕು?

ಬಂಪರ್ ಬಹುಮಾನ 1 ವಾಟರ್ ಪ್ಯೂರಿಫೈಯರ್

3D ಪಝಲ್ 3 ಸ್ಪೆಶಲ್ ಬಹುಮಾನ

ಗಿಫ್ಟ್ ವೌಚರ್ ₹ 500 ಪ್ರತಿ ದಿನ 10 ಅದೃಷ್ಟಶಾಲಿಗಳಿಗೆ

ಹಿಂದಿನ ಪ್ರಶ್ನೆಗೆ ಉತ್ತರ: 1) ಉತ್ತರ ನನಗೆ ಗೊತ್ತಿಲ್ಲ 2) 1

ಮಹಿಳಾ ಫುಟ್‌ಬಾಲ್: ಪ್ಯಾಂಥರ್ಸ್, ಮಾಡರ್ನ್‌ಗೆ ಭರ್ಜರಿ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಚನಾ ಮತ್ತು ಆರುಷಿ ಅವರ ಅಮೋಘ ಆಟದ ಬಲ ದಿಂದ ಪಿಂಕ್ ಪ್ಯಾಂಥರ್ಸ್ ಎಫ್‌ಸಿ ಮತ್ತು ಮಾಡರ್ನ್ ಗರ್ಲ್ಸ್ ಎಫ್‌ಸಿ ತಂಡಗಳು ಸ್ಪೋರ್ಟಿಂಗ್ ಪ್ಲಾನೆಟ್ ಟ್ರೋಫಿಗಾಗಿರುವ ರಾಜ್ಯ ಫುಟ್‌ಬಾಲ್ ಸಂಸ್ಥೆಯ 'ಎ' ಡಿವಿಷನ್ ಮಹಿಳಾ ಲೀಗ್‌ನಲ್ಲಿ ಭಾನುವಾರ ಭರ್ಜರಿ ಜಯ ಗಳಿಸಿದವು.

ಗುಂಪು ಒಂದರ ಪಂದ್ಯದಲ್ಲಿ ಪಿಂಕ್ ಪ್ಯಾಂಥರ್ಸ್ ಎಫ್‌ಸಿ 2–0ಯಿಂದ ಪಯನಿಯರ್ ವಿಮೆನ್ಸ್ ಎಫ್‌ಸಿಯನ್ನು ಮಣಿಸಿತು. ರಚನಾ ಅವರು 26 ಮತ್ತು 62ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ಸಾಯಿ ಸ್ಪೋರ್ಟ್ಸ್ ಅಕಾಡೆಮಿ ಎದುರಿನ ಪಂದ್ಯದಲ್ಲಿ ಮಾಡರ್ನ್ ಗರ್ಲ್ಸ್ 4–0ಯಿಂದ ಗೆಲುವು ದಾಖಲಿಸಿತು. ರಿವ್ಕಾ ಏಳನೇ ನಿಮಿಷದಲ್ಲಿ, ಟ್ರಿಯಾ 18ನೇ ನಿಮಿಷದಲ್ಲಿ ಮತ್ತು ಆರುಷಿ 20, 22ನೇ ನಿಮಿಷಗಳಲ್ಲಿ ಗೋಲು ಗಳಿಸಿದರು.

ಪಿಂಕ್ ಪ್ಯಾಂಥರ್ಸ್‌ನ ರಚನಾ ಗೋಲು ಗಳಿಸಿದ ಸಂದರ್ಭ –ಪ್ರಜಾವಾಣಿ ಚಿತ್ರ

ಸೋಮವಾರ 2.30ಕ್ಕೆ ಪಾಸ್ ಎಫ್‌ಸಿ ಮತ್ತು ಜಿಆರ್‌ಕೆ ಗರ್ಲ್ಸ್ ಎಫ್‌ಸಿ, 4ಕ್ಕೆ ರೂಟ್ಸ್ ಮತ್ತು ಯುನೈಟೆಡ್ ಎಫ್‌ಸಿ ಕೊಡಗು ತಂಡಗಳು ಸೆಣಸಲಿವೆ.

ಪಾಕಿಸ್ತಾನದಲ್ಲಿ ನ್ಯೂಜಿಲೆಂಡ್‌ಗೆ ಬೆದರಿಕೆ: ಆರೋಪ

ವೆಲಿಂಗ್ಟನ್ (ರಾಯಿಟರ್ಸ್): ಪಾಕಿಸ್ತಾನದಲ್ಲಿ ನ್ಯೂಜಿಲೆಂಡ್ ಕ್ರಿಕೆಟ್ ತಂಡಕ್ಕೆ ನಿರ್ದಿಷ್ಟವಾದ, ಭಾರಿ ಬೆದರಿಕೆ ಇತ್ತು ಎಂದು ನ್ಯೂಜಿಲೆಂಡ್ ಕ್ರಿಕೆಟ್ ಮಂಡಳಿ ಭಾನುವಾರ ಆರೋಪಿಸಿದೆ.

ಪಾಕ್ ಪ್ರವಾಸ ಕೈಗೊಂಡಿದ್ದ ನ್ಯೂಜಿಲೆಂಡ್ ಕ್ರಿಕೆಟ್ ತಂಡ ಏಕದಿನ ಸರಣಿಯ ಮೊದಲ ಪಂದ್ಯ ನಡೆಯ-ಬೇಕಾಗಿದ್ದ ಶುಕ್ರವಾರ ದಿಢೀರ್ ಆಗಿ ಪ್ರವಾಸ ಮೊಟಕುಗೊಳಿಸಿ ವಾಪಸಾಗಿದ್ದು ಭಾನುವಾರ ದುಬೈ ತಲುಪಿದೆ. ಸರ್ಕಾರ ನೀಡಿದ ಎಚ್ಚರಿಕೆ ಹಿನ್ನೆಲೆಯಲ್ಲಿ ಪ್ರವಾಸ ಮೊಟಕುಗೊಳಿಸುವುದಾಗಿ ಅದು ಹೇಳಿತ್ತು.

'ಶುಕ್ರವಾರ ದಿಢೀರ್ ಆಗಿ ಎಲ್ಲವೂ ಬದಲಾಯಿತು. ಸಲಹೆ ಬದಲಾಯಿತು. ಬೆದರಿಕೆಯ ಮಟ್ಟ ಬದಲಾಯಿತು. ಹೀಗಾಗಿ ತಕ್ಷಣ ಸೂಕ್ತ ನಿರ್ಧಾರ ಕೈಗೊಳ್ಳುವ ಸವಾಲು ಎದುರಾಯಿತು. ಅಲ್ಲಿ ಉಳಿದುಕೊಳ್ಳುವುದಕ್ಕಿಂತ ವಾಪಸಾಗುವುದೇ ಸರಿ ಎನಿಸಿತು' ಎಂದು ಮಂಡಳಿ ಹೇಳಿದೆ.

ವಾರಂಗಲ್‌ನಲ್ಲಿ ಅಂತರರಾಜ್ಯ ಮುಕ್ತ ಅಥ್ಲೆಟಿಕ್ ಕೂಟ

ಅಮ್ಲನ್, ಚಿತ್ರವೇಲ್ ದಾಖಲೆ

ವಾರಂಗಲ್ (ಪಿಟಿಐ): ಅಸ್ಸಾಂನ ಅಮ್ಲನ್ ಬೊರ್ಗೊಹೈನ್ ಮತ್ತು ತಮಿಳುನಾಡಿನ ಪ್ರವೀಣ ಚಿತ್ರವೇಲ್ ಭಾನುವಾರ ಇಲ್ಲಿ ಮುಕ್ತಾಯವಾದ 60ನೇ ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ದಾಖಲೆ ಬರೆದರು.

ಪುರುಷರ 200 ಮೀಟರ್ಸ್ ಓಟದಲ್ಲಿ 20.75 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಅಮ್ಲನ್ ಚಿನ್ನ ಗೆದ್ದರು. 23 ವರ್ಷದ ಅಮ್ಲನ್ ಹೈದರಾಬಾದ್‌ನಲ್ಲಿ ನೆಲೆಸಿದ್ದಾರೆ. 2014ರ ನಂತರ ಅವರು ಇದೇ ಮೊದಲ ಸಲ 200 ಮೀಟರ್ಸ್ ಓಟದಲ್ಲಿ ಭಾಗವಹಿಸಿದ್ದಾರೆ.

ತಮಿಳುನಾಡಿನ 20 ವರ್ಷದ ಚಿತ್ರವೇಲ್ ಅವರು ಪುರುಷರ ಟ್ರಿಪಲ್ ಜಂಪ್‌ನಲ್ಲಿ 16.88 ಮೀಟರ್ ದೂರ ಜಿಗಿದು ಚಿನ್ನದ ಪದಕ ಜಯಿಸಿದರು. 2019ರಲ್ಲಿ ತಾವೇ ಮಾಡಿದ್ದ 16.51 ಮೀಟರ್ ದಾಖಲೆಯನ್ನು ಉತ್ತಮಪಡಿ-ಸಿಕೊಂಡರು.

ಈ ಹಿಂದೆ ಉತ್ತಮ ಸಾಧನೆ ಮಾಡಿದ್ದ ರಂಜೀತ್ ಮಹೇಶ್ವರಿ (17.30 ಮೀ) ಮತ್ತು ಅರ್ಪಿಂದರ್ ಸಿಂಗ್ (17.17 ಮೀ) ಅವರ ನಂತರದ ಸ್ಥಾನವನ್ನು ಚಿತ್ರವೇಲ್ ಪಡೆದರು.

ಇಲ್ಲಿ ಅವರಿಗೆ ನಿಕಟ ಪೈಪೋಟಿಯೊಡ್ಡಿದ ಅಬ್ದುಲ್ಲಾ ಅಬೂಬಕ್ಕರ್ (16.84ಮೀ) ಮತ್ತು ಕಾರ್ತಿಕ್ ಉನ್ನಿಕೃಷ್ಣನ್ (16.80ಮೀ) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಮಂಜು ಬಾಲಾ ದಾಖಲೆ: ಮಹಿಳೆಯರ ಹ್ಯಾಮರ್ ಥ್ರೋನಲ್ಲಿ ಐದು ಥ್ರೋಗಳನ್ನು 60 ಮೀಟರ್ಸ್‌ಗಿಂತಲೂ ಹೆಚ್ಚು ಅಂತರಕ್ಕೆ ಎಸೆದ ಮಂಜು ಬಾಲಾಸಿಂಗ್ ನೂತನ ದಾಖಲೆ ಬರೆದರು.

ಅವರು ತಮ್ಮ ಮೂರನೇ ಎಸೆತದಲ್ಲಿ 64.42 ಮೀ ಸಾಧನೆ ಮಾಡಿ ದಾಖಲೆ ಬರೆದರು.

2014ರ ಏಷ್ಯನ್ ಗೇಮ್ಸ್‌ನಲ್ಲಿ ಮಂಜುಬಾಲಾ ಪದಕ ಜಯಿಸಿದ್ದರು.

ಎಸ್‌ಡಬ್ಲ್ಯುಆರ್‌ಗೆ 5 ಚಿನ್ನ

ನೈರುತ್ಯ ರೈಲ್ವೆಯ ಅಥ್ಲೀಟ್‌ಗಳು ಐದು ಚಿನ್ನ, ಒಂದು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳನ್ನು ಜಯಿಸಿದ್ದಾರೆ.

ಬೆಂಗಳೂರಿನ ರೈಲ್ವೆ ಕಚೇರಿಯಲ್ಲಿ ಜೂನಿಯರ್ ಕ್ಲರ್ಕ್ ಆಗಿರುವ ಐಶ್ವರ್ಯ ಶನಿವಾರ ಲಾಂಗ್ ಜಂಪ್ ಮತ್ತು ಟ್ರಿಪಲ್ ಜಂಪ್‌ನಲ್ಲಿ ಚಿನ್ನದ ಪದಕಗಳನ್ನು ಜಯಿಸಿದರು.

ಜೆಸ್ಸಿ ಸುಂದರೇಶನ್ ಹೈಜಂಪ್ ನಲ್ಲಿ ಚಿನ್ನ, ಸಿಮಿ 100 ಮೀಟರ್ ಓಟದಲ್ಲಿ ಕಂಚು, 4X100 ಮೀ ಓಟದಲ್ಲಿ ಚಿನ್ನದ ಪದಕ ಜಯಿಸಿದರು.

ಚಿನ್ನ ಗೆದ್ದ ಮಹಿಳೆಯರ ರಿಲೇ ತಂಡದಲ್ಲಿದಾನೇಶ್ವರಿಅವರೂಇದ್ದರು. 20 ಕಿ.ಮೀ ರೇಸ್ ವಾಕ್‌ನಲ್ಲಿ ರವೀನಾ ಬೆಳ್ಳಿ ಮತ್ತು ಪೋಲ್‌ವಾಲ್ಟ್‌ನಲ್ಲಿ ಮೆರಿಯಾ ಜೇಸನ್ ಕಂಚು ಜಯಿಸಿದರು. ಪುರುಷರ 20 ಕಿ.ಮೀ ರೇಸ್ ವಾಕ್‌ನಲ್ಲಿ ಜುನೀದ್ ಕಂಚು ಗಳಿಸಿದರು.

ಹೊಳೆಬಸು ಹೆಬ್ಬಾಳ್

ಕುಸ್ತಿ: ಹೊಳೆಬಸು ಹೆಬ್ಬಾಳ್‌ಗೆ ಕಂಚು

ದಾವಣಗೆರೆ: ಉತ್ತರಪ್ರದೇಶದ ಅಮೇಥಿಯಲ್ಲಿ 23 ವರ್ಷದೊಳಗಿನ-ವರ ಗ್ರಿಕೊ ರೋಮನ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಹೊಳೆಬಸು ಹೆಬ್ಬಾಳ್ ಕಂಚಿನ ಪದಕ ಪಡೆದರು.

ಶನಿವಾರ ಮುಕ್ತಾಯಗೊಂಡ ಬೌಟ್‌ನಲ್ಲಿ ಹೊಳೆಬಸು ಹೆಬ್ಬಾಳ್ 77 ಕೆ.ಜಿ. ವಿಭಾಗದಲ್ಲಿ ಗೆದ್ದರು. ಇವರು ದಾವಣಗೆರೆಯ ಕ್ರೀಡಾ ವಸತಿನಿಲ-ಯದಲ್ಲಿ ಕುಸ್ತಿ ತರಬೇತುದಾರ ಆರ್. ಶಿವಾನಂದ ಅವರಿಂದ ತರಬೇತಿ ಪಡೆದಿದ್ದಾರೆ.

ರೂಟ್ಸ್, ಮೈಸೂರು ತಂಡಗಳಿಗೆ ಜಯ

ಎಫ್‌ಎಸ್‌ವಿ ಅರೆನಾ ಮತ್ತು ಕೆಎಸ್‌ಎಫ್‌ಎ ಆಶ್ರಯದಲ್ಲಿ ಡ್ರೀಮ್ ಟೀಮ್ ಸ್ಪೋರ್ಟ್ಸ್ ಆಯೋಜಿಸಿರುವ ಬೆಂಗಳೂರು ಪ್ರೊ ಫುಟ್‌ಬಾಲ್ ಲೀಗ್‌ನ ಪಂದ್ಯಗಳಲ್ಲಿ ರೂಟ್ಸ್ ಫುಟ್‌ಬಾಲ್ ಸ್ಕೂಲ್ ಮತ್ತು ಮೈಸೂರು ವಿಜಯನಗರ ತಂಡಗಳು ಭರ್ಜರಿ ಜಯ ಸಾಧಿಸಿದವು.

'ಬಿ' ಗುಂಪಿನ ಪಂದ್ಯದಲ್ಲಿ ಮೈಸೂರು ವಿಜಯನಗರ ಎಫ್‌ಸಿ 7–1ರಲ್ಲಿ ಬೊಯ್ಕಾ ಅಕಾಡೆಮಿಯನ್ನು ಸೋಲಿಸಿತು. ಮೈಸೂರು ತಂಡದ ಪರ ಶರಣ್ ಹ್ಯಾಟ್ರಿಕ್ (29, 30, 46ನೇ ನಿಮಿಷ) ಗಳಿಸಿದರು. ಅಭಿಷೇಕ್ (32, 34ನೇ ನಿ) ಹಾಗೂ ಸುಮುಖ್ (51, 60ನೇ ನಿ) ಕೂಡ ಮಿಂಚಿದರು. ಬೊಯ್ಕಾ ತಂಡದ ಪರ ವಿಘ್ನೇಶ್ (4ನೇ ನಿ) ಗೋಲು ಗಳಿಸಿದರು.

'ಸಿ' ಗುಂಪಿನ ಹಣಾಹಣಿಯಲ್ಲಿ ರೂಟ್ಸ್ 5–2ರಲ್ಲಿ ಎಫ್‌ಸಿ ಹೈದ್ರಾವನ್ನು ಮಣಿಸಿತು. ರೂಟ್ಸ್‌ಗಾಗಿ ವಿಶ್ವಲ್ (8, 31ನೇ ನಿ), ಶಾಶ್ವತ್ (39, 55ನೇ ನಿ) ಮತ್ತು ಯೊಹಾನ್ (56ನೇ ನಿ) ಚೆಂಡನ್ನು ಗುರಿ ಮುಟ್ಟಿಸಿದರೆ ಹೈದ್ರಾ ತಂಡಕ್ಕಾಗಿ ರೇವ್ ಪಿಂಟೊ (25, 44ನೇ ನಿ) ಗೋಲು ಗಳಿಸಿದರು.

'ಡಿ' ಗುಂಪಿನ ಪಂದ್ಯದಲ್ಲಿ ಜೇಮ್ಸ್ (32ನೇ ನಿ) ಗಳಿಸಿದ ಏಕೈಕ ಗೋಲಿನ ನೆರವಿನಿಂದ ಬ್ಲ್ಯಾಕ್ ಪ್ಯಾಂಥರ್ಸ್ ಎಫ್‌ಸಿ 1–0ಯಿಂದ ಮಹೇಶ್ ರಾಜ್ ಯುನೈಟೆಡ್ ಎಫ್‌ಸಿ ವಿರುದ್ಧ ಜಯ ಗಳಿಸಿತು. 'ಎ' ಗುಂಪಿನಲ್ಲಿ ರೊನಾಲ್ಡೊ ಎಫ್‌ಸಿ, ಬ್ಲ್ಯಾಕ್ ಮೂನ್ ಎಫ್‌ಸಿಗೆ ವಾಕ್ ಓವರ್ ನೀಡಿತು. ಬ್ಲ್ಯಾಕ್ ಮೂನ್‌ಗೆ ಮೂರು ಪಾಯಿಂಟ್ಸ್ ಲಭಿಸಿದವು.

ಪ್ರಶಸ್ತಿಯೊಂದಿಗೆ ರೆಯಾನ್ಶ್ ಮತ್ತು ತನಿಷ್ಕಾ

ರೆಯಾನ್ಶ್, ತನಿಷ್ಕಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎನ್‌ಎಂ ಕ್ಲಬ್‌ನ ರೆಯಾನ್ಶ್ ಜಲನ್ ಮತ್ತು ಬಿಟಿಟಿಎ ಕ್ಲಬ್‌ನ ತನಿಷ್ಕಾ ಕಪಿಲ್ ಭಾನುವಾರ ಆರಂಭಗೊಂಡ ಸಿ.ವಿ.ಎಲ್ ಶಾಸ್ತ್ರಿ ಸ್ಮಾರಕ ರಾಜ್ಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ 'ಹೋಪ್ಸ್' ವಿಭಾಗದಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಮಲ್ಲೇಶ್ವರ ಅಸೋಸಿಯೇಷನ್‌ನ ಅಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ರೆಯಾನ್ಶ್ 11-9, 11-6, 11-8ರಲ್ಲಿ ಅಭಿನವ್ ಪ್ರಸನ್ನ ವಿರುದ್ಧ ಜಯ ಗಳಿಸಿದರು. ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ತನಿಷ್ಕಾ 9-11, 11-6, 11-5, 11-2ರಲ್ಲಿ ರಾಶಿ ವಿ.ರಾವ್ ಎದುರು ಜಯ ಸಾಧಿಸಿದರು. 'ಹೋಪ್ಸ್' ವಿಭಾಗವನ್ನು ಇದೇ ಮೊದಲು ಸೇರಿಸಲಾಗಿತ್ತು.

ಬಾಲಕರ ವಿಭಾಗದ ಸೆಮಿಫೈ-ನಲ್‌ನಲ್ಲಿ ರೆಯಾನ್ಶ್ 11-4, 11-4, 11-3ರಲ್ಲಿ ಅಮನ್ ಜಾರ್ಜ್ ಥಾಮಸ್ ವಿರುದ್ಧ ಜಯ ಗಳಿಸಿದರೆ ಅಭಿನವ್ ಪ್ರಸನ್ನ 11-7, 11-13, 9-11, 11-9, 11-6ರಲ್ಲಿ ತಮೋಜ್ಞ ವಿರುದ್ಧ ಗೆಲುವು ಸಾಧಿಸಿದರು.

ಬಾಲಕಿಯರ ವಿಭಾಗದ ಸೆಮಿಫೈ-ನಲ್‌ನಲ್ಲಿ ತನಿಷ್ಕಾ ಕಪಿಲ್ ಬಿಎನ್‌ಎಂನ ಐರಿನ್ ಅನಾ ಸುಭಾಷ್ ವಿರುದ್ಧ 11-1, 11-1, 11-2ರಲ್ಲಿ, ರಾಶಿ ರಾವ್ ಬಿಎನ್‌ಎಂನ ಯುಕ್ತಾ ಹರ್ಷ ವಿರುದ್ಧ 11-3, 11-5, 11-3ರಲ್ಲಿ ಗೆಲುವು ಸಾಧಿಸಿದರು.

ಮೂರು ದಿನ ಕಕ್ಷೆಯಲ್ಲಿ ಕಳೆದು ಭೂಮಿಗೆ ಮರಳಿದ ಪ್ರವಾಸಿಗರು

ಕೇಪ್ ಕ್ಯಾನಾವೆರಲ್(ಎಪಿ): ಸ್ಪೇಸ್‌ಎಕ್ಸ್‌ನ ರಾಕೆಟ್ ಮೂಲಕ ವ್ಯೋಮ ಪ್ರವಾಸ ಕೈಗೊಂಡಿದ್ದ ನಾಲ್ವರು ಪ್ರವಾಸಿಗರು ಶನಿವಾರ ಕ್ಯಾಪ್ಸೂಲ್ ಮೂಲಕ ಫ್ಲಾರಿಡಾದ ಕರಾವಳಿಗೆ ಬಂದಿಳಿದಿದ್ದಾರೆ.

ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಮೂರು ದಿನಗಳ ಹಿಂದೆ ನಭಕ್ಕೆ ಚಿಮ್ಮಿದ್ದ ರಾಕೆಟ್, ಬಾಹ್ಯಾಕಾಶ ಪ್ರವಾಸಿಗರನ್ನು ಭೂ ಕಕ್ಷೆಗೆ ಸೇರಿಸಿತ್ತು. ಉದ್ಯಮಿ ಜೆರೆಡ್ ಐಸಾಕ್‌ಮ್ಯಾನ್ ಈ ಪ್ರವಾಸದ ವೆಚ್ಚ ಭರಿಸಿದ್ದಾರೆ.

ಭೂವಿಜ್ಞಾನಿ ಸಿಯಾನ್ ಪ್ರೊಕ್ಟರ್ (51), ವೈದ್ಯರ ಸಹಾಯಕ ಮತ್ತು ಚಿಕ್ಕಂದಿನಲ್ಲಿ ಮೂಳೆ ಕ್ಯಾನ್ಸರ್‌ನಿಂದ ಬದುಕುಳಿದ ಹ್ಯಾಲೆ ಆರ್ಕೆನೆಕ್ಸ್ (29) ಹಾಗೂ ವಾಯುಪಡೆಯ ಮಾಜಿ ಅಧಿಕಾರಿ ಕ್ರಿಸ್ ಸೆಂಬ್ರೋಸ್ಕಿ (42) ಅವರನ್ನು ಜೆರೆಡ್ ತಮ್ಮ ಜೊತೆಯಲ್ಲಿ ಪ್ರವಾಸಕ್ಕೆ ಕರೆದೊಯ್ದಿದ್ದರು.

ನಾಲ್ವರ ಪ್ರವಾಸಕ್ಕೂ ಮುನ್ನ ಆರು ತಿಂಗಳು ತರಬೇತಿ ಮತ್ತು ತುರ್ತು ಸಂದರ್ಭಗಳಲ್ಲಿ ನಡೆಸಬೇಕಾದ ಕಾರ್ಯಾಚರಣೆಗೆ ಸಿದ್ಧತೆ ನಡೆಸಿದ್ದರು. ಅವರು ಕಕ್ಷೆಯಲ್ಲಿ ಪ್ರವಾಸದಲ್ಲಿರು-ವಾಗ ಸೇಂಟ್ ಜೂಡ್ ಆಸ್ಪತ್ರೆಯ ರೋಗಿಗಳೊಂದಿಗೆ ಮಾತುಕತೆ ನಡೆಸಿದ್ದರು. ತಮ್ಮಲ್ಲಿಯೇ ವೈದ್ಯಕೀಯ ಪರೀಕ್ಷೆಗಳನ್ನು ಮಾಡಿಕೊಂಡಿದ್ದರು, ನ್ಯೂಯಾರ್ಕ್ ಷೇರುಪೇಟೆ ವಹಿವಾಟಿನ ಮುಕ್ತಾಯದ ಗಂಟೆ ಬಾರಿಸಿದ್ದರು ಹಾಗೂ ಚಿತ್ರ ಬಿಡಿಸುವುದು ಹಾಗೂ ಉಕುಲೆಲೆ (ಗಿಟಾರ್ ರೀತಿಯ ಪುಟ್ಟ ವಾದ್ಯ) ನುಡಿಸುವುದರಲ್ಲಿ ಮಗ್ನರಾಗಿ-ದ್ದರು.

ಸ್ಪೇಸ್‌ಎಕ್ಸ್ ವರ್ಷಕ್ಕೆ ಖಾಸಗಿಯಾಗಿ ಆರು ಬಾಹ್ಯಾಕಾಶ ಯಾನ ನಡೆಸಲು ಯೋಜನೆ ರೂಪಿಸಿದೆ.

'ಅಫ್ಗಾನಿಸ್ತಾನದಲ್ಲಿ ಮೂಲಸೌಕರ್ಯ ಯೋಜನೆ: ಪ್ರಧಾನಿ ತೀರ್ಮಾನ ಅಂತಿಮ'

ನವದೆಹಲಿ: ಅಫ್ಗಾನಿಸ್ತಾನವು ತಾಲಿಬಾನ್ ನಿಯಂತ್ರಣದಲ್ಲಿರುವ ಕಾರಣ ಭಾರತ ಅಲ್ಲಿ ಈಗಾಗಲೇ ಮೂಲ ಸೌಕರ್ಯಕ್ಕೆ ಹೂಡಿರುವ ಬಂಡವಾಳವನ್ನು ಮುಂದುವರಿಸಬೇಕೇ ಬೇಡವೇ ಎಂಬ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಅಂತಿಮ ನಿರ್ಧಾರ ತೆಗೆದುಕೊಳ್ಳುವರು ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದರು.

ನಿತಿನ್ ಗಡ್ಕರಿ

ಭಾರತವು ಅಲ್ಲಿ ಕೈಗೊಂಡಿರುವ ಅನೇಕ ಮೂಲ ಸೌಕರ್ಯ ಯೋಜನೆಗಳು ಪೂರ್ಣಗೊಂಡಿವೆ. ಕೆಲವು ಮಾತ್ರ ಇನ್ನೂ ಪೂರ್ಣಗೊಳ್ಳ-ಬೇಕಿವೆ. ಅವನ್ನು ಮುಂದುವರಿಸುವ ಬಗ್ಗೆ ಮೋದಿ ಅವರು ವಿದೇಶಾಂಗ ಸಚಿವರ ಜತೆ ಚರ್ಚಿಸಿ ತೀರ್ಮಾನಿಸಲಿ-ದ್ದಾರೆ ಎಂದು ತಿಳಿಸಿದರು.

'ನಾವು ಅಲ್ಲಿ ಸಲ್ಮಾ ಅಣೆಕಟ್ಟೆ ನಿರ್ಮಿಸಿದ್ದೇವೆ. ಜಲ ಸಂಪನ್ಮೂಲ ಕ್ಷೇತ್ರದಲ್ಲಿ ನಾವು ಅಲ್ಲಿ ಕೆಲಸ ಮಾಡಿದ್ದೇವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಮೈತ್ರಿ ರಾಷ್ಟ್ರವಾಗಿ ನಾವು ಅಲ್ಲಿ ಕೆಲವು ರಸ್ತೆಗಳನ್ನು ನಿರ್ಮಿಸಲು ಕೂಡ ಅಫ್ಗಾನಿಸ್ತಾನದ ಸರ್ಕಾರದ ಜತೆ ಚರ್ಚಿಸಿದ್ದೆವು. ಆದರೆ ಆ ಕಾಮಗಾರಿಗಳನ್ನು ಆರಂಭಿಸದೇ ಇದ್ದದ್ದು ಒಳ್ಳೆಯದೇ ಆಯಿತು. ಪರಿಸ್ಥಿತಿ ಅಲ್ಲಿ ಈಗ ಕಳವಳಕಾರಿಯಾಗಿದೆ' ಎಂದು ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶ-ನದಲ್ಲಿ ಹೇಳಿದ್ದಾರೆ.